ಮಾನವಿಕ ಕರ್ಣಾಟಕ

ಸಂಪುಟ ೧೭ ಸಂಚಿಕೆ ೩

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೭

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೭ ; ಸಂಚಿಕೆ ೩

೬೭

೬ ೧೦ ೮೮

ಜುಲೈ ೧೯೮೭ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೮೭

MANAVIKA KARNATAKA, Kannada quarterly of the University of Mysore, Volume 17, Number 3, July 1987, Edited by Dr. M. V. Srinivas and M. N. Nanjunda Raje Urs.

ಪ್ರಧಾನ ಸಂಪಾದಕರು

ಡಾ. ಜೀ. ಶಂ. ಪರಮಶಿವಯ್ಯ

ಸಂಪಾದಕರು

ಡಾ. ಎಂ. ವಿ. ಶ್ರೀನಿವಾಸ್
ಎಂ. ಎನ್. ನಂಜುಂಡರಾಜೇ ಅರಸ್

ಪ್ರಕಾಶಕರು

ಕೆ. ಟಿ. ವೀರಪ್ಪ
ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೬

ಮುದ್ರಕರು

ಎನ್. ಹನುಮಯ್ಯ
ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-೬

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧	ಎಂ. ವಿ. ಶ್ರೀನಿವಾಸ್.	ರೀಡರ್, ಇತಿಹಾಸವಿಭಾಗ, ಮಾನಸ ಗಂಗೋತ್ರಿ, ಮೈಸೂರು.
೨	ಎ. ವಿ. ವೆಂಕಟರತ್ನಂ.	ಪ್ರಿನ್ಸಿಪಲ್ ಇನ್‌ವೆಸ್ಟಿಗೇಟರ್, ಇತಿಹಾಸ ವಿಭಾಗ, ಮಾನಸಗಂಗೋತ್ರಿ, ಮೈಸೂರು.
೩	ಆರ್. ಇಂದಿರಾ.	ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು.
೪	ಎಂ.ಎಸ್.ಚಂದ್ರಶೇಖರಪ್ಪ.	ಅಧ್ಯಾಪಕರು, ಸಮಾಜಕಾರ್ಯ ವಿಭಾಗ, ಮಾನಸಗಂಗೋತ್ರಿ, ಮೈಸೂರು.
೫	ಎಂ.ಎಸ್. ಪ್ರಭಾಕರ್.	ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು, ತಿಪಟೂರು.
೬	ಕೆ. ಮೊಹಮ್ಮದ್‌ಶರೀಫ್	ಶಾಸನಶಾಸ್ತ್ರ ಸಹಾಯಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.
೭	ಪುರುಷೋತ್ತಮ ಬಿಳಿಮಲೆ	ಕನ್ನಡ ಉಪನ್ಯಾಸಕರು, ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು–೫೭೪೧೯೯.
೮	ಬಿ. ಎನ್. ಸುಜಾತ	ರೀಡರ್, ಶಿಕ್ಷಣವಿಭಾಗ, ಮಾನಸಗಂಗೋತ್ರಿ, ಮೈಸೂರು.
೯	ಎಸ್. ಚಂದ್ರೇಗೌಡ	ಅಧ್ಯಾಪಕರು, ರಾಜ್ಯಶಾಸ್ತ್ರವಿಭಾಗ, ಮಾನಸ ಗಂಗೋತ್ರಿ ಮೈಸೂರು.
೧೦	ಯಮುನಾಬಾಯಿ ಆರ್. ರಾವ್	'ಶ್ರೀ', ೪೧೯, ೧೨ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು.
೧೧	ಅಪ್ಪಾಸಾಹೇಬ ಪೂಜಾರಿ	ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ, ಶ್ರೀ ಸಂತ ದಾಮಾಜಿ ಮಹಾವಿದ್ಯಾಲಯ, ಮಂಗಳ ವೇಡ, ಸೊಲ್ಲಾಪುರ
೧೨	ವಸ್ತುಕೋಶ.	ಸಿ. ಎಸ್. ಶಾಮಲಾಂಬಿಕಾ, ಇತಿಹಾಸ ರೀಡರ್, ಎ. ವಿ. ಕೆ. ಕಾಲೇಜು ದಾವಣಗೆರೆ

ಡಾ. ಎಂ. ವಿ. ಶ್ರೀನಿವಾಸ್

ಕರ್ಮವೀರ ಭಾವುರಾವ್ ಪಾಟೀಲ್

ಆಧುನಿಕ ಭಾರತದ ಸಮಾಜ ಸೇವಕರಲ್ಲಿ ಕರ್ಮವೀರ ಭಾವುರಾವ್ ಪಾಟೀಲ್ ಮಹತ್ವದ ಸ್ಥಾನವನ್ನು ಪಡೆದಿದ್ದಾರೆ. ಮಹಾರಾಷ್ಟ್ರದ ಈ ಶಿಕ್ಷಣ ಸುಧಾರಕರು ಗ್ರಾಮೀಣ ಜನತೆಯ ಉದ್ಧಾರಕ್ಕಾಗಿ ಹಾಗೂ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ತಮ್ಮ ಜೀವನವನ್ನೇ ಅರ್ಪಿಸಿ ಸಾರ್ಥಕ ಸೇವೆಯನ್ನು ಸಲ್ಲಿಸಿದವರು. ಅವರ ನಿಸ್ವಾರ್ಥ ಜೀವನ, ಅವಿರತ ಸೇವೆ, ಉದಾತ್ತ ಮನೋಭಾವ ಶಿಕ್ಷಣ ನೇತ್ತಾರರಿಗೂ ಸಮಾಜ ಸುಧಾರಕರಿಗೂ ಆದರ್ಶವಾಗಿದೆ. ಮಹಾರಾಷ್ಟ್ರದ ಸತಾರ ಜಿಲ್ಲೆಯ ಗ್ರಾಮವೊಂದರಲ್ಲಿ 1887ರಲ್ಲಿ ಜನಿಸಿದ ಭಾವುರಾವ್ ಸಾಮಾನ್ಯ ಜೈನ ಕುಟುಂಬ ದಿಂದ ಬಂದವರು. ಇವರ ಪೂರ್ವಜರು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯಿಂದ ವಲಸೆ ಹೋಗಿ ಮಹಾರಾಷ್ಟ್ರದಲ್ಲಿ ನೆಲಸಿದ್ದರು. ಭಾವುರಾವ್ ಅವರ ತಂದೆ ಪಾಯಿಗೌಡರು ಮಹಾರಾಷ್ಟ್ರ ಸರ್ಕಾರದಲ್ಲಿ ಗುಮಾಸ್ತೆಯಾಗಿ ಕೆಲಸ ಮಾಡಿ ನಿವೃತ್ತರಾಗಿದ್ದರು. ಭಾವುರಾವ್ ಪೌಢಶಾಲೆಯವರೆಗೂ ವಿದ್ಯಾಭ್ಯಾಸವನ್ನು ಮಾಡಿದರು. ಅವರು ವಿದ್ಯಾರ್ಥಿಯಾಗಿದ್ದಾಗಲೇ ಪ್ರಚಲಿತ ಸಾಮಾಜಿಕ ಸಮಸ್ಯೆ ಗಳತ್ತ ತಮ್ಮ ಗಮನವನ್ನು ಹರಿಸಿದರು. ಮಹಾರಾಷ್ಟ್ರದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಸರ್ಕಾರಿ ನೌಕರಿಗಳಲ್ಲಿ ಬ್ರಾಹ್ಮಣರದು ಮೇಲುಗೈಯಾಗಿದ್ದಿತು. ಹಿಂದುಳಿದ ವರ್ಗದ ವರು, ದಲಿತರು ಬಹುಹೀನಸ್ಥಿತಿಯಲ್ಲಿದ್ದರು. ಅಂದಿನ ಶೈಕ್ಷಣಿಕ ಹಾಗೂ ಸಾಮಾಜಿಕ ಸಂಸ್ಥೆಗಳೂ ಬ್ರಾಹ್ಮಣರ ಕೈಯಲ್ಲೇ ಇದ್ದವು. ಭಾವುರಾವ್‌ರವರು ಸಮಾಜ ಸುಧಾರಣ ಕ್ಷೇತ್ರದಲ್ಲಿ ಪ್ರಸಿದ್ಧ ವ್ಯಕ್ತಿಗಳಾಗಿದ್ದ ಮಹಾತ್ಮ ಜ್ಯೋತಿರಾವ್ ಫುಲೆ ಮೊದಲಾದವರ ಜೀವನ ಮತ್ತು ಸಾಧನೆಯಿಂದ ಸ್ಫೂರ್ತಿ ಪಡೆದವರು. ಅವರು ಈ ಸಮಯದಲ್ಲಿ ಮಹಾರಾಷ್ಟ್ರದಲ್ಲಿದ್ದ ಹಲವಾರು ಸಾಮಾಜಿಕ ಚಳವಳಿಗಳಲ್ಲೂ ಸಕ್ರಿಯ ವಾಗಿ ಭಾಗವಹಿಸಿದ್ದರು. ವಿಶೇಷವಾಗಿ ಬ್ರಾಹ್ಮಣರ ಪ್ರಾಧಾನ್ಯವನ್ನು ವಿರೋಧಿಸುವ ಸತ್ಯಶೋಧಕ ಮಂಡಲದಲ್ಲಿ ಇವರು ಆಸಕ್ತಿಯಿಂದ ಕೆಲಸ ಮಾಡಿದರು. ಈ ಚಟುವಟಿಕೆಗಳಿಂದ ಅವರಿಗೆ ಮಹಾರಾಷ್ಟ್ರದ ಜನತೆಯ ಅದರಲ್ಲೂ ದುರ್ಬಲವರ್ಗದವರ ಸಮಸ್ಯೆಗಳ ಅರಿವುಂಟಾಯಿತು. ಕೆಲವು ವರ್ಷಗಳ ಯಶಸ್ವೀ ಕಾರ್ಯಕ್ರಮಗಳ ನಂತರ

ಭಾವುರಾವ್ ತಮ್ಮದೇ ಆದ ಮಾರ್ಗವನ್ನು ರೂಪಿಸಿಕೊಳ್ಳಲಾರಂಭಿಸಿದರು. ಅವರು ಚಳುವಳಿಯ ಮಾರ್ಗಕ್ಕಿಂತ ರಚನಾತ್ಮಕ ಮಾರ್ಗದತ್ತ ಆಸಕ್ತಿ ತೋರಿಸ ಲಾರಂಭಿಸಿದರು. ಸಮಾಜದ ದೋಷಗಳನ್ನು ಖಂಡಿಸುವುದಕ್ಕಿಂತಲೂ ಅವುಗಳನ್ನು ಸಾಧ್ಯವಾದ ಮಟ್ಟಿಗೆ ನಿವಾರಿಸಬೇಕೆಂಬ ನಿರ್ಧಾರವನ್ನು ಕೈಗೊಂಡರು

ಅಸ್ಪೃಶ್ಯತೆ, ಅಜ್ಞಾನ, ದಾರಿದ್ರ್ಯ, ಮೌಢ್ಯ, ಜಾತೀಯತೆ, ಭ್ರಷ್ಟಾಚಾರ ಮೊದಲಾದ ಸಾಮಾಜಿಕ ಪಿಡುಗುಗಳನ್ನು ನಿವಾರಿಸಬೇಕೆಂಬ ನಿರ್ಧಾರವನ್ನು ಕೈಗೊಂಡು ಅವರು ಕೆಲವು ಯೋಜನೆಗಳನ್ನು ಪ್ರಾರಂಭಿಸಿದರು. ಪಶ್ಚಿಮ ಮಹಾರಾಷ್ಟ್ರದ ಪ್ರದೇಶದಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯಗಳಿಲ್ಲದೆ ಅವರ ವಿದ್ಯಾಭ್ಯಾಸ ಕುಂಠಿತವಾಗಿದ್ದಿತು. ಮಹಾರಾಷ್ಟ್ರದಲ್ಲಿ ವಿಶೇಷವಾಗಿ ಗ್ರಾಮೀಣ ವಿದ್ಯಾಭ್ಯಾಸ ಕ್ಷೇತ್ರದಲ್ಲಿದ್ದ ಕೊರತೆಗಳನ್ನು ಪೂರೈಸಲು ಭಾವುರಾವ್ ಪಣತೊಟ್ಟು ನಿಂತರು. ಪ್ರಾರಂಭದಲ್ಲಿ ಇವರು ಬೊಂಬಾಯಿಯಲ್ಲಿ ಆಭರಣದ ಅಂಗಡಿಯಲ್ಲಿದ್ದು ರತ್ನ ಪರೀಕ್ಷೆಯನ್ನು ಕಲಿತಿದ್ದರು. ಆದರೆ ಈ ಕಲ್ಲಿನ ನಿರ್ಜೀವ ರತ್ನಗಳ ಪರೀಕ್ಷೆ ನಡೆಸುವುದಕ್ಕಿಂತಲೂ ಗ್ರಾಮೀಣ ಸಮಾಜದಲ್ಲಿರುವ ರತ್ನಗಳನ್ನು ಪರೀಕ್ಷಿಸಿ ಅವುಗಳು ಪ್ರಕಾಶಮಾನಕ್ಕೆ ಬರುವಂತೆ ಮಾಡಲು ಪ್ರಯತ್ನಿಸಿದರು. ಸತಾರಾ ಜಿಲ್ಲೆಯ ತಮ್ಮ ಹಳ್ಳಿ ಐತೆವಾಡೇಯಲ್ಲಿ ಇವರು ಮಕ್ಕಳಿಗೆ ಪಾಠ ಹೇಳಲು ಪ್ರಾರಂಭಿಸಿ ಅನೇಕ ವಿದ್ಯಾರ್ಥಿಗಳನ್ನು ಕಲೆ ಹಾಕಿದರು. ಬಹುಬೇಗ ಇವರ ಪಾಠವನ್ನು ಕೇಳಲು ಅನೇಕ ಹಳ್ಳಿಗಳಿಂದ ವಿದ್ಯಾರ್ಥಿಗಳು ಬರಲಾರಂಭಿಸಿದರು. ಆ ಸಮಯದಲ್ಲಿ ಗ್ರಾಮಾಂತರ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ಪರಿತಪಿಸುತ್ತಿದ್ದಾಗ ಅವರ ಸಮಸ್ಯೆಗಳ ಸ್ಪಷ್ಟ ಚಿತ್ರ ದೊರೆಯಿತು. ಹಳ್ಳಿಗಳ ಬಾಲಕರು ಒಂದೆಡೆ ನೆಲಸಿ ಕಲಿಯಲು ಅನುಕೂಲವಾಗುವಂತೆ ದೂದ್‌ಗಾವ್ ಎಂಬ ಗ್ರಾಮದಲ್ಲಿ ಅವರು ಒಂದು ವಿದ್ಯಾರ್ಥಿ ಆಶ್ರಮವನ್ನು ತೆರೆದರು. ಬಾಲಕರಿಗೆ ಪಾಠ ಪ್ರವಚನವನ್ನು ನೀಡುವುದರೊಂದಿಗೆ ವಸತಿಯನ್ನೂ, ಅನಂತರ ಊಟದ ವ್ಯವಸ್ಥೆಯನ್ನು ಏರ್ಪಡಿಸಿದರು. ದೂದ್‌ಗಾವ್ ಅವರ ಈ ವಿದ್ಯಾರ್ಥಿನಿಲಯದ ಯಶಸ್ಸು ಮುಂದೆ ಅವರು ಅನೇಕ ವಿದ್ಯಾರ್ಥಿನಿಲಯಗಳನ್ನೂ ಸಂಸ್ಥೆಗಳನ್ನೂ ತೆರೆಯಲು ಸಹಾಯಕವಾಯಿತು. ಮಹಾರಾಷ್ಟ್ರದ ಅನೇಕ ಹಿಂದುಳಿದ ಪ್ರದೇಶ ಗಳಲ್ಲಿ, ಹಳ್ಳಿಗಾಡುಗಳಲ್ಲಿ ಇವರು ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದರು. ಎಲ್ಲಾ ಮತದ ವಿದ್ಯಾರ್ಥಿಗಳೂ ಇಲ್ಲಿ ಪ್ರವೇಶವನ್ನು ಪಡೆಯಬಹುದಾಗಿದ್ದಿತು. ಸಮನ್ವಯ ಮತ್ತು ಸಮಾನತೆ ತತ್ವಗಳ ಮೇಲೆ ಇವರು ಈ ಸಂಸ್ಥೆಗಳನ್ನು ಪ್ರಾರಂಭಿಸಿದರು. 1919ರಲ್ಲಿ ಕರ್ಮವೀರ ಭಾವುರಾವ್ ರೈತ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಅದರ ಆಶ್ರಯದಲ್ಲಿ ಕೋಲೆಗ್ರಾಮದಲ್ಲಿ ಒಂದು ವಿದ್ಯಾರ್ಥಿ ವಸತಿಗೃಹವನ್ನು ಪ್ರಾರಂಭಿಸಿದರು. ಜೈನರು, ಮಹಮದೀಯರು, ಹರಿಜನ ವಿದ್ಯಾರ್ಥಿಗಳೂ ಈ ವಿದ್ಯಾರ್ಥಿನಿಲಯದಲ್ಲಿ ಉಚಿತ ವಸತಿ ಹಾಗೂ ಊಟದ ಸೌಲಭ್ಯವನ್ನು ಪಡೆಯಲು ಸಾಧ್ಯವಾಯಿತು. 1921ರಲ್ಲಿ ಇವರು ಸಾಂಗ್ಲಿ ಬಳಿಯ ಹಳ್ಳಿಯೊಂದರಲ್ಲಿ ಮತ್ತೊಂದು ವಸತಿಗೃಹವನ್ನು ಪ್ರಾರಂಭಿಸಿದರು.

ಶಿಕ್ಷಣ ಸಂಸ್ಥೆಗಳನ್ನು ಹಾಗೂ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಭಾವುರಾವ್ ಅವರ ಬಳಿ ಹೆಚ್ಚಿನ ಹಣವಿರಲಿಲ್ಲ. ಇವರ ಬಳಿ ಅಭ್ಯಾಸ ಮಾಡಲು ಬರುವ ವಿದ್ಯಾರ್ಥಿಗಳೂ ಬಡವರೇ ಆಗಿದ್ದರು. ಈ ಸಮಸ್ಯೆಯನ್ನು ಬಗೆಹರಿಸಲು ಭಾವುರಾವ್ ಅವರು ಕಾಯಕ ಕಾರ್ಯಕ್ರಮವನ್ನು ಅನುಸರಿಸಿದರು. ವಿದ್ಯಾರ್ಥಿ ಮಂದಿರಗಳಲ್ಲಿನ ವಿದ್ಯಾರ್ಥಿಗಳು ದೈಹಿಕಶ್ರಮವನ್ನು ಅನುಸರಿಸುವಂತೆ ಮಾಡಿದರು. ಶಾಲೆಗಳ ಹಾಗೂ ವಿದ್ಯಾರ್ಥಿನಿಲಯಗಳ ಸುತ್ತಲೂ ಖಾಲಿಜಾಗದಲ್ಲಿ ಬೇಸಾಯಮಾಡಿ ಹಣ್ಣು, ತರಕಾರಿ, ಆಹಾರಧಾನ್ಯಗಳನ್ನು ಬೆಳೆಯುವ ವ್ಯವಸ್ಥೆ ಮಾಡಿದರು. ಈ ರೀತಿ ತಮ್ಮ ಶ್ರಮದಿಂದ ವಿದ್ಯಾರ್ಥಿಗಳು ತಮಗೆ ಅಗತ್ಯವಾದ ಆಹಾರವನ್ನಲ್ಲದೆ ತಮ್ಮ ಫೀಸು ಮೊದಲಾದವುಗಳನ್ನು ಪಡೆಯಲು ಸಾಧ್ಯವಾಯಿತು. ಪ್ರತಿಯೊಬ್ಬ ವಿದ್ಯಾರ್ಥಿಯೂ ತನಗೆ ಸಾಧ್ಯವಾದ ಕೆಲಸವನ್ನು ಮಾಡಿ ಸಂಸ್ಥೆಗೆ ತನ್ನ ಸೇವೆ ಸಲ್ಲಿಸುತ್ತಿದ್ದನು ಈ ರೀತಿ ಬಡ ವಿದ್ಯಾರ್ಥಿಗಳು ಈ ವಿದ್ಯಾರ್ಥಿನಿಲಯಗಳಲ್ಲಿ ಸೇರಿ ಶಿಕ್ಷಣ ಪಡೆಯಲಾರಂಭಿಸಿದರು. ಶಾಲೆಯ ಶಿಕ್ಷಣದೊಂದಿಗೆ ಕಾಯಕದ ಮಹತ್ವ, ಸ್ವಾವಲಂಬನೆಯ ಅಗತ್ಯ ಅವರಿಗೆ ಅರಿವಾದಂತಾಯಿತು.

ಈ ರೀತಿ ಅನೇಕ ಕ್ರಾಂತಿಕಾರಕ ತತ್ವಗಳನ್ನು ಅಳವಡಿಸಿಕೊಂಡ ಅವರ ವಿದ್ಯಾಸಂಸ್ಥೆಗಳು ಎಲ್ಲೆಲ್ಲೂ ಪ್ರಸಿದ್ಧವಾದವು. 1933ರಲ್ಲಿ ಮಹಾತ್ಮಾಗಾಂಧಿಯವರು, ಮಹಾರಾಷ್ಟ್ರಕ್ಕೆ ಭೇಟಿ ನೀಡಿದ್ದಾಗ ಭಾವುರಾವ್ ನಡೆಸುತ್ತಿದ್ದ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿದರು. ಅಲ್ಲಿ ಎಲ್ಲ ಜಾತಿಗಳ ಬಡ ವಿದ್ಯಾರ್ಥಿಗಳು ಸಮಾನವಾಗಿ ಸೌಲಭ್ಯ ಪಡೆಯುತ್ತಿದ್ದುದನ್ನು ಕಂಡು ಅವರು ಸಂತಸ ವ್ಯಕ್ತಪಡಿಸಿದರು. ಸರ್ವಧರ್ಮ ಸಮನ್ವಯವನ್ನು ಸಾಧಿಸಲು ಶ್ರಮಿಸುತ್ತಿದ್ದ ಭಾವುರಾವ್‌ರವರಿಗೆ ಬೆಂಬಲವನ್ನು ವ್ಯಕ್ತಪಡಿಸಲು ಬಾಪೂಜಿಯವರು ತಿಂಗಳಿಗೆ 500ರೂಗಳಂತೆ ವಿದ್ಯಾರ್ಥಿನಿಲಯಕ್ಕೆ ಸಹಾಯಧನ ನೀಡುವುದಾಗಿ ಪ್ರಕಟಿಸಿದರು. ಅದರಂತೆ ತಪ್ಪದೆ ಧನಸಹಾಯ ಮಾಡುತ್ತಿದ್ದುದಲ್ಲದೆ ಈ ವಿದ್ಯಾರ್ಥಿನಿಲಯಗಳ ಪ್ರಗತಿಯ ಬಗ್ಗೆ ಅವರು ಆಸಕ್ತಿಯಿಂದಿದ್ದು ಅದರ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದರು.

ಭಾವುರಾವ್ ಅವರ ಶಿಕ್ಷಣ ಸೇವೆ ವೃದ್ಧಿಯಾಗುತ್ತಾ ಹೋಯಿತು. ಸತಾರದಲ್ಲಿ ಅವರು ಸ್ಥಾಪಿಸಿದ ರೈತ ಶಿಕ್ಷಣಸಂಸ್ಥೆ ದಿನದಿನಕ್ಕೂ ಬೆಳೆಯುತ್ತಾ ಹೋಯಿತು. ಆಸಂಸ್ಥೆಯ ಚಿನ್ಹೆಯಾದ ಆಲದಮರದಂತೆ ಅದು ಬೃಹದಾಕಾರವಾಗಿ ಬೆಳೆದು ಆಕಾಶ ಭೂಮಿಗಳನ್ನು ಆವರಿಸಿತು. ಕರ್ಮವೀರರ ನಿಸ್ಪೃಹ ಸೇವೆಯನ್ನು ಗಮನಿಸಿದ ಮಹಾರಾಷ್ಟ್ರ ಜನ ಈ ಸಂಸ್ಥೆಗೆ ತನುಮನಧನಗಳ ಕಾಣಿಕೆಗಳನ್ನು ನೀಡಿದರು. ಸಂಸ್ಥೆಗೆ ದಾನಿಗಳಾಗಿ, ಅಜೀವ ಸದಸ್ಯರಾಗಿ, ಪೋಷಕರಾಗಿ ಅದರ ಬೆಳವಣಿಗೆಗೆ ಕಾರಣರಾದರು. ಭಾವುರಾವ್ ಅವರ ಶಾಲೆಗಳಲ್ಲಿ ಓದಿ ಉನ್ನತ ಪದವಿಯನ್ನು ಪಡೆದವರು, ಮುಂದೆ ಬಂದವರು ರೈತಶಿಕ್ಷಣ ಸಂಸ್ಥೆಗೆ ಸಹಾಯಮಾಡುತ್ತಾ ಅದರೊಂದಿಗೆ ಸಂಪರ್ಕವಿರಿಸಿಕೊಂಡಿದ್ದರು. ವಿದ್ಯಾಕ್ಷೇತ್ರದಲ್ಲಿ ಅಮೋಘಸೇವೆ ಸಲ್ಲಿಸುತ್ತ

ಮುನ್ನಡೆದುದು ಪ್ರಖ್ಯಾತ್ಯವಾಯಿತು. ಮಹಾರಾಷ್ಟ್ರದ ಮುಖ್ಯಮಂತ್ರಿಗಳಾಗಿದ್ದ ಯಶವಂತರಾವ್ ಚವಾಣ್ ಅವರು ಕೆಲವು ವರ್ಷ ರೈತಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಹಲವು ವರ್ಷಗಳ ನಂತರ ಅವರು ತಾವು ಈ ಸಂಸ್ಥೆಯ ಅಧ್ಯಕ್ಷರಾಗಿದ್ದುದು, ಮುಖ್ಯಮಂತ್ರಿಯಾಗಿದ್ದುದಕ್ಕಿಂತಲೂ ಹೆಚ್ಚಿನ ಗೌರವವೆಂದು ಭಾವಿಸಿದ್ದುದಾಗಿ ಹೆಮ್ಮೆಯಿಂದ ಹೇಳಿಕೊಂಡರು.

ಭಾವುರಾವ್ ಪಾಟೀಲರಿಗೆ ಸಾರ್ವಜನಿಕರಿಂದ ಬೆಂಬಲ, ಗೌರವ ದೊರೆತರೂ ಕೆಲವೊಮ್ಮೆ ಸರಕಾರದ ಸಹಾಯ ಸಿಗುತ್ತಿರಲಿಲ್ಲ. ಮುಖ್ಯಮಂತ್ರಿಗಳಾಗಿದ್ದ ಬಿ.ಜಿ. ಖೇರ್ ಅವರಿಗೂ ಪಾಟೀಲರಿಗೂ ಭಿನ್ನಾಭಿಪ್ರಾಯ ಬೆಳೆದು ಸರ್ಕಾರದ ಅನುದಾನ ನಿಂತುಹೋಯಿತು. ಇದರಿಂದ ಕರ್ಮವೀರ ಎದೆಗೆಡಲಿಲ್ಲ, ಅವರ ಶೈಕ್ಷಣಿಕ ಸೇವೆ ಅವಿರತವಾಗಿ ಮುಂದುವರೆಯಿತು. ಅವರ ಪರಿಶ್ರಮದ ಫಲವಾಗಿ ರೈತ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ 27 ಕಾಲೇಜುಗಳು, 317 ಹೈಸ್ಕೂಲುಗಳು, 80 ವಸತಿ ಗೃಹಗಳು, 8 ಟ್ರೈನಿಂಗ್ ಕಾಲೇಜುಗಳು ಹಲವಾರು ಪ್ರಾಥಮಿಕ ಶಾಲೆಗಳು ಶಿಕ್ಷಣ ನೀಡುತ್ತಿವೆ. ಈ ಎಲ್ಲಾ ಸಂಸ್ಥೆಗಳಲ್ಲಿ ಶಿಕ್ಷಕರು ಸೇರಿ ಸುಮಾರು 12,000 ಮಂದಿ ಕೆಲಸ ಮಾಡುತ್ತಿದ್ದಾರೆ. ಹೀಗೆ ಬರಿಗೈಯಿಂದ ಪ್ರಾರಂಭಿಸಿ ವರ್ಷಕ್ಕೆ ಸುಮಾರು 40 ಕೋಟಿ ರೂಪಾಯಿಗಳ ವಹಿವಾಟಿರುವ ಒಂದು ಶಿಕ್ಷಣ ಸಾಮ್ರಾಜ್ಯವನ್ನು ಕಟ್ಟಿದ್ದು ಭಾವುರಾವ್ ಅವರ ಒಂದು ಬೃಹತ್ ಸಾಧನೆ ಎಂದು ಹೇಳಬಹುದು.

ಭಾವುರಾವ್ ಪಟೀಲರ ಜೀವನ ಮತ್ತು ಸಾಧನೆ ಸಾಮಾಜಿಕ ಕಾರ್ಯಕರ್ತರಿಗೆ ಬಹು ಸ್ಫೂರ್ತಿ ನೀಡಬಲ್ಲದ್ದಾಗಿದೆ. ಅವರು ಪದವೀಧರರಲ್ಲದಿದ್ದರೂ ಸಹಸ್ರ ಸಹಸ್ರ ಮಂದಿಗೆ ಉನ್ನತ ಶಿಕ್ಷಣ ದೊರಕಿಸಿಕೊಟ್ಟರು. ಶ್ರೀಮಂತರಲ್ಲದಿದ್ದರೂ ಮಹಾರಾಷ್ಟ್ರದ ಅನೇಕ ಭಾಗಗಳಲ್ಲಿ ಶಾಲೆ ಕಾಲೇಜುಗಳನ್ನು, ವಿದ್ಯಾರ್ಥಿನಿಲಯಗಳನ್ನು ತೆರೆದು ಬಾಲಕ ಬಾಲಕಿಯರು ಉತ್ತಮ ಶಿಕ್ಷಣ ಪಡೆದು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಅವಕಾಶ ಮಾಡಿಕೊಟ್ಟರು. ಕ್ರಾಂತಿಕಾರಿ ಸುಧಾರಕರಾಗಿದ್ದ ಅವರು ಅಜ್ಞಾನ ಅಂಧಶ್ರದ್ಧೆಯನ್ನು ಅಳಿಸಿ ಹಾಕಲು ಬಾಳಿನುದ್ದಕ್ಕೂ ಶ್ರಮಿಸಿದರು. ಸಮಾಜದ ಅನೇಕ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನ ನಡೆಸಿದರು. ಸಮಾಜದ ಎಲ್ಲಾ ವರ್ಗಗಳ ಜಾತಿಗಳ ಮಕ್ಕಳು ಒಂದೆಡೆ ಕಲೆತು ಶಿಕ್ಷಣವನ್ನು ಪಡೆಯುವಂತೆ ಮಾಡಿದ್ದು ಅವರ ಮಹತ್ಸಾಧನೆಯೆಂದು ಹೇಳಬಹುದು. 70 ವರ್ಷಗಳ ಹಿಂದೆಯೇ ಈ ರೀತಿಯಲ್ಲಿ ರಾಷ್ಟ್ರೀಯ ಏಕಾತ್ಮತೆ ತಳಹದಿಯನ್ನು ಹಾಕಿದ್ದು ಅವರ ದೂರದೃಷ್ಟಿ ಉದಾತ್ತತೆಯ ಮನೋಭಾವನೆಯನ್ನು ಸೂಚಿಸುತ್ತದೆ. ಅವರ ಕ್ರಾಂತಿಕಾರಕ ವಿಚಾರಧಾರೆಯನ್ನು ಅದ್ಭುತವಾದ ಸಂಘಟನಾ ಚಾತುರ್ಯವನ್ನು ರಾಷ್ಟ್ರಪಿತ ಮಹಾತ್ಮಗಾಂಧಿ, ಜಯಪ್ರಕಾಶ್ ನಾರಾಯಣ್, ಡಾ॥ ಬಾಬಾ ಸಾಹೇಬ ಅಂಬೇಡ್ಕರ್ ಮುಂತಾದ ಮಹಾನಾಯಕರು ಶ್ಲಾಘಿಸಿದ್ದಾರೆ. ಇದಲ್ಲದೆ ರಷ್ಯಾದ ಬುಲ್ಗಾನಿನ್, ಕೃಶ್ಚೇವ್ ಮೊದಲಾದ ನಾಯಕರು ಇವರ

ಶೈಕ್ಷಣಿಕ, ಸಾಮಾಜಿಕ ಸೇವಾ ಕಾರ್ಯಗಳನ್ನು ತಾವೇ ಪರಿಶೀಲಿಸಿ ಮುಕ್ತಕಂಠ ದಿಂದ ಸ್ತುತಿಸಿದ್ದಾರೆ.

ಕರ್ಮವೀರ ಭಾವುರಾವ್ ಪಾಟೀಲರು ತಮ್ಮ ರೈತ ಶಿಕ್ಷಣ ಸಂಸ್ಥೆಯ ಮೂಲಕ ನಾಡಿನಲ್ಲೆಲ್ಲಾ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಜ್ಞಾನಜ್ಯೋತಿಗಳನ್ನು ಬೆಳಗಿಸಿದರು. ಕಾಯಕದ ಮಹತ್ವವನ್ನು ಒತ್ತಿಹೇಳಿ ಅದನ್ನು ತಮ್ಮ ಸಂಸ್ಥೆಗಳಲ್ಲಿ ಅನುಷ್ಠಾನಕ್ಕೆ ತಂದು ಯುವ ಪೀಳಿಗೆಗೆ ಸ್ವಾವಲಂಬನೆಯ ಮಾರ್ಗವನ್ನು ತೋರಿಸಿಕೊಟ್ಟರು. ಸ್ತ್ರೀಶಿಕ್ಷಣದ ಬಗ್ಗೆಯೂ ಇವರು ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದರು. ಮಹಿಳೆಯರಿಗಾಗಿ ಅನೇಕ ಶಾಲೆಗಳನ್ನು ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ಅವರು ಜೀವನದಲ್ಲಿ ಗಣ್ಯಸ್ಥಾನವನ್ನು ಪಡೆಯಲು ನೆರವಾದರು ಹೀಗೆ ರಾಷ್ಟ್ರ ವಿಕಾಸದ ಹಾಗೂ ಸಮನ್ವಯದ ಮಾರ್ಗವನ್ನು ಹಾಕಿಕೊಟ್ಟ ಆದರ್ಶ ಕಾರ್ಯ ವನ್ನು ಇವರು ಸಾಧಿಸಿದರು. ಇಂದು ಸುಮಾರು 3 ಲಕ್ಷ ಗ್ರಾಮೀಣ ವಿದ್ಯಾರ್ಥಿಗಳು ಭಾವುರಾವ್ ಪಾಟೀಲರು ಸ್ಥಾಪಿಸಿದ್ದ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದು ಅವರ ಸೇವೆಯ ಪ್ರಯೋಜನವನ್ನು ಪಡೆಯುತ್ತಿದ್ದಾರೆ. 1986ರಲ್ಲಿ ದೆಹಲಿಯಲ್ಲಿ ಭಾವುರಾವ್ ಪಾಟೀಲರ ಜನ್ಮಶತಾಬ್ಧಿಯನ್ನು ಆಚರಿಸಿ ಅವರಿಗೆ "ರಾಷ್ಟ್ರ ಪುರುಷ" ಎಂಬ ಅಭಿದಾನವನ್ನು ನೀಡಲಾಯಿತು.

ಕರ್ಮವೀರ ಭಾವುರಾವ್ ಪಾಟೀಲರ ಶೈಕ್ಷಣಿಕ ಸಾಧನೆ ಅದ್ಭುತವಾದು ದೇನೋ ಸರಿ. ಆದರೆ ಆ ಸಾಧನೆಗಾಗಿ ಅವರು ಮಾಡಿದ ತ್ಯಾಗ, ಶ್ರಮ ಅನುಪಮ ವಾದುದು. ಏಕಾಂಗಿಯಾಗಿ ಇವರು ದೀನಜನರ ಉದ್ಧಾರಕ್ಕಾಗಿ ಹಗಲು ರಾತ್ರಿ ಶ್ರಮಿಸಿದರು. ಊರಿಂದ ಊರಿಗೆ ಸುತ್ತಿ ತಮ್ಮ ಶಾಲೆಗಳನ್ನು, ವಿದ್ಯಾರ್ಥಿನಿಲಯ ಗಳನ್ನು ಸ್ಥಾಪಿಸಿದರು. ತಮ್ಮ ಅಲೆದಾಟದಲ್ಲಿ ಅನೇಕ ವೇಳೆ ಉಪವಾಸ ಮಾಡಿದ್ದುಂಟು. ಎಲ್ಲೆಂದರಲ್ಲಿ ಕೆಲವೊಮ್ಮೆ ನದೀತೀರದಲ್ಲಿ ಮಲಗಿ ಕೆಲವೊಮ್ಮೆ ರಾತ್ರಿಯಲ್ಲಿ ನಿದ್ದೆಯಿಲ್ಲದೆ ಕಾರ್ಯನಿರತರಾಗಿರುತ್ತಿದ್ದರು. ತಮ್ಮ ವೈಯಕ್ತಿಕ ಸುಖಸಂತೋಷಗಳನ್ನು ತನ್ನವರ ಕಷ್ಟಸುಖಗಳನ್ನೂ ಕಡೆಗಣಿಸಿ ಬಡಬಗ್ಗರ ಸೇವೆಯಲ್ಲಿ ತಮ್ಮ ಜೀವವನ್ನು ಸವೆಸಿದರು. ಹಲವಾರು ಸಂಘ ಸಂಸ್ಥೆಗಳನ್ನು ದಾನಿಗಳನ್ನೂ ಪೋಷಕರನ್ನೂ ಕಂಡು ಅವರಿಂದ ಸೇವೆ ಸಹಾಯವನ್ನು ಪಡೆದು ಸಂಸ್ಥೆಯನ್ನು ಬೆಳೆಸಿದರು. ಅವರೊಂದಿಗೆ ಅವರ ಕುಟುಂಬದ ಸದಸ್ಯರೂ ದುಡಿಯುತ್ತಾ ಬಂದರು. ಒಮ್ಮೆ ಒಂದು ವಿದ್ಯಾರ್ಥಿ ನಿಲಯದಲ್ಲಿ ಹಣವಿಲ್ಲದೆ ಅಲ್ಲಿದ್ದ ವಿದ್ಯಾರ್ಥಿಗಳಿಗೆ ಊಟವಿಲ್ಲದಂತಾಯಿತು. ಭಾವುರಾವ್ ಊರಿನಲ್ಲಿರಲಿಲ್ಲ. ಆಗ ಅವರ ಪತ್ನಿ ಲಕ್ಷ್ಮೀ ಭಾಯಿಯವರು ತಮ್ಮ ಮಾಂಗಲ್ಯವನ್ನು ಮಾರಿ ವಿದ್ಯಾರ್ಥಿ ನಿಲಯ ನಡೆಯುವಂತೆ ನೋಡಿಕೊಂಡರು.

ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸುವಷ್ಟರಲ್ಲೇ ಭಾವುರಾವ್ ತೃಪ್ತರಾಗ ಲಿಲ್ಲ. ಅನೇಕ ಅರ್ಹ ವಿದ್ಯಾರ್ಥಿಗಳಿಗೆ ಅವರು ಆರ್ಥಿಕ ನೆರವನ್ನು ಒದಗಿಸಿ

ಕೊಟ್ಟರು, ಕೆಲವರಿಗೆ ಕೆಲಸಗಳನ್ನು ಕೊಡಿಸಿಕೊಟ್ಟರು. ತಮ್ಮ ಕೆಲವು ಶಿಷ್ಯರು ವಿವಿಧ ಉದ್ಯೋಗಗಳಲ್ಲಿ ನೆಲಸಲು ಅವರಿಗೆ ಬಂಡವಾಳವನ್ನು ಕೂಡಿಸಿಕೊಟ್ಟರು. ಅನಾಥ ಮಕ್ಕಳನ್ನು ಆಶ್ರಮಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಸೇರಿಸಿ ಅವರಿಗೆ ವಿದ್ಯೆ, ಉದ್ಯೋಗ ದೊರೆತು ಅವರು ಸಮಾಜದಲ್ಲಿ ಗಣ್ಯವ್ಯಕ್ತಿಗಳೆನಿಸಿಕೊಳ್ಳಲು ಎಲ್ಲಾ ವಿಧವಾದ ಸಹಾಯವನ್ನು ನೀಡಿದರು.

ವಿದ್ಯಾಸಂಸ್ಥೆಗಳ ಮೂಲಕ ಜ್ಞಾನಯಜ್ಞವನ್ನು ಯಶಸ್ವಿಯಾಗಿ ನೆರವೇರಿಸಿದ್ದಲ್ಲದೆ ಸಮಾಜವನ್ನು ಕಾಡುತ್ತಿದ್ದ ಹಲವಾರು ಪಿಡುಗುಗಳನ್ನು ನಿವಾರಿಸಲು ಭಾವುರಾವ್ ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಸಮಾಜದಲ್ಲಿ ನೆಲೆಯೂರಿದ್ದ ದಾರಿದ್ರ್ಯ, ಅಜ್ಞಾನ, ಸಾಮಾಜಿಕ ಮೂಢನಂಬಿಕೆಗಳ ಸಮರವನ್ನು ಸಾರಿದರು. ಸಾಮಾಜಿಕ ಅಸಮಾನತೆಯ ವಿರುದ್ಧ ಸಿಡಿದೆದ್ದು ಸಮಾಜ ಸೇವಾ ಕ್ಷೇತ್ರವನ್ನು ಪ್ರವೇಶಿಸಿದ ಭಾವುರಾವ್ ಪಾಟೀಲ್ ಆಧುನಿಕ ಶಿಕ್ಷಣವೇ ಅಸಮಾನತೆ ಹಾಗೂ ಸಾಮಾಜಿಕ ಭಿನ್ನತೆಯನ್ನು ತೊಡೆದು ಹಾಕುವ ಮಾರ್ಗವೆಂದು ಮನಗಂಡಿದ್ದರು. ಅಸ್ಪೃಶ್ಯತೆಯ ವಿರುದ್ಧ ಅವರು ನಡೆಸಿದ ಆಂದೋಲನ ಒಂದು ದಿಟ್ಟ ಪ್ರಯೋಗವಾಗಿದ್ದಿತು. ಅಸ್ಪೃಶ್ಯತೆಯನ್ನು ಕಾನೂನಿನಿಂದ ಮಾತ್ರವಲ್ಲ ಸಾಮಾಜಿಕ ಜೀವನದಲ್ಲೂ ತೊಡೆದು ಹಾಕಬೇಕು. ಅವರಿಗೆ ರಾಷ್ಟ್ರೀಯ ಜೀವನದಲ್ಲಿ ಪಾಲ್ಗೊಳ್ಳಲು ಅವಕಾಶವನ್ನು ಮಾಡಿಕೊಡಬೇಕು ಎಂಬುದು ಅವರ ಧ್ಯೇಯವಾಗಿದ್ದಿತು.

ಗ್ರಾಮೀಣ ಜನತೆಯ ಉದ್ಧಾರಕ್ಕಾಗಿ ಸ್ವಯಂ ಸೇವಕರ ತಂಡ ಒಂದನ್ನು ರಚಿಸಿದರು. ಅವರ ಸಂಸ್ಥೆಗಳಲ್ಲಿ ಶಿಕ್ಷಣ ತರಬೇತಿ ಪಡೆದ ವಿದ್ಯಾರ್ಥಿಗಳು, ಸ್ವಯಂ ಸೇವಕರು ಮಹಾರಾಷ್ಟ್ರದ ಮೂಲೆಮೂಲೆಗಳಿಗೆ, ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಕರ್ಮವೀರರ ಆದರ್ಶಗಳನ್ನು ಪ್ರಚಾರ ಮಾಡಿದರು.

ಸತ್ಯಶೋಧಕ ಮಂಡಲವನ್ನು ಸೇರಿ ದಲಿತರ ಪರವಾಗಿ ಚಳವಳಿಯಲ್ಲಿ ಭಾಗವಹಿಸಿದ್ದರು. ಭಾವುರಾವ್ ಪಟೀಲರ ಜೀವನದಲ್ಲಿ, ಕಾರ್ಯ ವಿಧಾನದಲ್ಲಿ ಕೋಮು ಭಾವನೆ ಎಂದೂ ಕಾಣಿಸಿಕೊಳ್ಳಲಿಲ್ಲ. ಅನೇಕ ಬ್ರಾಹ್ಮಣ ಮಿತ್ರರು ಅವರ ಸಂಸ್ಥೆಯನ್ನು ಸೇರಿ ನಿಷ್ಠೆಯಿಂದ ಸೇವೆಸಲ್ಲಿಸಿದರು. 1948 ರಲ್ಲಿ ಮಹಾತ್ಮಗಾಂಧಿಯವರು ಹಂತಕನ ಗುಂಡಿಗೆ ಬಲಿಯಾದಾಗ ಮಹಾರಾಷ್ಟ್ರದ ಅನೇಕ ಕಡೆಗಳಲ್ಲಿ ಬ್ರಾಹ್ಮಣರ ವಿರುದ್ಧ ಹಿಂಸಾಕೃತ್ಯಗಳು ನಡೆದವು. ಭಾವುರಾವ್‌ರವರು ಇಂಥ ಪ್ರಯತ್ನಗಳನ್ನು ಖಂಡಿಸಿ ತಮ್ಮ ಪ್ರಭಾವದಿಂದ ಜನರು ಈ ರೀತಿಯಲ್ಲಿ ಹಿಂಸಾಚಾರದಲ್ಲಿ ತೊಡಗದಂತೆ ಮಾಡಿದರು.

ಭಾವುರಾವ್ ಪಾಟೀಲರದು ಆಕರ್ಷಕವಾದ ವ್ಯಕ್ತಿತ್ವ ಎತ್ತರದ ವ್ಯಕ್ತಿತ್ವ ಭವ್ಯ ನಿಲುವು, ನೋಡುವವರಿಗೆ ಇವರು ಒಬ್ಬ ಋಷಿಯಂತೆ ಕಾಣುತ್ತಿದ್ದರು. ಇವರು ಭಾಷಣ ಮಾಡುತ್ತಿದ್ದರೆ ಎಂಥವರೂ ಅವರ ಮಾತಿನ ಮೋಡಿಯಿಂದ ಮರುಳಾಗುತ್ತಿದ್ದರು. ನಿಷ್ಕಾಮ ಯೋಗಿಯಾದ ಇವರನ್ನು ಜನತೆಯ ಕರ್ಮವೀರರೆಂದು

ಕರೆದು ಗೌರವಿಸಿತು. 1959ರಲ್ಲಿ ಭಾರತ ಸರ್ಕಾರವು ಅವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ಕೊಟ್ಟು ಅವರ ಸೇವೆಯನ್ನು ವ್ಯಕ್ತಿತ್ವವನ್ನು ಕೊಂಡಾಡಿತು. ಅದೇ ವರ್ಷದಲ್ಲಿ ಪೂನಾ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿಯನ್ನು ಕೊಟ್ಟು ಗೌರವಿಸಿತು. ಆದರೆ ಭಾವುರಾವ್ ಅವರು ಮುಂದೆ ಬಹುಕಾಲ ಬದುಕಿರಲಿಲ್ಲ. ವಿಪರೀತ ಓಡಾಟ, ಅತಿಯಾದ ಶ್ರಮದಿಂದ ಅವರ ಆರೋಗ್ಯ ಕುಗ್ಗಿತ್ತು. ಹಲವಾರು ಭಾರಿ ಅವರಿಗೆ ಹೃದಯಾಘಾತವಾಯಿತು. ಕಡೆಗೆ 9-5-1959 ರಲ್ಲಿ ತಮ್ಮ 72ನೆಯ ವಯಸ್ಸಿನಲ್ಲಿ ಕರ್ಮವೀರ ಭಾವುರಾವ್ ಪಾಟೀಲ್ ಇಹಲೋಕವನ್ನು ತ್ಯಜಿಸಿದರು.

ಭಾವುರಾವ್ ಪಾಟೀಲ್ ಮಹಾರಾಷ್ಟ್ರದ ಮಹಾನ್ ಸಮಾಜ ಸುಧಾರಕರ ಪಂಕ್ತಿಗೆ ಸೇರಿದ್ದಾರೆ. ಮಹಾತ್ಮ ಗಾಂಧಿಯವರಂತೆ, ಸಮಗ್ರ ಶಿಕ್ಷಣ ಧರ್ಮ ಸಮನ್ವಯ, ಗ್ರಾಮೀಣ ಜನತೆಯ ಉದ್ಧಾರ, ಅನಕ್ಷರತೆಯ ನಿರ್ಮೂಲ ಮೊದಲಾದ ಧ್ಯೇಯೋದ್ದೇಶಗಳನ್ನು ಯಶಸ್ವಿಯಾಗಿ ನೆರವೇರಿಸಿದ ಅವರ ಸಾಧನೆ ಯಾವ ರಾಷ್ಟ್ರ ನಾಯಕನ ಸಾಧನೆಗೂ ಕಡಿಮೆಯಾದುದಲ್ಲ. ಮಹಾರಾಷ್ಟ್ರದ ಮೂಲೆಯ ಹಳ್ಳಿಯೊಂದರಲ್ಲಿ ಪ್ರಾರಂಭವಾದ ಅವರ ಜ್ಞಾನಯಜ್ಞ ಸಣ್ಣ ಝರಿಯಂತೆ ಪ್ರಾರಂಭವಾಗಿ ಕಡೆಗೆ ದೊಡ್ಡ ನದಿಯಾಗಿ ಮಹಾರಾಷ್ಟ್ರದ ಅನೇಕ ಭಾಗಗಳಿಗೆ ವ್ಯಾಪಿಸಿ ಅಲ್ಲೆಲ್ಲ ಜ್ಞಾನದ ಬೆಳಕನ್ನು ಹರಡಿತು. ಅವರ ನೆನಪಿಗಾಗಿ ಕರ್ಮವೀರ ಭಾವುರಾವ್ ಪಟೀಲ್ ಸಮಾಜ ಸೇವಾ ಪುರಸ್ಕಾರವನ್ನು ಸ್ಥಾಪಿಸಿ ಶ್ರೇಷ್ಠ ಸಮಾಜ ಸೇವಕರಿಗೆ ಹತ್ತು ಸಾವಿರ ರೂ.ಗಳ ಪುರಸ್ಕಾರಗಳನ್ನು ನೀಡಲಾಗುತ್ತಿದೆ. ಅವರ ಚಿತ್ರಗಳು ಪ್ರತಿ ಶಾಲೆಗಳನ್ನು ವಿದ್ಯಾರ್ಥಿ ನಿಲಯಗಳನ್ನು ಅಲಂಕರಿಸಿವೆ. ಅವರು ಹತ್ತಿಸಿದ ಜ್ಞಾನಜ್ಯೋತಿ ಲಕ್ಷಾಂತರ ಜನರ ಮನೆಗಳಲ್ಲಿ ಮನದಲ್ಲಿ ಬೆಳಗುತ್ತಿದೆ.

ಅಸತ್ಯಗಳಲ್ಲಿ ಯಾವುದು ಸತ್ಯವನ್ನು ಹೆಚ್ಚು ಹೋಲುತ್ತದೆಂಬುದನ್ನು ಅರಿಸಿಕೊಳ್ಳುವುದೇ ಇತಿಹಾಸ.

—ರೂಸೋ

ಮಾನವ ಸ್ವಾತಂತ್ರ್ಯ ಕಥೆಯೇ ಇತಿಹಾಸ.

—ಲಾರ್ಡ್ ಅಕ್ಟನ್

ಇತಿಹಾಸವೆಂಬುದು ನೈತಿಕ ಮೌಲ್ಯಗಳ ಒಂದು ದಾಖಲೆ ಮತ್ತು ಅದರ ವಿಸ್ತರಣೆ.

ಮನುಷ್ಯ ಏನು ಮಾಡಿದ ಏನು ಹೇಳಿದ ಹಾಗೂ ಏನು ಯೋಚಿಸಿದ ಎನ್ನುವುದೇ ಇತಿಹಾಸ.

—ಮೈಟ್ ಲ್ಯಾಂಡ್

ಡಾ. ಎ. ವಿ. ವೆಂಕಟರತ್ನಂ

ಕರ್ನಾಟಕದ ಇತಿಹಾಸ ಬೆಳೆದು ಬಂದ ದಾರಿ

ಚಿತ್ರದುರ್ಗಕ್ಕೆ ಬಹು ಪ್ರಾಚೀನವೂ ದೀರ್ಘವೂ ಆದ ಇತಿಹಾಸವಿದೆ. ಅಸಂಖ್ಯಾತ ಪ್ರಾಚೀನ ಸ್ಮಾರಕಗಳು ಚಿತ್ರದುರ್ಗ ಜಿಲ್ಲೆಯಲ್ಲಿವೆ. ಹಳೆಯ ಶಿಲಾಯುಗ ದಿಂದ ಹಿಡಿದು ಇಂದಿನವರೆಗಿನ ನಾಗರಿಕತೆಯ ನಿರಂತರ ಬೆಳವಣಿಗೆಯನ್ನು ಇವು ವಿವರಿಸು ತ್ತವೆ. ಕರ್ನಾಟಕದ ಅತ್ಯಂತ ಪ್ರಾಚೀನ ಶಾಸನಗಳಾದ ಅಶೋಕನ ಶಾಸನಗಳು ದೊರೆತಿರುವುದು ಇಲ್ಲಿಯೇ. ಜೊತೆಗೆ ಈ ಪ್ರದೇಶ ಬ್ರಹ್ಮಗಿರಿ ಹಾಗೂ ಚಂದ್ರವಳ್ಳಿಯ ಪ್ರಾಚೀನ ನಿವೇಶನಗಳನ್ನು ಒಳಗೊಂಡಿದೆ. ಸುಪ್ರಸಿದ್ಧ ಪುರಾತತ್ತ್ವಶಾಸ್ತ್ರಜ್ಞರು ಇಲ್ಲಿ ಉತ್ಖನನಗಳನ್ನು ನಡೆಸಿದ್ದಾರೆ. ಇತಿಹಾಸಪೂರ್ವ ಕಾಲದ ಜನರು ಕೌಶಲದಿಂದ ನಿರ್ಮಿಸಿದ ಅಮೂಲ್ಯ ವಸ್ತುಗಳನ್ನು ಅವರು ಹೊರತೆಗೆದಿದ್ದಾರೆ. ಅಸಂಖ್ಯಾತ ಬೃಹತ್ ಶಿಲಾಯುಗದ ಸಮಾಧಿಗಳು, ಕೋಟೆಗಳು, ದೇವಾಲಯಗಳು, ಕೊಳಗಳು ಗುಹೆಗಳು ಮತ್ತಿತರ ಸ್ಮಾರಕಗಳು ಬೆಳಕಿಗೆ ಬಂದಿವೆ. ಇವು ಸಾತವಾಹನರಿಂದ ಹಿಡಿದು ಮೈಸೂರು ಒಡೆಯರವರೆಗೆ ಕರ್ನಾಟಕದ ಎಲ್ಲ ಪ್ರಮುಖ ರಾಜವಂಶಗಳೊಡನೆ ನಿಕಟ ಸಂಪರ್ಕ ಪಡೆದಿರುವ ಈ ಚಿತ್ರದುರ್ಗ ಇತಿಹಾಸಕಾರರಿಗೆ ಸಂಶೋಧನೆಗೆ ವಿಪುಲಾವಕಾಶಗಳನ್ನು ಒದಗಿಸುತ್ತದೆ. ಇದರ ಖ್ಯಾತಿ ಸುಮಾರು ಮೂರು ಶತಮಾನಗಳ ಕಾಲ ಇದನ್ನು ಆಳಿದ ಪಾಳೆಗಾರರ ಸಾಧನೆಗಳನ್ನು ಅವಲಂಬಿಸಿದೆ. ಉಚ್ಚಂಗಿಯ ಪಾಂಡ್ಯರು ದಾವಣಗೆರೆಯ ಹೊರವಲಯದಲ್ಲಿರುವ ಬೇತೂರನ್ನು ತಮ್ಮ ರಾಜಧಾನಿಗಳ ಪೈಕಿ ಒಂದಾಗಿ ಮಾಡಿಕೊಂಡಿದ್ದರು. ಆಧುನಿಕ ಯುಗದಲ್ಲಿ ಕೂಡ ಚಿತ್ರದುರ್ಗ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದಂಥ ಮಹಾನ್ ನಾಯಕರನೇಕರನ್ನು ನೀಡಿದೆ

ಇಂಥ ಭವ್ಯ ಪರಂಪರೆ ಈ ಪ್ರದೇಶದ ಇತಿಹಾಸವನ್ನು ಪುನಾರಚಿಸಲು ಸ್ಥಳೀಯರನೇಕರಿಗೆ ಸ್ಫೂರ್ತಿ ನೀಡಿರುವುದು ಸಹಜವೇ. ಈ ದಿಸೆಯಲ್ಲಿ, ಹುಲ್ಲೂರು ಶ್ರೀನಿವಾಸ ಜೋಯಿಸರ ಶ್ರೇಷ್ಠ ಸೇವೆ ಅತ್ಯಂತ ಗಮನಾರ್ಹವಾದುದು. ಅವರ ಸತತ ಪರಿಶ್ರಮ, ಶ್ರದ್ಧೆಯ ಕ್ಷೇತ್ರಕಾರ್ಯ ಹಾಗೂ ಸಮೃದ್ಧ ಲೇಖನಕಾರ್ಯ —ಇವು ಶ್ರೀಮಂತ ಇತಿಹಾಸವನ್ನು ಸಂರಕ್ಷಿಸುವಲ್ಲಿ ನೆರವಾಗಿವೆ. ಅವರು ಇದರ

ಇತಿಹಾಸದ ಅನೇಕ ಅಂಶಗಳ ಬಗ್ಗೆ ಅಮೂಲ್ಯ ಬೆಳಕು ಬೀರಿರುವುದರ ಜೊತೆಗೆ ಶಾಸನಗಳು, ನಾಣ್ಯಗಳು, ಹಸ್ತಪ್ರತಿಗಳು, ಶಿಲ್ಪಗಳು ಮತ್ತಿತರ ವಸ್ತುಗಳನ್ನು ಸಂಗ್ರಹಿಸಿದ್ದಾರೆ; ಹಾಗೂ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಿದ್ದಾರೆ. ಇದು ಚಿತ್ರದುರ್ಗದ ಇತಿಹಾಸದ ಅಧ್ಯಯನಕ್ಕೆ ತುಂಬ ನೆರವಾಗುತ್ತದೆ. ಅವರ ಅನೇಕ ಕೃತಿಗಳು ಹಾಗೂ ಲೇಖನಗಳನ್ನು ಡಾ. ಎಂ. ವಿ. ಶ್ರೀನಿವಾಸ್‌ರವರು ಪರಿಷ್ಕರಿಸಿ, ಸಂಪಾದಿಸಿ ಪ್ರಕಟಿಸಿರುವುದು ಸಂತೋಷದ ಸಂಗತಿಯಾಗಿದೆ. ಗಳಗನಾಥ, ಎಂ ಎಸ್. ಪುಟ್ಟಣ್ಣ ಮೊದಲಾದ ಕನ್ನಡದ ಖ್ಯಾತ ಲೇಖಕರು ಚಿತ್ರದುರ್ಗದ ಪಾಳೆಯಗಾರರ ಬಗ್ಗೆ ಕೃತಿರಚನೆ ಮಾಡಿದ್ದಾರೆ. ಈ ವಿದ್ವಾಂಸರ ಜೊತೆಗೆ, ವಿವಿಧ ಸಂಘಸಂಸ್ಥೆಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳು ಕೂಡ ಈ ಸ್ಥಳದ ಇತಿಹಾಸದ ಸಂರಕ್ಷಣೆ ಹಾಗೂ ಪುನಾರಚನೆಯ ಕಾರ್ಯವನ್ನು ಕೈಗೊಂಡಿವೆ. ಈ ದಿಸೆಯಲ್ಲಿ ಚಿತ್ರದುರ್ಗ ಇತಿಹಾಸ ಸಂಶೋಧನ ಮಂಡಳಿಯ ಕಾರ್ಯ ಗಮನಾರ್ಹವಾಗಿದೆ. ಡಾ. ಎಂ. ವಿ. ಶ್ರೀನಿವಾಸ್ ಮತ್ತು ಶ್ರೀ ಲಕ್ಷ್ಮಣ ತೆಲಗಾವಿಯವರ ಮಾರ್ಗದರ್ಶನದಲ್ಲಿ ಈ ಮಂಡಳಿಯು ಸ್ಥಳೀಯ ಇತಿಹಾಸವನ್ನು ವೈಜ್ಞಾನಿಕ ರೀತಿಯಲ್ಲಿ ಪುನಾರಚಿಸುವ ಹಾಗೂ ಸ್ಥಳೀಯ ಜನತೆಯಲ್ಲಿ ಇತಿಹಾಸದ ಬಗ್ಗೆ ಆಸಕ್ತಿ ಕೆರಳಿಸುವ ಮೂಲಕ ಮಾಡಿರುವ ಸೇವೆ ಅತ್ಯಮೂಲ್ಯವಾಗಿದೆ. ಅದು ಈವರೆಗೆ ಆರು ಕೃತಿಗಳನ್ನು ಪ್ರಕಟಿಸಿದೆ: ಇವುಗಳ ಪೈಕಿ ಡಾ. ಎಂ. ವಿ. ಶ್ರೀನಿವಾಸ್ ಯೋಜಿಸಿ, ಸಂಪಾದಿಸಿರುವ 'ಚಂದ್ರವಳ್ಳಿ'ಯ ಬಗೆಗಿನ ಕೃತಿಯನ್ನು ಸ್ಥಳೀಯ ಇತಿಹಾಸದ ಅಧ್ಯಯನಕ್ಕೆ ಒಂದು ಮಾದರಿ ಎಂದು ಪರಿಗಣಿಸಬಹುದಾಗಿದೆ.

ಹೆಚ್ಚು ಉತ್ತಮವಾದ ಹಾಗೂ ಸತ್ತ್ವಪೂರ್ಣವಾದ ಸಮಗ್ರ ಭಾರತೀಯ ಇತಿಹಾಸದ ರೂಪುರೇಷೆಯ ಪುನಾರಚನೆಗೆ ಪ್ರಾದೇಶಿಕ ಇತಿಹಾಸ ಹೆಚ್ಚು ಹೆಚ್ಚು ಆಗತ್ಯವಾಗುತ್ತಿದೆ. ಬದಲಾವಣೆಗಳು ಪ್ರಾಂತದಿಂದ ಪ್ರಾಂತಕ್ಕೆ ವ್ಯತ್ಯಯಗೊಳ್ಳುವುದರಿಂದಾಗಿ ಯಾವುದೇ ಸಾರ್ವತ್ರೀಕರಣ ಇಡೀ ಭರತಖಂಡವನ್ನು ಒಳಗೊಳ್ಳುವುದಿಲ್ಲ ಎಂದು 1965ರಷ್ಟು ಹಿಂದೆಯೇ ಡಿ.ಡಿ. ಕೊಸಾಂಬಿಯವರು ಸೂಚಿಸಿದ್ದರು. ನಮ್ಮ ಪ್ರಾದೇಶಿಕ ಇತಿಹಾಸದ ಅಧ್ಯಯನಕ್ಕೆ ಸಾಕಷ್ಟು ಆಕರ ಸಾಮಗ್ರಿಗಳ ಸಂಗ್ರಹಣೆ ಮತ್ತು ಕ್ಷೇತ್ರಾಧ್ಯಯನ ಅತ್ಯವಶ್ಯ ಎಂಬುದು ನಾವೆಲ್ಲ ಒಪ್ಪಿರುವ ಸಂಗತಿಯಾಗಿದೆ. ವಿಶೇಷೀಕರಣದ ಕ್ಷೇತ್ರಕ್ಕೆ ಸಂಬಂಧಿಸಿದ ಮೂಲ ಆಕರ ಸಾಮಗ್ರಿಗಳನ್ನು ಪಡೆದುಕೊಳ್ಳುವುದು ಕ್ಲಿಷ್ಟಕರವಾದ ಸಮಸ್ಯೆಯಾಗಿದೆ. ಸಾಮಗ್ರಿಯು ಒಂದಕ್ಕಿಂತಲೂ ಹೆಚ್ಚು ವಿದೇಶೀ ಭಾಷೆಗಳಲ್ಲಿ ಲಭ್ಯವಾಗಿದ್ದು, ಅದು ಹಲವು ಸಂಗ್ರಹಾಲಯಗಳಲ್ಲಿರಬಹುದು. ಅಧ್ಯಯನ ಮತ್ತು ಸಂಶೋಧನೆಗಾಗಿ ಸಾಕಷ್ಟು ಸಾಮಗ್ರಿಯನ್ನು ಸಂಗ್ರಹಿಸುವುದಕ್ಕೆ ತಾಳ್ಮೆ ಹಾಗೂ ಅವಿಶ್ರಾಂತ ದುಡಿಮೆ ಆಗತ್ಯವಾಗುತ್ತದೆ. ಸಮಕಾಲೀನ ಸಮಸ್ಯೆಗಳ ಬಗ್ಗೆ ಕೆಲಸಮಾಡಲು ವರ್ತಮಾನ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು, ಅಧಿಕೃತ ಟಿಪ್ಪಣಿಗಳು,

ಜ್ಞಾಪನಪತ್ರಗಳು, ಸುತ್ತೋಲೆಗಳು ಹಾಗೂ ವೈಯಕ್ತಿಕ ಸಂದರ್ಶನಗಳ ಮೂಲಕ ಸಂಗ್ರಹಿಸಲಾದ ಮೌಖಿಕ ಸಾಕ್ಷ್ಯಾಧಾರಗಳ ನಿಯತವಾದ ಹಾಗೂ ಸತತವಾದ ಸಂಗ್ರಹ ಅಗತ್ಯವಾಗುತ್ತದೆ. ಗೋವಾದ ಐತಿಹಾಸಿಕ ಪತ್ರಾಗಾರ, ಮಹಾರಾಷ್ಟ್ರ ರಾಜ್ಯದ ಪತ್ರಾಗಾರ (ಮುಂಬಯಿ), ಮದ್ರಾಸ್ ದಸ್ತಾವೇಜು ಕಛೇರಿ, ಭಾರತದ ರಾಷ್ಟ್ರೀಯ ಪತ್ರಾಗಾರ, ಮತ್ತು ಕರ್ನಾಟಕ ಪತ್ರಾಗಾರ (ಬೆಂಗಳೂರು)—ಇಲ್ಲಿ ಅಮೂಲ್ಯವಾದ ಆಕರಸಾಮಗ್ರಿಗಳಿವೆ. ಈ ಎಲ್ಲ ಸಾಮಗ್ರಿಗಳನ್ನು ಹೊರತು ಪಡಿಸಿದರೆ, ಕರ್ನಾಟಕದ ಇತಿಹಾಸದ ರಾಜಕೀಯ, ಸಾಮಾಜಿಕ, ಹಾಗೂ ಆರ್ಥಿಕ ಪ್ರವೃತ್ತಿಗಳ ಅರ್ಥಪೂರ್ಣವಾದ ಹಾಗೂ ವೈಜ್ಞಾನಿಕ ವಿಶ್ಲೇಷಣೆ ಕಷ್ಟಕರವಾಗುತ್ತದೆ. 19 ಮತ್ತು 20ನೇ ಶತಮಾನಗಳಿಗೆ ಸಂಬಂಧಿಸಿದ ವಿಷಯಗಳು ನಮ್ಮ ರಾಜ್ಯದ ಜೀವನ, ಸಮಾಜವ್ಯವಸ್ಥೆ ಹಾಗೂ ಅರ್ಥವ್ಯವಸ್ಥೆಯ ಬಗ್ಗೆ ಸೂಕ್ಷ್ಮ ಪರಿಜ್ಞಾನವನ್ನು ಪಡೆಯಲು ನೆರವಾಗುವುದರಿಂದ ಅವನ್ನು ಆಶ್ರಯಿಸುವುದು ಪ್ರಯೋಜನಕಾರಿ ಯಾಗುತ್ತದೆ ಎಂದು ಇತಿಹಾಸದ ನಮ್ರ ವಿದ್ಯಾರ್ಥಿಯಾಗಿ ನಾನು ಸೂಚಿಸ ಬಯಸುತ್ತೇನೆ.

ಈಚಿನ ದಶಕಗಳಲ್ಲಿ ಸ್ನಾತಕಪೂರ್ವ, ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನಗಳಲ್ಲಿ ಹಾಗೂ ಡಾಕ್ಟೋರೇಟ್ ಸಂಶೋಧನೆಗಳಲ್ಲಿ ಕರ್ನಾಟಕ ಇತಿಹಾಸ ಹೆಚ್ಚಿನ ಪ್ರಾಮುಖ್ಯಗಳಿಸುತ್ತಿದೆ. ಆದರೆ, ಕಾರ್ಯಶೀಲವಾಗಿರುವ ರಾಷ್ಟ್ರೀಯ ಶಕ್ತಿ ಗಳನ್ನು ನಿರ್ಲಕ್ಷಿಸದೆ ನಮ್ಮ ಪ್ರಾದೇಶಿಕ ಇತಿಹಾಸದ ಬಗ್ಗೆ ನಾವು ತೀವ್ರ ಅಧ್ಯಯನ ವನ್ನು ಕೈಗೊಳ್ಳಬೇಕಾಗಿದೆ. ಕರ್ನಾಟಕದ ಇತಿಹಾಸ ಬರೆಯುವಲ್ಲಿನ ಗಂಭೀರ ಸ್ವರೂಪದ ದೋಷವೆಂದರೆ ಪರಿಕಲ್ಪನಾತ್ಮಕವಾದ ಹಾಗೂ ಸಮಗ್ರವಾದ ರೂಪುರೇಷೆ ಗಳಿಲ್ಲದಿರುವುದೇ ಆಗಿದೆ. ಕರ್ನಾಟಕದ ಇತಿಹಾಸವನ್ನು ಕುರಿತ ಅನೇಕ ಕೃತಿಗಳು ಪ್ರಾದೇಶಿಕ ಪಕ್ಷಪಾತದ ದೋಷಕ್ಕೆ ಗುರಿಯಾಗಿವೆ. ಅರಸುಮನೆತಗಳ ಇತಿಹಾಸಗಳ ಮೂಲಕ ಅಥವಾ 'ದೊಡ್ಡ' ಅರಸುಮನೆತಗಳ ಮೂಲವನ್ನು ಆಧುನಿಕ ಕರ್ನಾಟಕದ ಮೇರೆಗಳಲ್ಲಿಯೇ ಅರಸುವುದು ಮೂಲಕ ಈ ಪ್ರದೇಶವನ್ನು ಘನತೆಗೇರಿಸುವ ಪ್ರವೃತ್ತಿಗೆ ಇದು ಎಡೆಮಾಡಿಕೊಟ್ಟಿದೆ. ಇತಿಹಾಸವು ಜಯಶಾಲಿಗಳ ಸಾಧನೆ, ಅವರ ಸಮರಗಳು ಹಾಗೂ ಆಕ್ರಮಿಸಿದ ಪ್ರದೇಶಗಳನ್ನು ಉಜ್ವಲವಾಗಿ ವರ್ಣಿಸುವ ಘಟನೆಗಳ ವೃತ್ತಾಂತ ಮಾತ್ರ ಎಂದು ಪರಿಗಣಿಸುತ್ತಿದ್ದ ದಿನಗಳು ಕಳೆದುಹೋದುವು. ರಾಜ–ರಾಣಿಯರ ಇತಿಹಾಸ ಗತ ಇತಿಹಾಸದ ಜೀವದುಸಿರಾಗಿರುವ ಕಾಲ ಇನ್ನಿಲ್ಲ. ಈವರೆಗೆ ರಾಜಕೀಯ ಇತಿಹಾಸ ನಮ್ಮ ಗಮನವನ್ನು ಎಷ್ಟೊಂದು ಆಕ್ರಮಿಸಿಬಿಟ್ಟಿದೆ ಹಾಗೂ ನಮ್ಮ ಸಂಶೋಧನೆಯಲ್ಲಿ ಪ್ರಾಧಾನ್ಯ ಪಡೆದಿದೆಯೆಂದರೆ, ಶ್ರೀಸಾಮಾನ್ಯ, ರೈತರು, ಕೆಲಸಗಾರರು ಮತ್ತು ಶ್ರಮಜೀವಿಗಳ ವ್ಯವಹಾರಗಳನ್ನು ನಿರ್ಲಕ್ಷಿಸಿ ಬಿಟ್ಟಿದ್ದೇವೆ ವಿಧ್ಯುಕ್ತ ರಾಜಕೀಯ ಇತಿಹಾಸದಿಂದ ದೂರ ಸರಿಯುವ ಪ್ರಯತ್ನ ಈಗ ನಡೆಯುತ್ತಿದೆ. ಆರ್ಥಿಕ ಇತಿಹಾಸ, ಸಾಮಾಜಿಕ ರಚನೆ ಹಾಗೂ ಆಡಳಿತ

ಕ್ರಮಗಳಿಗೆ ಹೆಚ್ಚಿನ ಮಹತ್ತ್ವ ನೀಡಲಾಗಿದೆ. ಇಂದು ಇತಿಹಾಸ ಸಂಶೋಧನೆಗೆ ತೊಡಗುವ ಸಂಶೋಧಕ ರಾಜವಂಶಗಳ ಅಥವಾ ರಾಜಕೀಯ ಅಧ್ಯಯನಕ್ಕಿಂತ ಸ್ಥಳೀಯ ಐತಿಹಾಸಿಕ ಅಧ್ಯಯನಗಳಿಗೆ ತನ್ನನ್ನು ಹೆಚ್ಚು ತೊಡಗಿಸಿಕೊಳ್ಳಬೇಕಾಗಿದೆ. ಒಂದು ಶತಮಾನದ ಕಾಲದಲ್ಲಿ ಒಂದು ತಾಲ್ಲೂಕು ಅಥವಾ ಜಿಲ್ಲೆಯಲ್ಲಿನ ಆಡಳಿತಾತ್ಮಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಕರ್ಣಾಟಕದ ಆಧುನಿಕ ಇತಿಹಾಸದಲ್ಲಿ ಹೆಚ್ಚು ಚಿತ್ತಾಕರ್ಷಕವಾಗಿರುತ್ತದೆ. ಸ್ಥಳೀಯ ಅಧ್ಯಯನಗಳನ್ನು ಕೈಗೊಳ್ಳುವಲ್ಲಿ ಕರ್ಣಾಟಕದ ಇತಿಹಾಸ–ಸಂಶೋಧಕ ಹಲವು ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಮುಖ್ಯವಾದ ನಿರ್ಬಂಧವೆಂದರೆ ಮುದ್ರಿತ ಹಾಗೂ ಉತ್ತಮವಾಗಿ ದಾಖಲಾದ ಆಧಾರಸಾಮಗ್ರಿ ಸಾಕಷ್ಟು ಇಲ್ಲದಿರುವುದು. ಆದರೆ ಸಂಶೋಧಕನಾದವನು, ಇದುವರೆವಿಗೆ ಕಡೆಗಣಿಸಿದ್ದಂಥ ಮೂಲಗಳನ್ನು ಅರಸಬೇಕು. ಜಿಲ್ಲಾ ಕಛೇರಿಗಳು, ತಾಲ್ಲೂಕು ಕಛೇರಿಗಳು, ಪಂಚಾಯತಿ ಸಮಿತಿಗಳ ದಾಖಲೆಗಳ ಕೊಠಡಿಗಳನ್ನು ಉಪಯೋಗಿಸಿಕೊಳ್ಳಬಹುದು. ಹಳೆಯ ಆಸ್ಪತ್ರೆಗಳು, ಶೈಕ್ಷಣಿಕ ಸಂಸ್ಥೆಗಳು, ಎಂಜಿನಿಯರಿಂಗ್, ಅರಣ್ಯ, ಲೋಕೋಪಯೋಗಿ, ಆರೋಗ್ಯ ಮತ್ತು ನೈರ್ಮಲ್ಯ, ಅಬಕಾರಿ ಮತ್ತು ಪೋಲೀಸು ಇಲಾಖೆಗಳ ದಾಖಲೆಗಳು ಗತಕಾಲದತ್ತ ಉತ್ತಮ ಒಳನೋಟ ಬೀರಲು ನೆರವಾಗಬಲ್ಲವು. ಪುರಸಭಾ ಕಛೇರಿಗಳು ಆಡಳಿತಾತ್ಮಕ ವರದಿಗಳಂತೆ ತಮ್ಮ ದಾಖಲೆಗಳನ್ನು ಸಂರಕ್ಷಿಸಿರುತ್ತವೆ; ಇವು ಪುರಸಭೆಗಳ ಬೆಳವಣಿಗೆ ಹಾಗೂ ಅಭಿವೃದ್ಧಿಯನ್ನು ಅರ್ಥಮಾಡಿಕೊಳ್ಳಲು ಅತ್ಯಗತ್ಯವಾಗುತ್ತವೆ. ಭೂಮಿ ಗೇಣಿ, ಕೃಷಿ–ಸ್ವರೂಪ, ಜಮೀನಿನ ಬೆಲೆಗಳು, ಬೆಳೆ ವಿನ್ಯಾಸಗಳು, ಮತ್ತಿತರ ಗ್ರಾಮೀಣ ಭೂಸಮಸ್ಯೆಗಳ ಪ್ರಮುಖ ಅಂಶಗಳ ಅಧ್ಯಯನಕ್ಕೆ ಅಗತ್ಯವಾದ ಅಮೂಲ್ಯ ದಾಖಲಾತಿಗಳನ್ನು ಗ್ರಾಮಪಂಚಾಯತಿಗಳು ಸಂರಕ್ಷಿಸಿರುತ್ತವೆ. ಕೆಲವು ಪ್ರಮುಖವಾದ ಹಾಗೂ ಪ್ರಭಾವೀ ಮನೆತನಗಳವರ ವಶದಲ್ಲಿ ಅಮೂಲ್ಯವಾದ ದಾಖಲೆಗಳು ಹಾಗೂ ವಂಶ–ಪತ್ರಗಳು ಇರುತ್ತವೆ; ಇವು ಕೂಡ ಸ್ಥಳೀಯ ಇತಿಹಾಸದ ಅಧ್ಯಯನಕ್ಕೆ ಆಕರಗಳಾಗಬಹುದು. ವಂಶದ ಈ ದಾಖಲಾತಿಗಳನ್ನು ಶ್ರದ್ಧಾವಂತರೂ ಪರಿಶ್ರಮಿಗಳೂ ಆದಂಥ ಸಂಶೋಧಕರಿಗೆ ಯಾರೂ ಇಲ್ಲವೆನ್ನುವುದಿಲ್ಲ. ಸ್ಥಳೀಯ ಪರಂಪರೆಗಳು, ಜನಪದ ಗೀತೆಗಳು ಹಾಗೂ ಇತರ ಮೌಖಿಕ ಸಾಕ್ಷ್ಯಾಧಾರಗಳಿಂದಲೂ ಸ್ಥಳೀಯ ಇತಿಹಾಸವನ್ನು ಸ್ವಲ್ಪಮಟ್ಟಿಗೆ ಪುನಾರಚಿಸಬಹುದು. ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತುಸಂಗ್ರಹಾಲಯದಲ್ಲಿ ಇಂಥ ಆಕರಗಳ ಅಮೂಲ್ಯ ಸಂಗ್ರಹವಿದೆ. ಮೂಲಸಾಮಗ್ರಿ ತನ್ನನ್ನು ಅರಸಿಬರುವುದು ಎಂದು ಸಂಶೋಧಕ ನಿರೀಕ್ಷಿಸದೆ, ತಾನೇ ಅವುಗಳಿರುವ ಸ್ಥಳಗಳನ್ನು ಹುಡುಕಿಕೊಂಡು ಹೊರಡುವುದು ಅಗತ್ಯವಾಗುತ್ತದೆ.

ಸ್ವಾತಂತ್ರ್ಯ ಚಳವಳಿಯಲ್ಲಿ ಆರ್ಥಿಕ ವರ್ಗಗಳು ಎಷ್ಟರಮಟ್ಟಿಗೆ ಪಾಲ್ಗೊಂಡವು, ರಾಜಕೀಯವಾಗಿ ಜನರು ಹೇಗೆ ಸಂಘಟಿತರಾಗಿದ್ದರು ಮತ್ತು ಯಾವುದಾದರೂ

ಗುಂಪು ರಾಜಕೀಯವಾಗಿ ಪ್ರಧಾನವಾಗಿತ್ತೇ ಮೊದಲಾದ ಪ್ರಶ್ನೆಗಳ ಬಗ್ಗೆ ಗಮನ ಕೇಂದ್ರೀಕರಿಸಿ ಕರ್ನಾಟಕದಲ್ಲಿನ ಸ್ವಾತಂತ್ರ್ಯ ಚಳವಳಿಯ ಅಧ್ಯಯನ ನಡೆಸುವುದು ಅಗತ್ಯವಾಗಿದೆ. ಮೈಸೂರಿನಲ್ಲಿನ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ಮಧ್ಯಮ ತರಗತಿಯ ಪ್ರಜಾವರ್ಗದ ಮೇಲುಸ್ತರದ ವ್ಯಕ್ತಿಗಳು ಪ್ರಾಮುಖ್ಯ ಪಡೆದಿದ್ದಾರೆ. ಅಂದರೆ ಸ್ವಾತಂತ್ರ್ಯ ಚಳವಳಿಯು ಗಣ್ಯರ ಸಾಧನೆಯ ಫಲವಾಗಿದೆ ಎಂದಂತಾಯಿತು. ಈ ಚಳವಳಿಯಲ್ಲಿ ಜನತೆಯ ಪಾತ್ರವೇನಿತ್ತು ಎಂಬುದನ್ನು ಅರ್ಥಮಾಡಿಕೊಂಡು, ಮೌಲ್ಯಮಾಪನ ಮಾಡುವುದು ನಮಗೆ ಕಷ್ಟವಾಗುತ್ತದೆ. ಕೆಳವರ್ಗಗಳವರ ಪಾತ್ರ ಹಾಗೂ ಅವರ ಸ್ಥಿತಿಗತಿಗಳ ಬಗ್ಗೆ ಗಮನಹರಿಸುವುದಕ್ಕೆ ಇದು ಸಕಾಲವಾಗಿದ್ದು, ಪ್ರಸಿದ್ಧ ಘಟನೆಗಳು ಹಾಗೂ ಸಂಗತಿಗಳನ್ನು ಈ ಹೊಸ ದೃಷ್ಟಿಕೋನದಿಂದ ಮರುಪರಿಶೀಲಿಸಲೂ ಇದು ಸಕಾಲವಾಗಿದೆ. ಒಡೆಯರ ಕಾಲದ ಮೈಸೂರಿನ ಆರ್ಥಿಕ ಇತಿಹಾಸದ ಬಗ್ಗೆ ಹಾಗೂ ಸಾಮಾಜಿಕ ಪ್ರಭಾವ ಪರಿಣಾಮಗಳೊಡನೆ ಅದರ ರಾಜಕೀಯ ಇತಿಹಾಸದ ಬಗ್ಗೆ ಕೂಡ ಹೊಸ ದೃಷ್ಟಿಕೋನವನ್ನು ಹೊಂದುವ ಅಗತ್ಯವಿದೆ.

ಇಂದು ನಮ್ಮ ಇತಿಹಾಸಕಾರರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ವಿವಿಧ ಬಗೆಯ ಜಾತಿ ಹಾಗೂ ಜನಾಂಗ ಪ್ರೇರಣೆಗಳು, ರಾಜಕೀಯ–ಆರ್ಥಿಕ ಪ್ರೇರಣೆಗಳ ಸಿದ್ಧಾಂತ ಪರಿಕಲ್ಪನೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಎಲ್ಲ ಪ್ರಕರಣಗಳಲ್ಲಿ ತೀರ್ಮಾನಗಳು ಪೂರ್ವನಿರ್ಧಾರಿತವಾಗಿಬಿಟ್ಟಿರುತ್ತವೆ ; ಅಗತ್ಯವಾಗಿರುವುದು ಅನುಕೂಲಕರವಾದ ಪೂರ್ವಪಕ್ಷಗಳಷ್ಟೇ. ಹಸ್ತಕ್ಷೇಪ ಮಾಡುವುದು, ಮರೆಮಾಚುವುದು, ನಿರ್ಲಕ್ಷಿಸುವುದು, ನೆಪಗಳನ್ನು ಒಡ್ಡುವುದು ಹಾಗೂ ವಾಸ್ತವ ಸಂಗತಿಗಳಿಗೆ ವಿರುದ್ಧವಾಗಿರುವುದನ್ನು ತಮ್ಮ ಅನುಕೂಲಗಳಿಗೆ ಹೊಂದುವಂತೆ ವಿವರಿಸಿಬಿಡುವುದು–ಇದರಿಂದ ಅಪೇಕ್ಷಿತ ಪೂರ್ವಪಕ್ಷಗಳು ದೊರೆತುಬಿಡುತ್ತದೆ. ಇಂಥ ಕಾರ್ಯಗಳು ಐತಿಹಾಸಿಕ ಸಂಶೋಧನೆಗೆ ಆತಂಕಕಾರಿಯಾಗಿವೆ.

ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಿರುವ ಐತಿಹಾಸಿಕ ಅಧ್ಯಯನಗಳು ಸಂಶೋಧನೆಯ–ಅದರಲ್ಲಿಯೂ ವಿಶೇಷವಾಗಿ ಡಾಕ್ಟೊರಲ್ ಸಂಶೋಧನೆಯ–ಪ್ರಗತಿಯ ವಿವರಗಳಿಂದ ಪ್ರಕಟವಾಗುವ ಅಂಶವೆಂದರೆ ಕರ್ನಾಟಕದ ಇತಿಹಾಸದ ಬಗ್ಗೆಯೇ ಸಂಪೂರ್ಣ ಗಮನ ಕೇಂದ್ರೀಕೃತವಾಗಿರುವುದು. ಇದು ಒಂದು ರೀತಿಯಲ್ಲಿ ಸಹಜವಾದುದೂ, ಅಪೇಕ್ಷಣೀಯವಾದುದೂ ಹೌದು. ಸ್ಥಳೀಯ ಇತಿಹಾಸದ ಬಗ್ಗೆ ಸಾಮಗ್ರಿ ಸುಲಭಲಭ್ಯವಾಗಿರುವುದು ಹಾಗೂ ವಿದ್ಯಾರ್ಥಿಗಳಿಗೆ ಸ್ಥಳೀಯ ಭಾಷೆ ತಿಳಿದಿರುವ ಅನುಕೂಲವೂ ಇರುವುದು ಇದಕ್ಕೆ ಕಾರಣ. ಆದರೆ ನಾವು ಇದನ್ನೇ ಮತ್ತೊಂದು ದೃಷ್ಟಿಯಿಂದಲೂ ನೋಡಬಹುದಾಗಿದೆ. ಪ್ರಾದೇಶಿಕ ಇತಿಹಾಸದ ಬಗ್ಗೆ ಗಮನ ತುಂಬ ಕೇಂದ್ರೀಕೃತವಾದರೆ, ಪ್ರಾಂತೀಯ ದೃಷ್ಟಿ ಅಥವಾ ದುರಾಗ್ರಹದ ಮನೋಭಾವ ಬೆಳೆಯುವ ಅಥವಾ ಸ್ಥಳೀಯ ನಾಯಕರನ್ನು ಅತಿಯಾಗಿ ವೈಭವೀಕರಿಸುವ ಪ್ರವೃತ್ತಿ ಅಥವಾ ನಿರ್ದಿಷ್ಟ ಪ್ರಾಂತದ ಸಾಂಸ್ಕೃತಿಕ ರೀತಿ–ನೀತಿಗಳಿಗೆ

ಹೆಚ್ಚಾಗಿ ಬೆಲೆಕಟ್ಟುವ ಪ್ರವೃತ್ತಿ ಬೆಳೆಯುವ ಅಪಾಯವೂ ಇದೆ. ಸೂಕ್ತವಾದ ಐತಿಹಾಸಿಕ ಪರಿಪ್ರೇಕ್ಷ್ಯವನ್ನು ಕಳೆದುಕೊಳ್ಳುವ ಅಪಾಯವೂ ಇದೆ. ಪ್ರಾದೇಶಿಕ ಇತಿಹಾಸವನ್ನು ವ್ಯಾಪಕವಾದ ರಾಷ್ಟ್ರೀಯ ಇತಿಹಾಸದ ಹಿನ್ನೆಲೆಯಲ್ಲಿ ಗಮನಿಸಿದಾಗ ಮಾತ್ರ, ಐತಿಹಾಸಿಕ ಪರಿಪ್ರೇಕ್ಷ್ಯವನ್ನು ಉಳಿಸಿಕೊಳ್ಳುವುದು ಸಾಧ್ಯ. ನಮ್ಮ ಎಲ್ಲ ವಿಶ್ವವಿದ್ಯಾನಿಲಯಗಳ ಇತಿಹಾಸ ವಿಭಾಗಗಳು ಈ ಸಾಧ್ಯತೆಯ ಬಗ್ಗೆ ಗಮನಹರಿಸು ವುದು ಅಗತ್ಯವಾಗಿದೆ.

ಈಗ ನಮ್ಮ ವಿಶ್ವವಿದ್ಯಾನಿಲಯಗಳ ಇತಿಹಾಸ ವಿಭಾಗಗಳಲ್ಲಿ ಇರುವುದ ಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾದ ಸಂಶೋಧನ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿದೆ. ಸಂಶೋಧನ ವಿದ್ಯಾರ್ಥಿಗಳು ತಮ್ಮ ಮಾರ್ಗದರ್ಶಕರನ್ನು ಕನಿಷ್ಠ ಪಕ್ಷ ವಾರದಲ್ಲಿ ಒಂದು ಸಲ, ಒಂದು ಗಂಟೆಯಾದರೂ ಭೇಟಿಯಾಗಬೇಕು; ಈ ಅವಧಿಗೆ ಇಲಾಖೆಯ ವೇಳಾಪಟ್ಟಿಯಲ್ಲಿ ಅವಕಾಶ ಕಲ್ಪಿಸಿರಬೇಕು. ವೈಯಕ್ತಿಕ ಗಮನ ಪಡೆದುಕೊಳ್ಳುವುದರ ಜೊತೆಗೆ, ಅವರು ಸಾಪ್ತಾಹಿಕ ಸಂಶೋಧನ ವಿಚಾರ ಗೋಷ್ಠಿಗಳಿಗೆ ತಪ್ಪದೆ ಹಾಜರಾಗಬೇಕು; ಇದು ಅವರಿಗೆ ಹಾಗೂ ವಿಶ್ವವಿದ್ಯಾ ನಿಲಯದ ಇತಿಹಾಸ ಅಧ್ಯಾಪಕರಿಗೆ ಸೀಮಿತವಾಗಿರಬೇಕು. ವಿಚಾರಗೋಷ್ಠಿಯಲ್ಲಿ, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ತಾವು ಮಂಡಿಸುವ ಸಮಸ್ಯೆಗಳ ಬಗ್ಗೆ ಮಾರ್ಗದರ್ಶನ ಪಡೆಯುವ ಸಲುವಾಗಿ ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿ ದಂತೆ ಪ್ರಬಂಧಗಳನ್ನು ಮಂಡಿಸಬೇಕು. ಸಂಶೋಧನೆಯ ಸಂಯೋಜನೆಗಾಗಿ ನಮ್ಮ ವಿಶ್ವವಿದ್ಯಾನಿಲಯ ಇತಿಹಾಸ ವಿಭಾಗಗಳು ಮಾರ್ಗೋಪಾಯಗಳನ್ನು ಕಂಡು ಹಿಡಿಯಬೇಕು. ಕರ್ನಾಟಕ ಇತಿಹಾಸದ ಬಗೆಗಿನ ಎಲ್ಲ ಪ್ರಕಟಿತ ಹಾಗೂ ಅಪ್ರಕಟಿತ ಡಾಕ್ಟೊರಲ ಮಹಾನಿಬಂಧಗಳ ಕೇಂದ್ರೀಯ ಭಂಡಾರವನ್ನು ವ್ಯವಸ್ಥೆ ಮಾಡಬೇಕಾದ್ದು ಗುಣಮಟ್ಟದ ಉತ್ತಮಿಕೆಗೆ ಅಗತ್ಯವಾಗಿರುವ ಸುಧಾರಣೆಗಳ ಪೈಕಿ ಒಂದು. ಇವು ಆಸಕ್ತರಾದ ಎಲ್ಲರಿಗೂ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಸುಲಭವಾಗಿ ದೊರೆಯುವಂತಿರಬೇಕು. ಪ್ರತಿಯೊಬ್ಬ ಅಭ್ಯರ್ಥಿ, ಕೇಂದ್ರ ಭಂಡಾರಕ್ಕೆ ಕಳುಹಿಸುವ ಸಲುವಾಗಿ, ತನ್ನ ಮಹಾನಿಬಂಧದ ಹೆಚ್ಚುವರಿ ಪ್ರತಿಯೊಂದನ್ನು ಸಲ್ಲಿಸುವಂತೆ ನಮ್ಮ ವಿಶ್ವವಿದ್ಯಾನಿಲಯದ ನಿಬಂಧನೆಗಳು ನಿಗದಿಪಡಿಸಬೇಕು ಸಂಶೋಧನೆಯ ಉನ್ನತ ಮಟ್ಟವನ್ನು ಕಾಪಾಡಿಕೊಂಡು ಬರುವುದರ ಜೊತೆಗೆ, ಇಂಥ ಕೇಂದ್ರ ಭಂಡಾರ ಒಂದು ನಿರ್ದಿಷ್ಟ ವಿಷಯವೊಂದರ ಬಗ್ಗೆ ಈಗಾಗಲೇ ಈ ಮೊದಲಿನ ಮಹಾನಿಬಂಧ ಗಳಲ್ಲಿ ಎಲ್ಲಿಯವರೆಗೆ ಪರಿಶೀಲಿಸಲಾಗಿದೆ ಎಂಬುದಕ್ಕೆ ಅಥವಾ ತಮಗೆ ಎದುರಾಗಿರುವ ಸಮಸ್ಯೆಗಳಿಗೆ ಅಗತ್ಯವಾದ ಸುಳಿವುಗಳನ್ನು ಪಡೆಯಬಯಸುವ ಸಂಶೋಧಕರೆಲ್ಲರಿಗೂ ಸಹಾಯಕವಾಗುವುದು. ಕರ್ನಾಟಕದ ವಿಶ್ವವಿದ್ಯಾನಿಲಯಗಳು ಅಪ್ರಕಟಿತ ಮಹಾ ನಿಬಂಧಗಳನ್ನು ವಾಣಿಜ್ಯೋದ್ದೇಶಗಳಿಗಾಗಿ ಮೈಕ್ರೊಫಿಲಂ ಮಾಡಿಸುವ ಕಾರ್ಯವನ್ನು ಸಹ ಕೈಗೊಳ್ಳಬಹುದು.

ಈ ಸಂದರ್ಭದಲ್ಲಿಯೇ, ಸ್ಥಳೀಯ ಇತಿಹಾಸ ಬರೆಯುವುದರ ಅಗತ್ಯದ ಬಗ್ಗೆ ಒತ್ತಿಹೇಳಬಯಸುತ್ತೇನೆ. ಸಾಹಿತ್ಯ, ಶಾಸನ, ನಾಣ್ಯಗಳು ಮತ್ತು ಪುರಾತತ್ತ್ವದ ಬಗ್ಗೆ ಅಪಾರ ಸಂಪತ್ತಿನಿಂದ ಕೂಡಿರುವ ಕರ್ನಾಟಕದ ಸ್ಥಳೀಯ ಇತಿಹಾಸ ರಚನೆ ಅದರ ಬಗ್ಗೆ ಇತಿಹಾಸಕಾರರು ಸಮಗ್ರ ಪರಿಪ್ರೇಕ್ಷ್ಯವನ್ನು ಹೊಂದಲು ನೆರವಾಗುತ್ತದೆ. ಕರ್ನಾಟಕದ ಇತಿಹಾಸವನ್ನು ಸಾಂಸ್ಕೃತಿಕ ದೃಷ್ಟಿಕೋನದಿಂದ ಬರೆಯುವುದಕ್ಕೂ ಇದು ಸಕಾಲವಾಗಿದೆ. ಕರ್ನಾಟಕದ ಸಮಗ್ರವಾದ, ಪ್ರಮಾಣಪೂರ್ವಕವಾದ ಸಾಮಾಜಿಕ ಇತಿಹಾಸದ ಬಗ್ಗೆ ಯೋಜನೆ ಕೈಗೊಳ್ಳುವುದಕ್ಕೂ ಇದು ಸಕಾಲವಾಗಿದೆ. ಜನತೆಯ ಸಾಮಾಜಿಕ ಸ್ಥಿತಿಗತಿಗಳ ಬಗೆಗಿನ ಅಧ್ಯಾಯವನ್ನೊಳಗೊಂಡಿರುವ ಯಾವುದೇ ಪಠ್ಯಪುಸ್ತಕದಲ್ಲಿ ನಮಗೆ ಅಲ್ಪಸ್ವಲ್ಪ ಮಾಹಿತಿ ಮಾತ್ರವೇ ದೊರೆಯುತ್ತದೆ. ಕರ್ನಾಟಕದಲ್ಲಿ ಇತಿಹಾಸ ಪಾಂಡಿತ್ಯ ಶ್ರೀಸಾಮಾನ್ಯನೊಡನೆ ಸಂಬಂಧಪಡೆದಿರುವಂಥ ಸಮಾಜ, ಚಳವಳಿಗಳು, ಸಂಸ್ಥೆಗಳು, ವಿಚಾರಧಾರೆಗಳು, ಕಲೆ, ಸಂಸ್ಕೃತಿ, ತತ್ತ್ವಶಾಸ್ತ್ರ, ಕೃಷಿವಿದ್ಯೆ, ಭೂಹಿಡುವಳಿ, ಗ್ರಾಮೀಣ ಆರ್ಥಿಕವ್ಯವಸ್ಥೆ ಹಾಗೂ ಇತರ ಅಂಶಗಳಿಗೆ ಸಂಬಂಧಪಟ್ಟಿರುವಂಥ ಸಮಸ್ಯೆಗಳ ಬಗ್ಗೆ ಹೆಚ್ಚು ಗಮನಹರಿಸ ಬೇಕಾಗಿದೆ.

ಕರ್ನಾಟಕ ಇತಿಹಾಸದ ಅಧ್ಯಯನಕ್ಕೆ ಹಾಗೂ ಅಂತರ ವಿಭಾಗೀಯ ಉಪ ಕ್ರಮಕ್ಕೆ ಅಗತ್ಯವಾದ ಆಕರಗ್ರಂಥಗಳನ್ನು ಕನ್ನಡದಲ್ಲಿ ಸಂಪಾದಿಸುವತ್ತ ಗಮನ ಕೊಡಬೇಕಾಗಿ ಪ್ರತಿನಿಧಿಗಳಿಗೆ ಮನವಿಮಾಡಬಯಸುತ್ತೇನೆ. ಆಕರಮಾಹಿತಿ ಲಭ್ಯವಿರುವ ಭಾಷೆ ಅಥವಾ ಭಾಷೆಗಳಬಗ್ಗೆ ಸಾಕಷ್ಟು ಜ್ಞಾನವಿಲ್ಲದೆ ವಿದ್ವತ್ಪೂರ್ಣವಾದ ಮೂಲ ಸಂಶೋಧನೆ ಸಾಧ್ಯವಿಲ್ಲ. ನಮ್ಮ ಇತಿಹಾಸವನ್ನು ಸರಿಯಾಗಿ ಅರ್ಥಮಾಡಿ ಕೊಂಡು ವ್ಯಾಖ್ಯಾನಮಾಡಿ ಸ್ನಾತಕಪೂರ್ವ ಹಾಗೂ ಸ್ನಾತಕೋತ್ತರ ಹಂತಗಳೆರಡ ರಲ್ಲೂ ಬೋಧಿಸಬೇಕಾದುದು ತುಂಬ ಮುಖ್ಯವಾಗಿದೆ. ಸರಿಯಾಗಿ ಅರ್ಥಮಾಡಿ ಕೊಳ್ಳುವಂಥಾಗಲು ಯುಕ್ತವಾದಂಥ ವಿಧಾನಗಳಿಂದ ಇತಿಹಾಸವನ್ನು ಬೋಧಿಸ ಬೇಕು. ಇತಿಹಾಸವನ್ನು ಸರಿಯಾಗಿ ಬೋಧಿಸುವುದು ಹಾಗೂ ಇತಿಹಾಸ–ಪಾಂಡಿತ್ಯ –ಇವು ಪರಸ್ಪರ ಪೂರಕವಾಗಿವೆ. ಇತಿಹಾಸವು ಘಟನೆಗಳ ಶುಷ್ಕವಿವರಣೆಯಲ್ಲ ಇಲ್ಲವೇ ಸಂಗತಿಗಳ ಅರ್ಥಹೀನ ಸಂಗ್ರಹವೂ ಅಲ್ಲ. ಅದು ಮಾನವ ಸಮಾಜದ ವಿಕಾಸದ ಅಧ್ಯಯನವಾಗಿದೆ. ಇತಿಹಾಸದ ಅಧ್ಯಯನ ರೋಮಾಂಚಕಾರಿಯಾದ ಸಾಹಸ ಎಂಬುದರ ಅನುಭವ ನಮ್ಮ ವಿದ್ಯಾರ್ಥಿಗಳಿಗೆ ಆಗುವಂಥ ಅವಕಾಶ ಮಾಡಿಕೊಡಬೇಕಾದುದು ಅಗತ್ಯ. ಯಾವುದೇ ಸಂಗತಿಗಳ ಬಗ್ಗೆ ಏನನ್ನೂ ಆಲೋಚಿಸದೆ, ಕೇವಲ ಅವನ್ನು ನೆನಪಿನಲ್ಲಿಟ್ಟುಕೊಳ್ಳುವುದೇ ಇತಿಹಾಸದ ಅಧ್ಯಯನ ಎಂಬ ಅಭಿಪ್ರಾಯವನ್ನು ಅವರ ಮನಸ್ಸಿನಿಂದ ತೊಡೆದುಹಾಕಬೇಕು. ಅಧ್ಯಯನ ಕ್ರಮ ಹಾಗೂ ಪರೀಕ್ಷಾ ತಂತ್ರಗಳ ಬಗ್ಗೆ ಯೋಜಿಸುವಾಗ ಪ್ರತಿ ಯೊಂದು ಶಿಕ್ಷಣದ ಧ್ಯೇಯೋದ್ದೇಶಗಳ ನಡುವೆ ಸ್ಪಷ್ಟವಾದ ವ್ಯತ್ಯಾಸ ಕಲ್ಪಿಸ

ಬೇಕು. ಪ್ರಶ್ನೆಪತ್ರಿಕೆಗಳ ಪರಿಶೀಲನೆಯಿಂದ ಸ್ನಾತಕ ಹಾಗೂ ಸ್ನಾತಕೋತ್ತರ ಹಂತಗಳಲ್ಲಿ ಕೇಳಲಾಗುವ ಪ್ರಶ್ನೆಗಳು ಸ್ವರೂಪತಃ ಒಂದೇ ರೀತಿಯವಾಗಿರುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ಸ್ನಾತಕ ಹಂತಗಳಲ್ಲಿ ಇತಿಹಾಸವನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳು ಈ ಕ್ಷೇತ್ರದಲ್ಲಿ ಸಾಮಾನ್ಯವಾಗಿ ವಿಶೇಷಜ್ಞಾನ ಪಡೆದಿರುವುದಿಲ್ಲ. ಅವರ ಪೈಕಿ ಎಲ್ಲೋ ಕೆಲವರಲ್ಲಿ ಮಾತ್ರ ಇತಿಹಾಸದಲ್ಲಿನ ಮಾಸ್ಟರ್ ಪದವಿ ಶಿಕ್ಷಣಕ್ಕೆ ಸ್ಪರ್ಧಿಸುವಷ್ಟು ವಿಶೇಷ ಪರಿಣತಿ ಇರುತ್ತದೆ. ಬಿ.ಎ. ಮಟ್ಟದಲ್ಲಿ ವ್ಯಾಪಕವಾದ ಕರ್ನಾಟಕ ಇತಿಹಾಸದ ಬಗ್ಗೆ ಸಾಮಾನ್ಯ ಶಿಕ್ಷಣ ನೀಡಬೇಕು. ಕರ್ನಾಟಕದ ಇತಿಹಾಸದ ಬಗ್ಗೆ ಆದ್ಯೋಪಾಂತವಾದ ತಿಳಿವಳಿಕೆ ಒದಗಿಸುವುದೇ ಅದರ ಗುರಿಯಾಗಿರಬೇಕು. ಮಾಸ್ಟರ್ ಪದವಿ ಹಂತದಲ್ಲಿನ ವಿಶೇಷ ಪರಿಣತಿಗೆ ಭದ್ರವಾದ ಬುನಾದಿಯನ್ನು ಹಾಕಬೇಕು. ಮಾಸ್ಟರ್ಸ್ ಪದವಿ ಹಂತದಲ್ಲಿನ ಬೋಧನೆ ವಿಶೇಷ ಪರಿಣತಿಯು ಹಾಗೂ ಆಳವಾದ ಅಧ್ಯಯನದತ್ತ ನಿರ್ದೇಶಿತವಾಗಿರಬೇಕು.

ಹಂಪೆಯಲ್ಲಿ ಪ್ರಮುಖ ಉತ್ಖನನದ ಕಾರ್ಯ ನಡೆಯುತ್ತಿರುವುದು ನಮಗೆ ಸಂತೋಷವನ್ನುಂಟುಮಾಡಿದೆ. ರಾಜ್ಯ ಪುರಾತತ್ತ್ವ ಇಲಾಖೆ ಹಾಗೂ ಭಾರತದ ಪುರಾತತ್ತ್ವ ಸರ್ವೇಕ್ಷಣೆ—ಇವು 1979ರಿಂದಲೂ ಈ ಪ್ರಮುಖ ಐತಿಹಾಸಿಕ ನಿವೇಶನದಲ್ಲಿ ಉತ್ಖನನ ಕಾರ್ಯ ನಡೆಸುತ್ತಿವೆ. ಈ ಉತ್ಖನನಗಳಿಂದ ಶಾಸನಗಳು, ಪ್ರತಿಮೆಗಳು, ನಾಣ್ಯಗಳು, ವಸ್ತುಗಳು ಮತ್ತು ಇತರ ಸ್ಮಾರಕಗಳ ರೂಪದಲ್ಲಿ ವಿಪುಲವಾದ ಮಾಹಿತಿ ಲಭಿಸಿದೆ. ಪ್ರಪಂಚದ ಸಾಂಸ್ಕೃತಿಕ ಪರಂಪರೆಯ ಕೇಂದ್ರಗಳ ಪೈಕಿ ಹದಿಮೂರನ್ನೂ ಯುನೆಸ್ಕೊ ಆಯ್ಕೆಮಾಡಿಕೊಂಡಿದ್ದು, ಅವುಗಳ ಪೈಕಿ ಹಂಪೆಯೂ ಒಂದಾಗಿದೆ. ಅಂಥ ಭವ್ಯನಿವೇಶನಗಳು ಕರ್ನಾಟಕದಲ್ಲಿ ಅನೇಕವಿವೆ. ನಮ್ಮ ಪುರಾತತ್ತ್ವಶಾಸ್ತ್ರಜ್ಞರು ಚಂದ್ರವಳ್ಳಿ, ಬಳ್ಳಿಗಾವೆ ಮೊದಲಾದಂಥ ಮುಖ್ಯ ನಿವೇಶನಗಳಲ್ಲಿ ಉತ್ಖನನ ಕೈಗೊಳ್ಳಬೇಕು.

ಪುರಾತತ್ತ್ವ ಇಲಾಖೆಯ ಜೊತೆಗೆ ನಮ್ಮ ವಿಶ್ವವಿದ್ಯಾನಿಲಯಗಳು ಕೂಡ ಈ ಮುಖ್ಯ ಕಾರ್ಯದಲ್ಲಿ ಪಾಲ್ಗೊಳ್ಳಬೇಕು. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಹಾಗೂ ಪುರಾತತ್ತ್ವ ಇಲಾಖೆ ಹಲವಾರು ವರ್ಷಗಳಿಂದ ಕೊಡಗಿನಲ್ಲಿ ಯಶಸ್ವಿ ಉತ್ಖನನಗಳನ್ನು ನಡೆಸಿದೆ. ಅದೇ ರೀತಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ವಿಭಾಗ ವಡಗಾಂವ ಮಾಧವಪುರದಲ್ಲಿ ಉತ್ಖನನ ನಡೆಸಿದೆ. ಈ ವಿಭಾಗಗಳು ಹಾಗೂ ಇತರ ಅರ್ಹ ಸಂಸ್ಥೆಗಳು ಕರ್ನಾಟಕದ ವಿವಿಧ ಐತಿಹಾಸಿಕ ಕೇಂದ್ರಗಳಲ್ಲಿ ಉತ್ಖನನ ಕಾರ್ಯ, ಸರ್ವೇಕ್ಷಣೆ ಹಾಗೂ ಇತರ ಚಟುವಟಿಕೆಗಳನ್ನು ಕೈಗೊಳ್ಳಬೇಕು.

ಕರ್ನಾಟಕ ರಾಜ್ಯ ಪ್ರವಾಸೋಭಿವೃದ್ಧಿ ನಿಗಮ ಫತೇಹ್‌ಪುರ ಸಿಕ್ರಿಯ ರೀತಿಯಲ್ಲಿಯೇ ಹಂಪೆಯಲ್ಲಿ ಪ್ರವಾಸಿ ಅಥೋರಚನಾ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಬೃಹತ್ ಯೋಜನೆಯೊಂದನ್ನು ತಯಾರಿಸುತ್ತಿದೆ. ಭವಿಷ್ಯದ ಪೌರರು

ನಮ್ಮ ದೇಶದ ಶ್ರೀಮಂತ ಸಂಸ್ಕೃತಿ ಹಾಗೂ ಪರಂಪರೆಯನ್ನು ಅರ್ಥಮಾಡಿಕೊಳ್ಳು ವಂತಾಗಲು, ಸ್ನಾತಕ ಹಾಗೂ ಸ್ನಾತಕಪೂರ್ವ ಹಂತದಲ್ಲಿ ಐತಿಹಾಸಿಕ ಪ್ರವಾಸ ಗಳನ್ನು ಕಡ್ಡಾಯಗೊಳಿಸಬೇಕು. ಪ್ರಾಚೀನ ಸ್ಮಾರಕಗಳು, ಶಾಸನಗಳು ಹಾಗೂ ನಾಣ್ಯಗಳ ಮೌಲ್ಯ ಮತ್ತು ಪ್ರಾಮುಖ್ಯದ ಬಗ್ಗೆ ಶ್ರೀಸಾಮಾನ್ಯರಿಗೆ ಹಾಗೂ ಹಳ್ಳಿ ಗರಿಗೆ ಶಿಕ್ಷಣ ನೀಡಲು ಕಾರ್ಯಕ್ರಮಗಳನ್ನು ರೂಪಿಸುವುದು ಸಹ ಅಗತ್ಯ. ಇದರಿಂದ ಅವರು ಸಹ ಅವನ್ನು ರಕ್ಷಿಸಿ, ಉಳಿಸುವ ಬಗ್ಗೆ ಆಸಕ್ತಿ ತೋರುವಂತಾಗುತ್ತದೆ.

ಕರ್ನಾಟಕದಲ್ಲಿ ಆಧುನಿಕಪೂರ್ವ ಅವಧಿಯ ಬಗ್ಗೆ ನಮ್ಮ ಇತಿಹಾಸಕಾರರು ಸಂಪೂರ್ಣವಾಗಿ ಚರ್ಚಿಸಿಲ್ಲ. ನಮ್ಮ ಪ್ರಾಂತದ ಇತಿಹಾಸದ ಈ ಮುಖ್ಯ ಘಟ್ಟದ ಬಗ್ಗೆ ನಮ್ಮ ಗಮನ ಹರಿಸಬೇಕು. ಪಾಳೆಯಗಾರರ ಕಾಲ, ನಾಯಕರು ಹಾಗೂ ದೇಸಾಯಿಗಳ ಆಳ್ವಿಕೆಯ ಅವಧಿಯ ಸಾಮಾಜಿಕ—ಆರ್ಥಿಕ ಜೀವನವನ್ನು ಎಚ್ಚರಿಕೆ ಯಿಂದ ಪರಿಶೀಲಿಸಬೇಕು. ಕೃಷಿಸಂಬಂಧವಾದ ಪರಿಸ್ಥಿತಿಗಳು, ಆಂತರಿಕ ವ್ಯಾಪಾರ, ಧಾರ್ಮಿಕ ಸಂಘಸಂಸ್ಥೆಗಳು–ಇವೆಲ್ಲ ಪ್ರಮುಖ ಅಭಿವೃದ್ಧಿ ಮುಖಗಳನ್ನು ಗುರುತಿಸಿ ವಿವರಿಸಲು ಇತಿಹಾಸಕಾರರಿಗೆ ವಿಪುಲ ಅವಕಾಶಗಳನ್ನು ಒದಗಿಸುತ್ತವೆ.

ಕೇಂಬ್ರಿಜ್ ಹಿಸ್ಟರಿ ಆಫ್ ಇಂಡಿಯಾದ ಮಾದರಿಯಲ್ಲಿ ಅಥವಾ ಭಾರತೀಯ ಇತಿಹಾಸ ಕಾಂಗ್ರೆಸ್‌ನ ಮಾದರಿಯಲ್ಲಿ ಕರ್ನಾಟಕದ ಸಮಗ್ರ ಇತಿಹಾಸವನ್ನು ಹೊರತರಬೇಕಾದ ತೀವ್ರ ಅಗತ್ಯವಿದೆ. ನಮ್ಮ ರಾಜ್ಯ ಸರ್ಕಾರ ವಿಶ್ವವಿದ್ಯಾನಿಲಯ ಗಳ ಮೂಲಕ ಈ ಕಾರ್ಯವನ್ನು ಕೈಗೊಳ್ಳಬಹುದು. ಕರ್ನಾಟಕದ ಇತಿಹಾಸ ಮತ್ತಿತರ ವಿಷಯಗಳಲ್ಲಿನ ತಜ್ಞ ವಿದ್ವಾಂಸರನ್ನು ಒಳಗೊಂಡ ಒಂದು ಸಮಿತಿ ಯನ್ನು ರೂಪಿಸಬಹುದು. ಈ ಸಮಿತಿಯ ಮೇಲ್ವಿಚಾರಣೆ ಹಾಗೂ ನಿಯಂತ್ರಣದಲ್ಲಿ ಈ ಕಾರ್ಯವನ್ನು ನಮ್ಮ ರಾಜ್ಯದ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗಗಳಿಗೆ ಹಂಚಿಕೊಡಬಹುದು. ಸಂಪೂರ್ಣ ಹಾಗೂ ಸಮಗ್ರ ಇತಿಹಾಸವನ್ನು ಪುನಾರಚಿಸಲು ಪಾರಂಪರಿಕ ವೃತ್ತಾಂತಗಳನ್ನು ಬಿಟ್ಟು ಬೇರೆಯವನ್ನು ಅರಸಬೇಕು. ಕರ್ನಾಟಕದಲ್ಲಿ ಇನ್ನೂ ಸರಿಯಾಗಿ ಹುಡುಕದಿರುವಂಥ ವಿಪುಲ ಸಾಹಿತ್ಯಿಕ ಆಕರಗಳಿವೆ. ಜನಪದ ಸಾಹಿತ್ಯ ತುಂಬ ಉಪಯುಕ್ತವಾದ ಆಕರವಾಗಬಲ್ಲದು.

ಕರ್ನಾಟಕ ರಾಜ್ಯ ಪತ್ರಾಗಾರದಲ್ಲಿರುವ ಹಾಗೂ ಜಿಲ್ಲಾ ದಸ್ತಾವೇಜು ಕಛೇರಿ ಗಳಲ್ಲಿರುವ ವಿಪುಲ ದಾಖಲೆಗಳನ್ನು ನಮ್ಮ ಸಂಶೋಧಕರು ಹಾಗೂ ಇತಿಹಾಸ ಕಾರರು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಶಾಸನಗಳಂಥ ಪಾರಂಪರಿಕ ಆಕರಗಳನ್ನು ಸಹ ಸರಿಯಾಗಿ ಅರ್ಥೈಸಿದಲ್ಲಿ ಸಾಮಾಜಿಕ ಮನೋವೃತ್ತಿಗಳು ಹಾಗೂ ಸಂಬಂಧಗಳ ಬಗ್ಗೆ ವಿಪುಲ ಮಾಹಿತಿ ದೊರೆಯುತ್ತದೆ. ನಮ್ಮ ಶಾಸನ ಸಂಪದದ ಮೂಲಗಳನ್ನು ಆಧುನಿಕಗೊಳಿಸುವ ಹಾಗೂ ಪರಿಷ್ಕರಿಸುವ ತುರ್ತು ಅಗತ್ಯವೂ ಇದೆ. ಬಿ. ಎಲ್. ರೈಸ್ ಸಂಪಾದಿಸಿರುವ ಸುವಿಖ್ಯಾತ 'ಎಪಿಗ್ರಾಫಿಯಾ ಕರ್ನಾಟಕ'ದ ಸಂಪುಟಗಳನ್ನು ಪರಿಷ್ಕರಿಸುವ ಯೋಜನೆಯನ್ನು ಕರ್ನಾಟಕ ಸರ್ಕಾರ

ಮಂಜೂರುಮಾಡಿತು. ಈ ಸಂಪುಟಗಳ ಪರಿಷ್ಕರಣ ಕಾರ್ಯ 1971ರಲ್ಲಿ ಆರಂಭಗೊಂಡಿದೆ. ಈ ಹದಿನೇಳು ವರ್ಷಗಳ ಅವಧಿಯಲ್ಲಿ ಎಂಟು ಸಂಪುಟಗಳು ಮಾತ್ರ ಹೊರಬಂದಿವೆ. ಸಾಕಷ್ಟು ಸಿಬ್ಬಂದಿ ಹಾಗೂ ಇತರ ಅಧೋರಚನೆಗಳ ಕೊರತೆಯಿಂದಾಗಿ ಯೋಜನೆಯ ಕಾರ್ಯ ತುಂಬ ಮಂದಗತಿಯಲ್ಲಿ ಸಾಗುತ್ತಿದೆ. ಈ ಯೋಜನೆಯಲ್ಲಿ ಈಗ ನಾಲ್ವರು ಮಾತ್ರ ಕೆಲಸಮಾಡುತ್ತಿರುವರು. ವಿಶ್ವವಿದ್ಯಾನಿಲಯ ಈ ಹುದ್ದೆಗಳನ್ನು ಭರ್ತಿಮಾಡಿ, ಉಳಿದಿರುವ ಸಂಪುಟಗಳ ಕಾರ್ಯ ಸಾಧ್ಯವಾದಷ್ಟು ಶೀಘ್ರವಾಗಿ ಹೊರತರುವುದೆಂದು ಆಶಿಸೋಣ. ಈ ಯೋಜನೆಯ ಬಗ್ಗೆ ಕರ್ನಾಟಕ ಸರ್ಕಾರ ಸಹ ತೀವ್ರ ಆಸಕ್ತಿ ವಹಿಸಬೇಕೆಂದು ಕೋರೋಣ.

ಡಾ. ಆರ್. ಇಂದಿರಾ

ಶಿಕ್ಷಣ ಮತ್ತು ಸಾಮಾಜಿಕ ಸ್ತರವಿನ್ಯಾಸ-ತಾಂತ್ರಿಕ ಶಿಕ್ಷಣದಲ್ಲಿನ ವಿದ್ಯಾರ್ಥಿನಿಯರ ಒಂದು ಅಧ್ಯಯನ

ಭಾರತದಲ್ಲಿ ಸ್ವಾತಂತ್ರ್ಯ ಬರುವವರೆಗೂ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರ ಪ್ರವೇಶವೇ ಆಗಿರಲಿಲ್ಲ. ಸ್ವಾತಂತ್ರ್ಯಾನಂತರ, ಎಂದರೆ, 1948ನೇ ಇಸವಿಯಲ್ಲಿ ಮಹಿಳೆಯರು ಪ್ರಥಮ ಬಾರಿಗೆ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾತಿಯನ್ನು ಪಡೆದರು. ಆದರೆ ಅಂದಿನಿಂದ ಹಿಡಿದು ಇಂದಿನವರೆಗೂ ಕೂಡ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಮಹಿಳೆಯರ ಸಂಖ್ಯೆ, ಪುರುಷರ ಸಂಖ್ಯೆಗೆ ಹೋಲಿಸಿದರೆ ತೀರಾ ಕೆಳಮಟ್ಟದಲ್ಲೇ ಇದೆ. ಈ ಕೆಳಗಿನ ಅಂಕಿ ಅಂಶಗಳಿಂದ ತಾಂತ್ರಿಕ ಶಿಕ್ಷಣದಲ್ಲಿ ಮಹಿಳೆಯರ ದಾಖಲಾತಿಯ ಪ್ರಮಾಣ ಎಷ್ಟು ಕಡಿಮೆ ಮಟ್ಟದಲ್ಲಿ ಇದೆ ಎಂದು ನಾವು ತಿಳಿಯಬಹುದು.

ಕೋಷ್ಟಕ ಒಂದು : ತಾಂತ್ರಿಕ ಶಿಕ್ಷಣದಲ್ಲಿ ಮಹಿಳೆಯರ ದಾಖಲಾತಿ

ಇಸವಿ	ಪುರುಷರು	ಮಹಿಳೆಯರು
1950-51	12,094	19
1960-61	43,389	403
1970-71	90,944	910

ಇಂದಿಗೂ ಕೂಡ ಈ ಪರಿಸ್ಥಿತಿ ಹೆಚ್ಚು-ಕಡಿಮೆ ಮುಂದುವರಿದಿದೆ ಎಂದರೆ ತಪ್ಪಾಗಲಾರದು. ಇದಕ್ಕೆ ಕಾರಣಗಳಿಲ್ಲದಿಲ್ಲ. ಬಹುತೇಕ ಕುಟುಂಬಗಳಲ್ಲಿ ಪೋಷಕರು ಗಂಡುಮಕ್ಕಳನ್ನು ತಾಂತ್ರಿಕ ಶಿಕ್ಷಣಕ್ಕೆ ಕಳುಹಿಸಲು ಉತ್ಸುಕರಾಗಿರುತ್ತಾರೆ. ಭವಿಷ್ಯದಲ್ಲಿ ಗಂಡುಮಕ್ಕಳು ಕುಟುಂಬಕ್ಕೆ ಆರ್ಥಿಕ ಆಧಾರವಾಗಬಹುದೆಂಬ ನಂಬಿಕೆಯೇ ಇದಕ್ಕೆ ಕಾರಣವಾಗಿದೆ. ಆದೇ, ಹೆಣ್ಣು ಮಕ್ಕಳನ್ನು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಸೇರಿಸಲು ಅನೇಕ ಅಂಶಗಳು ಅಡ್ಡಿಬರುತ್ತವೆ. ಇಂದಿಗೂ

ಕೂಡ, ಸಾಂಪ್ರದಾಯಿಕ ಮೌಲ್ಯಗಳ ಬಿಗಿಹಿಡಿತದಲ್ಲಿ ಸಿಲುಕಿರುವ ನಮ್ಮ ಸಮಾಜದಲ್ಲಿ ಬಹಳಷ್ಟು ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಮದುವೆಗೆ ಕೊಟ್ಟಿರುವ ಪ್ರಾಶಸ್ತ್ಯವನ್ನು ಅವರ ಶಿಕ್ಷಣಕ್ಕೆ ಕೊಟ್ಟಿಲ್ಲ. ಹೆಣ್ಣು ಮಕ್ಕಳ ಜೀವನದ ಗುರಿಯ ಬಗ್ಗೆ ಇರುವ ಈ ಕಲ್ಪನೆಯಿಂದ ಬಹಳಷ್ಟು ಕುಟುಂಬಗಳು ಅವರ ಶಿಕ್ಷಣದ ಮೇಲೆ ಹಣವನ್ನು ತೊಡಗಿಸಲು ಹಿಂಜರಿಯುತ್ತವೆ. ಇಂತಹ ಪರಿಸ್ಥಿತಿಯಲ್ಲಿ ತಾಂತ್ರಿಕ ಶಿಕ್ಷಣದಂಥ ದೀರ್ಘವೂ, ದುಬಾರಿಯೂ ಆದ ಪದವಿಯನ್ನು ಪಡೆಯಲು ಹೆಣ್ಣು ಮಕ್ಕಳನ್ನು ಉತ್ತೇಜಿಸುವ ಕುಟುಂಬಗಳ ಸಂಖ್ಯೆ ಬಹಳ ಕಡಿಮೆ. ಹೆಣ್ಣು ಮಕ್ಕಳನ್ನು ತಾಂತ್ರಿಕ ಶಿಕ್ಷಣಕ್ಕೆ ಕಳುಹಿಸಿ, ಮುಂದೆ ಅವರು ವಿವಾಹವಾಗಿ, ಅವರ ಮೇಲೆ ತೊಡಗಿಸಿದ ಹಣ ಯಾವುದೇ ರೂಪದಲ್ಲಿಯೂ ಹಿಂದಕ್ಕೆ ಬರುವುದಿಲ್ಲ ಎಂಬ ಕಾರಣದಿಂದಲೂ ಅನೇಕ ಪೋಷಕರು ಅವರನ್ನು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸಲು ನಿರಾಕರಿಸುತ್ತಾರೆ.

ಇತ್ತೀಚಿನ ದಿನಗಳಲ್ಲಿಯಾದರೋ ಈ ಮೇಲೆ ಹೇಳಿದ ಸಾಮಾಜಿಕ ಕಟ್ಟಲೆಗಳನ್ನು ಮೀರಿ ಅನೇಕ ಮಹಿಳೆಯರು ತಾಂತ್ರಿಕ ಕಾಲೇಜು ಹಾಗೂ ಶಾಲೆಗಳಲ್ಲಿ ದಾಖಲಾಗುತ್ತಿದ್ದಾರೆ. ತಾಂತ್ರಿಕ ಶಿಕ್ಷಣದ ಒಟ್ಟು ದಾಖಲಾತಿಯಲ್ಲಿ ಮಹಿಳೆಯರ ದಾಖಲಾತಿ ಬಹಳ ಕಡಿಮೆಯಾದರೂ ಕೂಡ, ಹಿಂದಿನ ಐದಾರು ವರ್ಷಗಳಿಂದೀಚೆಗೆ ಹೆಚ್ಚು ಹೆಚ್ಚು ವಿದ್ಯಾರ್ಥಿನಿಯರನ್ನು ನಾವು ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಕಾಣಬಹುದು. ಇಂತಹ ವಿದ್ಯಾರ್ಥಿನಿಯರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು ಶೈಕ್ಷಣಿಕ ಸಮಾಜಶಾಸ್ತ್ರ ಸಂಶೋಧಕರಿಗೆ ಒಂದು ಪ್ರಮುಖವಾದ ಸಂಶೋಧನಾ ಕ್ಷೇತ್ರವಾಗಿದೆ. ಈ ರೀತಿಯ ಅಧ್ಯಯನಗಳಿಂದ ತಾಂತ್ರಿಕ ಶಿಕ್ಷಣಾವಕಾಶಗಳ ಪ್ರಯೋಜನವನ್ನು ಹೆಚ್ಚು ಹೆಚ್ಚು ಪಡೆಯುತ್ತಿರುವವರು ಯಾರು ಎಂಬುದನ್ನು ತಿಳಿಯಬಹುದಷ್ಟೇ ಅಲ್ಲ, ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ/ಆಗುತ್ತಿರುವ ಅಸಾಧಾರಣವಾದ ಬೆಳವಣಿಗೆಯ ಪ್ರಯೋಜನವನ್ನು ಪಡೆಯುತ್ತಿರುವವರು ಸಮಾಜದ ಯಾವ ಯಾವ ವರ್ಗಗಳಿಂದ ಬರುವವರು ಎಂಬುದನ್ನೂ ಅರಿಯಬಹುದು.

ಪ್ರಸಕ್ತ ಲೇಖನದಲ್ಲಿ ಪ್ರಸ್ತುತಪಡಿಸಿರುವ ಮಾಹಿತಿ ತಾಂತ್ರಿಕ ಶಿಕ್ಷಣದಲ್ಲಿನ ಮಹಿಳೆಯರನ್ನು ಕುರಿತದ್ದು. ಈ ಅಧ್ಯಯನಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಒಳಪಟ್ಟ ನಾಲ್ಕು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಂದ 200 ವಿದ್ಯಾರ್ಥಿನಿಯರನ್ನು ಮಾದರಿಯನ್ನಾಗಿ ಆಯ್ಕೆಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ವಿದ್ಯಾರ್ಥಿನಿಯರ ಸಾಮಾಜಿಕ ಆರ್ಥಿಕ ಹಿನ್ನೆಲೆಯ ಪ್ರಮುಖ ಅಂಶಗಳಾದ ಧರ್ಮ, ಜಾತಿ, ಗ್ರಾಮ–ನಗರ ಹಿನ್ನೆಲೆ, ಪೋಷಕರ ಶಿಕ್ಷಣ ಮಟ್ಟ, ಉದ್ಯೋಗ ಮತ್ತು ಆದಾಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

ಧರ್ಮ

ಅನೇಕ ಧಾರ್ಮಿಕ ಗುಂಪುಗಳಿಂದ ಕೂಡಿದ ಭಾರತದಂಥ ದೇಶದಲ್ಲಿ ಧಾರ್ಮಿಕ ಹಿನ್ನೆಲೆಯ ಸಮಾಜಶಾಸ್ತ್ರೀಯ ಅಧ್ಯಯನ ಬಹಳ ಪ್ರಮುಖವಾದದ್ದು. ನಮ್ಮ ಅಧ್ಯಯನಕ್ಕಾಗಿ ಆಯ್ಕೆಮಾಡಿದ ವಿದ್ಯಾರ್ಥಿನಿಯರಲ್ಲಿ ಶೇ. 94.5 ರಷ್ಟು ಹಿಂದುಗಳು. ಇನ್ನು ಉಳಿದವರಲ್ಲಿ ಕ್ರಿಶ್ಚಿಯನ್ನರು ಶೇ. 3.5 ಹಾಗೂ ಮುಸಲ್ಮಾನರು ಶೇ 2.0 ರಷ್ಟು ಇದ್ದಾರೆ. ಮುಸ್ಲಿಂ ವಿದ್ಯಾರ್ಥಿನಿಯರ ಸಂಖ್ಯೆ ಇಷ್ಟು ಕಡಿಮೆ ಇರುವುದಕ್ಕೆ ಕಾರಣಗಳಿಲ್ಲದಿಲ್ಲ. ಈ ಧಾರ್ಮಿಕ ಗುಂಪಿನಲ್ಲಿ ಬಹುತೇಕ ಜನರು ಆರ್ಥಿಕವಾಗಿ ಹಿಂದುಳಿದಿದ್ದು ಅವರ ಶೈಕ್ಷಣಿಕ ಮಟ್ಟ ಬಹಳ ಕೆಳಗಿನದಾಗಿದೆ. ಅದರಲ್ಲೂ ಅನೇಕ ಕುಟುಂಬಗಳಲ್ಲಿ ವಿಶೇಷವಾಗಿ ಮಹಿಳಾ ಶಿಕ್ಷಣಕ್ಕೆ ಬಹಳಷ್ಟು ವಿರೋಧವಿದ್ದು ಮಹಿಳೆಯರು ಪ್ರೌಢ ಶಿಕ್ಷಣಕ್ಕೆ, ಅದರಲ್ಲೂ ತಾಂತ್ರಿಕ ಶಿಕ್ಷಣಕ್ಕೆ ಬರುವುದು ಬಹಳ ವಿರಳ. ಆದ್ದರಿಂದಲೇ ಮುಸ್ಲಿಂ ವಿದ್ಯಾರ್ಥಿನಿಯರ ಸಂಖ್ಯೆ ಕಡಿಮೆ ಎಂದು ಹೇಳಬಹುದು.

ಜಾತಿ

ಭಾರತೀಯ ಸಮಾಜದಲ್ಲಿ ಜಾತಿಯು ಸಾಮಾಜಿಕ ಸ್ತರವಿನ್ಯಾಸದ ಅತ್ಯಂತ ಪ್ರಬಲವಾದ ಅಂಶವಾಗಿದೆ. ಇಂದಿಗೂ ಕೂಡ ಜಾತಿ ವ್ಯಕ್ತಿಗಳ ಶೈಕ್ಷಣಿಕ ಆಕಾಂಕ್ಷೆ ಹಾಗೂ ಸಾಧನೆಗಳು, ಔದ್ಯೋಗಿಕ ಮತ್ತು ಆರ್ಥಿಕ ಪ್ರಗತಿಯನ್ನು ಪ್ರಭಾವಿಸುವ ಒಂದು ಪ್ರಬಲವಾದ ವ್ಯವಸ್ಥೆಯಾಗಿದೆ. ನಮ್ಮ ದೇಶದಲ್ಲಿ ಸಮಾನ ಶೈಕ್ಷಣಿಕ ಅವಕಾಶಗಳನ್ನು ಒದಗಿಸಲಾಗಿದ್ದರೂ ಕೂಡ, ಅನೇಕ ಜಾತಿಗಳಿಗೆ ವಿಶೇಷ ಶೈಕ್ಷಣಿಕ ಸೌಲಭ್ಯಗಳನ್ನು ಸಂವಿಧಾನಾತ್ಮಕವಾಗಿ ಕಲ್ಪಿಸಿದ್ದರೂ ಕಾಲಾಂತರದಿಂದ ಹಿಂದುಳಿದಿರುವ ಅನೇಕ ಜಾತಿಗಳ ಸಾಮಾಜಿಕ–ಆರ್ಥಿಕ ಸ್ಥಿತಿ–ಗತಿಗಳಲ್ಲಿ ಹೆಚ್ಚಿನ ಬದಲಾವಣೆಗಳಾಗಿಲ್ಲ. ಇಂದಿಗೂ ತಾಂತ್ರಿಕ ಶಿಕ್ಷಣಾವಕಾಶಗಳ ಪ್ರಯೋಜನವನ್ನು ಯಾರು ಪಡೆಯುತ್ತಾರೆ ಎಂಬುದನ್ನು ನಿರ್ಧರಿಸುವುದರಲ್ಲಿ ಜಾತಿಯ ಪಾತ್ರ ಹಿರಿದಾದುದು. ಆದ್ದರಿಂದ ತಾಂತ್ರಿಕ ಶಿಕ್ಷಣದ ವಿದ್ಯಾರ್ಥಿನಿಯರು ಪ್ರಮುಖವಾಗಿ ಯಾವ ಜಾತಿಗಳಿಂದ ಬರುತ್ತಾರೆ ಎಂಬುದನ್ನು ತಿಳಿಯೋಣ.

ನಾವು ಅಧ್ಯಯನಕ್ಕಾಗಿ ಆಯ್ಕೆ ಮಾಡಿರುವ ವಿದ್ಯಾರ್ಥಿನಿಯರನ್ನು ಮುಖ್ಯವಾಗಿ ನಾಲ್ಕು ಜಾತಿಗಳಾಗಿ ವಿಂಗಡಿಸಲಾಗಿದೆ. ಅವುಗಳು 'ಬ್ರಾಹ್ಮಣರು', 'ಒಕ್ಕಲಿಗರು', 'ಲಿಂಗಾಯಿತರು' ಮತ್ತು 'ಪರಿಶಿಷ್ಟ ಜಾತಿಗಳು'. ಬಹಳ ಕಡಿಮೆ ಸಂಖ್ಯೆಯಲ್ಲಿದ್ದು ಪ್ರತ್ಯೇಕವಾದ ಗುಂಪಾಗಿ ವಿಂಗಡಿಸಲು ಆಗದಿದ್ದ ಜಾತಿಗಳನ್ನು ಒಗ್ಗೂಡಿಸಿ 'ಇತರರು' ಎಂಬ ಮತ್ತೊಂದು ವಿಭಾಗವನ್ನೂ ಮಾಡಲಾಗಿದೆ. ಈ ಕೆಳಕಂಡ ಕೋಷ್ಟಕವು ಜಾತಿಗನುಗುಣವಾಗಿ ವಿದ್ಯಾರ್ಥಿನಿಯರ ವಿಂಗಡನೆಯನ್ನು ತೋರಿಸುತ್ತದೆ.

ಕೋಷ್ಟಕ-ಎರಡು : ಜಾತಿಗನುಗುಣವಾಗಿ ವಿದ್ಯಾರ್ಥಿನಿಯರ ವಿಂಗಡನೆ
(ಕೇವಲ ಹಿಂದುಗಳನ್ನು ಪರಿಗಣಿಸಲಾಗಿದೆ)

ಜಾತಿ	ಆವೃತ್ತಿ	ಶೇಕಡಾವಾರು
ಬ್ರಾಹ್ಮಣರು	87	46.03
ಒಕ್ಕಲಿಗರು	26	13.76
ಲಿಂಗಾಯಿತರು	22	11.64
ಪರಿಶಿಷ್ಟಜಾತಿ	6	3.17
ಇತರರು.	48	25.40
ಒಟ್ಟು ಮೊತ್ತ	189	100.00

ಈ ಮೇಲ್ಕಂಡ ಅಂಕಿ-ಅಂಶಗಳನ್ನು ವಿಶ್ಲೇಷಿಸಿದಾಗ ಬ್ರಾಹ್ಮಣ ವಿದಾರ್ಥಿನಿಯರು ಅಧಿಕ ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ. ಒಕ್ಕಲಿಗರು ಹಾಗೂ ಲಿಂಗಾಯಿತರು ಶೇಕಡ 25.5 ರಷ್ಟು ಇದ್ದಾರೆ. ಪರಿಶಿಷ್ಟ ಜಾತಿಗಳಿಗೆ ಸೇರಿದವರು ಶೇ. 3. 17 ಮಾತ್ರವಿದ್ದಾರೆ.

ಇದರಿಂದ ಒಂದು ಅಂಶವನ್ನು ನಾವು ವಿಶೇಷವಾಗಿ ಗಮನಿಸಬಹುದು. ಭಾರತದೇಶದಲ್ಲಿ ಬಹಳ ಶತಮಾನಗಳಿಂದ ಶಿಕ್ಷಣದಲ್ಲಿ 'ಪ್ರಾಬಲ್ಯ'ವನ್ನು ಪಡೆದಿದ್ದ ಬ್ರಾಹ್ಮಣರು ಇಂದಿಗೂ ಶಿಕ್ಷಣ ಕ್ಷೇತ್ರದಲ್ಲಿ, ಆದರಲ್ಲೂ ವಿಶೇಷವಾಗಿ ಪ್ರೌಢ-ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾತಿಯನ್ನು ಪಡೆಯುತ್ತಿದ್ದಾರೆ. ಅವರಿಗಿರುವ ಅನುಕೂಲಕರವಾದ ಶೈಕ್ಷಣಿಕ ಹಾಗೂ ಔದ್ಯೋಗಿಕ ಹಿನ್ನೆಲೆ ಇದಕ್ಕೆ ಪ್ರಮುಖ ಕಾರಣವಾಗಿದೆ. ಆದರಲ್ಲೂ ಮಹಿಳೆಯರ ಶಿಕ್ಷಣದ ವಿಷಯಕ್ಕೆ ಬಂದಾಗ ಜಾತಿಯು ಬಹಳ ಪ್ರಬಲವಾದ ಒಂದು ಅಸ್ತ್ರವಾಗಿ ಕೆಲಸವನ್ನು ನಿರ್ವಹಿಸುವುದು. ಮಹಿಳೆಯರಿಗೆ ಭಾರತದಲ್ಲಿ ಶಿಕ್ಷಣಾವಕಾಶಗಳು ದೊರಕಿದ್ದೇ ಇತ್ತೀಚೆಗೆ. ಇಂತಹ ಅವಕಾಶಗಳ ಪ್ರಯೋಜನವನ್ನು ಪಡೆಯುವುದರಲ್ಲಿ ಬ್ರಾಹ್ಮಣರು ಮೊದಲಿಗರಾದವರು. ಇಂದಿಗೂ ಕೂಡ ಪ್ರೌಢ ಶಿಕ್ಷಣ ಸಂಸ್ಥೆಗಳಲ್ಲಿ, ಆದರಲ್ಲೂ ವಿಶೇಷವಾಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಈ ಜಾತಿಯ ವಿದ್ಯಾರ್ಥಿನಿಯರು ಅಧಿಕ ಸಂಖ್ಯೆಯಲ್ಲಿ ಇರುವುದಕ್ಕೆ ಇದೇ ಕಾರಣವಾಗಿದೆ.

ಕರ್ನಾಟಕ ರಾಜ್ಯದ ಜನಸಂಖ್ಯೆಯಲ್ಲಿ ಒಕ್ಕಲಿಗರು ಮತ್ತು ಲಿಂಗಾಯಿತರು ಅಧಿಕ ಸಂಖ್ಯೆಯಲ್ಲಿದ್ದರೂ ಕೂಡ ನಮ್ಮ ಮಾದರಿಯಲ್ಲಿ ಎರಡು ಜಾತಿಗಳವರೂ ಒಟ್ಟುಸೇರಿ ಶೇಕಡ 25.5 ರಷ್ಟು ಇದ್ದಾರಷ್ಟೆ. ಈ ಎರಡು ಜಾತಿಗಳವರು ಹೆಚ್ಚಾಗಿ ವ್ಯವಸಾಯವನ್ನು ಕಸುಬಾಗಿ ಹೊಂದಿ ಗ್ರಾಮೀಣ ಪ್ರದೇಶಗಳಿಂದ ಬಂದವರಾಗಿದ್ದಾರೆ. ಈ ಎರಡು ಗುಂಪುಗಳಲ್ಲಿಯೂ ಕೂಡ ಹೆಚ್ಚು ಹೆಚ್ಚಾಗಿ ಶಿಕ್ಷಣಾವಕಾಶ

ಗಳನ್ನು ಉಪಯೋಗಿಸಿಕೊಳ್ಳುತ್ತಿರುವವರು ನಗರವಾಸಿಗಳು ಹಾಗೂ ತಮ್ಮ ಆರ್ಥಿಕ ಸ್ಥಿತಿಯ ಪ್ರಭಾವದಿಂದ ಉನ್ನತ ಶಿಕ್ಷಣವನ್ನು ಪಡೆಯುವವರಾಗಿದ್ದಾರೆ.

ಪರಿಶಿಷ್ಟ ಜಾತಿಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಶೇಕಡ 15ರಷ್ಟು ಸೀಟುಗಳ ಮೀಸಲಾತಿ ಇದ್ದಾಗ್ಯೂ ಕೂಡ, ವಿದ್ಯಾರ್ಥಿನಿಯರು ನಮ್ಮ ಮಾದರಿಯಲ್ಲಿ ಶೇಕಡ 3.5 ಮಾತ್ರ ಇರುವುದನ್ನು ನಾವು ಕಾಣಬಹುದು. ಶತಮಾನಗಳಿಂದ ಸಾಮಾಜಿಕ, ಆರ್ಥಿಕ ಶೋಷಣೆಗೆ ತುತ್ತಾಗಿರುವ ಪರಿಶಿಷ್ಟ ಜಾತಿಗಳಲ್ಲಿ ಅನಕ್ಷರತೆ ಹಾಗೂ ಬಡತನದ ಪ್ರಮಾಣ ಅಧಿಕವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಹಾಗೂ ಆರ್ಥಿಕವಾಗಿ ತೀರ ಹಿಂದುಳಿದಿರುವ ಕುಟುಂಬಗಳು ಇಂದಿಗೂ ಹೆಚ್ಚು–ಕಡಿಮೆ ಅದೇ ಸ್ಥಿತಿಯಲ್ಲಿದ್ದು ಎಲ್ಲ ರೀತಿಯ 'ಕಾನೂನು ರೀತ್ಯಾ ಒದಗಿಸಿಕೊಟ್ಟಿರುವ' ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅದರಲ್ಲೂ ಮಹಿಳೆಯರು ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಬಹಳ ಹಿಂದುಳಿದಿದ್ದು ಈ ರೀತಿ ಕಾದಿರಿಸಲಾಗಿರುವ ಬಹುತೇಕ ಸೀಟುಗಳು ಪುರುಷರ ಪಾಲಿಗೇ ಹೋಗುತ್ತವೆ. ಇಷ್ಟೇ ಅಲ್ಲ, ಆರ್ಥಿಕವಾಗಿ, ಔದ್ಯೋಗಿಕವಾಗಿ ಮುಂದುವರಿದ ಪರಿಶಿಷ್ಟ ಜಾತಿಗಳವರು ಹೆಚ್ಚುಹೆಚ್ಚಾಗಿ ಸೌಲಭ್ಯಗಳ ಪ್ರಯೋಜನವನ್ನು ಪಡೆಯುತ್ತಿರುವುದನ್ನೂ ನಾವು ಕಾಣಬಹುದು.

ಜಾತಿ ಮತ್ತು ಶಿಕ್ಷಣಗಳಿಗಿರುವ ಸಂಬಂಧವನ್ನು ಕುರಿತ ಈ ಮೇಲ್ಕಂಡ ವಿಶ್ಲೇಷಣೆಯಿಂದ ಒಂದಂಶ ಗೋಚರವಾಗುತ್ತದೆ. ಶಿಕ್ಷಣಾವಕಾಶಗಳನ್ನು ಎಲ್ಲರೂ ಸಮಾನವಾಗಿ ಉಪಯೋಗಿಸಿಕೊಳ್ಳಬಹುದು ಎಂಬುದು ಸೈದ್ಧಾಂತಿಕವಾಗಿ ನಿಜ, ಆದರೆ ವಾಸ್ತವದಲ್ಲಿ ಎಲ್ಲಾ ಜಾತಿಗಳಿಗೆ ಸೇರಿದವರಿಗೂ ಸಮಾನ ಶೈಕ್ಷಣಿಕ ಅವಕಾಶಗಳು ದೊರೆಯುತ್ತಿಲ್ಲ. ಜಾತಿಗೂ, ಒಬ್ಬ ವ್ಯಕ್ತಿಯ ಸಾಮಾಜಿಕ ಆರ್ಥಿಕ ಹಿನ್ನೆಲೆಗೂ ನಿಕಟವಾದ ಸಂಬಂಧವಿರುವುದರಿಂದ ಇಂದಿಗೂ ಜಾತಿ ಶಿಕ್ಷಣಾವಕಾಶಗಳ ಉಪಯೋಗವನ್ನು ನಿರ್ಧರಿಸುವ ಒಂದು ಪ್ರಬಲವಾದ ಸಾಧನವಾಗಿಯೇ ಮುಂದುವರಿಯುತ್ತಿದೆ.

ನಗರ–ಗ್ರಾಮ ಹಿನ್ನೆಲೆ–

ಭಾರತವು ವಿಶೇಷವಾಗಿ ಗ್ರಾಮಗಳ ದೇಶ. ಎಂದರೆ ಈ ದೇಶದ ಬಹುಪಾಲು ಜನರು ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ ಆದರೆ ಶಿಕ್ಷಣವೂ ಸೇರಿದಂತೆ, ಇದುವರೆಗೂ ಕೈಗೊಂಡಿರುವ ಬಹಳಷ್ಟು ಅಭಿವೃದ್ಧಿ ಕಾರ್ಯಕ್ರಮಗಳ ಅನುಕೂಲಗಳನ್ನು ಗ್ರಾಮಗಳು ಪಡೆದಿಲ್ಲ, ಪಡೆಯಲಾಗಿಲ್ಲ.

ಗ್ರಾಮೀಣ ಮಹಿಳೆಯರು ಈ ದೇಶದಲ್ಲಿ ಅತ್ಯಂತ ಹಿಂದುಳಿದಿರುವವರಲ್ಲಿ ಮೊದಲಿಗರು. ಗ್ರಾಮೀಣ ಮಹಿಳೆಯರಲ್ಲಿ ಅನಕ್ಷರತೆಯ ಪ್ರಮಾಣ ಶೇಕಡ 82.04ರಷ್ಟಿದೆ. ಶಾಲಾ ಮಟ್ಟದಲ್ಲೂ ಕೂಡ ಗ್ರಾಮೀಣ ಮಹಿಳೆಯರ ಶೈಕ್ಷಣಿಕ ಪ್ರಗತಿ ಬಹಳ ನಿಧಾನವಾಗಿದೆಯಷ್ಟೇ ಅಲ್ಲ, ನಿರಾಶಾದಾಯಕವೂ ಆಗಿದೆ. ಇನ್ನು

ಉನ್ನತ ಶಿಕ್ಷಣದ ವಿಷಯವಂತೂ ಹೇಳಲೇ ಬೇಕಿಲ್ಲ. ಅಧಿಕ ಸಂಖ್ಯೆಯ ಕುಟುಂಬಗಳಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಲು ಬಡತನ, ಮೂಢನಂಬಿಕೆ ಹಾಗೂ ಅಜ್ಞಾನಗಳು ಅಡ್ಡಿ ಬಂದಿವೆ. ಇಷ್ಟೇ ಅಲ್ಲ, ಗ್ರಾಮೀಣ ಪ್ರದೇಶಗಳಲ್ಲಿ ಶೈಕ್ಷಣಿಕ ಪ್ರಗತಿಯನ್ನು ಸ್ಥಗಿತಗೊಳಿಸಲು ಮತ್ತೊಂದು ಕಾರಣವೂ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಇರುವ ಶೈಕ್ಷಣಿಕ ಅವಕಾಶಗಳೇ, ನಗರಗಳಿಗೆ ಹೋಲಿಸಿದರೆ ಕಡಿಮೆ.

ನಗರ ಪ್ರದೇಶಗಳಲ್ಲಿರುವ ಹೆಣ್ಣು ಮಕ್ಕಳ ಸಂಗತಿ ಇದಕ್ಕಿಂತ ಭಿನ್ನವಾಗಿದೆ. ನಗರ ವಾತಾವರಣ ಹಾಗೂ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಲು ಬೇಕಾಗಿರುವ ಎಲ್ಲಾ ಉತ್ತೇಜಕಗಳೂ ಇಲ್ಲಿ ಹೇರಳವಾಗಿ ದೊರೆಯುವುದರಿಂದ ನಗರ ಪ್ರದೇಶ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕವಾಗಿದೆ. ನಗರಗಳಲ್ಲಿ ಇರುವ ಅನುಕೂಲಕರವಾದ ಶಾಲಾ ವ್ಯವಸ್ಥೆ ಮತ್ತು ನಗರಗಳಲ್ಲಿ ಓದನ್ನು ಮುಂದುವರೆಸಿಕೊಂಡು ಹೋಗಲು ಇರುವ ನಾನಾ ಅವಕಾಶಗಳ ಕಾರಣದಿಂದಾಗಿ ಉನ್ನತ ಶಿಕ್ಷಣಕ್ಕೆ ಬರುವ ಬಹುತೇಕ ಮಹಿಳೆಯರು ನಗರಗಳಿಂದ ಬಂದವರೇ ಆಗಿರುತ್ತಾರೆ ಇನ್ನು ತಾಂತ್ರಿಕ ಶಿಕ್ಷಣವನ್ನು ತೆಗೆದುಕೊಂಡರಂತೂ ಗ್ರಾಮೀಣ ಮಹಿಳೆಯರ ಪ್ರಾತಿನಿಧ್ಯ ಇಲ್ಲಿ ಅಗೋಚರವೆಂದು ಹೇಳಿದರೂ ತಪ್ಪಾಗಲಾರದು.

ನಮ್ಮ ಅಧ್ಯಯನಕ್ಕೆ ವಿದ್ಯಾರ್ಥಿನಿಯರ ಗ್ರಾಮ-ನಗರ ಹಿನ್ನೆಲೆಯನ್ನು ನಿರ್ಧರಿಸಲು ಎರಡು ಅಂಶಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಯಿತು. ಮೊದಲನೆಯದು ಅವರು ಹುಟ್ಟಿದ ಸ್ಥಳ ಮತ್ತು ಎರಡನೆಯದು ವಿದ್ಯಾರ್ಥಿನಿಯರು ತಮ್ಮ ಪ್ರಾಥಮಿಕ, ಪ್ರೌಢಶಾಲಾ ಮತ್ತು ಪದವಿಪೂರ್ವ ಶಿಕ್ಷಣವನ್ನು ಎಲ್ಲಿ ಪಡೆದರು ಎಂಬುದು—ನಮ್ಮ ಮಾದರಿಯಲ್ಲಿ ಶೇಕಡ 85.0ಕ್ಕೂ ಹೆಚ್ಚು ಜನ ವಿದ್ಯಾರ್ಥಿನಿಯರು ನಗರ ಪ್ರದೇಶಗಳಲ್ಲಿ ಜನಿಸಿದವರು. ಕೇವಲ ಜನನ ಸ್ಥಳ ನಗರವಾಗಿದ್ದರೆ ಮಾತ್ರ ಅವರನ್ನು ನಾವು ನಗರವಾಸಿಗಳೆಂದು ನಿರ್ಧರಿಸಲಾಗುವುದಿಲ್ಲ. ಆದ್ದರಿಂದ ವಿದ್ಯಾರ್ಥಿನಿಯರು ತಮ್ಮ ಪ್ರಾರಂಭಿಕ ಶಿಕ್ಷಣದಿಂದ ಹಿಡಿದು ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ಸೇರುವವರೆಗೂ ಎಲ್ಲಿ ತಮ್ಮ ಶಿಕ್ಷಣವನ್ನು ಪಡೆದರು ಎಂಬುದು ಮುಖ್ಯ. ನಮ್ಮ ವಿದ್ಯಾರ್ಥಿನಿಯರ ಮಾದರಿಯಲ್ಲಿ ಶೇಕಡ 88.5 ತಮ್ಮ ಪ್ರಾರಂಭಿಕ ಶಿಕ್ಷಣವನ್ನೂ, ಶೇಕಡ 95.5 ಪ್ರೌಢಶಾಲಾ ಶಿಕ್ಷಣವನ್ನೂ, ಶೇಕಡ 97.0 ಪದವಿಪೂರ್ವ ಶಿಕ್ಷಣವನ್ನೂ ನಗರಗಳಲ್ಲಿಯೇ ಪಡೆದಿದ್ದಾರೆ.

ನಗರಗಳಲ್ಲಿ ಶಿಕ್ಷಣವನ್ನು ಪಡೆದವರೊಂದಿಗೆ ಗ್ರಾಮೀಣ ವಿದ್ಯಾರ್ಥಿನಿಯರು ಸ್ಪರ್ಧಿಸಿ, ತಾಂತ್ರಿಕ ಶಿಕ್ಷಣ ಕ್ಷೇತ್ರವೆಂಬ ಕಣದಲ್ಲಿ ಮುನ್ನುಗ್ಗುವುದು ಎಷ್ಟು ಕಷ್ಟಕರ ಎಂಬುದು ಇದರಿಂದ ತಿಳಿಯುತ್ತದೆ.

ಪೋಷಕರ ವಿದ್ಯಾಮಟ್ಟ

ಪೋಷಕರ ವಿದ್ಯಾಮಟ್ಟ ಹಾಗೂ ಅವರ ಮಕ್ಕಳ ಶೈಕ್ಷಣಿಕ ಪ್ರಗತಿಗಳಿಗೆ

ನಿಕಟವಾದ ಸಂಬಂಧವಿದೆ ಎಂಬುದು ತಿಳಿದ ವಿಷಯವೇ ಆಗಿದೆ. ಹೆಣ್ಣು ಮಕ್ಕಳ ವಿಷಯದಲ್ಲಂತೂ, ತಂದೆ-ತಾಯಂದಿರು ಅವರ ಶಿಕ್ಷಣಕ್ಕೆ ಎಷ್ಟು ಪ್ರಾಧಾನ್ಯತೆಯನ್ನು ಕೊಡುತ್ತಾರೆ ಎಂಬುದು ಅವರ ಮುಂದಿನ ಜೀವನವನ್ನು ನಿರ್ಧರಿಸುವಂಥ ಪ್ರಮುಖ ಅಂಶ. ಸಾಮಾನ್ಯವಾಗಿ, ತಾವೇ ವಿದ್ಯಾವಂತರಾದ ಪೋಷಕರು ತಮ್ಮ ಹೆಣ್ಣು ಮಕ್ಕಳೂ ಶಿಕ್ಷಣವನ್ನು ಪಡೆಯಬೇಕು ಎಂದು ಇಚ್ಛಿಸಿ, ಆ ಇಚ್ಛೆಯ ಪೂರೈಕೆಗೆ ಬೇಕಾಗಿರುವ ಅನುಕೂಲಗಳನ್ನು ಅವರ ಮಕ್ಕಳಿಗೆ ಒದಗಿಸಿಕೊಡುವುದನ್ನು ನಾವು ಕಾಣಬಹುದು. ಆದರೆ ಪೋಷಕರ ವಿದ್ಯಾಮಟ್ಟ ಕಡಿಮೆಯಾಗುತ್ತಾ ಹೋದಂತೆ ಅವರ ಮಕ್ಕಳ ಶಿಕ್ಷಣ ಮಟ್ಟವೂ ಇಳಿಮುಖವಾಗುವ ಸಂಭವವೇ ಹೆಚ್ಚು. ಈ ವಿಷಯವನ್ನು ಅನೇಕ ಸಂಶೋಧನಾ ಅಧ್ಯಯನಗಳೂ ಎತ್ತಿಹಿಡಿದಿವೆ.

ಈ ಹಿನ್ನೆಲೆಯಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿನಿಯರ ಪೋಷಕರ ಶಿಕ್ಷಣಮಟ್ಟವನ್ನು ತಿಳಿದುಕೊಳ್ಳುವುದು ಸಮಂಜಸವೆನಿಸುತ್ತದೆ. ಈ ಕೆಳಕಂಡ ಕೋಷ್ಟಕವು ನಮ್ಮ ಮಾದರಿ ವಿದ್ಯಾರ್ಥಿನಿಯರ ಪೋಷಕರ ಶಿಕ್ಷಣಮಟ್ಟದ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

ಕೋಷ್ಟಕ-ಮೂರು: ಪೋಷಕರ ವಿದ್ಯಾಮಟ್ಟ

	ತಂದೆಯ ವಿದ್ಯಾಮಟ್ಟ		ತಾಯಿಯ ವಿದ್ಯಾಮಟ್ಟ	
ವಿದ್ಯಾಮಟ್ಟ	ಆವೃತ್ತಿ	ಶೇಕಡಾವಾರು	ಆವೃತ್ತಿ	ಶೇಕಡಾವಾರು
ಎಸ್.ಎಲ್.ಸಿ.ವರೆಗೆ	11	5.5	80	40.0
ಎಸ್.ಎಲ್.ಸಿ. ಮಾತ್ರ	42	21.0	60	30.0
ಪದವೀಧರರು	67	33.5	45	22.5
ಸ್ನಾತಕೋತ್ತರಪದವೀಧರರು.	28	14.0	11	5.5
ವೃತ್ತಿ ಶಿಕ್ಷಣ ಪದವೀಧರರು	52	26.0	4	2.0
ಒಟ್ಟುಮೊತ್ತ	200	100.0	200	100.0

ಮೇಲೆ ಕೊಟ್ಟಿರುವ ಅಂಕಿ-ಅಂಶಗಳಿಂದ ಗೋಚರವಾಗುವ ಒಂದು ವಿಶೇಷ ಅಂಶವೆಂದರೆ ನಮ್ಮ ಮಾದರಿ ವಿದ್ಯಾರ್ಥಿನಿಯರ ಪೋಷಕರಾರೂ ಅನಕ್ಷರಸ್ಥರಲ್ಲ ಎಂಬುದು. ಶೇಕಡ 75.5ರಷ್ಟು ವಿದ್ಯಾರ್ಥಿನಿಯರ ತಂದೆಯರೂ, ಶೇಕಡ 30.0ರಷ್ಟು ವಿದ್ಯಾರ್ಥಿನಿಯರ ತಾಯಂದಿರೂ ಉನ್ನತ ಶಿಕ್ಷಣವನ್ನು ಪಡೆದಿದ್ದಾರೆ. ಇದರಿಂದ

ಪೋಷಕರ (ಅದರಲ್ಲೂ ತಂದೆಯ) ವಿದ್ಯಾಮಟ್ಟಕ್ಕೂ, ಮಕ್ಕಳು ಶೈಕ್ಷಣಿಕ ಅವಕಾಶಗಳನ್ನು ಉಪಯೋಗಿಸಿಕೊಳ್ಳುವುದಕ್ಕೂ ನಿಕಟವಾದ ಸಂಬಂಧವಿದೆ ಎಂಬುದು ತಿಳಿದು ಬರುತ್ತದೆ.

ಪೋಷಕರ ಉದ್ಯೋಗ

ಹೇಗೆ ಪೋಷಕರ ಶೈಕ್ಷಣಿಕ ಮಟ್ಟ ಅವರ ಮಕ್ಕಳ ಭವಿಷ್ಯವನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆಯೋ ಹಾಗೆಯೇ ಪೋಷಕರ ಉದ್ಯೋಗವೂ ಕೂಡ ಮಕ್ಕಳ ಭವಿಷ್ಯವನ್ನು ನಿರ್ಧರಿಸುವ ಒಂದು ಪ್ರಬಲವಾದ ಅಂಶವಾಗಿದೆ. ಒಬ್ಬ ವ್ಯಕ್ತಿಯ ಉದ್ಯೋಗಕ್ಕೂ ಮತ್ತು ಆತನ ಆದಾಯಕ್ಕೂ ನಿಕಟವಾದ ಸಂಬಂಧವಿರುವುದರಿಂದ ಆತನ ಮಕ್ಕಳು ಯಾವ ಮಟ್ಟದವರೆಗೂ ಶಾಲೆಯಲ್ಲಿ ಮುಂದುವರೆಯಬಹುದು, ಯಾವ ರೀತಿಯ ಶಿಕ್ಷಣವನ್ನು ಅವರು ಆಯ್ಕೆ ಮಾಡಿಕೊಳ್ಳಬಹುದು ಎಂಬೆಲ್ಲ ವಿಷಯಗಳನ್ನು ಅದು ನಿರ್ಧರಿಸುತ್ತದೆ.

ಬಿಳಿಯುಡುಗೆ ಉದ್ಯೋಗಗಳಲ್ಲಿ ತೊಡಗಿರುವ ಪೋಷಕರು ತಮ್ಮ ಮಕ್ಕಳೂ ಅಂತಹುದೇ ಹುದ್ದೆಗಳಲ್ಲಿ ತೊಡಗಬೇಕೆಂದು ಬಯಸುವುದು ಸಹಜ. ತಮ್ಮ ಮಕ್ಕಳು ತಮಗಿಂತ ಹೆಚ್ಚಿನ ಸಾಮಾಜಿಕ-ಆರ್ಥಿಕ ಸ್ಥಾನವನ್ನು ಪಡೆಯಬೇಕೆಂದು ಅನೇಕ ಪೋಷಕರು ಇಚ್ಛಿಸಿ, ಈ 'ಸಾಮಾಜಿಕ ಚಲನೆ'ಯನ್ನು ಸಾಧಿಸಲು ಬೇಕಾದ ಅನುಕೂಲಗಳನ್ನು ಒದಗಿಸಿಕೊಡಲು ಪ್ರಯತ್ನಿಸುತ್ತಾರೆ.

ಪೋಷಕರ ಉದ್ಯೋಗಕ್ಕೂ ಹೆಣ್ಣು ಮಕ್ಕಳ ಶಿಕ್ಷಣಕ್ಕೂ ಇನ್ನೂ ಹತ್ತಿರವಾದ ಸಂಬಂಧವಿದೆ. ಭಾರತದಲ್ಲಿ ಬಹುತೇಕ ಕುಟುಂಬಗಳಲ್ಲಿ ಪೋಷಕರು ಗಂಡು ಮಕ್ಕಳ ಶಿಕ್ಷಣಕ್ಕೆ ಮೊದಲು ಆದ್ಯತೆ ನೀಡುತ್ತಾರೆ. ಅದರಲ್ಲೂ, ಭವಿಷ್ಯದಲ್ಲಿ ತಮಗೆ ಇದರಿಂದ ಯಾವುದೇ ರೀತಿಯ ಆರ್ಥಿಕ ಲಾಭ ದೊರೆಯುದು ಎನ್ನುವ ಉದ್ದೇಶದಿಂದ ವೃತ್ತಿಪರ ಶಿಕ್ಷಣದಲ್ಲಿ ಹೆಣ್ಣು ಮಕ್ಕಳನ್ನು ತೊಡಗಿಸುವ ಪ್ರಶ್ನೆ ಬಂದಾಗ ಅನೇಕ ಪೋಷಕರು ಹಿಂಜರಿಯುತ್ತಾರೆ. ಆದ್ದರಿಂದ ತಾಂತ್ರಿಕ ಅಥವಾ ಯಾವುದೇ ವೃತ್ತಿಪರ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿನಿಯರು ಸಾಮಾನ್ಯವಾಗಿ ಆರ್ಥಿಕವಾಗಿ ಅನುಕೂಲಕರವಾದ ಸ್ಥಿತಿಯಲ್ಲಿರುವ ಮತ್ತು ಬಿಳಿಯುಡುಗೆ ಉದ್ಯೋಗಗಳಲ್ಲಿ ತೊಡಗಿರುವ ಪೋಷಕರ ಕುಟುಂಬಗಳಿಂದ ಹೆಚ್ಚಾಗಿ ಬರುವುದು ಸಹಜ.

ನಮ್ಮ ಅಧ್ಯಯನಕ್ಕಾಗಿ ಆಯ್ಕೆ ಮಾಡಿದ ಮಾದರಿ ವಿದ್ಯಾರ್ಥಿನಿಯರಿಂದ ಅವರ ಪೋಷಕರ ಉದ್ಯೋಗದ ಬಗ್ಗೆ ಸಂಗ್ರಹಿಸಲಾದ ಮಾಹಿತಿಯನ್ನು ಈ ಕೆಳಕಂಡ ಕೋಷ್ಟಕದಲ್ಲಿ ಪ್ರಸ್ತುತ ಪಡಿಸಲಾಗಿದೆ.

ಕೋಷ್ಟಕ–ನಾಲ್ಕು : ಪೋಷಕರ ಉದ್ಯೋಗ

	ತಂದೆಯ ವೃತ್ತಿ		ತಾಯಿಯ ವೃತ್ತಿ	
ವೃತ್ತಿ	ಆವೃತ್ತಿ	ಶೇಕಡಾವಾರು	ಆವೃತ್ತಿ	ಶೇಕಡಾವಾರು
ತಂತ್ರಜ್ಞರು	42	21.0	—	—
ವೈದ್ಯರು	7	3.5	4	2.0
ಉಪಾಧ್ಯಾಯರು	22	11.0	12	6.0
ಸರ್ಕಾರಿ ಸೇವೆ	89	44.5	12	6 0
ವ್ಯಾಪಾರ	22	11.0	—	—
ವ್ಯವಸಾಯ	18	9.0	—	—
ಉದ್ಯೋಗದಲ್ಲಿಲ್ಲದಿರುವವರು	—	—	172	86.0
ಒಟ್ಟುಮೊತ್ತ	200	100.0	200	100.0

ಮೇಲಿನ ಕೋಷ್ಟಕದಲ್ಲಿನ ಅಂಕಿ–ಅಂಶಗಳನ್ನು ಪರಿಶೀಲಿಸಿದಾಗ ನಾವು ಈ ಹಿಂದೆ ಹೇಳಿದ ವಿಷಯಗಳನ್ನು ನಮ್ಮ ಮಾಹಿತಿ ಎತ್ತಿಹಿಡಿಯುತ್ತದೆ ಎಂಬುದು ಗೋಚರವಾಗುತ್ತದೆ. ನಮ್ಮ ಮಾದರಿಯಲ್ಲಿ ಶೇಕಡ 90.0ಕ್ಕಿಂತಲೂ ಹೆಚ್ಚು ವಿದ್ಯಾರ್ಥಿನಿಯರ ತಂದೆಯರು ಬಿಳಿಯುಡುಗೆ ಉದ್ಯೋಗಗಳಲ್ಲಿರುವುದು ಕಂಡು ಬರುತ್ತದೆ. ಶೇಕಡ 86.0ರಷ್ಟು ತಾಯಂದಿರು ಉದ್ಯೋಗದಲ್ಲಿಲ್ಲ. ಆದರೆ ಉದ್ಯೋಗದಲ್ಲಿರುವ ತಾಯಂದಿರೆಲ್ಲಾ ಬಿಳಿಯುಡುಗೆ ಉದ್ಯೋಗದಲ್ಲೇ ಇದ್ದಾರೆ.

ಹೆಚ್ಚು ಆದಾಯವನ್ನು ತರದಂಥ ಉದ್ಯೋಗಗಳಲ್ಲಿ ಇರುವ ಪೋಷಕರಿಗೆ ತಮ್ಮ ಮಕ್ಕಳನ್ನು ದುಬಾರಿ ಹಾಗೂ ದೀರ್ಘವಾದ ಶಿಕ್ಷಣದಲ್ಲಿ ತೊಡಗಿಸಲು ಕಷ್ಟಕರವಾಗುತ್ತದೆ. ಆದಷ್ಟು ಬೇಗ ತಮ್ಮ ಮಕ್ಕಳು ಹಣವನ್ನು ಸಂಪಾದನೆ ಮಾಡುವಂತಾದರೆ ಕುಟುಂಬದ ಆರ್ಥಿಕ ಸ್ಥಿತಿ ಸುಧಾರಿಸಬಹುದೇನೋ ಎಂದು ಅವರು ಯೋಚನೆಮಾಡುವರು. ಆದ್ದರಿಂದ ಹೆಚ್ಚಿನ ಆದಾಯವನ್ನು ತರದಂಥ ಉದ್ಯೋಗಗಳನ್ನು ಮಾಡುವವರು ಸಾಮಾನ್ಯವಾಗಿ ಉನ್ನತವಾದ ಶೈಕ್ಷಣಿಕ ಗುರಿಗಳನ್ನು ಹೊಂದಲು ಸಾಧ್ಯವಿಲ್ಲ.

ಪೋಷಕರ ಆದಾಯ

ಪ್ರೌಢಮಟ್ಟದ ತಾಂತ್ರಿಕ ಶಿಕ್ಷಣವನ್ನು ಬೆಲೆಗಳು ಏರುತ್ತಿರುವ ಈ ಕಾಲದಲ್ಲಿ ದುಬಾರಿಯೆಂದೇ ಪರಿಗಣಿಸಬೇಕಾಗಿದೆ. ಇಂತಹ ಶಿಕ್ಷಣಕ್ಕೆ ಹಣವನ್ನು ತೊಡಗಿಸಲು ಶಕ್ತಿ ಇರುವ ಪೋಷಕರು ಮಾತ್ರ ತಮ್ಮ ಮಕ್ಕಳನ್ನು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸುವ ಯೋಜನೆಯನ್ನು ಹೊಂದಿರಲು ಸಾಧ್ಯ. ಆರ್ಥಿಕವಾಗಿ ಹಿಂದುಳಿದಿರುವ

ಕುಟುಂಬಗಳಿಂದ ಬಂದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಅನೇಕ ರೀತಿಯ ಧನ ಸಹಾಯ ಯೋಜನೆಗಳನ್ನು ಸರ್ಕಾರ ನಿರೂಪಿಸಿದ್ದರೂ ಕೂಡ ಇಂತಹ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೂ ಈ ಸೌಲಭ್ಯಗಳ ಪ್ರಯೋಜನ ದೊರೆಯುವುದಿಲ್ಲ. ತಾಂತ್ರಿಕ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಅನೇಕ ಬಗೆಯ ಉಪಕರಣಗಳು, ಪುಸ್ತಕಗಳು ಮುಂತಾದವುಗಳ ಆವಶ್ಯಕತೆಯಿದೆ. ಇಷ್ಟೇ ಅಲ್ಲದೆ ಅನೇಕ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ತಮ್ಮ ಪೋಷಕರು ವಾಸವಾಗಿರುವ ಸ್ಥಳಗಳಲ್ಲೇ ಇರುವ ಕಾಲೇಜುಗಳಲ್ಲಿಯೇ ಪ್ರವೇಶ ದೊರೆಯದೆ ಹೋಗಬಹುದು, ಇಲ್ಲವೇ ಆ ಸ್ಥಳಗಳಲ್ಲಿ ತಾಂತ್ರಿಕ ಕಾಲೇಜುಗಳು ಇಲ್ಲದೆಯೇ ಇರಬಹುದು. ಆದ್ದರಿಂದ ಕಾಲೇಜಿನ ಪ್ರವೇಶ ಶುಲ್ಕ ಮತ್ತು ಇತರ ಖರ್ಚುಗಳ ಜೊತೆಜೊತೆಗೆ ಆ ವಿದ್ಯಾರ್ಥಿಗಳು ಹೊರ ಊರುಗಳಲ್ಲಿ ವಸತಿ ಸೌಕರ್ಯ, ಊಟ ಇತ್ಯಾದಿಗಳಿಗಾಗಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇದರಿಂದ ಆರ್ಥಿಕವಾಗಿ ಅನುಕೂಲಕರವಾದ ಪರಿಸ್ಥಿತಿಯಲ್ಲಿರುವ ಕುಟುಂಬಗಳು ಮಾತ್ರ ತಮ್ಮ ಮಕ್ಕಳನ್ನು ಪ್ರೌಢ ತಾಂತ್ರಿಕ ಶಿಕ್ಷಣದಲ್ಲಿ ತಮ್ಮ ಮಕ್ಕಳನ್ನು ತೊಡಗಿಸಲು ಸಾಧ್ಯವಾಗಬಹುದು.

ಹೆಣ್ಣು ಮಕ್ಕಳ ಶಿಕ್ಷಣದ ವಿಷಯವಂತೂ ಬಂದಾಗ ಪೋಷಕರ ಆರ್ಥಿಕ ಸ್ಥಿತಿಗೂ ಅವರ ಹೆಣ್ಣು ಮಕ್ಕಳ ಭವಿಷ್ಯಕ್ಕೂ ನಿಕಟವಾದ ಸಂಬಂಧವಿರುವುದನ್ನು ನಾವು ಕಾಣಬಹುದು. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಮಾದರಿ ವಿದ್ಯಾರ್ಥಿನಿಯರ ಪೋಷಕರ ಆದಾಯದ ಬಗ್ಗೆ ಸಂಗ್ರಹಿಸಿದ ಮಾಹಿತಿಯನ್ನು ಈ ಕೆಳಕಂಡ ಕೋಷ್ಟಕದಲ್ಲಿ ಕೊಡಲಾಗಿದೆ.

ಕೋಷ್ಟಕ ಐದು : **ಪೋಷಕರ ಮಾಸಿಕ ಆದಾಯ**
(ರೂಪಾಯಿಗಳಲ್ಲಿ)

	ತಂದೆಯ ಆದಾಯ		ತಾಯಿಯ ಆದಾಯ	
ಆದಾಯ	ಆವೃತ್ತಿ	ಶೇಕಡಾವಾರು	ಆವೃತ್ತಿ	ಶೇಕಡಾವಾರು
1,000 ಮತ್ತು ಅದಕ್ಕಿಂತ ಕಡಿಮೆ	25	12.5	3	10.71
1,001–2,000	65	32.5	9	32.15
2,001–3.000	78	39.0	10	35.72
3,001–4,000	22	11.0	3	10.71
4,001–5,000	10	5.0	3	10.71
ಒಟ್ಟು ಮೊತ್ತ	200	100.0	28[1]	100.0

[1] ತಾಯಂದಿರ ಆದಾಯದ ಬಗ್ಗೆ ಮಾಹಿತಿಯನ್ನು ಪ್ರಸ್ತುತಪಡಿಸಲು ಉದ್ಯೋಗದಲ್ಲಿರುವ 28 ಜನ ತಾಯಂದಿರನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ.

ಮೇಲಿನ ಅಂಕಿ ಅಂಶಗಳನ್ನು ವಿಶ್ಲೇಷಿಸಿದಾಗ ಶೇಕಡ 55.0ರಷ್ಟು ಜನ ವಿದ್ಯಾರ್ಥಿನಿಯರ ತಂದೆಗಳು 2,000ದಿಂದ 5,000ರೂಗಳ ಮಾಸಿಕ ಆದಾಯವನ್ನು ಹೊಂದಿರುವುದು ಕಂಡುಬರುತ್ತದೆ. ಉದ್ಯೋಗದಲ್ಲಿರುವ ತಾಯಂದಿರಲ್ಲಿಯೂ ಕೂಡ ಶೇಕಡ 57.0ಕ್ಕಿಂತ ಹೆಚ್ಚು ಜನ ಈ 'ಆದಾಯ ಗುಂಪಿಗೆ' ಸೇರಿದವರಾಗಿದ್ದಾರೆ. ಇವರಿಂದ ಪೋಷಕರ ಆರ್ಥಿಕ ಮಟ್ಟಕ್ಕೂ, ಪ್ರೌಢ ತಾಂತ್ರಿಕ ಶಿಕ್ಷಣಾವಕಾಶಗಳ ಉಪಯೋಗಕ್ಕೂ ನಡುವೆ ಇರುವ ಸಂಬಂಧ ಎಷ್ಟು ನಿಕಟವಾಗಿದೆ ಎಂಬುದು ತಿಳಿದುಬರುತ್ತದೆ.

ಇದುವರೆವಿಗೂ ನಾವು ಪ್ರಸ್ತುತಪಡಿಸಿರುವ ಸಂಶೋಧನಾ ಮಾಹಿತಿಯ ಆಧಾರದ ಮೇಲೆ ಶಿಕ್ಷಣಕ್ಕೂ ಸಾಮಾಜಿಕ ಸ್ತರವಿನ್ಯಾಸಕ್ಕೂ ನಡುವೆ ಇರುವ ನಿಕಟವಾದ ಸಂಬಂಧ ಎಷ್ಟು ಎಂಬುದು ಗೋಚರವಾಗುತ್ತದೆ. ಸಮಾನ ಶೈಕ್ಷಣಿಕ ಅವಕಾಶಗಳನ್ನು ಸಂವಿಧಾನಾತ್ಮಕವಾಗಿ ಒದಗಿಸಿದ್ದರೂ ಕೂಡ ಅದರ ಉಪಯೋಗವನ್ನು ಮಾತ್ರ ಎಲ್ಲ ಸಾಮಾಜಿಕ ಆರ್ಥಿಕ ವರ್ಗಗಳು ಸಮಾನವಾಗಿ ಪಡೆಯಲಾಗುತ್ತಿಲ್ಲ. ಇಂದಿಗೂ ಕೂಡ ಹಲವು ಜಾತಿಗಳು, ನಗರವಾಸಿಗಳು ಹಾಗೂ ಉನ್ನತ ಉದ್ಯೋಗ ಮತ್ತು ಆದಾಯ ಗುಂಪುಗಳಿಗೆ ಸೇರಿದವರು ಅಧಿಕ ಸಂಖ್ಯೆಯಲ್ಲಿ ಶಿಕ್ಷಣದ ಬೆಳವಣಿಗೆಯ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಸಾಮಾಜಿಕ–ಆರ್ಥಿಕ ಅಸಮಾನತೆ ಶೈಕ್ಷಣಿಕ ಅಸಮಾನತೆಯನ್ನು ಹೇಗೆ ಹೆಚ್ಚಿಸುತ್ತಿದೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ.

ಟಿಪ್ಪಣಿಗಳು ಮತ್ತು ಆಧಾರಗ್ರಂಥಗಳು

1. Minstry of Education and Social Welfare, Government of India, *Towards Equality-Report on the Status of Women in India*, 1975, p. 238.

2. Ahmad Karuna, "Women's Higher Education; Recruitment and Relevance" in Amrik Singh and Philip G. Altbach (eds) *The Higher Learning in India*, Delhi : Vikas Publishing House, 1974, pp. 180–201

3. Mazumdar Veena, "Higher Education of Women in India" *Journal of Higher Education*, 1 (2) Autumn 1975, pp. 155–165.

4. Sreedevi, S, "Women's Higher Education in India since Independence" in Sen (ed) *Development of Education in India.*

ಮಾನವನು ಸಮಾಜದಲ್ಲಿ ಜೀವಿಸುತ್ತ ನಡೆದುಬಂದ ದಾರಿಯೇ ಇತಿಹಾಸ.

—ರೇನಿಯರ್

ಗತಕಾಲದ ಅನುಭವದ ಪುನರ್‌ಸೃಷ್ಟಿಯೇ ಇತಿಹಾಸ.

—ಕಾಲಿಂಗ್‌ವುಡ್

ಇತಿಹಾಸ ಮಾನವರನ್ನು ಬುದ್ಧಿವಂತರನ್ನಾಗಿ ಮಾಡುತ್ತದೆ.

—ಫ್ರಾನ್ಸಿಸ್ ಬೇಕನ್

ಇತಿಹಾಸವೆಂದರೆ ತಾರ್ಕಿಕವಾಗಿ ಚಿಂತನೆಮಾಡುವ ಜ್ಞಾನ

—ಸೈನಬೋಸ್

ಎಂ. ಎಸ್. ಚಂದ್ರಶೇಖರಪ್ಪ

ಆಂತರಿಕ ವಿಚಾರಣೆ* [Domestic Enquiry]

ಬೃಹತ್ ಕೈಗಾರಿಕೆಗಳು ಸ್ಥಾಪನೆಗೊಂಡಂತೆಲ್ಲಾ ಕಾರ್ಮಿಕ ಹಾಗೂ ನಿರ್ವಹಣಾ ಸಿಬ್ಬಂದಿಯ ಸಂಖ್ಯೆಯೂ ಅಧಿಕವಾಗುತ್ತಾ ಹೋಗುತ್ತದೆ. ಅದರ ಪರಿಣಾಮ, ಉಪಯುಕ್ತತೆಯ ಜೊತೆಗೆ, ಪ್ರತಿಕೂಲಗಳೂ ಸಹ ಬೆಳೆಯುತ್ತವೆ. ಉದಾಹರಣೆಗೆ ಇತ್ತೀಚಿನ ಔಪಚಾರಿಕ-ವಾತಾವರಣದ ತೀವ್ರ ಬೆಳವಣಿಗೆಯಿಂದ ಮಾಲೀಕ ಮತ್ತು ನೌಕರರ ನಡುವೆ ' ಅಸಹಜ ' ಸಂಬಂಧಗಳು ಉದ್ಭವಿಸಬಹುದು. ಇಂತಹ ಸಂದರ್ಭಗಳಲ್ಲಿ ' ಕೈಗಾರಿಕಾ-ಶಾಂತಿ 'ಯನ್ನು ರಾಷ್ಟ್ರೀಯ-ಅಭ್ಯುದಯದ ದೃಷ್ಟಿಯಿಂದ ಕಾಪಾಡುವುದು ಎಲ್ಲರ, ಅದರಲ್ಲೂ ಸರ್ಕಾರಗಳ ಕರ್ತವ್ಯ. ಈ ದಿಶೆಯಲ್ಲಿ ಉಪಯುಕ್ತವಾದ ಕಾರ್ಮಿಕ ಕಾಯ್ದೆಗಳಾದ ' ಕೈಗಾರಿಕಾ ವಿವಾದಗಳ ಕಾಯ್ದೆ-1947', 'ಕೈಗಾರಿಕಾ ನೌಕರಿ (ಸ್ಥಾಯಿ ಆದೇಶಗಳು) ಕಾಯ್ದೆ-1946', ಇತ್ಯಾದಿ; ಜಾರಿಯಲ್ಲಿದ್ದು ಬಹಳ ಮಹತ್ವವನ್ನು ಪಡೆದಿವೆ. ಇವುಗಳ ಜೊತೆ ದ್ವಿಪಕ್ಷೀಯ ಹಾಗೂ ತ್ರಿಪಕ್ಷೀಯ ಒಪ್ಪಂದಗಳೂ ಸಹ ಕೈಗಾರಿಕಾ ಶಾಂತಿಯನ್ನು ಕಾಪಾಡಲು ತುಂಬಾ ನೆರವಾಗುತ್ತಿವೆ. ಕೈಗಾರಿಕೆಗಳಲ್ಲಿ ನೌಕರರು ಯಾವ ರೀತಿ ನಡದುಕೊಳ್ಳಬೇಕು/ ನಡೆದುಕೊಳ್ಳಬಾರದು ಎಂಬುದರ ಬಗ್ಗೆ ಆಯಾ ಕೈಗಾರಿಕೆಗಳ ಸ್ಥಾಯಿ ಆದೇಶಗಳಲ್ಲಿ ವಿವರಿಸಲಾಗಿದೆ. ಯಾವುದಾದರೊಬ್ಬ ನೌಕರನು ಸ್ಥಾಯಿ ಆದೇಶಗಳಡಿಯಲ್ಲಿ ಅಥವಾ ಇನ್ನಾವುದೇ ಕಾಯ್ದೆಯಡಿಯಲ್ಲಿ ತಪ್ಪು ಮಾಡಿದರೆ ಅಂಥ ನೌಕರನನ್ನು ಶಿಕ್ಷಿಸುವುದಾಗಲೀ ಅಥವಾ ಕೆಲಸದಿಂದ ವಜಾ ಮಾಡುವ ವ್ಯವಸ್ಥೆ ಇರುವುದು ಸೂಕ್ತವಾದ ಕ್ರಮ ಇದು ಕೈಗಾರಿಕಾ ಅಶಾಂತಿಯನ್ನು ಹತ್ತಿಕ್ಕಲು ಬಹಳ ಅನುಕೂಲವಾಗುತ್ತದೆ. ಅಂದಹಾಗೆ, ಮಾಲೀಕನ ಮನಸ್ಸಿಗೆ ಬಂದಂತೆ ಇಂಥ ವಿಷಯಗಳಲ್ಲಿ ವರ್ತಿಸಲು ಬರುವುದಿಲ್ಲ. ಈ ಸಿಟ್ಟಿನಲ್ಲಿ ತಪ್ಪುಮಾಡಿದವನೆನ್ನಲಾದವನಿಗೆ ಪ್ರತಿಪಾದಿಸಲು ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. 'ಆಂತರಿಕ-ವಿಚಾರಣೆ'ಯು

---

* ಈ ಲೇಖನವನ್ನು ಎಂಟು ದೊಡ್ಡ ಕೈಗಾರಿಕೆಗಳಲ್ಲಿ ಚಾಲ್ತಿಯಲ್ಲಿರುವ ' ಆಂತರಿಕ-ವಿಚಾರಣೆ'ಯ ವಿಧಾನಗಳ ಆಧಾರದ ಮೇಲೆ ಬರೆಯಲಾಗಿದೆ.

ಅಂತಹ ಒಂದು ಶಿಸ್ತಿನ ಕ್ರಮ. ಈ ರೀತಿಯಾದ ಶಿಸ್ತಿನ ಕ್ರಮಗಳನ್ನು ಅನುಸರಿಸದೆ ಇದ್ದರೆ ಮಾಲೀಕನು ತೆಗೆದುಕೊಂಡ ನಿರ್ಣಯಗಳು ಕ್ರಮಬದ್ಧವಾಗುವುದಿಲ್ಲ.

ಪರಿಕಲ್ಪನೆ

ಆಂತರಿಕ-ವಿಚಾರಣೆ (Domestic Enquiry) ಎಂಬ ಪದಸಮುಚ್ಚಯವು 'Domestic' ಮತ್ತು 'Enquiry' ಎಂಬ ಆಂಗ್ಲ ಪದಗಳನ್ನೊಳಗೊಂಡಿದೆ. ಆಂಗ್ಲ ಭಾಷೆಯ 'Domestic' ಎಂಬ ಪದದ ಅರ್ಥ, 'ಮನೆಗೆ' ಅಥವಾ 'ಕುಟುಂಬ'ಕ್ಕೆ ಸಂಬಂಧಿಸಿದ್ದು ಎಂದು ಹೇಳಬಹುದು. 'Enquiry' ಎಂದರೆ ಅಪರಾಧವೊಂದರ ಬಗ್ಗೆ 'ಸತ್ಯವನ್ನು ಹುಡುಕು', 'ಮಾಹಿತಿ' ಅಥವಾ 'ಜ್ಞಾನ'ವನ್ನು ಪಡೆ ಎಂಬು ದಾಗಿದೆ ಅಂದಹಾಗೆ, 'ಆಂತರಿಕ-ವಿಚಾರಣೆ'ಯು ಒಂದು 'ಕುಟುಂಬ'ಕ್ಕೆ ಅಥವಾ 'ಮನೆ'ಗೆ ಸಂಬಂಧಿಸಿದ ವಿಷಯಗಳ ಬಗೆಗೆ ವಿಚಾರಣೆ ಮಾಡುವುದು ಎಂದಂತಾಯಿತು ಈ ಪರಿಕಲ್ಪನೆಯನ್ನು ಕೈಗಾರಿಕಾ ಕ್ಷೇತ್ರದಲ್ಲಿ ಉಪಯೋಗಿಸಿ ದಾಗ ತನ್ನದೇ ಆದ ವಿಶಿಷ್ಟ ರೀತಿಯ ಅರ್ಥವನ್ನು ಕೊಡುತ್ತದೆ

ಆಂತರಿಕ-ವಿಚಾರಣೆಯಲ್ಲಿ ಯಾವ ನೌಕರನೇ ಆಗಲಿ ಅನೀತಿಯುತ ನಡವಳಿಕೆ ಯಲ್ಲಿ ತೊಡಗಿದ್ದಾನೆಂದು ತಿಳಿದು ಬಂದಾಗ ಅಥವಾ ಕಾನೂನು ಉಲ್ಲಂಘನೆ* ಮಾಡಿದ್ದಾನೆಂದು ಗೊತ್ತಾದಾಗ, ಮಾಲೀಕ ತನ್ನ ಕಾರ್ಖಾನೆಗೆ ಸಂಬಂಧಿಸಿದ ಒಬ್ಬ ಮೇಲಧಿಕಾರಿಯನ್ನು ವಿಚಾರಣಾಧಿಕಾರಿಯಾಗಿ ನೇಮಿಸಿ ಅಂತಹ ಘಟನೆಯ ಬಗ್ಗೆ ಸಮಗ್ರ ವಿಚಾರಣೆ ಮಾಡಿಸುತ್ತಾನೆ ಆಂತರಿಕ-ವಿಚಾರಣೆಯ ಬಗ್ಗೆ ಕೂಲಂಕುಶ ವಾಗಿ ವಿಶ್ಲೇಷಿಸುವ ಮೊದಲು ನಾವು ಪೂರ್ವಭಾವಿ ವಿಚಾರಣೆ ಬಗೆಗೆ ತಿಳಿದುಕೊಳ್ಳು ವುದು ಸೂಕ್ತ. ಪೂರ್ವಭಾವಿ ವಿಚಾರಣೆ (Preliminary Enquiry) ಯು ಅನೌಪ ಚಾರಿಕವಾಗಿದ್ದು, ಯಾವುದೇ ನಿರ್ದಿಷ್ಟವಾದ ಕಾನೂನು-ಕ್ರಮಗಳನ್ನು ಅನುಸರಿಸು ವುದಿಲ್ಲ. ಈ ವಿಚಾರಣೆಯನ್ನು ಮಾಡುವ ಉದ್ದೇಶ ಆಂತರಿಕ ವಿಚಾರಣೆಗೊಳಪಡಿಸು ವಂತಹ ನೌಕರನ ಹಾಗೂ ಅವನ ಆಪಾದನೆಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಅದರ ಆಧಾರದ ಮೇಲೆ ಆತನನ್ನು ಆಂತರಿಕ ವಿಚಾರಣೆಗೆ ಗುರಿಪಡಿಸಲು ಸಾಧ್ಯವೋ ಅಥವಾ ಇಲ್ಲವೋ? ಎಂಬುದನ್ನು ತಿಳಿಯುವುದೇ ಆಗಿದೆ. ಈ ವಿಚಾರಣೆಯನ್ನು ಮಾಡುವಾಗ ಆಪಾದಿತ-ನೌಕರನಿಗೆ ಯಾವ ಸುಳಿವನ್ನೂ ಕೊಡಕೂಡದು. ಮಾಲೀಕನ ಅಥವಾ ಆತನಿಂದ ನೇಮಿಸಲ್ಪಟ್ಟ ಅಧಿಕಾರಿಯ ಅನುಕೂಲಕ್ಕಾಗಿ ಇಂತಹ ವಿಚಾರಣೆಯನ್ನು ನಡೆಸಲಾಗುವುದು. ಹಲವು ಸಂದರ್ಭಗಳಲ್ಲಿ ಪೂರ್ವಭಾವಿ ವಿಚಾರಣೆ ಮುಗಿದನಂತರ ಅಂತಹ ಆಪಾದನೆಯಲ್ಲಿ ಹುರುಳಿಲ್ಲ ಎಂದು ಕಂಡುಬಂದಲ್ಲಿ,

---

* ಅನೀತಿಯುತ ನಡವಳಿಕೆ ಅಥವಾ ಗುರುತರವಾದ ತಪ್ಪುನಡತೆಗಳನ್ನು ಅನುಬಂಧ-೧ರಲ್ಲಿ ಕೊಡಲಾಗಿದೆ.

ಆಂತರಿಕ ವಿಚಾರಣೆಯನ್ನು ನಡೆಸುವ ಪ್ರಮೇಯವೇ ಇರುವುದಿಲ್ಲ. ಆಂದಹಾಗೆ, ಎಲ್ಲ ಸಂದರ್ಭದಲ್ಲೂ ಪೂರ್ವಭಾವಿ ವಿಚಾರಣೆ ಮಾಡುವ ಆಗತ್ಯವಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ.

ಆಂತರಿಕ ವಿಚಾರಣೆಯ ಹಂತಗಳು

ವಿಚಾರಣಾಧಿಕಾರಿಯನ್ನು ನೇಮಿಸುವುದು :

ವಿಚಾರಣಾಧಿಕಾರಿಯನ್ನು ನೇಮಿಸುವಾಗ ಹಲವು ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ವಿಚಾರಣಾಧಿಕಾರಿಯನ್ನು ನೇಮಿಸುವುದು ಅಷ್ಟು ಸುಲಭದ ಕೆಲಸವಲ್ಲ. ಮೊಟ್ಟಮೊದಲನೆಯದಾಗಿ, ವಿಚಾರಣಾಧಿಕಾರಿ ಯಾಗುವವನು ಸ್ವತಂತ್ರವಾಗಿ ವಿಚಾರಮಾಡುವ ವ್ಯಕ್ತಿತ್ವವನ್ನು ಹೊಂದಿರಬೇಕು. ಎರಡನೆಯದಾಗಿ, ಆತನು ಆಪಾದಿತ ನೌಕರನ ಸಂಬಂಧಿಯಾಗಲೀ ಅಥವಾ ನಡೆದ ಘಟನೆಯನ್ನು ಖುದ್ದಾಗಿ ನೋಡಿದವನಾಗಲೀ ಆಗಿದ್ದರೆ ಅಂತಹ ವ್ಯಕ್ತಿಯನ್ನು ವಿಚಾರಣಾಧಿಕಾರಿಯಾಗಿ ನೇಮಿಸಲು ಬರುವುದಿಲ್ಲ. ಕಾರಣ ಅಂಥವರ ತೀರ್ಪು ನಿಷ್ಪಕ್ಷಪಾತವಾಗಿರುವುದಿಲ್ಲ ಎಂಬುದೇ ಆಗಿದೆ. ಮೂರನೆಯದಾಗಿ, ವಿಚಾರಣಾಧಿಕಾರಿ ಯಾಗುವವನು ನಿಷ್ಪಕ್ಷಪಾತವಾದ ದೃಷ್ಟಿಕೋನವನ್ನು ಹೊಂದಿರಬೇಕು. ಕೊನೆಯ ದಾಗಿ, ಈ ರೀತಿಯ ವಿಚಾರಣೆಗಳನ್ನು ನಡೆಸಿದ ಅನುಭವವಿರುವ ವ್ಯಕ್ತಿಯಾಗಿರಬೇಕು. ಆಪಾದಿತ ನೌಕರನು ನೇಮಿಸಲ್ಪಟ್ಟ ವಿಚಾರಣಾಧಿಕಾರಿಯಿಂದ ನಿಷ್ಪಕ್ಷಪಾತವಾದ ವಿಚಾರಣೆ ಸಾಧ್ಯವಿಲ್ಲ ಎಂಬುದನ್ನು ಸಾಬೀತುಪಡಿಸಿದರೆ, ಅಂತಹ ವಿಚಾರಣಾಧಿ ಕಾರಿಯನ್ನು ಬದಲಿಸಿ ಬೇರೆಯವರನ್ನು ನೇಮಿಸಬಹುದಾಗಿದೆ.

ವಿಚಾರಣಾ ಸೂಚನಾ ಪತ್ರ :

ವಿಚಾರಣಾ ಸೂಚನಾ ಪತ್ರ ಆಂತರಿಕ ವಿಚಾರಣೆಯಲ್ಲಿ ಬಹಳ ಮಹತ್ವವಾದ ಹಂತವಾಗಿದೆ. ಈ 'ಸೂಚನಾ ಪತ್ರ'ದಲ್ಲಿ ವಿಚಾರಣಾಧಿಕಾರಿಯ ಹೆಸರು ಹಾಗೂ ವಿಚಾರಣೆ ಮಾಡುವ ದಿನಾಂಕ, ವೇಳೆ, ಸ್ಥಳ ಮತ್ತು ಯಾವ ವಿಷಯದ ಸಂಬಂಧವಾಗಿ ಇಂತಹ ವಿಚಾರಣೆ ನಡೆಸಲಾಗುತ್ತಿದೆ ಎಂಬಿತ್ಯಾದಿ ಅಂಶಗಳನ್ನೊಳ ಗೊಂಡಿರಬೇಕು. ವಿಚಾರಣಾ ಸೂಚನಾ ಪತ್ರವನ್ನು ಖುದ್ದಾಗಿ 'ಆಪಾದಿತ-ನೌಕರ' ನಿಗೆ ತಲುಪುವಂತೆ ವ್ಯವಸ್ಥೆ ಮಾಡಲಾಗುವುದು. ಅಂತಹ 'ಸೂಚನಾ ಪತ್ರ'ವನು ತೆಗೆದುಕೊಳ್ಳಲು ನಿರಾಕರಿಸಿದರೆ, ಅದನ್ನು 'ಪ್ರಕಟಣಾ-ಫಲಕ'ದ ಮೇಲೆ ಪ್ರಕಟಿಸಲಾಗುವುದು ಹಾಗೂ ನೌಕರನಿಗೆ ತಲುಪಿಸಲಾಗಿದೆ ಎಂದು ತಿಳಿಯಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ವಿಚಾರಣಾ ಸೂಚಕ ಪತ್ರವನ್ನು 'ರಿಜಿಸ್ಟರ್-ಪೋಸ್ಟ್' ಮೂಲಕ ತ್ತಿ ಈಚಿನದೆಂದು ತಿಳಿದಿರುವ ನೌಕರನ ವಿಳಾಸಕ್ಕೆ ಕಳಿಸಲಾಗುವುದು ನೌಕರನು ಅದನ್ನು ತೆಗೆದುಕೊಳ್ಳಲು ನಿರಾಕರಿಸಿದರೆ ಪ್ರತಿಷ್ಠಿತ ದಿನ ಪತ್ರಿಕೆಗಳ

ಮೂಲಕ ಅಂತಿಮವಾಗಿ ಸೂಚನಾ ಪತ್ರವನ್ನು ಪ್ರಕಟಿಸಲಾಗುವುದು. ಆದಾಗ್ಯೂ ಬರದೆಹೋದಲ್ಲಿ, ವಿಚಾರಣೆಯನ್ನು ಆತನ ಗೈರು ಹಾಜರಿಯಲ್ಲೇ ನಡೆಸಲಾಗುವುದು. ವಿಚಾರಣಾ ದಿನಾಂಕವನ್ನು ಗೊತ್ತುಪಡಿಸುವಾಗ ಆಪಾದಿತ-ನೌಕರನಿಗೆ ಸಾಕಷ್ಟು ಕಾಲಾವಕಾಶವನ್ನು ಮಾಡಿಕೊಡಬೇಕು. ಇದರಿಂದ ಅವನು ರಕ್ಷಣೆಯ ಪ್ರತಿವಾದವನ್ನು ಮಂಡಿಸಲು ಸೂಕ್ತ ತಯಾರಿನಡೆಸಿಕೊಳ್ಳಲು ಅನುಕೂಲವಾಗುತ್ತದೆ. ವಿಚಾರಣಾ ಸೂಚನಾ ಪತ್ರದ ಭಾಷೆ ಆದಷ್ಟು ಸರಳ ಹಾಗೂ ಸ್ಪಷ್ಟವಾಗಿದ್ದು ದ್ವಂದ್ವ ಅರ್ಥ ಕಲ್ಪಿಸುವ ಪದಗಳನ್ನು ಬಳಸಕೂಡದು.

ವಿಚಾರಣೆ ನಡೆಸುವ ವಿಧಾನ

ಸಾಮಾನ್ಯವಾಗಿ ಎಲ್ಲ ಕಾರ್ಖಾನೆಗಳಲ್ಲಿ ಅನುಸರಿಸುತ್ತಿರುವ ವಿಧಾನವು ಮೂರು ಮುಖ್ಯ ಅಂಶಗಳನ್ನೊಳಗೊಂಡಿದೆ. ಅವೆಂದರೆ: (೧) ಕಾರ್ಖಾನೆಯ ಸ್ಥಾಯಿ ಆದೇಶಗಳು, (೨) ನ್ಯಾಯಾಲಯಗಳಲ್ಲಿ ಅಳವಡಿಸಿಕೊಂಡಿರುವ ಸಾಮಾನ್ಯ ವಿಧಿ-ವಿಧಾನಗಳು, ಮತ್ತು (೩) ಸ್ವಾಭಾವಿಕ ನ್ಯಾಯಯುತ ತತ್ವಗಳು (Principles of Natural Justice). ಹಲವು ಕಾರ್ಖಾನೆಗಳ ಸ್ಥಾಯಿ ಆದೇಶಗಳಲ್ಲಿ ಆಂತರಿಕ ವಿಚಾರಣೆಗೆ ಸಂಬಂಧಿಸಿದ ವಿಧಿ-ವಿಧಾನಗಳು ನಮೂದಿಸಲ್ಪಟ್ಟಿರುತ್ತವೆ. ಅಂತಹ ಸಂದರ್ಭದಲ್ಲಿ ಸ್ಥಾಯಿ ಆದೇಶಗಳಲ್ಲಿ ಅಡಕಗೊಂಡಿರುವ ವಿಧಾನವನ್ನು ಆಂತರಿಕ ವಿಚಾರಣೆ ಮಾಡುವಾಗ ಅನುಸರಿಸಬೇಕಾಗುವುದು.

ವಿಚಾರಣೆ ನಡೆಸುವ ಸ್ಥಳ :

ಆಂತರಿಕ ವಿಚಾರಣೆಗಳನ್ನು ಸಾಮಾನ್ಯವಾಗಿ ಆಯಾ ಕಾರ್ಖಾನೆಗಳಲ್ಲಿ ನಡೆಸುತ್ತಾರೆ. ಕಲವು ವಿಶಿಷ್ಟ ಸಂದರ್ಭಗಳಲ್ಲಿ ಇಂತಹ ವಿಚಾರಣೆಗಳನ್ನು ತನ್ನದೇ ಆದ 'ಅತಿಥಿ ಗೃಹ' ಅಥವಾ ಮುಖ್ಯ-ಕಛೇರಿಯಲ್ಲಿ ನಡೆಸಿದ ಸಂದರ್ಭಗಳಿಗೇನು ಕಡಿಮೆ ಇಲ್ಲ. ಕಾರ್ಖಾನೆಗೆ ಹೊರತಾದ ಸ್ಥಳಗಳನ್ನು ಆರಿಸಿಕೊಳ್ಳಲು ಕಾರಣವೇನೆಂದರೆ, ಕೆಲಸಮಾಡುವ ಸ್ಥಳಗಳಲ್ಲಿ ವಿಚಾರಣೆಗಳನ್ನು ನಡೆಸಿದರೆ ಹೆಚ್ಚು ಅಡೆತಡೆಗಳು ಉದ್ಭವಿಸುವುದೇ ಆಗಿದೆ. ಸ್ಥಳ ನಿಗದಿಪಡಿಸುವಾಗ ಯಾವ ನೌಕರನ ಬಗ್ಗೆ ವಿಚಾರಣೆ ನಡೆಸಬೇಕಾಗಿದೆ ಎಂಬುದರ ಮೇಲೂ ಸಹ ಅವಲಂಬಿತರುತ್ತದೆ. ಉದಾಹರಣೆಗೆ ವಿಚಾರಣೆಗೊಳಗಾದ ನೌಕರ 'ಕಾರ್ಮಿಕ-ಸಂಘ'ದ ಆಡಳಿತ ಸದಸ್ಯನಾಗಿದ್ದರೆ ಅಂತಹ ಸಂದರ್ಭದಲ್ಲಿ ಕಾರ್ಖಾನೆ ಹೊರಗೆ ವಿಚಾರಣೆಗೋಸ್ಕರ ಸ್ಥಳವನ್ನು ನಿಗದಿಪಡಿಸುವುದು ಸೂಕ್ತ ಹಾಗೂ ಸಮಂಜಸ. ಅಂತಹ ಸ್ಥಳಗಳು ದೂರದಲ್ಲಿದ್ದ ಸಂದರ್ಭದಲ್ಲಿ ಪ್ರಯಾಣ-ಭತ್ಯವನ್ನು ಆಡಳಿತ ವರ್ಗ ಭರಿಸಬೇಕಾಗುವುದು.

ವಿಚಾರಣಾರಂಭ :

ವಿಚಾರಣೆ ಪ್ರಾರಂಭವಾದ ಕೂಡಲೇ ಮೊಟ್ಟಮೊದಲು ವಿಚಾರಣಾಧಿಕಾರಿಯು

ಆಪಾದಿತ ನೌಕರ*ನಿಗೆ ಸ್ಪಷ್ಟ ಹಾಗೂ ಸರಳವಾದ ಭಾಷೆಯಲ್ಲಿ ಅವನ ಮೇಲೆ ಹೊರಿಸಿರುವ 'ಆಪಾದನೆ'ಗಳನ್ನು ಓದಿ ಮನದಟ್ಟು ಮಾಡಿಕೊಡಬೇಕು. ಆಪಾದನೆಗಳ ಪಟ್ಟಿಯನ್ನು ಓದಿ ಮುಗಿಸಿದ ಮೇಲೆ, ನೌಕರನು ಅವುಗಳನ್ನು ಒಪ್ಪಿಕೊಳ್ಳುವನೋ ? ಅಥವಾ ಇಲ್ಲವೋ ? ಎಂಬುದನ್ನು ವಿಚಾರಣಾಧಿಕಾರಿಯು ನಿಗದಿ ಪಡಿಸಿಕೊಳ್ಳಬೇಕು. ಒಂದು ವೇಳೆ ನೌಕರನು ಆಪಾದನೆಗಳನ್ನು ಒಪ್ಪಿಕೊಂಡ ಸಂದರ್ಭದಲ್ಲಿ ಆಂತರಿಕ ವಿಚಾರಣೆಯನ್ನು ನಡೆಸುವ ಆಗತ್ಯ ಬೀಳುವುದಿಲ್ಲ. ಆತನು ಆಪಾದನೆಗಳನ್ನು ಒಪ್ಪಿಕೊಳ್ಳದಿದ್ದರೆ, ವಿಚಾರಣಾಧಿಕಾರಿಯು ನೌಕರನಿಗೆ ತನ್ನೆಲ್ಲ ಸಾಕ್ಷ್ಯಾಧಾರಗಳೊಂದಿಗೆ ಪ್ರತಿಪಾದಿಸಲು ಅವಕಾಶ ಒದಗಿಸಿಕೊಡಬೇಕು.

ಹಲವು ಸಂದರ್ಭಗಳಲ್ಲಿ 'ಆಪಾದಿತ ನೌಕರ'ನು ವಿಚಾರಣೆಯಲ್ಲಿ ಪಾಲ್ಗೊಳ್ಳದೆ, ಅವನ ಪ್ರತಿನಿಧಿಯಾಗಿ ಕಾರ್ಮಿಕ ಸಂಘದ ಮುಖಂಡನನ್ನೋ ಅಥವ ಇಂತಹ ವಿಷಯಗಳಲ್ಲಿ ಪರಿಣತಿ ಹೊಂದಿದ ವ್ಯಕ್ತಿಯನ್ನೋ ಕಳಿಸಲಿಚ್ಛಿಸಬಹುದು. ಅಂತಹ ಸಂದರ್ಭದಲ್ಲಿ ವಿಚಾರಣಾಧಿಕಾರಿಯು ಅನುಮತಿ ಕೊಡುವುದು ರೂಢಿಯಲ್ಲಿದೆ. ನೌಕರನು ಅವಿದ್ಯಾವಂತನಾಗಿದ್ದರೆ ಅಥವಾ ಬಂದೊದಗಿದ ಪರಿಸ್ಥಿತಿ ಬಹಳ ಕ್ಲಿಷ್ಟವಾಗಿದ್ದರೆ ಅವನ ಪರವಾಗಿ ವಾದಿಸಲು ನುರಿತ ವಕೀಲನ* ಸಲಹೆಯನ್ನು ಪಡೆಯಬಹುದಾಗಿದೆ.

ಈ ಪ್ರಕ್ರಿಯೆಯಲ್ಲಿ ವಿಚಾರಣಾಧಿಕಾರಿಯು ಆಡಳಿತವರ್ಗದ ಪ್ರತಿನಿಧಿಗಳಿಗೆ ವಿಚಾರಣೆಗೆ ಸಂಬಂಧಪಟ್ಟ ದಾಖಲಾತಿಗಳೂ ಹಾಗೂ ಸಾಕ್ಷಿಗಳನ್ನು ಒದಗಿಸಲು ಕೇಳುತ್ತಾನೆ. ಅವಾದನಂತರ ಆಪಾದಿತ ನೌಕರನಿಗೆ ಅಥವಾ ಅವನ ಪ್ರತಿನಿಧಿಗಳಿಗೆ ಪಾಟೀ ಸವಾಲು ಮಾಡಲು ಅವಕಾಶವನ್ನು ವಿಚಾರಣಾಧಿಕಾರಿಯು ಕಲ್ಪಿಸಿಕೊಡಬೇಕು. ಇದೇ ರೀತಿ ವಿಚಾರಣಾಧಿಕಾರಿಗೆ ತೃಪ್ತಿಯಾಗುವವರೆಗೆ ವಾದ-ಪ್ರತಿವಾದಗಳನ್ನು ಎರಡೂ ಕಡೆಯವರಿಂದ ಕೇಳಿ ನಂತರ ಪ್ರಮುಖವಾದ ಅಂಶಗಳನ್ನು ಗುರುತಿಸುವುದು ಆತನ ಜವಾಬ್ದಾರಿಯಾಗಿದೆ.

ವಿಚಾರಣಾ ವರದಿ :

ವಿಚಾರಣಾಧಿಕಾರಿಯು ಎಲ್ಲ ವಿಧದ ಸಂಬಂಧಪಟ್ಟ ಮಾಹಿತಿಯನ್ನು ಪಡೆದ ನಂತರ, 'ಸಮಗ್ರ'ವಾದ ವರದಿಯನ್ನು ಸಿದ್ಧಪಡಿಸಿ ಮೇಲಧಿಕಾರಿಗೆ ಕಳಿಸಿಕೊಡಬೇಕು.

---

*ಆಪಾದಿತ ನೌಕರನನ್ನು ನೌಕರಿಯಿಂದ ಅನಾಮತ್ತುಗೊಳಿಸುವುದು ಆಗತ್ಯ ಅಥವಾ ಉಚಿತವೆಂದು ಆಡಳಿತವರ್ಗದವರಿಗೆ ಸರಿದೋರಿದರೆ ಅದರ ಬಗ್ಗೆ ಲಿಖಿತ ಮೂಲಕ ಅಮಾನತ್ತುಗೊಳಿಸಲಿರುವ ನೌಕರನಿಗೆ ತಿಳಿಸಬೇಕು. ಆ ವೇಳೆಯಲ್ಲಿ ನೌಕರನು ಜೀವನಾಧಾರಭತ್ಯವನ್ನು ಪಡೆಯಲು ಅರ್ಹನಾಗಿರುತ್ತಾನೆ.

*ಇತ್ತೀಚೆಗೆ ಗೋವಾ ಹೈಕೋರ್ಟಿನಿಂದ ಈ ಸಂಬಂಧವಾಗಿ ಒಂದು ಮಹತ್ವದ ತೀರ್ಪು ಹೊರಬಿದ್ದಿದೆ.

ವರದಿಯನ್ನು ತಯಾರಿಸುವಾಗ ಎರಡೂ ಪಕ್ಷದವರು ಮಂಡಿಸಿದ ದಾಖಲೆಗಳಿಂದ, ಸಾಕ್ಷ್ಯಾಧಾರಗಳಿಂದ ಹಾಗೂ ಚರ್ಚೆಯಿಂದ ಹೊರಬಂದ ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕು. ವಿಚಾರಣಾ ವರದಿ ಬಹು ಮುಖ್ಯವಾದುದು. ಯಾಕೆಂದರೆ ಈ ವರದಿಯಾಧಾರದ ಮೇಲೆ ಆಪಾದಿತ ನೌಕರನಿಗೆ ಶಿಕ್ಷೆ ಕೊಡಬೇಕೇ ? ಕೊಡುವುದಾದರೆ ಎಂತಹ ಶಿಕ್ಷೆ ಕೊಡಬೇಕು ಅಥವಾ ಶಿಕ್ಷೆಯನ್ನು ಕೊಡಲೇಬಾರದೇ ? ಎಂಬುದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ನಿರ್ಧರಿಸುತ್ತಾರೆ. ವಿಚಾರಣಾಧಿಕಾರಿಯು ಚಿಂತ ನಾತ್ಮಕ ಹಾಗೂ ವಿವರಣಾತ್ಮಕವಾದ ವರದಿಯನ್ನು ಸಿದ್ಧಪಡಿಸಿ, ಮಂಡಿಸಿದರೆ 'ಸಾಮಾಜಿಕ ನ್ಯಾಯ'ವನ್ನು ದೊರಕಿಸಿಕೊಡುವಲ್ಲಿ ಯಾವ ಸಂದೇಹವೂ ಇಲ್ಲ.

ಮೇಲಧಿಕಾರಿಯು (ದಂಡಾಧಿಕಾರಿ) ವಿಚಾರಣಾ ವರದಿಯನ್ನು ವಿಚಾರಣಾಧಿ ಕಾರಿಯಿಂದ ಸ್ವೀಕರಿಸಿದನಂತರ, ಅದನ್ನು ಕೂಲಂಕಷವಾಗಿ ಅಧ್ಯಯನ ಮಾಡಿ 'ತಪ್ಪಿನ—ತೀವ್ರತೆ' ಆಧಾರದಮೇಲೆ ಶಿಕ್ಷೆಯನ್ನು ನಿಗದಿಪಡಿಸುವನು. ಹಲವು ಸಂದರ್ಭಗಳಲ್ಲಿ 'ಆಪಾದಿತ ನೌಕರ' ನಿರಪರಾಧಿಯಾಗಿ ಉಳಿಯುವ ಸಾಧ್ಯತೆ ಇಲ್ಲದಿಲ್ಲ. ಅನೇಕ ಉದಾಹರಣೆಗಳೂ ಇವೆ.

ಉಪಸಂಹಾರ

ಆಂತರಿಕ-ವಿಚಾರಣೆಯು ಕಾರ್ಖಾನೆಗಳಲ್ಲಿನ ಶಿಸ್ತಿನ ಗುಣಮಟ್ಟವನ್ನು ಕಾಪಾಡುವಲ್ಲಿ ಬಹಳ ಸಹಾಯಕವಾಗಿದೆ ಇದರ ಪರಿಣಾಮವಾಗಿ 'ಕೈಗಾರಿಕಾ-ಸಂಬಂಧ' ಒಳ್ಳೆಯ ರೀತಿಯಲ್ಲಿ ಬೆಳೆಯುವುದರಲ್ಲಿ ಸಂದೇಹವಿಲ್ಲ. ಈ ದಿಶೆಯಲ್ಲಿ ಆಂತರಿಕ ವಿಚಾರಣೆಯನ್ನು ಕ್ರಮಬದ್ಧವಾಗಿ ನಡೆಸುವುದು ಬಹಳ ಮುಖ್ಯವಾದ ಅಂಶ.

ಅನುಬಂಧ '೧'

ಅನೀತಿಯುತ ನಡತೆ ಅಥವಾ ಗುರುತರವಾದ ತಪ್ಪು ನಡತೆಗಳ ಪಟ್ಟಿ

1. ಮೇಲಧಿಕಾರಿಗಳು ನೀಡಿದ ನ್ಯಾಯ ಸಂಗತವಾದ ಅಪ್ಪಣೆಗೆ ಉದ್ದೇಶ ಪೂರ್ವಕವಾಗಿ ಅವಿಧೇಯತೆ ತೋರುವುದು.
2. ಕಳ್ಳತನ, ಮೋಸ ಅಥವಾ ಅಪ್ರಾಮಾಣಿಕತೆಯಲ್ಲಿ ತೊಡಗಿರುವುದು.
3. ಕಂಪನಿಯ/ಕಾರ್ಖಾನೆಯ ಯಾವುದೇ ಆಸ್ತಿಪಾಸ್ತಿಗಳಿಗೆ ಉದ್ದೇಶಪೂರ್ವಕ ವಾಗಿ ನಷ್ಟ ಉಂಟುಮಾಡುವುದು.
4. ಕಾರ್ಖಾನೆಯ ವಹಿವಾಟುಗಳ ಸಂಬಂಧದಲ್ಲಿ ಲಂಚ ಕೊಡುವುದು ಅಥವಾ ಸ್ವೀಕರಿಸುವುದು.
5. ಮೇಲಿಂದ ಮೇಲೆ ಕೆಲಸಕ್ಕೆ ಗೈರುಹಾಜರಾಗುವುದು.
6. ಮೇಲಿಂದ ಮೇಲೆ ಹೊತ್ತು ಮೀರಿ ಬರುವುದು.

7. ಕಾನೂನು ಬಾಹಿರವಾದ ಸಂಪು ಹೂಡುವುದು ಅಥವಾ ಸಂಪು ಹೂಡಲು ಬೇರೆಯುವರನ್ನು ಬಲವಂತ ಮಾಡುವುದು.
8. ಹೊಗೆ ಸೇವನೆ ನಿಷೇಧಿಸಿರುವ ಸ್ಥಳದಲ್ಲಿ ಹೊಗೆ ಸೇವನೆ ಮಾಡುವುದು.
9. ಕರ್ತವ್ಯದ ಸಮಯದಲ್ಲಿ ನಿದ್ರೆಮಾಡುವುದು ಅಥವಾ ತೂಕಡಿಸುವುದು.
10. ಕೆಲಸದ ವೇಗವನ್ನು ಬೇಕೆಂದೇ ಇಳಿಸುವುದು ಮತ್ತು ಬೇರೆಯುವರನ್ನೂ ಇದಕ್ಕೆ ಹೊಂದಿಕೊಳ್ಳಲು ಒತ್ತಾಯಿಸುವುದು.
11. ಕರ್ತವ್ಯದ ವೇಳೆಯಲ್ಲಿ ಪಾನಮತ್ತನಾಗಿರುವುದು ಅಥವಾ ಅಮಲಿನಲ್ಲಿರುವುದು.
12. ಆಡಳಿತವರ್ಗದ ಅನುಮತಿ ಇಲ್ಲದೆ ಕಾರ್ಖಾನೆಯಲ್ಲಿ 'ಪ್ರಚೋದಿತ–ಕರಪತ್ರ' ಹಂಚುವುದು ಅಥವಾ ಪ್ರದರ್ಶಿಸುವುದು.
13. ಕಾರ್ಖಾನೆಯಾವರಣದಲ್ಲಿ ಜೂಜಾಡುವುದು.
14. ಕಾರ್ಖಾನೆಯ ವ್ಯವಹಾರಗಳ ಸಂಬಂಧದಲ್ಲಿ ಮೇಲ್ಪಟ್ಟವರ ಮುಂದೆ ಉದ್ದೇಶಪೂರ್ವಕವಾಗಿ ಸುಳ್ಳು ಹೇಳಿಕೆ ಕೊಡುವುದು ಅಥವಾ ಖೋಟಾ ರುಜುವನ್ನು ಮಾಡುವುದು.
15. ಆಡಳಿತ ವರ್ಗದವರ ಪೂರ್ವಭಾವಿ ಲಿಖಿತ ಅನುಮತಿ ಇಲ್ಲದೆ ಕಾರ್ಖಾನೆಯಲ್ಲಿ ಧನ ಸಂಗ್ರಹಣೆಯಲ್ಲಿ ತೊಡಗಿರುವುದು.

ಈ ಮೇಲಿನ ಪಟ್ಟಿಯು ಎಲ್ಲ ತರಹದ ಲೋಪ–ದೋಷಗಳನ್ನೊಳಗೊಂಡಿಲ್ಲ. ಆದ್ದರಿಂದ ಇದು ಪರಿಪೂರ್ಣವಾದುದಲ್ಲ ಎಂದು ಹೇಳಬಹುದು. ಈ ಪಟ್ಟಿಗೆ ಇನ್ನೂ ಹತ್ತಾರು ವಿಧವಾದ ಅನೀತಿಯುತ ನಡೆವಳಿಕೆಗಳನ್ನು ಸೇರಿಸಬಹುದಾಗಿದೆ. ಈ ಪಟ್ಟಿ ಒಂದು ಕೈಪಿಡಿ ಎಂದರೆ ತಪ್ಪಾಗುವುದಿಲ್ಲ.

ಉಪಯುಕ್ತ ಸಾಹಿತ್ಯ :

1. Kumar.H.L. (1978) : *Lobaur Management : Misconduts, Chargesheets and Enquiries.* Metropolitan, Book company Pvt. Ltd, New Delhi.
2. Tyagi B. P. (1976) : *Labour Economics and Social welfare.* Jai Prakash Nath & Co. Meerut.
3. Punekar S. D. (1952) : *Industrial Peace in India—The Problem and its solution*, Vora & Co Publications, Bombay.
4. David L Sills (Ed) (1968) : *International Encyclopaedia of Social Sciences.* The Mac Millan company and The Free Press, New York.

5. The National Commission on Labour (1969) : *Report of the National Commission on Labour*, Govt. of India, New Delhi.

6. Subramanian K. N. (1967) : *Labour - Management Relations in India*, Asia Publishing House, Bombay.

7. Standing orders of (eight) different factories.

ಎಂ. ಎಸ್. ಪ್ರಭಾಕರ್

"ಔತ್ತರೇಯ ದ್ರಾವಿಡ ಶೈಲಿಯ ಪೀಠಪ್ರಕರಣವು"

ಔತ್ತರೇಯ ದ್ರಾವಿಡ ದೇವಾಲಯಗಳ ತವರು ಎನಿಸಿರುವ ಕರ್ನಾಟಕದಲ್ಲಿ ಈ ಶೈಲಿಯನ್ನು ವಿವರಿಸುವ ವಾಸ್ತು ಗ್ರಂಥಗಳು ಈವರೆವಿಗೆ ದೊರೆಯದಿರುವುದು ಆಶ್ಚರ್ಯವೇ ಸರಿ. ದೊಡ್ಡಗದ್ದವಳ್ಳಿ ಶಾಸನದ ಉಲ್ಲೇಖವು ಔತ್ತರೇಯ ಸಂಪ್ರದಾಯದ ಗ್ರಂಥಗಳಿಂದ ಗುರುತಿಸಲ್ಪಟ್ಟಿದ್ದು ಈ ಪ್ರದೇಶದಲ್ಲಿ ಔತ್ತರೇಯ ಸಂಬಂಧೀ ಗ್ರಂಥಗಳು ಬಳಕೆಯಲ್ಲಿತ್ತು ಎನ್ನುವುದಕ್ಕೆ ಸಾಕ್ಷಿ ಎನಿಸಿದೆ.

ಶಾಸನಗಳು ವಾಸ್ತು ಹಾಗೂ ಶಿಲ್ಪಸಂಬಂಧೀ ಗ್ರಂಥಗಳನ್ನು ಗುರುತಿಸುವಾಗ ಕೆಲವೆಡೆ ಭರತಾಗಮ, ಭರತಶಾಸ್ತ್ರ ಎಂದು ಉಲ್ಲೇಖಿಸಿದ್ದು ವಿದ್ವಾಂಸರು ಇದು ಭರತನ ನಾಟ್ಯಶಾಸ್ತ್ರಕ್ಕೆ ಪರ್ಯಾಯವಾಗಿ ಬಳಸಿದ್ದೆಂದು ಅಭಿಪ್ರಾಯ ಪಡುತ್ತಾರೆ. ನಾಟ್ಯಶಾಸ್ತ್ರದ ಅಧ್ಯಾಯದಲ್ಲಿ ದೊರಕುವ ನಾಟ್ಯಗೃಹದ ಲಕ್ಷಣ ಹಾಗೂ ರಚನೆಯ ಅಂಶಗಳೇ ಬಹುಶಃ ನಮಗೆ ದೊರಕುವ ಅತ್ಯಂತ ಪ್ರಾಚೀನ ವಾಸ್ತು ವಿವರಣೆಯಾಗಿರಬಹುದು.

ಕ್ರಿ.ಶ. ಹನ್ನೊಂದನೆಯ ಶತಮಾನದ ದೇಗಾವೆಯ ಶಾಸನವು ಅಮಾತ್ಯ ಚಂದ್ರಮೌಳಿಯನ್ನು ಭರತಾಗಮ ಪಂಡಿತನೆಂದು ಹೆಸರಿಸುತ್ತದೆ. ಇದೇ ಶಾಸನವು ಪ್ರಸಾದ ಲಕ್ಷಣ ಮತ್ತು ಪ್ರತಿಮಾ ಲಕ್ಷಣವೆಂದು ಪ್ರತ್ಯೇಕವಾಗಿ ಗುರುತಿಸಿದ್ದು ಇದಕ್ಕೆ ಸಂಬಂಧಿಸಿದಂತೆ ಪ್ರತೇಕ ಶಾಸ್ತ್ರಗ್ರಂಥಗಳು ಇದ್ದವೆಂದು ಊಹಿಸಲು ಸಾಧ್ಯವಿದೆ. (ಕ್ರಿ.ಶ. 1099ರ ಬಳ್ಳಾರಿ ಜಿಲ್ಲೆಯ ಕುರುವತ್ತಿಯ ಶಾಸನವು ಗುಣಪಾರ್ಶ್ಯ (?)ನೆಂಬ ವಾಸ್ತು ಶಾಸ್ತ್ರಕಾರನನ್ನು ಹೆಸರಿಸಿದೆ. ಕುರುವತ್ತಿಯ ದೇವಾಲಯವು ಔತ್ತರೇಯ ದ್ರಾವಿಡ ಶೈಲಿಯೆನಿಸಿದ್ದು ಗುಣಪಾರ್ಶ್ಯ ಪ್ರಣೀತ ಶಾಸ್ತ್ರವೂ ಔತ್ತರೇಯ ಸಂಪ್ರದಾಯದ ಶಾಸ್ತ್ರವೆನಿಸಲು ಸಾಧ್ಯತೆಗಳಿವೆ. ಈ ರೀತಿ ಕ್ವಚಿತ್ತಾಗಿ ಕಾಣಿಸಿಕೊಂಡ ಶಾಸನೋಕ್ತಿಗಳಿಂದ ಅಧ್ಯಯನಕ್ಕೆ ಹೆಚ್ಚು ಸಹಾಯಕವಾಗಿಲ್ಲವೆಂದರೂ ಅವು ಪಳೆಯುಳಿಕೆಗಳಾಗಿ ನಿಂತಿವೆ ಎಂದು ಹೇಳಬಹುದು.

ಔತ್ತರೇಯ ದ್ರಾವಿಡ ಶೈಲಿಯ ಅಧ್ಯಯನವು ಸಮರಾಂಗಣ ಸೂತ್ರಧಾರ ಅಪರಾಜಿತ ಪೃಚ್ಛಾ ಹಾಗೂ ಇವನ್ನಾಧರಿಸಿ ರಚನೆಗೊಂಡ ಗ್ರಂಥಗಳಿಗೆ ಸೀಮಿತ

ಗೊಂಡಿದೆ. ಈ ಗ್ರಂಥಗಳಲ್ಲಿ ಕಾಣುವ ವಿವರಗಳಿಗೂ ಉಳಿದುಳಿದ ದೇವಾಲಯಗಳಿಗೂ ಸಾಕಷ್ಟು ಅಂತರವಿದ್ದಾಗ್ಯೂ ಈ ಗ್ರಂಥಗಳಿಂದಲೇ ಔತ್ತರೇಯ ದ್ರಾವಿಡ ಶೈಲಿಯನ್ನು ಗುರುತಿಸಬೇಕಾಗಿದೆ. ಈ ದೇವಾಲಯಗಳ ಭೂವಿರಚನೆ ದ್ರಾವಿಡವೆನಿಸಿದ್ದು ಕೆಲವೆಡೆ ಪೀಠಜಂಘಾದಿರಚನೆಯಲ್ಲಿ ನಾಗರಾದಿಶೈಲಿಗಳ ಲಕ್ಷಣಗಳನ್ನೂ ಮೈಗೂಡಿಸಿಕೊಂಡಿವೆ. ಆದ್ದರಿಂದ ಔತ್ತರೇಯ ನಾಗರಾದಿ ಶೈಲಿಗಳ ಲಕ್ಷಣಗಳನ್ನೂ ಗಮನಿಸಬೇಕು.

ದಾಕ್ಷಿಣಾತ್ಯ ದೇವಾಲಯಗಳನ್ನು ಷಡ್ವರ್ಗ ದೇವಾಲಯಗಳೆಂದು ಗುರುತಿಸುವ ವಾಡಿಕೆಯುಂಟು. ಊರ್ಧ್ವಕ್ರಮ ರೀತ್ಯಾ, ಅಧಿಷ್ಠಾನ, ಪಾದ, ಪ್ರಸ್ತರ, ಕಂಠ, ಶಿಖರ, ಸ್ತೂಪಿ ಇತ್ಯಾದಿ ಅಂಗಗಳು ಹಂತಹಂತವಾಗಿ ಗುರುತಿಸಲ್ಪಡುತ್ತವೆ. ಔತ್ತರೇಯ ದ್ರಾವಿಡ ದೇವಾಲಯದಲ್ಲಿಯೂ ಇಂತಹ ವಿವರಣೆಗೆ ಸಾಧ್ಯವಿದೆ. ಈ ದೇವಾಲಯಗಳ ಅಂಗಗಳನ್ನು ಪೀಠ, ಜಂಘ, ಛಾದ್ಯ, ಭೂಮಿ, ವೇದಿ, ಘಂಟಾ, ಕಳಶ ಎಂದು ಗುರುತಿಸಬಹುದು. ಪೀಠದ ಕೆಳಗೆ ಉಪಪೀಠ ರಚನೆಯಂತೆ ಸ್ತರಗಳಿವೆ. ದಾಕ್ಷಿಣಾತ್ಯ ದೇವಾಲಯಗಳಲ್ಲಿ ಅಧಿಷ್ಠಾನ ರಚನೆಯಲ್ಲಿ ಕಾಣುವ ಉಪಾನ, ಜಗತಿ, ಕುಮುದ, ಕಂಠ, ಪಟ್ಟಿಕಾ ಇತ್ಯಾದಿ ಸ್ತರಗಳಂತೆ ಔತ್ತರೇಯ ದೇವಾಲಯದಲ್ಲಿ ಜಾಡ್ಯಕುಂಭ, ಕರ್ಣಿಕಾ, ಶಿರ್ಷ ಪತ್ರಿಕಾ, ಕಂಚಕ ಇತ್ಯಾದಿ ಸ್ತರಗಳನ್ನು ಗಮನಿಸಬಹುದು. ಪ್ರಸ್ತುತ ಲೇಖನದಲ್ಲಿ ಔತ್ತರೇಯ ದ್ರಾವಿಡ ದೇವಾಲಯಗಳ ಪೀಠ ಭಾಗಗಳನ್ನು ವಿವರಿಸಲಾಗಿದೆ.

ಚಾಲುಕ್ಯ ಹಾಗೂ ಹೊಯ್ಸಳರ ಕಾಲದ ದೇವಾಲಯಗಳಲ್ಲಿ ವಿವಿಧ ರೀತಿಯ ಪೀಠರಚನೆಯನ್ನು ಕಾಣುತ್ತೇವೆ. ಅಪರಾಜಿತ ಪೃಚ್ಛಾ ಹಾಗೂ ಸಮರಾಂಗಣ ಸೂತ್ರಧಾರ ಗ್ರಂಥಗಳಲ್ಲಿ ದ್ರಾವಿಡ ಪೀಠವನ್ನು ವಿವರಿಸುವ ಪ್ರತ್ಯೇಕ ಅಧ್ಯಾಯಗಳಿವೆ. ಇವೆರಡರ ವಿವರಗಳು ಹೆಚ್ಚು ಕಡಿಮೆ ಒಂದೇ ಎನಿಸಿವೆ. ಈ ಪೀಠ ರಚನಾ ಕ್ರಮವನ್ನು ಲಭ್ಯವಿರುವ ವಾಸ್ತುರಚನೆಗಳಲ್ಲಿ ಕಾಣುವುದು ಕಷ್ಟ. ಹೊಯಳ್ಸರ ಕಾಲದಲ್ಲಿ ಜಗತಿಯುಳ್ಳ ಪೀಠರಚನೆಗಳು ದೇವಾಲಯಗಳ ಸೌಂದರ್ಯವನ್ನು ಹೆಚ್ಚಿಸಿವೆ. ನಾಗರಾದಿ ಶೈಲಿಗಳ ವಿವರಣೆಯಲ್ಲಿ ಸಾಧಾರಣ ಪೀಠರಚನೆಯಿದೆ. ಈ ಸಾಧಾರಣ ರಚನೆಯೊಂದಿಗೆ ಕಂಟಕ ರಚನೆಯೂ ಸೇರಿದ್ದು ಈ ರೀತಿಯ ರಚನೆಯನ್ನು ಚಾಲುಕ್ಯ ಹಾಗೂ ಹೊಯ್ಸಳರ ಕಾಲದ ಔತ್ತರೇಯ ದ್ರಾವಿಡ ದೇವಾಲಯಗಳಲ್ಲಿ ಗಮನಾರ್ಹವಾಗಿ ಕಾಣುತ್ತೇವೆ.

ಕಂಟಕವುಳ್ಳ ಪೀಠರಚನೆಯನ್ನು, ಜಗತಿಯುಳ್ಳ ಪೀಠರಚನೆಯನ್ನು ಪ್ರತ್ಯೇಕವಾಗಿ ವಿವರಿಸಲಾಗಿದೆ.

ಕಂಟಕವುಳ್ಳ ಪೀಠರಚನೆಯನ್ನು ಚಾಲುಕ್ಯರ ಕಾಲದಿಂದಲೂ ಕಾಣಬಹುದು ಕುಕ್ಕನೂರಿನ ಕಲ್ಲೇಶ್ವರ ಬಾದಾಮಿಯ ಯಲ್ಲಮ್ಮನ ಗುಡಿ, ಬಳ್ಳಿಗಾವೆಯ ಕೇದಾರೇಶ್ವರ, ಹಾವೇರಿಯ ಸಿದ್ಧೇಶ್ವರ, ಚೌಡದಾನಪುರದ ಮುಕ್ತೇಶ್ವರ ಇವು

ಕಂಟಕಗಳನ್ನೊಳಗೊಂಡ ಉದಾಹರಣೆಗಳು. ಕಂಟಕಗಳ ಬಗ್ಗೆ ತಿಳಿಯುವ ಮುನ್ನ ಔತ್ತರೇಯ ಸಂಪ್ರದಾಯದ ಸಾಧಾರಣ ಪೀಠವನ್ನು ಗುರುತಿಸಬೇಕು.

ಜಾಡ್ಯಕುಂಭಃ ಕರ್ಣಕಶ್ಚ ಊರ್ಧ್ವೇ ವೈ ಶೀರ್ಷ ಪಟ್ಟಿಕಾ
ಶಿರಪಾಲೀಂ ವಿನಾತ್ವೇವಂ ಕಣಪೀಠಾ ತುಕಾರಯೇತ್

ಅಪರಾಜಿತ ಪೃಚ್ಛಾ ಗ್ರಂಥದ ಪ್ರಕಾರ ಅಲ್ಪದ್ರವ್ಯದೊಡನೆ ರಚಿಸಲ್ಪಡುವ ದೇವಾಲಯಗಳಲ್ಲಿ ಜಾಡ್ಯಕುಂಭ, ಕರ್ಣಿಕಾ ಹಾಗೂ ಶೀರ್ಷಪಟ್ಟಿಕೆಗಳು ಸಾಧಾರಣ ಪೀಠರಚನೆಯ ಅಂಗಗಳೆನಿಸುತ್ತವೆ.

ಶೀರ್ಷಪಟ್ಟಿಕೆಯು ಕಪೋತ ಸ್ತರದಿಂದ ರಚಿಸಲ್ಪಟ್ಟಿದೆ. ಈ ಸ್ತರಗಳಲ್ಲದೆ ದಾಕ್ಷಿಣಾತ್ಯ ದೇವಾಲಯದಲ್ಲಿ ಕಂಡುಬರುವ ಉಪಪೀಠದಂತೆ ಪೀಠದೊಳಗೆ ಖರಶಿಲಾ ಹಾಗೂ ಭಿಟ್‌ಸ್ತರಗಳಿವೆ.

ಪ್ರಸಾದೆಚ್ಛಂದ ಮಸ್ಯೋರ್ಧ್ವೇ ದೃಢಖರಶಿಲೋತ್ತಮಾ
....
ಶಿಲೋಪರಿ ಭವೇದ್ ಬಿಟ್ಟಮೇಕ ಹಸ್ತೇಯುಗಾಂಗುಲಂ

ಈ ಶಾಸ್ತ್ರೋಕ್ತಿಗಳ ಪ್ರಕಾರ ಪ್ರಸಾದಚ್ಛಂದವು ಖರಶಿಲಾ, ಭಿಟ್ ಸ್ತರಗಳಿಂದ ಆರಂಭಗೊಳ್ಳುತ್ತದೆ. ಖರಶಿಲಾ ಭಾಗವು ನೆಲದೊಳಗೆ ಹುದುಗಿದ್ದು ಭಿಟ್‌ಸ್ತರದ ಭಾಗವು ಭಾಗಶಃ ಕಾಣುತ್ತದೆ. ಭಿಟ್‌ಸ್ತರದನಂತರ ಪೀಠರಚನೆಯಿದ್ದು, ಜಾಡ್ಯ ಕುಂಭ, ಕರ್ಣಿಕಾ, ಕಪೋತಸ್ತರಗಳನ್ನು ಕಾಣುತ್ತೇವೆ. ಜಾಡ್ಯಕುಂಭ ಸ್ತರವನ್ನು ಎರಡು ಭಾಗಗಳಾಗಿ ಖುರಕ ಹಾಗೂ ಪದ್ಮ ಪತ್ರಿಕಾ ಎಂದು ಗುರುತಿಸಲು ಸಾಧ್ಯವಿದೆ. ಕರ್ಣಿಕಾ ಹಾಗೂ ಕಪೋತಗಳ ನಡುವೆ ಪಟ್ಟಿಕೆಯ ರಚನೆಯೂ ಇದ್ದು ಅಂತರ ಪತ್ರವೆನಿಸುತ್ತದೆ. ಕಪೋತಾನಂತರ ಕಂಟಕಸ್ತರವನ್ನು ಗುರುತಿಸಬಹುದು.

ಅಪರಾಜಿತ ಪೃಚ್ಛಾ ಗ್ರಂಥದ 228ನೇ ಅಧ್ಯಾಯವು ಔತ್ತರೇಯ ಶೈಲಿಗಳಿಗೆ ಪ್ರತ್ಯೇಕ ಕಂಟಕರಚನೆಯನ್ನು ಸೂಚಿಸಿದೆ. ಕಂಟಕಸ್ವರೂಪವನ್ನು ಪ್ರತ್ಯೇಕವಾಗಿ ಸೂಚಿಸಿದೆ. ಈ ರಚನೆಯನ್ನು ಇತರ ಗ್ರಂಥಗಳಲ್ಲಿ ವಿವರಿಸಿಲ್ಲ. ದ್ರಾವಿಡ ಶೈಲಿಗೆ ಸಂಬಂಧಿಸಿದಂತೆ "ಬದರೀಕೇಶಕೀನಾಂಚ ದ್ರಾವಿಡಃ ಕಂಟಕೈಃ ಸಮಃ" ಎಂದು ಸೂಚಿಸಿದ್ದು ದ್ರಾವಿಡ ಸಂಬಂಧೀ ದೇವಾಲಯಗಳಿಗೆ ಬದರೀಕಂಟಕವೆಂದು ತಿಳಿಯಬಹುದು. ಇದೇ ಅಧ್ಯಾಯದಲ್ಲಿ ಪುನಃ ಮುಂದುವರೆದು "ಶುಕಚಂಚುಸಮಾಕಾರಂ ಬದರೀಕಂಟಕಾಕೃತಿಃ" ಎಂದು ವಿವರಣೆ ನೀಡಿದ್ದು ಗಿಣಿಯ ಕೊಕ್ಕಿನಂತಿರುವ ಕಂಟಕ ಸ್ತರವನ್ನು ಪೀಠದ ಸ್ತರಗಳಲ್ಲಿ ಕಪೋತದನಂತರ ಗುರುತಿಸಬಹುದು.

ಕಂಟಕಸ್ತರವು ಪೀಠದಲ್ಲಿ ಮಾತ್ರವಲ್ಲದೆ ಛಾದ್ಯದನಂತರ ಪ್ರತಿಭೂಮಿಯ ರಚನೆಯಲ್ಲಿಯೂ ಕಾಣಬಹುದು.

ಕಂಟಕವುಳ್ಳ ಪೀಠರಚನೆಯನ್ನು ಹೊಯ್ಸಳರ ಕಾಲದ ದೇವಾಲಯಗಳಲ್ಲಿಯೂ

ಕಾಣಬಹುದು. ಅರಸೀಕೆರೆಯ ಶಿವಾಲಯ, ಕೋರಮಂಗಲದ ಬುಂಚೇಶ್ವರ, ಬೆಳವಾಡಿಯ ವೀರನಾರಾಯಣ ಇವು ಕೆಲವು ಉದಾಹರಣೆಗಳು. ಕಪೋತ ಹಾಗೂ ಕಂಟಕ ಸ್ತರಗಳಲ್ಲಿ ಉಬ್ಬುಕೆತ್ತನೆಗಳನ್ನು ಅಳವಡಿಸಿದ್ದು ಇವುಗಳಲ್ಲಿ ಅಲಂಕರಣ ಗಳನ್ನು ಹೆಚ್ಚಾಗಿ ಕಾಣಬಹುದು ಈ ರೀತಿ ಮಕರಾದಿ ವೇಷ ಅಲಂಕರಣಗೊಂಡ ಸ್ತರಗಳನ್ನು ಭೂಮಿರಚನೆಯಲ್ಲಿಯೂ ಕಾಣಬಹುದು. ಅಪರಾಜಿತ ಪೃಚ್ಛಾ ಗ್ರಂಥದ ಪ್ರಕಾರ ಔತ್ತರೇಯ ದ್ರಾವಿಡ ವಿವರಣೆಯಲ್ಲಿ ಈ ರಚನೆಯು ''ಮೇಷ, ಮಕರ ಕೂಟಪೈಃ ಕಂಟಕೈರಾವೃತಾಃ ಶುಭಾಃ'' ಎಂದು ಗುರುತಿಸಲ್ಪಟ್ಟಿದೆ.

ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಜಗತಿಯುಳ್ಳ ಪೀಠರಚನೆಯನ್ನೂ ಕಾಣುತ್ತೇವೆ ಬೇಲೂರಿನ ಚನ್ನಕೇಶವ, ಹಳೇಬೀಡಿನ ಹೊಯ್ಸಳೇಶ್ವರ ಜಾವಗಲ್ಲಿನ ಲಕ್ಷ್ಮೀನರಸಿಂಹ, ನುಗ್ಗೇಹಳ್ಳಿಯ ಕೇಶವ, ಸದಾಶಿವ, ಹಾರ್ನಹಳ್ಳಿಯ ಈಶ್ವರ, ಕೇಶವ, ಅರಳಗುಪ್ಪೆಯ ಕೇಶವ, ನಾಗಮಂಗಲದ ಕೇಶವ, ಇವು ಜಗತಿಯುಳ್ಳ ದೇವಾಲಯಗಳಿಗೆ ಕೆಲವು ಉದಾಹರಣೆಗಳು. ವಿಶಾಲವಾದ ಜಗತಿಯ ನಂತರ ಮಧ್ಯದಲ್ಲಿ ದೇವಾಲಯಗಳು ರೂಪುಗೊಂಡಿವೆ. ಇದರಿಂದಾಗಿ ದೇವಾಲಯಗಳ ಸೌಂದರ್ಯ ಗಮನಾರ್ಹವಾಗಿ ವೃದ್ಧಿಸಿದೆ. ಗಜ, ಅಶ್ವ, ನರಯಾಳಿಗಳುಳ್ಳ ಸ್ತರಗಳ ರಚನೆ ಜಗತಿಯುಳ್ಳ ದೇವಾಲಯಗಳಲ್ಲಿಯೇ ಹೆಚ್ಚು. ಔತ್ತರೇಯ ನಾಗರ ದೇವಾಲಯಗಳಲ್ಲಿ ಜಾಡ್ಯಕುಂಭ, ಕರ್ಣಿಕಾ, ಶೀರ್ಷಪತ್ರಿಕಾ ಗಜ, ಅಶ್ವ, ನರಗಳ ಸ್ತರಗಳನ್ನು ಕಾಣಬಹುದು. ಜಗತಿಯುಳ್ಳ ಔತ್ತರೇಯ ದ್ರಾವಿಡ ಶೈಲಿಯಲ್ಲಿ ಜಗತಿಯೂ ಜಾಡ್ಯಕುಂಭ, ಕರ್ಣಿಕಾ, ಪಟ್ಟಿಕೆ ಮುಂತಾದ ಸ್ತರಗಳಲ್ಲಿ ರಚಿಸಿದ್ದು ದೇವಾಲಯದ ಪೀಠವು ಪಟ್ಟಿಕೆಗಳ ರಚನೆಯಿಂದ ಕೂಡಿರುವುದುಂಟು. ಜಗತಿಯ ರಚನೆಯನ್ನು ವಾಸ್ತುಶಾಸ್ತ್ರಗಳ ಪ್ರಕಾರ ಕೆಳಕಂಡಂತೆ ಗುರುತಿಸಬಹುದು.

ಪ್ರಾಸಾದೋ ಲಿಂಗ ಮಿತ್ಯುಕ್ತೋಜಗತೀ ಪೀಠ ಮೇವಚ

ಪ್ರಸಾದ ರಚನೆಯಲ್ಲಿ ಜಗತಿಯ ಸ್ಥಾನವು ಲಿಂಗಕ್ಕೆ ಪೀಠವಿದ್ದಂತೆ ಇದರಿಂದ ಪ್ರಸಾದ ಗಳಿಗೆ ಗಮನಾರ್ಹ ಶೋಭೆ ಇದೆ ಎಂದೇ ಗಮನಿಸುತ್ತಾರೆ,

ಯಥಾ ಸಿಂಹಾಸನೇ ರಾಜಾ ಶೋಭತೆ ಮಣಿದೀಪ್ತಿಭಿಃ
ತಥಾ ಜಗತ್ಯಾಂ ಪ್ರಾಸಾದಃ ಪೀಠಕರ್ಮೋ ಪಶೋಭಿತಃ

ದಾಕ್ಷಿಣಾತ್ಯ ಸಂಪ್ರದಾಯದ ದೇವಾಲಯಗಳ ಜಗತೀ ರಚನೆಗೂ ಔತ್ತರೇಯ ದೇವಾಲಯಗಳ ಜಗತೀ ರಚನೆಗೂ ಅಜಗಜಾಂತರ ವ್ಯತ್ಯಾಸವಿದೆ.

ಭಾಗ ಸ್ರೇಷಾಂತು ಜಗತೀಭಾಗ ಸ್ರೇಷಾಂ ತಥಾ ಕಟೀ

ವಿಷ್ಣು ಧರ್ಮೋತ್ತರ ಪುರಾಣದ ಪ್ರಕಾರ ದಾಕ್ಷಿಣಾತ್ಯ ದೇವಾಲಯಗಳಲ್ಲಿ ಜಗತಿಯು ಕಟಿಸ್ಥಾನದಲ್ಲಿದೆ. ಜಗತಿಯು ಅಧಿಷ್ಠಾನದ ಒಂದು ಅಂಗವೆನಿಸುತ್ತದೆ. ಉಪಾನ

ಸ್ತರದನಂತರ ಗುರುತಿಸಲ್ಪಡುವ ಸ್ತರವನ್ನು ಜಗತಿಯೆಂದು ಗುರುತಿಸುತ್ತಾರೆ. ಔತ್ತರೇಯ ದೇವಾಲಯಗಳಲ್ಲಿ ಪೀಠರಚನೆಯು ಕೆಳಗೆ ಉಪಪೀಠದಂತಹ ರಚನೆ ವಿಶಾಲಗೊಂಡು ಜಗತಿ ರಚನೆಗೆ ಕಾರಣವಾಯಿತು ಎಂದು ಹೇಳಲು ಸಾಧ್ಯವಿದೆ.

ಜಗತಿಯು ನಕ್ಷತ್ರಾಕಾರ ದೇವಾಲಯಗಳಿಗೆ ಮಾತ್ರ ರಚಿಸಬೇಕೆಂಬ ನಿಯಮ ವಾಸ್ತು ಶಾಸ್ತ್ರಗಳಲ್ಲಿಲ್ಲ.

ಚತುರಾಶ್ರಾ ತಥಾ ಯತಾ ವೃತ್ತಾಯತಾ ತಥಾ
ಅಷ್ಟಾಶ್ರಾ ಚ ತಥಾಕಾರ್ಯ ಪ್ರಾಸಾದಸ್ಯಾನುರೂಪತಃ

ಚತುರಶ್ರ, ವೃತ್ತ, ವೃತ್ತಾಯತ, ಆಯತ, ಅಷ್ಟಾಶ್ರಗಳೆನಿಸಿದ ಜಗತಿಗಳನ್ನೂ ಪ್ರಸಾದಗಳಿಗನುಸಾರವಾಗಿ ರಚಿಸಬಹುದು. ಜಗತಿ ಮತ್ತು ಪ್ರಸಾದಗಳ ಆಕಾರ ಒಂದೇ ರೀತಿಯಲ್ಲಿರಬೇಕೆಂಬುದನ್ನು ಗಮನಿಸಬಹುದು. ಇದರಿಂದ ಜಗತಿಯು ನಕ್ಷತ್ರಾಕಾರವಿದ್ದಲ್ಲಿ ಪ್ರಸಾದ ರಚನೆಯೂ ನಕ್ಷತ್ರಾಕಾರವೆನಿಸುವುದು.

ಜಗತೀ ತಾದೃಶೀ ಕಾರ್ಯಾ ಪ್ರಾಸಾದೋ ಯಾದೃಶೋಭವೇತ್
ಭಿನ್ನಚ್ಛಂದಾ ನ ಕರ್ತವ್ಯಾ ಪ್ರಾಸಾದಾಸನ ಸಂಸ್ಥಿತಾ

ಜಗತಿಯ ರಚನೆಯನ್ನು ಪ್ರದಕ್ಷಿಣಾ ಪಥಕ್ಕೆ ಬದಲಾಗಿ ನಿರಂಧಾರ ದೇವಾಲಯಗಳಲ್ಲಿ ಕಾಣಲು ಸಾಧ್ಯವಿದೆ. ಶಾಸ್ತ್ರಗಳು ಮೂರರವರೆಗೆ ಪ್ರದಕ್ಷಿಣ ಪಥವನ್ನು ರಚಿಸಬೇಕೆಂದು ಸೂಚಿಸಿದ್ದರೂ ಉದಾಹರಣೆಗಳಿಲ್ಲದೆ ಈ ವಿವರಗಳನ್ನು ಅರ್ಥೈಸುವುದು ಕ್ಲಿಷ್ಟವೆನಿಸಿದೆ.

ಕನಿಷ್ಠೋ ಭ್ರಮಣೇಚೈಕ ಮಧ್ಯಮೇ ಭ್ರಮಣೇದ್ವಯಂ
ಜ್ಯೇಷ್ಠೇ ತಿಸ್ರೋಭ್ರಮಣ್ಯಶ್ಚ ಸಾಂಗೋಪಾಂಗಿಕ ಸಂಖ್ಯಯಾ

ಜಗತಿಯ ರಚನೆಯೂ ಪೀಠ ರಚನೆಯಂತೆ ಹಲವಾರು ಸ್ತರಗಳನ್ನು ಹೊಂದಿದೆ. ಅಪರಾಜಿತ ಪೃಚ್ಛಾ ಗ್ರಂಥದ ಪ್ರಕಾರ ಜಗತಿಯ ಎತ್ತರವನ್ನು ಇಪ್ಪತ್ತೆಂಟು ಭಾಗಗಳಾಗಿ ಭಾಗಿಸಿ, ಜಾಡ್ಯಕುಂಭ, ಕರ್ಣಿಕಾ, ಶೀರ್ಷಪತ್ರಿಕಾ ಕ್ಷುರಕ, ಕುಂಭಕ, ಕಲಶ, ಅಂತರಪತ್ರ, ಕಪೋತ, ಪುಷ್ಪಕ ಇತ್ಯಾದಿ ಸ್ತರಗಳನ್ನು ರಚಿಸಬೇಕು.

ತಥೋಚ್ಛ್ರಯಂ ಭಜೇತ್ ಪ್ರಜ್ಞಾ ಅಷ್ಟಾವಿಂಶತಿಪದೈರಥಃ
ಜಾಡ್ಯಕುಂಭಂ ಚ ತ್ರಿಪಾದಂ ಕರ್ಣಕಂ ದ್ವಿಪದಂ ತಥಾ
ಪದ್ಮಪತ್ರಸಮಾಯುಕ್ತಾ ತ್ರಿಪದಾ ಶೀರ್ಷ ಪತ್ರಿಕಾ
ಕ್ಷುರಕಂ ದ್ವಿಪದಂ ಪ್ರೋಕ್ತಂ ಕುಂಭಕಂ ಸಪ್ತಭಿಃಪದೈಃ
ತ್ರಿಪದಃ ಕಲಶಃ ಪ್ರೋಕ್ತಃ ಪದಂಚಾಂತರ ಪತ್ರಿಕಂ
ಕಪೋತಾಲೀ ಚ ತ್ರಿಪದಾ ಪುಷ್ಪಕಂ ಯುಗಸಂಖ್ಯಯಾ

ಈ ಸ್ತರಗಳುಳ್ಳ ಜಗತಿಯ ರಚನೆಯು ಅಲಭ್ಯ. ನಾಗಮಂಗಲದ ಕೇಶವ

ದೇವಾಲಯದ ಜಗತಿಯು ಜಾಡ್ಯಕುಂಭ, ಅಂತರಪತ್ರ ಪಟ್ಟಿಕೆ, ಕರ್ಣಿಕಾಗಳನ್ನೊಳಗೊಂಡಂತೆ ರಚನೆಯಾಗಿದೆ. ಇದಲ್ಲದೆ ತದನಂತರದ ಪೀಠಭಾಗವು ಜಾಡ್ಯಕುಂಭ, ಕರ್ಣಿಕಾ, ಅಂತರಪತ್ರ ಪುನಃ ಜಾಡ್ಯಕುಂಭ, ಕರ್ಣಿಕಾ, ಕಪೋತ ರಚನೆಯನ್ನೊಳಗೊಂಡಿರುವುದು ವೈಶಿಷ್ಟ್ಯವೆನಿಸಿದೆ.

ಹಾರನಹಳ್ಳಿಯ ಕೇಶವ ಹಾಗೂ ಈಶ್ವರ ದೇವಾಲಯಗಳಲ್ಲಿಯೂ ಜಾಡ್ಯಕುಂಭ, ಪಟ್ಟಿಕೆ, ಕರ್ಣಿಕಾ, ಪಟ್ಟಿಕಾ, ವೇದಿ ಮುಂತಾದ ಸ್ತರಗಳನ್ನು ಅಂತರಪತ್ರದೊಂದಿಗೆ ಸ್ಫುಟವಾಗಿ ಗುರುತಿಸಬಹುದು. ನುಗ್ಗೇಹಳ್ಳಿ, ಜಾವಗಲ್ಲು, ಅರಳಗುಪ್ಪೆ ಮುಂತಾದೆಡೆಯಲ್ಲಿ ಜಗತಿಯು 3–3½ ಅಡಿಗಳಷ್ಟು ಎತ್ತರವಾಗಿದ್ದು ಬೇಲೂರು, ಹಳೇಬೀಡು, ನಾಗಮಂಗಲ ಮುಂತಾದೆಡೆಯಲ್ಲಿ 4½–5 ಅಡಿಗಳಷ್ಟು ಎತ್ತರವಾಗಿವೆ. ಕೆಲವು ರಚನೆಯಲ್ಲಿ ಪಟ್ಟಿಕೆಗಳು ಹಾಗೂ ಕಂಠಭಾಗಗಳು ಅಗಲವಾಗಿದ್ದು ಉಬ್ಬುಶಿಲ್ಪ ಹಾಗೂ ಅಲಂಕರಣೆಗೆ ಸ್ಥಳವನ್ನೊದಗಿಸಿವೆ. ದೇವಾಲಯಗಳ ಮುಂಭಾಗದಲ್ಲಿ ಸೋಪಾನ ರಚನೆಯಿದೆ. ಸೋಪಾನಗಳ ಇಕ್ಕೆಲಗಳಲ್ಲಿ ಪುಟ್ಟ ಪ್ರಸಾದಾ ಕೃತಿಗಳನ್ನು ಜೋಡಿಸಲಾಗಿದೆ. ಈ ಆಕೃತಿಗಳು ಏಕಭೂಮಿ ಹಾಗೂ ದ್ವಿಭೂಮಿಗಳ ರಚನೆಗೆ ಮಾದರಿಯಂತಿವೆ. ಜಗತಿಯ ಮೂಲೆಗಳಲ್ಲಿ ದಿಕ್ಪಾಲಕರ ರಚನೆ, ಗಜ ಅಶ್ವಾರೋಹಿಗಳ ರಚನೆ ಶಾಸ್ತ್ರಸಮ್ಮತವೆನಿಸಿದೆ. (ಮದಗಜಗಳು ದೇವಾಲಯವನ್ನು ಹೊತ್ತಂತೆ ಕಾಣುವುದು ಎಲ್ಲೋರಾ ದೇವಾಲಯವನ್ನು ನೆನಪಿಸುತ್ತದೆ.)

ಕರ್ಣೇಷು ಚೈವದಿಕ್ಪಾಲಾಃ ಪ್ರಾಚ್ಯದಿಪು ಪ್ರದಕ್ಷಿಣಾಃ
ಜಗತ್ಯಾಃ ಪಶ್ಚಿಮೇ ಭದ್ರೇ ರಥಿಕೈಕತ್ರಿಭಿಸ್ತಥಾ
ತಥಾಪಂಚಕ ಸಪ್ತಕಾಃ ಕರ್ತವ್ಯಾವಾಮ ದಕ್ಷಿಣೇ

ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ಜಗತಿಯ ರಚನೆಯಿಲ್ಲ. ಆದರೆ ಜಗತಿಯ ಮೂಲವನ್ನು ಡಂಬಳದ ದೊಡ್ಡಬಸಪ್ಪ ಗುಡಿಯಲ್ಲಿ ಕಾಣುವ ಸಾಧ್ಯತೆಗಳಿವೆ. ಈ ದೇವಾಲಯದಲ್ಲಿ ಜಾಡ್ಯಕುಂಭದ ಕೆಳಭಾಗವು ವಿಶಾಲವಾಗಿಲ್ಲದೆ ಎತ್ತರವಾಗಿದ್ದು ಪೀಠರಚನೆಯ ಅಂಗವೆನಿಸಿರುವುದನ್ನು ಕಾಣಬಹುದು. ಈ ಭಾಗವೇ ಹೊಯ್ಸಳರ ಕಾಲದಲ್ಲ ಪೀಠದಿಂದ ಬೇರ್ಪಟ್ಟು ವಿಸ್ತಾರಗೊಂಡು ಪ್ರದಕ್ಷಿಣೆಗೆ ಅವಕಾಶ ಕಲ್ಪಿಸಿತು.

ಈವರೆವಿಗೆ ಗುರುತಿಸಿದ ಪೀಠಗಳಲ್ಲದೆ, ಅಪರಾಜಿತಪೃಚ್ಛಾ ಹಾಗೂ ಸಮರಾಂಗಣ ಸೂತ್ರಧಾರ ಗ್ರಂಥಗಳಲ್ಲಿ ಕ್ರಮವಾಗಿ "ದ್ರಾವಿಡ ಪ್ರಸಾದ ಪಂಚಪೀಠ ಲಕ್ಷಣ" "ಪೀಠ ಪಂಚಕಲಕ್ಷಣ"ವೆಂದು ಗುರುತಿಸಲ್ಪಟ್ಟಿದೆ. ಈ ವಿವರಗಳು ಹೆಚ್ಚು ಕಡಿಮೆ ಒಂದೇ ಎನಿಸಿದ್ದು ಪಾದಬಂಧನ, ಶ್ರೀಬಂಧನ ವೇದಿಬಂಧ ಪ್ರತಿಕ್ರಮ ಹಾಗೂ ಖುರಕಬಂಧ ಎಂಬ ಪ್ರಭೇದಗಳು ಗುರುತಿಸಲ್ಪಟ್ಟಿದೆ.

ಉತ್ಸೇಧಂ ಭಾಗವಿಂಶತ್ಯಾ ವಿಭಜೇತ್ ಪಾದಬಂಧನೇ
ಶ್ರೀ ಬುಧೇ ಸಪ್ತವಿಂಶತ್ಯಾ ವಿಂಶತ್ಯಾ ವೇಧಿಬಂಧನೇ
ಪ್ರತಿಕ್ರಮೋ ನವದಶ ವಿಂಶತ್ಯಾ ಖುರಕೇ ತಥಾ

ಈ ಪೀಠಗಳು ಕ್ರಮವಾಗಿ 20, 27, 20, 19 ಮತ್ತು 20 ಭಾಗಗಳ ರಚನೆಗಳಾಗಿದ್ದು ಜುರಕ ಅಥವಾ ನೀರಾವರ್ತಿ ಮುಂತಾದ ಸ್ತರದಿಂದ ಆರಂಭಗೊಳ್ಳುತ್ತವೆ. ಜುರಕ, ಪದ್ಮಪತ್ರಿಕಾ, ಕರ್ಣಿಕಾ, ಕಪೋತ ಇತ್ಯಾದಿ ಆರಂಭದ ಸ್ತರಗಳಿದ್ದು ಪದ್ಮಪತ್ರಿಕಾ ಮತ್ತು ಕಪೋತಾದಿ ಸ್ತರಗಳಿಂದ ಅಂತ್ಯಗೊಳ್ಳುತ್ತದೆ. ಮಧ್ಯದಲ್ಲಿ ಮೇಷ, ಮಕರ, ವಕ್ರಪಟ್ಟಿ ಮುಂತಾದ ಸ್ತರಗಳಿದ್ದು ಇವನ್ನು ನಿಶ್ಚಿತವಾಗಿ ಗುರುತಿಸಲಾಗಿಲ್ಲ. ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯದ ದಕ್ಷಿಣ ದಿಕ್ಕಿನಲ್ಲಿರುವ ಪ್ರವೇಶ ದ್ವಾರದಲ್ಲಿ ಹೆಚ್ಚು ಔನ್ನತ್ಯವುಳ್ಳ ಪೀಠರಚನೆಯಿದೆ ಇಂತಹ ಕೆಲವಾರು ಪೀಠಗಳ ಅಧ್ಯಯನದಿಂದ ದ್ರಾವಿಡ ಪೀಠವನ್ನು ಕರಾರುವಾಕ್ಕಾಗಿ ಗುರುತಿಸಲು ಸಾಧ್ಯವಿದೆ ಗಳಗನಾಥ ದೇವಾಲಯದ ಪೀಠರಚನೆಯು ಅತಿ ಸಾಧಾರಣವೆನಿಸಿದ್ದು ಜಗತಿಯಂತಿದೆ. ತದನಂತರದ ಜಂಘಾಭಾಗವು ಮೆಟ್ಟಲು ಮೆಟ್ಟಲಾಗಿ ಕಿರಿದಾಗುತ್ತಾ ಕಪೋತ ರಚನೆಯಂತೆ ಮೇಲಕ್ಕೇರುತ್ತದೆ ಈ ರಚನೆಯು ಈ ದೇವಾಲಯವೊಂದರಲ್ಲಿಯೇ ಕಂಡುಬಂದಿದೆ. ಇದು ಚತುರಶ್ರಾಕಾರ ರಚನೆಯೇ ಹೊರತು ನಕ್ಷತ್ರಾಕಾರವೆನಿಸಿಲ್ಲ.

ಲಕ್ಕುಂಡಿಯ ಕಾಶಿ ವಿಶ್ವೇಶ್ವರ ಹಾಗೂ ನಾನೇಶ್ವರ ದೇವಾಲಯಗಳನ್ನು ಗಮನಿಸಿದಾಗ ಎರಡು ಹಂತಗಳ ಪೀಠರಚನೆಯನ್ನು ಕಾಣುತ್ತೇವೆ. ಈ ದೇವಾಲಯಗಳನ್ನು ಔತ್ತರೇಯ ದ್ರಾವಿಡ ಶೈಲಿಯಲ್ಲಿ ವಿಶ್ಲೇಷಿಸಲು ಸಾಧ್ಯವಿಲ್ಲ. ಆದರೆ ಈ ದೇವಾಲಯದ ಅಂಗಗಳು ಬೆಳವಣಿಗೆಯ ಹಂತಗಳನ್ನು ಗುರುತಿಸುತ್ತದೆ. ಭೂಮಿ ರಚನೆಯು ದಾಕ್ಷಿಣಾತ್ಯ ಸಂಪ್ರದಾಯ ಶೈಲಿಯನ್ನು ಮೈಗೂಡಿಸಿಕೊಂಡಿದೆ. ಶಿಖರದ ಮೇಲ್ಭಾಗದ ರಚನೆಯೂ ಸ್ಥಿರಗೊಳ್ಳದೆ ಕಾಶಿವಿಶ್ವೇಶ್ವರ ದೇವಾಲಯದಲ್ಲಿ ಅದೃಶ್ಯವಾಗಿದೆ. ಬಹುಶಃ ಇಂತಹ ಸ್ಥಿತಿಯೇ ಲಕ್ಷ್ಮೇಶ್ವರದ ಸೋಮನಾಥ, ಹಾನುಗಲ್ಲಿನ ತಾರಕೇಶ್ವರ, ಡಂಬಳದ ದೊಡ್ಡಬಸಪ್ಪ ದೇವಾಲಯಗಳಿಗೆ ಅನ್ವಯಿಸಲು ಸಾಧ್ಯವಿದೆ.

ನಾಗಮಂಗಲದ ಕೇಶವ ದೇವಾಲಯದ ಪೀಠರಚನೆಯಲ್ಲಿ ಜಾಡ್ಯಕುಂಭ, ಕರ್ಣಿಕಾವಿಸ್ತರಗಳ ಎರಡು ಹಂತದ ರಚನೆಯನ್ನು ಗುರುತಿಸಿದೆವಷ್ಟೆ. ಇದೇ ರೀತಿಯ ಮೂರು ಹಂತದ ರಚನೆಯನ್ನು ಅಪರಾಜಿತಪೃಚ್ಛಾ ಗ್ರಂಥವು ಗುರುತಿಸಿದೆ. ಈ ರಚನೆಯ ಪ್ರಕಾರ ಜಾಡ್ಯಕುಂಭ ಕರ್ಣಿಕಾ, ಅಂತರಪತ್ರ, ವೇದಿಕೆ ನಂತರ ಅಂತರಪತ್ರ, ಜಾಡ್ಯಕುಂಭ ಅಂತರ ಪತ್ರ, ವೇದಿಕಾ ರಚನೆಯಿದೆ. ಪುನಃ ತದನಂತರ ಅಂತರಪತ್ರ ಖುರಕ, ಕುಮುದ, ಅಂತರಪತ್ರ, ಕರ್ಣಪಾಲಿ, ತಲಕುಂಭ ಇತ್ಯಾದಿ ಸ್ತರಗಳನ್ನು ಶಾಸ್ತ್ರ ಗ್ರಂಥವು ಗುರುತಿಸಿದೆ. ಈ ರೀತಿಯ ಶಾಸ್ತ್ರೋಕ್ತ

ವಿಶಿಷ್ಟ ಪೀಠರಚನೆಯು ಕಾಣಸಿಗದಿದ್ದರೂ, ಪೀಠರಚನೆಯ ವಿಕಾಸದ ಹಂತಗಳನ್ನು ಗುರುತಿಸುವಾಗ ಅವಶ್ಯಕವಾಗಿ ಗಮನಿಸಬೇಕು.

ಮೇಲ್ಕಂಡ ವಿವರಣೆಗಳು ಔತ್ತರೇಯ ದ್ರಾವಿಡ ಪೀಠರಚನೆಯನ್ನು ಗುರುತಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿದಲ್ಲಿ ಈ ಲೇಖನದ ಉದ್ದೇಶ ಸಫಲ ಗೊಳ್ಳುತ್ತದೆ.

ಆಧಾರ ಗ್ರಂಥಗಳು

1. ಪಿ. ಎ. ಮಂಕಡ್ (ಸಂ), ಅಪರಾಜಿತ ಪೃಚ್ಛಾ. (ಬರೋಡಾ, 1950)
2. ವಿ. ಎಸ್. ಅಗರವಾಲ್ (ಸಂ), ಸಮರಾಂಗಣ ಸೂತ್ರಧಾರ. (ಬರೋಡಾ, 1966)
3. ಭಗವಾನ್‌ದಾಸ್ ಜೈನ್ (ಸಂ), ಪ್ರಸಾದಮಂಡನ, (ಜೈಪುರ, 1963)
4. ಪಿ. ಓ. ಸೋಂಪುರ (ಸಂ), ದೀಪಾರ್ಣವ, (ಪಾಲಿಟಾನ, 1960)

ಕೆ. ಮೊಹಮ್ಮದ್ ಶರೀಫ್

ಮೈಸೂರು ಜಿಲ್ಲೆಯ ಶಾಸನಗಳು

ಮೈಸೂರು ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣ ಅಂಚಿನಲ್ಲಿದ್ದು ಅದನ್ನು ಪೂರ್ವ, ಆಗ್ನೇಯ ಮತ್ತು ದಕ್ಷಿಣದಲ್ಲಿ ತಮಿಳುನಾಡು, ನೈರುತ್ಯದಲ್ಲಿ ಕೇರಳ ರಾಜ್ಯ, ಪಶ್ಚಿಮದಲ್ಲಿ ಕೊಡಗು ಜಿಲ್ಲೆ, ಉತ್ತರದಲ್ಲಿ ಹಾಸನ, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳು ಸುತ್ತುವರಿದಿವೆ ಒಟ್ಟು 11 ತಾಲ್ಲೂಕುಗಳಿರುವ—ಗುಂಡ್ಲುಪೇಟೆ, ನಂಜನಗೂಡು, ಹೆಗ್ಗಡದೇವನಕೋಟೆ, ಚಾಮರಾಜನಗರ, ಯಳಂದೂರು, ಕೊಳ್ಳೆಗಾಲ, ಹುಣಸೂರು, ಪಿರಿಯಾಪಟ್ಟಣ, ಕೃಷ್ಣರಾಜನಗರ, ಮೈಸೂರು ಮತ್ತು ತಿರುಮಕೂಡಲು ನರಸೀಪುರ—ಈ ಜಿಲ್ಲೆಯಲ್ಲಿ ಅನೇಕ ರಾಜಮನೆತನಗಳಿಗೆ ಸೇರಿರುವ ಶಾಸನಗಳು ಹೇರಳವಾಗಿವೆ. ಇವು ನಮಗೆ ದೊರೆತ ಆ ರಾಜಮನೆತನಗಳ ಆಸ್ತಿ ಎನ್ನಬಹುದು. ಕಾರಣ ಅವು ನಮಗೆ ಈ ಪ್ರದೇಶದ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಇತಿಹಾಸಗಳ ಅಧ್ಯಯನಕ್ಕೆ ಬಹುಮುಖ್ಯವಾದ ಆಕರಗಳಾಗಿವೆ. ಈ ಜಿಲ್ಲೆಯ ಎಲ್ಲಾ ಶಾಸನಗಳನ್ನು, ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ ಮುಂತಾದ ಬೇರೆ ಬೇರೆ ದೃಷ್ಟಿಗಳಿಂದ ವಿಶ್ಲೇಷಿಸುವುದು ಪ್ರಸ್ತುತ ಲೇಖನದ ಉದ್ದೇಶವಲ್ಲ. ಒಂದು ಸಾಮಾನ್ಯ ಸಮೀಕ್ಷೆ ನಡೆಸಿ ಕೆಲವು ಗಮನಾರ್ಹ ಅಂಶಗಳನ್ನು ಸಾಮಾನ್ಯ ಜನತೆಗೆ ಗುರುತಿಸಿಕೊಡುವುದಷ್ಟೆ ಇದರ ಉದ್ದೇಶ.

ಮೈಸೂರು ಜಿಲ್ಲೆಯ ಸುಮಾರು 578 ಗ್ರಾಮಗಳಲ್ಲಿ ನಮಗೆ ಶಾಸನಗಳು ದೊರೆತಿವೆ. ಹೀಗೆ ದೊರೆತಿರುವ ಶಾಸನಗಳ ಸಂಖ್ಯೆ ಸುಮಾರು 2385. ಈ ಶಾಸನಗಳನ್ನು ಮುಖ್ಯವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು–ತಾಮ್ರಶಾಸನಗಳು, ಶಿಲಾಶಾಸನಗಳು ಮತ್ತು ಲೋಹಶಾಸನಗಳು, ಈ ಮೂರೂ ಪ್ರಕಾರದ ಶಾಸನಗಳು ಒಂದರಿಂದ ಒಂದು ಭಿನ್ನರೀತಿಯಲ್ಲಿವೆ. ಇವುಗಳಲ್ಲೆಲ್ಲಾ ತಾಮ್ರಶಾಸನಗಳು ಹೆಚ್ಚು ಅಮೂಲ್ಯವಾದುವು.

ಈ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು ಕದಂಬ, ಪುನ್ನಾಟ, ಗಂಗ, ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ, ನೊಳಂಬ, ಚೋಳ, ಬಯಲ್ನಾಡಿನ ಕದಂಬ, ಹೊಯ್ಸಳ, ವಿಜಯನಗರ, ಕೊಂಗಾಳ್ವ, ಚಂಗಾಳ್ವ, ಉಮ್ಮತ್ತೂರು, ನಂದ್ಯಾಲ,

ಹದಿನಾಡು, ಚೆಂಜಿ, ಮಧುರ, ರಾಮನಾಡು, ಕಳಲೆ, ಶಿವಗಿರಿ, ಮೈಸೂರು ಮುಂತಾದ ಅರಸರಿಗೆ ಸೇರಿದವು.

ಈ ಶಾಸನಗಳಲ್ಲಿ ಕೆಲವು ತಮಿಳು ಭಾಷೆ, ತಮಿಳು ಹಾಗೂ ಗ್ರಂಥಲಿಪಿಯಲ್ಲಿವೆ. ಇನ್ನು ಕೆಲವು ಸಂಸ್ಕೃತ ಭಾಷೆ, ನಾಗರಿ ಮತ್ತು ತಮಿಳು ಲಿಪಿಯಲ್ಲಿವೆ. ಸಂಸ್ಕೃತ, ತೆಲುಗು, ಪರ್ಶಿಯನ್ ಮತ್ತು ಇಂಗ್ಲೀಷ್ ಭಾಷೆಗಳಲ್ಲೂ ಕೆಲವು ಶಾಸನಗಳಿವೆ. ಸ್ವಾರಸ್ಯವೆಂದರೆ ಯಳಂದೂರು ತಾಲ್ಲೂಕಿನ ಮದ್ದೂರು ಗ್ರಾಮದ ಶಾಸನವೊಂದರ ಕೊನೆಯ ಭಾಗದಲ್ಲಿ ನಾಗರಿ, ತಮಿಳು, ಗ್ರಂಥ ಮತ್ತು ಕನ್ನಡ—ಹೀಗೆ ನಾಲ್ಕು ಲಿಪಿಗಳನ್ನು ಬಳಸಿರುವುದು. ಈ ಶಾಸನದ ಭಾಷೆ ಕನ್ನಡ. ಉಳಿದೆಲ್ಲ ಶಾಸನಗಳು ಕನ್ನಡ ಭಾಷೆ ಮತ್ತು ಲಿಪಿಯವು. ಅನೇಕ ಕನ್ನಡ ಶಾಸನಗಳ ಕೆಲ ಭಾಗಗಳು ಸಂಸ್ಕೃತದಲ್ಲಿರುವುದು ಉಂಟು. ಬಹುಪಾಲು ಶಾಸನಗಳ ಮೊದಲಲ್ಲಿ ಬರುವ ಪ್ರಾರ್ಥನೆ ಮತ್ತು ಕಡೆಯಲ್ಲಿ ಬರುವ ಶಾಪಪದ್ಯಗಳು ಸಂಸ್ಕೃತದಲ್ಲಿವೆ.

ಪಿರಿಯಾಪಟ್ಟಣ ತಾಲ್ಲೂಕಿನ ಹಿಟ್ಟಣಹೆಬ್ಬಾಗಿಲು ಗ್ರಾಮದ ಒಂದು ತಾಮ್ರ ಶಾಸನವೇ ಈ ಜಿಲ್ಲೆಯ ಪ್ರಾಚೀನ ಶಾಸನ. ಸಿಂಹ ಲಾಂಛನವಿರುವ ಈ ದಾನ ಶಾಸನದ ದಾನಿ ಶ್ರೀವಿಜಯ ಶಿವಮೃಗೇಶವರ್ಮ. ಪ್ರತಿಗ್ರಹಿ ಸರ್ವಸ್ವಾಮಿ. ಕಿಜಿ ನೀರಿಲ್ಲಿ ದಾನಕೊಟ್ಟ ಸ್ಥಳ. ಶಾಸನ ದೊರೆತಿರುವ ಗ್ರಾಮವು ಕದಂಬ ರಾಜ್ಯದಿಂದ ಬಹುದೂರದಲ್ಲಿರುವುದರಿಂದ ಮೂಲತಃ ತುಂಗಭದ್ರಾ ಪ್ರದೇಶದ ಸುತ್ತಮುತ್ತಲಿನ ಯಾವುದೋ ಸ್ಥಳದಿಂದ ಈ ತಾಮ್ರಶಾಸನ ಬಂದಿರುವ ಸಾಧ್ಯತೆ ಇದೆ ಎಂಬ ಅಭಿಪ್ರಾಯವೂ ಇದೆ. ಅಲ್ಲದೆ ಕದಂಬ ರಾಜಧಾನಿ ವಿಜಯ ವೈಜಯಂತಿ—ಉತ್ತರ ಕನ್ನಡ ಜಿಲ್ಲೆಯ ಬನವಾಸಿ—ಯಿಂದಲೆ ಅರಸನು ದಾನಮಾಡಿದನೆಂದು ಹೇಳಿರುವುದನ್ನು ಇಲ್ಲಿ ಗಮನಿಸಬಹುದು.

ನಂಜನಗೂಡು ತಾಲ್ಲೂಕಿನ ಬಸವನಪುರದ ಒಂದು ತಾಮ್ರಶಾಸನವು ಪುನ್ನಾಟ ಅರಸ ಸ್ಕಂದವರ್ಮನ ಆಳ್ವಿಕೆಗೆ ಸೇರಿದ್ದು ಆತ ಧವಳಪುರದಲ್ಲಿ ತಂಗಿದ್ದಾಗ ದ್ವಿವೇದಿ ಕೊತ್ತಮ್ಮಶರ್ಮನೆಂಬ ಬ್ರಾಹ್ಮಣನಿಗೆ ಮುಟ್ಟಲ್ಲವ್ವಿಯೂರು ಎಂಬ ಗ್ರಾಮವನ್ನು ದಾನಕೊಟ್ಟ ವಿಷಯ ತಿಳಿಸುತ್ತದೆ. ಅದರಲ್ಲಿ ಅರಸರ ವಂಶಾವಳಿಯ ಜೊತೆಗೆ, ಈ ಅರಸರಲ್ಲೊಬ್ಬನಾದ ರಾಷ್ಟ್ರವರ್ಮ ಎಂಬುವನ ಪತ್ನಿ ಕದಂಬ ವಂಶದ ಪ್ರಭಾವತಿಯ, ಎಡತ್ತೊಜಿನಾಡಿನ ಹಾಗೂ ಕಪ್ಪುನಿನದಿ (ಕಪಿಲಾ ನದಿ) ಗಳ ಉಲ್ಲೇಖಗಳೂ ಇವೆ ಈ ಅರಸರ ಇನ್ನೊಂದು ಶಾಸನ ಯಳಂದೂರು ತಾಲ್ಲೂಕಿನ ಮಾಂಬಳ್ಳಿಯಲ್ಲಿದೆ ಸುಮಾರು ೯ನೆಯ ಶತಮಾನದ ಕನ್ನಡ ಲಿಪಿಯಲ್ಲಿರುವ ಈ ಶಾಸನದ ಭಾಷೆ ಸಂಸ್ಕೃತ. ರಾಷ್ಟ್ರವರ್ಮ ಹಾಗೂ ಅವನ ಪತ್ನಿ ಪ್ರಭಾವತಿಯರ ಮೂರು ಮಕ್ಕಳಲ್ಲಿ ಹಿರಿಯವನಾದ ಪೃಥ್ವೀಪತಿಯ ಪ್ರಶಸ್ತಿಯೊಂದಿಗೆ ಇದು ಅನಿರೀಕ್ಷಿತವಾಗಿ ಮುಕ್ತಾಯಗೊಳ್ಳುತ್ತದೆ. ಈ ಶಾಸನದಲ್ಲಿ ಬರುವ ಕಾವೇರಿ ಮತ್ತು ಕಪಿನೀ ನದಿಗಳಿಂದ ಶೋಭಿಸಿದ ಪುಂರಾಷ್ಟ್ರದ ವರ್ಣನೆಯು ವಿಶೇಷ ಕುತೂಹಲಕರವಾಗಿದೆ.

ಗಂಗರಸರ ಸುಮಾರು 7ನೆಯ ಶತಮಾನದಿಂದ 11ನೆಯ ಶತಮಾನದವರೆಗಿನ ಶಾಸನಗಳು ಈ ಜಿಲ್ಲೆಯಲ್ಲಿವೆ. ಮೊದಮೊದಲ ಈ ಅರಸರ ಇತಿಹಾಸವನ್ನರಿಯಲು ಇವರ ತಾಮ್ರಶಾಸನಗಳೇ ಆಧಾರ. ಇವರ ತಾಮ್ರಶಾಸನಗಳಲ್ಲಿ ಬಹುಪಾಲು ಸಂಸ್ಕೃತದಲ್ಲಿವೆ. ಶಿಲಾಶಾಸನಗಳು ಕನ್ನಡದಲ್ಲಿವೆ. ತಾಮ್ರಶಾಸನಗಳಲ್ಲಿ ಗಂಗ ವಂಶದ ಮೂಲಪುರುಷ ಕೊಂಗುಣಿವರ್ಮನಿಂದ ಆರಂಭಿಸಿ ಶಾಸನ ಕೊರೆಸಿದ ರಾಜನವರೆಗೂ ಪೀಳಿಗೆಯನ್ನು ವಿವರವಾಗಿ ಕೊಟ್ಟಿದೆ. ಶಿಲಾಶಾಸನಗಳಲ್ಲಾದರೊ ಹೆಚ್ಚು ವಿಷಯಗಳನ್ನು ತಿಳಿಸದೆ ಅವನ್ನು ಹಾಕಿಸಿದ ರಾಜನ ಹೆಸರು, ಒಮ್ಮೊಮ್ಮೆ ಅವನ ಬಿರುದುಗಳು, ಶಾಸನದ ಕಾಲ ಮತ್ತು ಉದ್ದೇಶಗಳನ್ನು ನೇರವಾಗಿ ಮತ್ತು ಸರಳವಾಗಿ ತಿಳಿಸುತ್ತವೆ. ತಾಮ್ರಶಾಸನಗಳನ್ನು ಪೋಣಿಸಿರುವ ಓಳೆಗಳಲ್ಲಿ ಆನೆಯ ಮುದ್ರೆ ಇರುತ್ತದೆ. ಇವರ ಶಾಸನಗಳಲ್ಲಿ ಗ್ರಾಮಗಳನ್ನು ದಾನವಾಗಿ ಕೊಟ್ಟ ವಿಷಯವನ್ನು ನಿರೂಪಿಸುವುದೇ ಹೆಚ್ಚು. ಶಿಲಾಶಾಸನಗಳಲ್ಲಿ ಅಕ್ಷರಗಳು ದೊಡ್ಡವೂ ಆಳವೂ ಆಗಿರುತ್ತವೆ.

ನಂಜನಗೂಡು ತಾಲ್ಲೂಕು ಕೂಡ್ಲಾಪುರದ ಶಾಸನವೊಂದರಲ್ಲಿ ಗಂಗ ಅರಸ ಕೊಂಗುಣಿವರ್ಮನನ್ನು 'ಪ್ರಥಮ ಗಂಗರಾಜನೆಂದು' ವರ್ಣಿಸಿರುವ ಕುತೂಹಲ ಕಾರಿಯಾದ ವಿಷಯವಿದೆ. ನೆದಿರೂನ್ ಎಂಬಾತ ಮರಣ ಹೊಂದಿದಾಗ ವಾನ್ದಾರಿ ಎಂಬಾತನಿಗೆ 'ಎಱೆಯಮರಿಯಾದೆ' ಎಂದು ಭೂಮಿಯನ್ನು ದಾನಮಾಡಿದ ವಿಷಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಮಾಗುಡಿಲು ಶಾಸನದಲ್ಲಿ ಹೇಳಿದೆ. ನಂಜನಗೂಡು ತಾಲ್ಲೂಕು ದೇಬೂರಿನ ಶಾಸನವೊಂದರಲ್ಲಿ ಪುನ್ನಾಡು-6000ದ ಮಾಂಡಲಿಕನೊಬ್ಬ 'ಎಱೆಯಮರಿಯಾದೆ' ಎಂದು ಭತ್ತದ ಗದ್ದೆಯನ್ನು ದಾನ ಮಾಡಿದ ವಿಷಯ ಪ್ರಸ್ತಾಪವಾಗಿದೆ. ಹೆಗ್ಗಡದೇವನಕೋಟೆಯ ಶ್ರೀಪುರುಷನ ತಾಮ್ರಶಾಸನವೊಂದರಲ್ಲಿ ಆತನನ್ನು ಪೃಥವೀಕೊಂಗಣಿ ಮಹಾರಾಜನೆಂದು ವರ್ಣಿಸಿದೆ. ಶ್ರೀಪುರುಷ ಮಹಾರಾಜನು ಕೆಸುಗೊಳದ ಒಡೆಯನಾದ ಬಿಣಾಮ್ಮನಿಗೆ ತನ್ನ ಜನ್ಮ ನಕ್ಷತ್ರ (ಶ್ರೀ ನಕ್ಷತ್ರ)ದ ದಿನದಿಂದ ಒಂದು ತಿಂಗಳವರೆಗೆ 12 ಜನ ಬ್ರಾಹ್ಮಣರಿಗೆ ಒಪ್ಪೊತ್ತಿನ ಭೋಜನಕ್ಕಾಗಿ ದಣ್ಣಗವಾಡಿಗ್ರಾಮವನ್ನು ಬ್ರಹ್ಮದೇಯವಾಗಿ ಕೊಟ್ಟನೆಂಬ ಸ್ವಾರಸ್ಯಕರವಾದ ಸಂಗತಿ ಈ ಶಾಸನದಲ್ಲಿದೆ. ಶ್ರೀಪುರುಷನ ಕಾಲಕ್ಕೆ ಸೇರಿದ ಕ್ರಿ.ಶ. 791ರ ಚಾಮರಾಜನಗರ ತಾಲ್ಲೂಕಿನ ಬಸವಟ್ಟಿಯ ಶಾಸನದಲ್ಲಿ ಅರಸನು ಗಂಗರ ರಾಜಧಾನಿಯಾದ ತಳವನಪುರ ಅಥವ ತಲಕಾಡಿನಲ್ಲಿದ್ದನೆಂದೂ 2 ಖಂಡುಗ ಭೂಮಿಯ ಮೇಲಿನ ತೆರಿಗೆಗಳು ಹಾಗೂ ಕಱುಂಬದೆಱೆಯ ವಿನಾಯಿತಿ ಮಾಡಿರುವುದನ್ನು ಹೇಳಿದೆ. ಇದೇ ತಾಲ್ಲೂಕಿನ ಬಸವಾಪುರದ ಶಾಸನವೊಂದು ಕುವಿಸೂರು ಕಸನದಲ್ಲಿ ಸತ್ಯವಾಕ್ಯ ಪೆರ್ಮಾನಡಿಯ ತಮ್ಮ ಬೂತರಸನು ಮರಣ ಹೊಂದಿದ್ದುದನ್ನು ಅವನ ಮಾವ ತಿಪ್ಪವೇದಿಯನು ಮಾದವಾಡಿ ಗ್ರಾಮವನ್ನು ಬಾಳ್ಗಚ್ಚು ಬಿಟ್ಟದ್ದನ್ನು ಹೇಳುತ್ತದೆ. ಮೈಸೂರು ತಾಲ್ಲೂಕು ವರುಣದಲ್ಲಿರುವ ಶ್ರೀಪುರುಷನ ಶಾಸನ ಪಟ್ಟಿಗಳ ಅರಸ ಚೊತ್ತಮ್ಮನು ಎಡತೊಱೆನಾಡು

ಸಾಸಿರವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಮುಂದಿನ ಭಾಗ ಅಸ್ಪಷ್ಟವಾಗಿದ್ದು ಬಹುಶಃ ಸೈನ್ಯವು ಹೋಗುವಾಗ ಒಂದು ದಿನ ಬರುವಾಗ ಒಂದು ದಿನ ಆಹಾರವನ್ನೊದಗಿಸುವ ಏರ್ಪಾಡು ಮಾಡುವುದಕ್ಕಾಗಿ ಈ ಶಾಸನವನ್ನು ಹಾಕಿಸಿರಬಹುದು. ನಂಜನಗೂಡು ತಾಲ್ಲೂಕಿನ ಹುಸಗೂರಿನ ಶಾಸನದ ಕಾಲ ಕ್ರಿ.ಶ. 870–71. ಆಗ ಸತ್ಯವಾಕ್ಯ ರಾಚಮಲ್ಲ ಪೆರ್ಮಾನಡಿಯು ರಾಜ್ಯಭಾರ ಮಾಡುತ್ತಿದ್ದನು. ಯುವರಾಜನಾಗಿದ್ದುಕೊಂಡು ಕೊಂಗಲ್ನಾಡು ಮತ್ತು ಪೂನಾಡು (ಪುನ್ನಾಟ ?) ಗಳಲ್ಲಿ ಕಾರ್ಯಭಾರ ನಡೆಸುತ್ತಿದ್ದ ಭೂತರಸನು ಕೋಟೆಯೊಂದರ ಮುತ್ತಿಗೆ ಕಾಲದಲ್ಲಿ ಪೆರ್ಮಾನಡಿಯ ಅಪ್ಪಣೆ ಮೇರೆಗೆ ಹೋರಾಡಿದನೆಂದು ಈ ಶಾಸನದಲ್ಲಿ ಹೇಳಿದೆ. ಹೆಗ್ಗಡದೇವನಕೋಟೆ ತಾಲ್ಲೂಕಿನ ಹಿರನಂದಿ ಶಾಸನವು ಕುತೂಹಲಕಾರಿಯಾಗಿದೆ. ಅದು ಎರೆಯಪ್ಪನ ಮರಣವನ್ನು ಕುರಿತುಹೇಳುವಷ್ಟಕ್ಕೆ ನಿಲ್ಲದೆ ಅದರ ರಾಜಕೀಯ ಪರಿಣಾಮಗಳನ್ನು ಹೇಳಿದೆ. ತಿರುಮಕೂಡಲು ನರಸೀಪುರ ತಾಲ್ಲೂಕಿನ ತಲಕಾಡು ಗ್ರಾಮದ ಕ್ರಿ.ಶ 935ರ, ಮುಮ್ಮಡಿ ರಾಚಮಲ್ಲನ ಕಾಲಕ್ಕೆ ಸೇರಿದ ಶಾಸನವು ಆಗ ತರೆಕಾಡು ಎಂದು ಕರೆಯುತ್ತಿದ್ದ ತಲಕಾಡಿನ ಆಡಳಿತವನ್ನು ಮಹಾನಗರವೆಂಬ ಒಂದು ಸಂಘವು ನಡೆಸುತ್ತಿತ್ತೆಂದು ತಿಳಿಸುತ್ತದೆ. ಪೆರ್ಮಾಡಿಯು (ಇಮ್ಮಡಿ ಮಾರಸಿಂಗ) ರಾಜಾದಿತ್ಯನ ಮೇಲೆ ನಡೆಸಿದ ಯುದ್ಧವನ್ನು ಚಾಮರಾಜನಗರ ತಾಲ್ಲೂಕಿನ ಕ್ರಿ.ಶ. 971-72ರ ಎಲ್ಲೂರು ಗ್ರಾಮದ ಶಾಸನವೊಂದರಲ್ಲಿ ಹೇಳಿದೆ. ಇವುಗಳಲ್ಲದೆ ಕೃಷ್ಣರಾಜನಗರ ತಾಲ್ಲೂಕಿನ ಸಾಲಿಗ್ರಾಮ ಮತ್ತು ಚಿಕ್ಕಹನಸೋಗೆ ಹಾಗೂ ತಿ. ನರಸೀಪುರ ತಾಲ್ಲೂಕಿನ ತಲಕಾಡು, ದೊಡ್ಡಹುಂಡಿ, ದೊಡ್ಡಬಾಗಿಲ ಗಳಲ್ಲಿ ದೊರೆತಿರುವ ಈ ಅರಸರ ಶಾಸನಗಳು ಇಂತಹ ಅನೇಕ ಮುಖ್ಯ ಸಂಗತಿಗಳನ್ನು ತಿಳಿಸುತ್ತವೆ.

ಈ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಅರಸನಾದ ಧ್ರುವನ ಮಗನಾದ ಕಂಬಯ್ಯನ ಎರಡು ಶಾಸನಗಳಿವೆ. ನಂಜನಗೂಡು ತಾಲ್ಲೂಕಿನ ದೇವನೂರಿನ ಕ್ರಿ.ಶ. 8೧೪ರ ತಾಮ್ರಶಾಸನದಲ್ಲಿ ಕಂಬಯ್ಯನು ಪುನ್ನಾಡುಎಡೆನಾಡನ್ನು ಆಳುತ್ತಿದ್ದು ವಿಜಯ ಯಾತ್ರೆಯ ಸಂದರ್ಭದಲ್ಲಿ ತಲವನನಗರದಲ್ಲಿ ಬೀಡುಬಿಟ್ಟಿದ್ದಾಗ ಬದನಗುಪ್ಪೆ ಗ್ರಾಮವನ್ನು ದಾನಮಾಡಿದನೆಂದು ಹೇಳಿದೆ. ಹೆಗ್ಗಡದೇವನಕೋಟೆ ತಾಲ್ಲೂಕಿನ ಮಟಕೇರಿಯ ಶಾಸನವು ಧಾರಾವರ್ಷನ ಆಳ್ವಿಕೆಗೆ ಸೇರಿದ್ದು ಕಂಬರಸ ಅಂದರೆ ಅದೇ ಕಂಬಯ್ಯನು 96000 ಪ್ರಾಂತವನ್ನು ಆಳುತ್ತಿದ್ದನೆಂದು ಹೇಳುತ್ತದೆ.

ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಸುಮಾರು ಹದಿನಾಲ್ಕು ಶಾಸನಗಳು ಈ ಜಿಲ್ಲೆಯಲ್ಲಿವೆ. ಪಿರಿಯಾಪಟ್ಟಣ ತಾಲ್ಲೂಕಿನ ಕೂಡಲೂರು ಶಾಸನವು ಕ್ರಿ.ಶ. 997–98ರ ಕಾಲಕ್ಕೆ ಸೇರಿದ್ದು ಚಾಳುಕ್ಯ ಪೆರ್ಮಾನಡಿಯ ಮಗಳಾದ ಪಂಪಾದೇವಿಯ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಸುಮಾರು ಹನ್ನೆರಡು ಶಾಸನಗಳು ಚಾಳುಕ್ಯ ವಂಶದ ಮೂರು ಸಾಮಂತ ರಾಜರನ್ನು—ನರಸಿಂಗ, ದುರ್ಗ ಮತ್ತು ಗೊಗ್ಗಿ—

ಕುರಿತವಾಗಿವೆ. ಅವರನ್ನು ಚಾಳುಕ್ಯ ವಂಶೋದ್ಭವರೆಂದೂ, ಆದಿವರಾಹಲಾಂಛನ ರೆಂದೂ ವರ್ಣಿಸಿವೆ.

ಮೈಸೂರು ತಾಲ್ಲೂಕಿನ ಕಲ್ಲೂರು ನಾಗೇನಹಳ್ಳಿಯ ನೊಳಂಬರ ಕಾಲದ ಶಾಸನದಲ್ಲಿ ವೇಳೆವಡಿಯೆಂದು ವರ್ಣಿಸಲಾದ ಅರಸಿಗನ ಮಯ್ದುನನು ತನ್ನ ಸ್ವಾಮಿಯಾದ ರಕ್ಕಸನೊಲವಿನ್ಪು ಪಲ್ಲವಾಭರಣ ಪಾಳಿಗನಿಗಾಗಿ ಪೂಣ್ದು ಮುಡಿಪಿದುದಾಗಿ ಹೇಳಿದೆ.

ಚೋಳರ ಶಾಸನಗಳು ಸಾಮಾನ್ಯವಾಗಿ ರಾಜರ ಪ್ರಶಸ್ತಿ, ಪರಾಕ್ರಮಗಳನ್ನು, ವಿಜಯಗಳನ್ನು. ಅವರ ದಾನ ಧರ್ಮಗಳನ್ನು, ಕಟ್ಟಿಸಿದ ದೇವಾಲಯಗಳನ್ನು ಕುರಿತು ವಿವರವಾಗಿ ತಿಳಿಸುತ್ತವೆ. ಇದಲ್ಲದೆ ಈ ಶಾಸನಗಳಿಂದ ಆ ಕಾಲದ ರಾಜರುಗಳ ಆಡಳಿತ ಪದ್ಧತಿ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಬಹುದಾಗಿದೆ ಕೆಲವು ಶಾಸನಗಳು ಭೂಮಿಗಳ ಅಳತೆ, ಕಂದಾಯ ಹಾಗೂ ಸುಂಕಗಳ ಬಗ್ಗೆ ಅಮೂಲ್ಯವಾದ ಮಾಹಿತಿಗಳನ್ನು ಒದಗಿಸುತ್ತವೆ. ನಂಜನಗೂಡು ತಾಲ್ಲೂಕಿನ ಸುತ್ತೂರು ಮತ್ತು ನಂದಿಗುಂದ, ಚಾಮರಾಜನಗರ ತಾಲ್ಲೂಕಿನ ಹೊಂಗನೂರು ಮತ್ತು ಮಂಗಲ, ಕೊಳ್ಳೆಗಾಲ ತಾಲ್ಲೂಕಿನ ಭದ್ರಳ್ಳಿ, ಯಳಂದೂರು ತಾಲ್ಲೂಕಿನ ಅಗರ, ತಿ. ನರಸೀಪುರ ತಾಲ್ಲೂಕಿನ ತಡಿಮಾಲಿಂಗಿ, ಬನ್ನೂರು, ಕಲಿಯೂರು ಮತ್ತು ಕೋಳೂರು ಮತ್ತು ಕೃಷ್ಣರಾಜನಗರ ತಾಲ್ಲೂಕಿನ ತಿಪ್ಪೂರು ಮುಂತಾದ ಊರುಗಳಲ್ಲಿರುವ ಶಾಸನಗಳನ್ನು ಇಲ್ಲಿ ಉದಾಹರಿಸಬಹುದು. ಹೆಗ್ಗಡದೇವನಕೋಟೆ ತಾಲ್ಲೂಕಿನ ರಾಜಾಧಿರಾಜನ ಆಳ್ವಿಕೆಗೆ ಸೇರಿದ ಶಾಸನ ಸರಳ ಹಾಗೂ ಸುಂದರವಾದ ಕನ್ನಡ ಭಾಷೆಯಲ್ಲಿದೆ. ಕಲಿಯೂರಿನ ಕನ್ನಡ ಶಾಸನ ರಾಜರಾಜದೇವನ ಮಂತ್ರಿ ಹಾಗೂ ಸೇನಾನಿಯಾಗಿದ್ದ ಅಪ್ರಮೇಯನನ್ನು ಕುರಿತದ್ದಾಗಿದೆ ಹಾಗೂ ಅದು ಶೌರ್ಯ ಧೈರ್ಯಗಳಿಂದ ಹೊರಾಡಿದ ವೀರರ ಯುದ್ಧಗತಿಯನ್ನು ಚಿತ್ರಿಸುತ್ತದೆ.

ಹೆಗ್ಗಡದೇವನಕೋಟೆ ತಾಲ್ಲೂಕಿನ ಮಳಲಿ, ಕಿತ್ತೂರು, ಸೋಗಳ್ಳಿ ಮತ್ತು ಮಗ್ಗೆ ಮುಂತಾದ ಗ್ರಾಮಗಳಲ್ಲಿನ ಶಾಸನಗಳಲ್ಲಿ ಬಯಲ್ನಾಡಿನ ಕದಂಬ ಅರಸರಾದ ಚಾಗಿ, ಉಗವಿಯ್ಯಮ್ಮರಸ, ಈಕರವರ್ಮ ಮತ್ತು ಇರವಿಚಲ್ಲಮ್ಮರವರ ಉಲ್ಲೇಖಗಳಿವೆ.

ಹೊಯ್ಸಳರ ಆಳ್ವಿಕೆಯ ಕಾಲ ಶಾಸನಗಳ ರಚನೆಯ ಸಮೃದ್ಧಿಯ ಕಾಲ. ಶಾಸನಗಳ ರಚನೆಯ ಕಲೆಗಾರಿಕೆಯಲ್ಲಾಗಲಿ, ಲಿಪಿಯ ಸೌಂದರ್ಯದಲ್ಲಾಗಲಿ, ಭಾಷೆ ಹಾಗೂ ಸಾಹಿತ್ಯದ ಸಮೃದ್ಧಿಯಲ್ಲಾಗಲಿ ಮತ್ತು ಐತಿಹಾಸಿಕ ಮಹತ್ವದ ದೃಷ್ಟಿಯಿಂದಾಗಲಿ ಈ ಅರಸರ ಶಾಸನಗಳಿಗೆ ಒಂದು ವಿಶೇಷ ಸ್ಥಾನವಿದೆ. ಇವರ ಶಾಸನಗಳಲ್ಲಿ ಕಂಡುಬರುವ ವೈಲಕ್ಷಣ್ಯವೆಂದರೆ ಅವರು ಶಾಸನಗಳನ್ನು ಹಾಕುವಾಗ ಒಂದು ಕಡೆ ಚೋಳರನ್ನು ಅನುಕರಿಸಿದ್ದರೆ ಮತ್ತೊಂದು ಕಡೆ ಚಾಳುಕ್ಯರ ಪೀಳ್ಪಂಕ್ತಿಯನ್ನು ಅನುಕರಿಸಿರುವುದು. ಚೋಳರು ಆಕ್ರಮಿಸಿದ್ದ ಗಂಗವಾಡಿಯ ಭಾಗವಾಗಿದ್ದ

ಮೈಸೂರು ಜಿಲ್ಲೆಯ ಭಾಗವನ್ನು ಹಿಂದಕ್ಕೆ ಪಡೆದಮೇಲೂ ಬಹುಕಾಲ ಆ ಭಾಗದಲ್ಲಿ ಹೊಯ್ಸಳರೂ ತಮಿಳಿನಲ್ಲಿಯೇ ಶಾಸನಗಳನ್ನು ಹಾಕಿಸಿದರು. ಅಷ್ಟೇ ಅಲ್ಲ ಚೋಳರಂತೆ ಇವರೂ ದೇವಾಲಯದ ತಳಪಾದಿ ಕಲ್ಲುಗಳು, ಗೋಡೆಗಳು, ಕಂಬಗಳನ್ನೇ ಶಾಸನ ಹಾಕಿಸಲು ಬಳಸಿದರು. ಚೋಳರನ್ನು ಓಡಿಸಿ ತಲಕಾಡನ್ನು ಗೆದ್ದುಕೊಂಡು ಅಲ್ಲಿ ವಿಷ್ಣುವರ್ಧನ ಕಟ್ಟಿಸಿದ ಕೀರ್ತಿನಾರಾಯಣಸ್ವಾಮಿ ದೇವಾಲಯದ ತಳಪಾದಿಯ ಮೇಲೆ ಈ ವಿಷಯವನ್ನು ತಿಳಿಸುವ ಮತ್ತು ದತ್ತಿಕೊಟ್ಟಿದ್ದನ್ನು ತಿಳಿಸುವ ಹಲವಾರು ಶಾಸನಗಳಿರುವುದು ತಮಿಳಿನಲ್ಲಿಯೇ. ಇಂಥ ಅನೇಕ ಶಾಸನಗಳನ್ನು ಅಗರದ ರಾಮೇಶ್ವರ, ಲಕ್ಷ್ಮೀನರಸಿಂಹ, ದುರ್ಗಾದೇವಾಲಯ ಮತ್ತು ಮಾಂಬಳ್ಳಿಯ ವೈದ್ಯೇಶ್ವರ ದೇವಾಲಯಗಳ ಮೇಲೆ ನೋಡಬಹುದು. ರಾಜರು, ಅಧಿಕಾರಿಗಳು, ಇನ್ನಿತರರು ಮಾಡಿದ ದೇವಸ್ಥಾನಗಳ ಜೀರ್ಣೋದ್ಧಾರ, ಅಗ್ರಹಾರಗಳ ಸ್ಥಾಪನೆ, ವಿದ್ಯಾಭ್ಯಾಸಕ್ಕೆ ನೀಡಿದ ಪ್ರೋತ್ಸಾಹ ಮುಂತಾದ ಧರ್ಮಕಾರ್ಯಗಳು, ಪುಣ್ಯ ಕಾರ್ಯಗಳು, ದಾನ ದತ್ತಿ ಮುಂತಾದ ವಿಷಯಗಳು ಈ ಶಾಸನಗಳಲ್ಲಿವೆ. ಇವಲ್ಲದೆ ಆ ಶಾಸನಗಳಲ್ಲಿ ರಾಜರ ವಂಶಾವಳಿ, ಪ್ರಶಸ್ತಿ, ಅವರ ಹಾಗೂ ಅವರ ಅಧಿಕಾರಿಗಳು ನಡೆಸಿದ ಯುದ್ಧಗಳು, ತಲಕಾಡು, ಗಂಗವಾಡಿ, ನೊಳಂಬವಾಡಿ, ಕೊಂಗು, ನಂಗಲಿ, ಬನವಸೆ, ಉಚ್ಚಂಗಿ, ಗಂಗವಾಡಿ ತೊಂಭತ್ತಾರು ಸಾವಿರ, ಹದಿನಾಡು, ಎಣ್ಣೆನಾಡು, ಕುಮಾರನಾಡು, ಹಿರಿಯನಾಡು, ತೊಜಿನಾಡು, ಕುಡುಗನಾಡು–300 ಮುಂತಾದ ಪ್ರದೇಶ, ಸ್ಥಳ, ಮತ್ತು ನಾಡುಗಳು, ಮಾಧವ ದಂಡನಾಯಕ, ಅಲ್ಲಾಳದೇವ ದಂಡ ನಾಯಕ, ಹಿರಿಯ ದಂಡನಾಯಕ ಗೋವಿಂದಮಯ್ಯ, ದಂಡನಾಯಕ ಬಿಟ್ಟಿಮಯ್ಯ, ಲಕ್ಷ್ಮೀನಾರಾಯಣ ದಂಡನಾಯಕ, ಮಲ್ಲಿಕಾರ್ಜುನ ದಂಡನಾಯಕ, ಕಾಟು ದಂಡ ನಾಯಕ, ಹೆಗ್ಗಡೆ ಕಲ್ಲಯ್ಯ, ಮಂಚಯ್ಯ ದಂಡನಾಯಕ, ಪೆರುಮಾಳ ದಂಡನಾಯಕ, ಪುಣಿಸಮಯ್ಯ, ಸೋಮೆಯ ದಂಡನಾಯಕ, ಬಿಟ್ಟಿಯಣ್ಣ, ಸೋವಣ್ಣ ದಂಡ ನಾಯಕ, ಶ್ರೀರಂಗ ದಂಡನಾಯಕ, ಕೇತಯ ದಂಡನಾಯಕ, ದಂಡನಾಯಕ ಗಂಗಪಯ್ಯ ಮುಂತಾದ ಅಧಿಕಾರಿಗಳು–ಹೀಗೆ ಅನೇಕ ವಿಷಯಗಳು ನಮಗೆ ಸಿಗುತ್ತವೆ. ಅನೇಕ ಶಾಸನಗಳು ಆ ಕಾಲದ ಜನಜೀವನ, ಸಾಮಾಜಿಕ, ಆರ್ಥಿಕಸ್ಥಿತಿ, ಸಾಂಸ್ಕೃತಿಕ ಬೆಳವಣಿಗೆ, ಮತಗಳಲ್ಲಿನ ಸೌಹಾರ್ದ, ಮೊದಲಾದ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಈ ಸಂದರ್ಭಗಳಲ್ಲಿ ನಾವು ತಲಕಾಡು, ಜೋಡಿಬಸವನಪುರ, ಸೋಮನಾಥಪುರ, ಕೂಡ್ಲಾಪುರ, ಕಾರ್ಯ, ಗೋಪಾಲಪುರ, ನಿಟ್ರೆ, ಆಲತ್ತೂರು, ಕಳ್ಳಿಂಬಾಳು, ಕುಂದೂರು, ಬೆಳತೂರು, ಚಾಮರಾಜನಗರ, ಹರಳುಕೋಟೆ, ಆಲದೂರು, ಕುಲಗಾಣ, ಕಂಪಲಾಪುರ, ಹೊನ್ನೂರು, ಅಗರ, ಯಳಂದೂರು, ಮಾಂಬಳ್ಳಿ, ಮರಕೋಡು, ಕುಮಾರಬೀಡು, ಚಿಕ್ಕಹನಸೋಗೆ, ಲಾಳನಹಳ್ಳಿ ಮುಂತಾದ ಸ್ಥಳಗಳಲ್ಲಿರುವ ಶಾಸನಗಳನ್ನು ಹೆಸರಿಸಬಹುದು.

ಈ ಜಿಲ್ಲೆಯ ವಿಜಯನಗರ ಅರಸರ ಶಾಸನಗಳು ಕನ್ನಡ, ಸಂಸ್ಕೃತ, ತೆಲುಗು

ಮತ್ತು ತಮಿಳು ಭಾಷೆಗಳಲ್ಲಿವೆ. ಅಕ್ಷರಗಳನ್ನು ದಪ್ಪವಾಗಿ, ಮನಬಂದಂತೆ ಕೆತ್ತಿರುವುದರಿಂದ ಶಾಸನ ಕಲೆಯಲ್ಲಿ ಪ್ರತಿಭೆ ಇಳಿಮುಖವಾಗಿತ್ತು ಎನ್ನಬಹುದು. ಭಾಷೆಯ ವಿಷಯದಲ್ಲೂ ಇದೇ ಮಾತನ್ನು ಹೇಳಬಹುದು. ಸಾಹಿತ್ಯಿಕ ಅಂಶವೂ ಕಡಿಮೆ. ಅನೇಕ ಶಾಸನಗಳಲ್ಲಿ ಅರಸರ ವಂಶಾವಳಿ, ಪ್ರಶಸ್ತಿಗಳು, ಅವರ ಸಾಧನೆಗಳು ಇವೆ. ಶಾಸನಗಳ ಕೊನೆಯ ಭಾಗದಲ್ಲಿ ವೃತ್ತಿಗಳನ್ನು ಪಡೆದವರ ಹೆಸರುಗಳು, ದತ್ತಿ ಬಿಟ್ಟ ಗ್ರಾಮ ಅಥವ ಭೂಮಿಯ ಮೇರೆಗಳು ಅನೇಕ ಸಂದರ್ಭಗಳಲ್ಲಿ ಕನ್ನಡ ಭಾಷೆಯಲ್ಲಿವೆ. ಅನೇಕ ಶಾಸನಗಳಲ್ಲಿ ಐತಿಹಾಸಿಕ ವಿಷಯಗಳು, ದಾನದತ್ತಿ ಮುಂತಾದ ಪುಣ್ಯಕಾರ್ಯಗಳು, ಹಳ್ಳಿಗಳನ್ನು ಪಟ್ಟಣಗಳನ್ನಾಗಿ ಪರಿವರ್ತಿಸಿರುವ ವಿಚಾರ, ಕೆರೆಗಳ ಜೀರ್ಣೋದ್ಧಾರ, ಅಗ್ರಹಾರಗಳ ಸ್ಥಾಪನೆ, ತೆರಿಗೆಯ ಮನ್ನ, ಒಕ್ಕಲುಗಳು ತಾವು ಕೊಡಬೇಕಾದ ತೆರಿಗೆ, ಸುಂಕದ ಪ್ರಸ್ತಾಪ, ನಾಗರಸ, ಬಸವಯ್ಯ ದಂಡನಾಯಕ, ಮಗಪ್ಪ ದಂಡನಾಯಕ, ಹರಿಯಪ್ಪ ದಂಡನಾಯಕ, ಸಾಳುವ ಗೋವಿಂದರಾಜಯ್ಯ, ವೀರಪ್ಪೊಡೆಯ ಮುಂತಾದ ಅಧಿಕಾರಿಗಳ ಉಲ್ಲೇಖ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲಿವೆ. ನಾವು ಇಲ್ಲಿ ತಗಡೂರು, ತ್ರಿಯಂಬಕಪುರ, ಬೀಮನಬೀಡು, ನಂಜನಗೂಡು, ಉಯ್ಯಂಬಳ್ಳಿ, ಮಗ್ಗೆ, ಸರಗೂರು, ಮದ್ದೂರು ಸಿಂಗನಲ್ಲೂರು, ಮಲೆಯೂರು, ಹರದನಹಳ್ಳಿ, ಹೊಂಗನೂರು, ಉಮ್ಮತ್ತೂರು, ಕೂರಗಲ್ಲು, ಹೆಬಸೂರು, ತಿರುಮಕೂಡಲು, ತಿ. ನರಸೀಪುರ, ಶಡಿಮಾಲಿಂಗಿ, ಗುರೂರು ಮುಂತಾದ ಸ್ಥಳಗಳ ಶಾಸನಗಳನ್ನು ಹೆಸರಿಸಬಹುದು.

ಈ ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಸಾಲಿಗ್ರಾಮದ ಎರಡು ವೀರಗಲ್ಲು ಶಾಸನಗಳು ತ್ರಿಭುವನಮಲ್ಲ ಕೊಂಗಾಳ್ವನೆಂಬ ಹೆಸರಿನ ಅರಸನಿಗೆ ಸಂಬಂಧಿಸಿದೆ. ಸಲಿಗಮ (ಸಾಲಿಗ್ರಾಮ) ವನ್ನು ಚಂಗಾಳ್ವನು ಮುತ್ತಿದಾಗ ಅವನನ್ನು ವಿರೋಧಿಸಿ ಪ್ರಾಣವನ್ನು ಮುಡಿಪಿದ ವೀರರ ಸ್ಮಾರಕಗಳಿವು.

ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕಹನಸೋಗೆ, ಮುದ್ದೇನಹಳ್ಳಿ, ಹಳೆಯೂರು, ಕರ್ತಾಳು, ಮಿರ್ಲೆ ಗ್ರಾಮಗಳಲ್ಲಿನ ಹನ್ನೆರಡು ಶಾಸನಗಳು, ಪಿರಿಯಾಪಟ್ಟಣ ತಾಲ್ಲೂಕಿನ ಸುಮಾರು ಮೂವತ್ತು ಶಾಸನಗಳು, ಹುಣಸೂರು ತಾಲ್ಲೂಕಿನ ಒಂದೆರಡು ಶಾಸನಗಳು ಚಂಗಾಳ್ವ ಅರಸರ ಕಾಲದವು. ಇವುಗಳಲ್ಲಿ ಹೆಚ್ಚಿನವು ದೇವಸ್ಥಾನಗಳಿಗೂ ಬಸದಿಗಳಿಗೂ ಕೊಟ್ಟ ದತ್ತಿಗಳ ಉಲ್ಲೇಖವಿರುವವು ಇನ್ನು ಕೆಲವು ವೀರಗಲ್ಲು ಶಾಸನಗಳು ಪಿರಿಯಾಪಟ್ಟಣದ ಒಂದು ಶಾಸನದಲ್ಲಿ ಶ್ರೀಕಂಠರಾಜೈಯನ ಕೊಮಾರ ಪಿರಿಯರಾಜದೇವನು ಸಿಂಗಪಟ್ಟಣವನ್ನು ಜೀರ್ಣೋದ್ಧಾರಮಾಡಿ ಅದಕ್ಕೆ ಪಿರಿಯರಾಜ ಪಟ್ಟಣವೆಂಬ ಹೆಸರನ್ನು ಕೊಟ್ಟನೆಂದು ಹೇಳಿದೆ.

ಈ ಜಿಲ್ಲೆಯಲ್ಲಿರುವ ಉಮ್ಮತ್ತೂರು ಅರಸರಿಗೆ ಸೇರಿರುವ ಶಾಸನಗಳಲ್ಲಿ ಅರಸರ ವಂಶಾವಳಿ, ದೇವ-ದೇವತೆಗಳಿಗೆ ಕೊಟ್ಟ ದತ್ತಿ, ಅನೇಕ ವ್ಯಕ್ತಿಗಳಿಗೆ ನೀಡಿದ ಮನೆಗಳ ವಿಷಯ, ತೆರಿಗೆಯ ಮನ್ನ, ಕೆಲವು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ

ಪರಿವರ್ತಿಸಿರುವ ವಿಷಯ, ಕೆಲವು ಅಧಿಕಾರಿಗಳ ಉಲ್ಲೇಖ ಮುಂತಾದ ವಿಷಯಗಳ ಪ್ರಸ್ತಾಪಗಳಿವೆ. ಇಲ್ಲಿ ಮುಳ್ಳೂರು, ಶೆಟ್ಟಿಹಳ್ಳಿ, ಹೊಣಕನಹಳ್ಳಿ ಮೂಡಲಪುರ, ಹರವೆ, ಕುಜೇರು, ಅಗರ, ತಂಡ್ರೆ ಮುಂತಾದ ಗ್ರಾಮಗಳಲ್ಲಿರುವ ಶಾಸನಗಳನ್ನು ಹೆಸರಿಸಬಹುದು.

ನಂದ್ಯಾಲ ಅರಸರಿಗೆ ಸೇರಿದ ಸುಮಾರು ನಾಲ್ಕು ಶಾಸನಗಳು ಈ ಜಿಲ್ಲೆಯಲ್ಲಿದ್ದು ಅವು ಕುಂತೂರು, ಕೆಂಪನಪಾಳ್ಯ, ಹೊಂಡರಬಾಳು ಮತ್ತು ಭಂಡಿಗೆರೆ ಗ್ರಾಮಗಳಲ್ಲಿವೆ. ಅವುಗಳಲ್ಲಿ ತೆರಿಗೆ ಮನ್ನಮಾಡಿದ, ಮಠಗಳಿಗೆ ಕೊಟ್ಟ ಗ್ರಾಮಗಳ, ಅಣಲೇಶ್ವರ ದೇವರಿಗೆ ಕೊಟ್ಟ ಅಡಿಕೆಯ ತೋಟದ ಉಲ್ಲೇಖಗಳಿವೆ.

ಈ ಜಿಲ್ಲೆಯ ಯಳಂದೂರು, ಗಣಿಗನೂರು, ಬಿಳಿಗಿರಿರಂಗನ ಬೆಟ್ಟ ಮತ್ತು ಮೂಗೂರುಗಳಲ್ಲಿ ಹದಿನಾಡು ಅರಸರಿಗೆ ಸೇರಿದ ಶಾಸನಗಳಿದ್ದು ಅವುಗಳಲ್ಲಿ ಅರಸರ ವಂಶಾವಳಿ, ಗೌರೀಶದೇವರಿಗೆ ಹಾಗೂ ಅನೇಕ ದೇವಸ್ಥಾನಗಳಿಗೆ ಕೊಟ್ಟ ದಾನ, ಬಿಳಿಕಲ ತಿರುವೆಂಗಳನಾಥದೇವರಿಗೆ ಮಹಾನವಮಿ ನವರಾತ್ರಿ ಸೇವೆಗೆ ಕೊಟ್ಟ ಪುದುವಟ್ಟು, ಅರಸರು ಕಟ್ಟಿಸಿದ ಕಲ್ಲುಕಟ್ಟೆ, ಮೇಳದವರಿಗೆ, ಸಂಗೀತಗಾರರಿಗೆ, ನರ್ತನದವರಿಗೆ, ಹೂವಾಡಿಗರಿಗೆ ಮುಂತಾದವರಿಗೆ ಕೊಟ್ಟಿರುವ ದಾನ ಮುಂತಾದ ವಿಷಯಗಳ ಪ್ರಸ್ತಾಪಗಳಿವೆ.

ಚೆಂಜಿ ಅರಸರಿಗೆ ಸೇರಿದ ನಾಲ್ಕು ತಾಮ್ರಶಾಸನಗಳು ಈ ಜಿಲ್ಲೆಯ ನಂಜನಗೂಡಿನ ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿವೆ. ಅವುಗಳಲ್ಲಿ ಈ ಅರಸರ ವಂಶಾವಳಿ, ರಾಮಚಂದ್ರದೇವರಿಗೆ, ಅಲ್ಲಿಯ ಮಠಕ್ಕೆ ಮತ್ತು ಅನ್ನಸತ್ರಕ್ಕೆ ಕೊಟ್ಟ ಗ್ರಾಮಗಳ ಮತ್ತು ಭೂಮಿಯ ಉಲ್ಲೇಖಗಳಿವೆ.

ಮಧುರೆ ಅರಸರ ಮೂರು ತಾಮ್ರಶಾಸನಗಳಲ್ಲಿ ಒಂದು ನಂಜನಗೂಡು ಗ್ರಾಮಕ್ಕೆ, ಇನ್ನೆರಡು ಸೋಸಲೆ ಗ್ರಾಮಕ್ಕೂ ಸೇರಿವೆ. ಇವುಗಳಲ್ಲಿ ಗ್ರಾಮಗಳನ್ನು ದತ್ತಿಯಾಗಿ ಕೊಟ್ಟಿರುವ ವಿಷಯವಿದೆ. ಅಲ್ಲದೆ ಸೋಸಲೆಯ ವ್ಯಾಸರಾಯಮಠದಲ್ಲಿರುವ ಗೋಪಾಲಕೃಷ್ಣದೇವರಿಗೆ ಕೊಟ್ಟಿರುವ ದತ್ತಿಯ ಪ್ರಸ್ತಾಪವೂ ಇದೆ.

ಸೋಸಲೆಯಲ್ಲಿರುವ ವ್ಯಾಸರಾಯಮಠದಲ್ಲಿ ರಾಮನಾಡು ಅರಸರಿಗೆ ಸೇರಿದ ಎರಡು ತಾಮ್ರಶಾಸನಗಳಿವೆ. ಅವುಗಳಲ್ಲಿ ಗೋಪಾಲಕೃಷ್ಣದೇವರಿಗೂ, ವ್ಯಾಸರಾಯಸ್ವಾಮಿಯವರಿಗೂ ಕೊಟ್ಟದತ್ತಿಗಳ ಪ್ರಸ್ತಾಪಗಳಿವೆ.

ಕಳಲೆ ಅರಸರಿಗೆ ಸೇರಿರುವ ಶಾಸನಗಳು ಈ ಜಿಲ್ಲೆಯ ಮಲದೇವನಹಳ್ಳಿ, ಹರದನಹಳ್ಳಿ, ಬೆಟ್ಟದಪುರ, ಕರತಾಳು, ಮೈಸೂರು, ತಿರುಮಕೂಡಲು ಮತ್ತು ತಲಕಾಡುಗಳಲ್ಲಿ ಇವೆ. ಅವುಗಳಲ್ಲಿ ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಸ್ಥಾನಕ್ಕೆ ತಾಂಡವೇಶ್ವರ ವಿಗ್ರಹ, ಮನೋನ್ಮಣಿ ಅಮ್ಮನವರ ಉತ್ಸವ ವಿಗ್ರಹ ಮತ್ತು ಪಾರ್ವತಿ ಉತ್ಸವ ವಿಗ್ರಹ, ಬೆಟ್ಟದಪುರದ ಮಲ್ಲಿಕಾರ್ಜುನ ಬೆಟ್ಟದ ಮೇಲಿರುವ ದೇವಸ್ಥಾನಕ್ಕೆ ತಾಂಡವೇಶ್ವರ ಮತ್ತು ಚಂಡಿಕಾಂಬಿಕೆ ವಿಗ್ರಹಗಳು, ತಿರುಮಕೂಡಲ

ಅಗಸ್ತ್ಯೇಶ್ವರ ದೇವಸ್ಥಾನಕ್ಕೆ ಮನೋನ್ಮಣಿ ಅಮ್ಮನವರ ವಿಗ್ರಹ ಮತ್ತು ತಲಕಾಡು ವೈದ್ಯೇಶ್ವರ ದೇವಸ್ಥಾನಕ್ಕೆ ತಾಂಡವೇಶ್ವರ ಮತ್ತು ಚಂಡಿಕಾಂಬಿಕೆ ವಿಗ್ರಹಗಳು ಇವುಗಳನ್ನು ಕೊಟ್ಟ ಉಲ್ಲೇಖಗಳಿವೆ. ಇನ್ನೊಂದು ಶಾಸನದಲ್ಲಿ ಅರಸನು ಕರತಾಳು ಗ್ರಾಮವನ್ನು ಕಳಲೆ 'ಲಕ್ಷ್ಮೀಕಾಂತಸ್ವಾಮಿಯವರ ನಂಜರಾಯ ತಿರುವಾಳು ಮಹೋತ್ಸವದ ಬಗ್ಗ' ಕೊಟ್ಟನೆಂದು ಹೇಳಿದೆ. ಇವಲ್ಲದೆ ಈ ಶಾಸನಗಳಲ್ಲಿ ಕೆರೆ ಕಟ್ಟಿಸಿರುವ ಹಾಗೂ ಮೈಸೂರು ಕೋಟೆಯಲ್ಲಿನ ತ್ರಿಣಯನೇಶ್ವರ ದೇವಸ್ಥಾನದ ಗೋಪುರ ಕಟ್ಟಿಸಿರುವ ಉಲ್ಲೇಖಗಳೂ ಇವೆ.

ಶಿವಗಿರಿ ಅರಸ ವರಗುಣರಾಮಪಾಂಡ್ಯ ಚಿನ್ನತ್ತಂಬಿ ಕಾಲದ ತಾಮ್ರಶಾಸನ ವೊಂದು ಸೋಸಲೆಯ ವ್ಯಾಸರಾಯಮಠದಲ್ಲಿ ದೊರೆತಿದ್ದು ಅದರಲ್ಲಿ ಆ ಮಠದ ಗೋಪಾಲಕೃಷ್ಣದೇವರ ಭಂಡಾರಕ್ಕೆ ದತ್ತಿಕೊಟ್ಟ ಭೂಮಿಗಳಿರುವ ನಾಲ್ಕು ಗ್ರಾಮಗಳ ಪ್ರಸ್ತಾಪವಿದೆ.

ಮೈಸೂರು ಒಡೆಯರ ಕಾಲದ ಅನೇಕ ಶಾಸನಗಳು ಈ ಜಿಲ್ಲೆಯಲ್ಲಿವೆ. ಇವರ ಕಾಲ ಶಾಸನಗಳನ್ನು ಹಾಕಿಸುತ್ತಿದ್ದ ಪರಂಪರೆಯ ಕೊನೆಯ ಘಟ್ಟವೆನ್ನಬಹುದು. ಇವರ ತಾಮ್ರಶಾಸನಗಳು ವಿಜಯನಗರ ಅರಸರ ತಾಮ್ರಶಾಸನ ರಚನೆಯನ್ನನುಸರಿ ಸಿದ್ದರೂ ಅವುಗಳ ಹಲಗೆಗಳು ಗಾತ್ರದಲ್ಲಿ ದೊಡ್ಡವು, ಆಕಾರದಲ್ಲಿ ಹೆಚ್ಚು ಸುಧಾರಿಸಿವೆ. ಇವರ ತಾಮ್ರಶಾಸನಗಳಲ್ಲಿ ಹಲಗೆಗಳೂ ಹೆಚ್ಚು. ಇವರ ಕೆಲವು ತಾಮ್ರ ಶಾಸನಗಳು ಬಹುಶಃ ಕರ್ನಾಟಕದ ಅರಸುಮನೆತನಗಳ ಶಾಸನಗಳಲ್ಲಿಯೇ ಅತ್ಯಂತ ದೊಡ್ಡವೆಂದು ಹೇಳಬಹುದು. ತಿ. ನರಸೀಪುರದ ಒಂದು ತಾಮ್ರಶಾಸನದಲ್ಲಿ 16 ಹಲಗೆಗಳಿದ್ದು 1390 ಪಂಕ್ತಿಗಳಿಂದ ಕೂಡಿದೆ. ತಾಮ್ರಶಾಸನಗಳ ಹಲಗೆಗಳನ್ನು ಬಳೆಯೊಂದಕ್ಕೆ ಪೋಣಿಸಿದ್ದು ಅವುಗಳ ಜೊತೆಗೆ ವರಾಹ ಮುದ್ರೆಯನ್ನುಳ್ಳ ಗಂಟೆ ಯಾಕಾರದ ದಪ್ಪ ಗುಂಡೊಂದನ್ನು ಸೇರಿಸಿರುತ್ತದೆ. ಈ ತಾಮ್ರಶಾಸನಗಳಲ್ಲಿ ಬಹುತೇಕ ದತ್ತಿಶಾಸನಗಳಾಗಿದ್ದು ದತ್ತಿಬಿಟ್ಟ ಗ್ರಾಮಗಳ ಚತುಸ್ಸೀಮೆಗಳ ವಿವರಗಳು ಬೇರೆ ರಾಜಮನೆತನಗಳ ಶಾಸನಗಳಲ್ಲಿ ಎಲ್ಲಿಯೂ ಕಂಡುಬರದಷ್ಟು ವಿವರ ಪೂರ್ಣವಾಗಿ ಕೆಲವುವೇಳೆ ಹಲವು ಹಲಗೆಗಳನ್ನಾವರಿಸುವಷ್ಟು ವಿಸ್ತಾರವಾಗಿವೆ. ಈ ತಾಮ್ರಶಾಸನಗಳು ಒಡೆಯರ ವಂಶಾವಳಿಯನ್ನು ವಿವರವಾಗಿ ತಿಳಿಸುತ್ತವೆ. ಮೊದಲು ವಿಷ್ಣು ಬ್ರಹ್ಮರಿಂದಾರಂಭಿಸಿ ಚಂದ್ರನ ಮೂಲಕ ಯದುರಾಯನವರೆಗೆ ಪೌರಾಣಿಕ ವಂಶಾವಳಿಯನ್ನು ತಿಳಿಸುತ್ತವೆ. ಯದುರಾಯರೂ ಅವರ ವಂಶದವರೂ ದ್ವಾರಕೆಯಲ್ಲಿ ಆಳುತ್ತಿದ್ದು ಆ ವಂಶದಲ್ಲಿ ಕೆಲವರು ಕರ್ಣಾಟದೇಶಕ್ಕೆ ಬಂದು ಅಲ್ಲಿನ ಸೌಂದರ್ಯಕ್ಕೆ ಮನಸೋತು ಇಲ್ಲಿಯೇ ನೆಲಸಿದರೆಂದು ಮಹಿಷಾಪುರವು (ಮೈಸೂರು) ಇವರ ರಾಜಧಾನಿಯಾಯಿತೆಂದೂ ತಿಳಿಸುವುದಲ್ಲದೆ ಮುಂದೆ ಬೆಟ್ಟದ ಚಾಮರಾಜ ನಿಂದಾರಂಭಿಸಿ ವಂಶಾವಳಿಯನ್ನು ವಿವರಿಸುತ್ತವೆ.

ಚಾರಿತ್ರಿಕ ವಿಷಯಗಳು, ಬಿರುದಾವಳಿಗಳು, ದಾನಧರ್ಮ, ಅಗ್ರಹಾರಗಳನ್ನು

ರಚಿಸಿ ಹಲವು ವೃತ್ತಿಗಳಾಗಿ ವಿಂಗಡಿಸಿ ದತ್ತಿಬಿಟ್ಟಿರುವುದು, ದೇವಾಲಯ, ಮಠ, ಗೋಪುರ ಮತ್ತು ಮಂಟಪಗಳನ್ನು ಕಟ್ಟಿಸಿರುವುದು ಅಲ್ಲದೆ ಅವುಗಳ ಜೀರ್ಣೋದ್ಧಾರ ಮಾಡಿಸಿರುವುದು ಇವೇ ಈ ಶಾಸನಗಳಲ್ಲಿರುವ ಮುಖ್ಯ ವಿಷಯಗಳು. ಅನೇಕ ದೇವಾಲಯಗಳಿಗೆ ಲೋಹ ಹಾಗೂ ಶಿಲಾಮೂರ್ತಿಗಳನ್ನು ಮಾಡಿಸಿಕೊಟ್ಟಿದ್ದನ್ನು ತಿಳಿಸುವ ಶಾಸನಗಳಿವೆ. ಕೆಲವು ಕ್ರಯ ಭೂದಾನ ಶಾಸನಗಳೂ ಇವೆ. ಇಲ್ಲಿ ನಾವು ತ್ರಿಯಂಬಕಪುರ, ಕುರಹಳ್ಳಿ, ಉಪ್ಪಿನಹಳ್ಳಿ, ಆಲನಹಳ್ಳಿ, ನಂಜನಗೂಡು ದೇಬೂರು, ಕಪ್ಪುಸೋಗೆ, ಹೊಂಗನೂರು, ಚಾಮರಾಜನಗರ, ಹರದನಹಳ್ಳಿ, ಮೈಸೂರು, ತಲಕಾಡು, ಉಕ್ಕಲ್ಗೆರೆ ಮತ್ತು ಮಾಣಿಕ್ಯಾಪುರದ ಶಾಸನಗಳನ್ನು ಹೆಸರಿಸಬಹುದು.

ತೀವ್ರ ಬರಗಾಲದ ಚಿತ್ರವನ್ನು ಹೊಂಡರಬಾಳಿನ ಶಾಸನವೊಂದು ನಿರ್ದೇಶಿಸುತ್ತದೆ. ಮೈಸೂರಿನ ಒಂದು ಶಾಸನದಲ್ಲಿ ಪವಾಡದ ಪ್ರಸ್ತಾಪವೂ ಇದೆ. ಅದೇ ಊರಿನ ಇನ್ನೆರಡು ಶಾಸನಗಳಲ್ಲಿ ಮುಮ್ಮಡಿ ಕೃಷ್ಣರಾಜವೊಡೆಯರ ಮೂವರು ಧರ್ಮಪತ್ನಿಯರಾದ ದೇವಮ್ಮಾಜಿ, ಲಿಂಗಾಜಮ್ಮಣ್ಣಿ ಮತ್ತು ಚೆಲುವಾಜಮ್ಮಣ್ಣಿಯವರು ತಾವುಗಳು ವಾಸಿಸುತ್ತಿದ್ದ ಅರಮನೆಯ ಭಾಗಗಳಾದ ಲಕ್ಷ್ಮೀವಿಲಾಸ, ಕೃಷ್ಣಾವಿಲಾಸ ಮತ್ತು ರಮಾವಿಲಾಸಗಳೆಂಬ ಹೆಸರಿನಿಂದ ಪ್ರಾರಂಭವಾಗಿ ಕ್ರಮವಾಗಿ ದೇವಾಂಬಾ, ಲಿಂಗಾಂಬಾ ಮತ್ತು ಚಲುವಾಂಬಾ ಅಗ್ರಹಾರಗಳನ್ನು ಸ್ಥಾಪಿಸಿದರೆಂದು ತಿಳಿಸುತ್ತವೆ. ಪಟ್ಟಮಹಿಷಿಯಾದ ದೇವಾಂಬಾ ಪ್ರಸನ್ನ ನಂಜುಂಡೇಶ್ವರ ದೇವಾಲಯವನ್ನು ಕಟ್ಟಿಸಿದಳು. ಉಳಿದಿಬ್ಬರು ಕ್ರಮವಾಗಿ ಪರಕಾಲ ಹಾಗೂ ಅಹೋಬಲ ಮಠಗಳನ್ನು ತಮ್ಮ ತಮ್ಮ ಅಗ್ರಹಾರಗಳಲ್ಲಿ ಕಟ್ಟಿಸಿದರು. ಪರಕಾಲಮಠದಲ್ಲಿ ಹಯಗ್ರೀವ ವಿಗ್ರಹವನ್ನು, ಅಹೋಬಲಮಠದಲ್ಲಿ ಲಕ್ಷ್ಮೀನರಸಿಂಹ ವಿಗ್ರಹವನ್ನು ಪ್ರತಿಷ್ಠಾಪಿಸಿ ಪ್ರತ್ಯೇಕವಾದ ದತ್ತಿಗಳನ್ನು ಬಿಟ್ಟ ವಿಷಯ ಇವುಗಳಲ್ಲಿದೆ.

ಮಹಾವಿಷ್ಣು ಭಕ್ತನಾದ ರಾಜವೊಡೆಯನು ಯದುಗಿರಿಯ ನಾರಾಯಣ ಅಂದರೆ ಮೇಲುಕೋಟೆಯ ಚೆಲಪಿಳ್ಳೆರಾಯರಿಗೆ ಕ್ರಿ.ಶ. 1614ರಲ್ಲಿ ತನ್ನ ಹೆಸರಿನಲ್ಲಿ ರಾಜಮುಡಿ ಎಂಬ ರತ್ನಕಿರೀಟ ಕೊಟ್ಟನೆಂದು ಮೈಸೂರಿನ ಶಾಸನದಲ್ಲಿ ಹೇಳಿದೆ. ಹನಸೋಗೆಯ ಎರಡು ಶಾಸನಗಳ ಪೈಕಿ ಒಂದರಲ್ಲಿ ಬರಗೂರು ಮತ್ತು ಅದರ 12 ಉಪಗ್ರಾಮಗಳನ್ನು ಕೃಷ್ಣರಾಜಸಮುದ್ರವೆಂಬ ಅಗ್ರಹಾರವನ್ನಾಗಿ ಮಾಡಿ 80 ವೃತ್ತಿಗಳನ್ನಾಗಿ ವಿಭಾಗಿಸಿ ದತ್ತಿಬಿಟ್ಟಿದ್ದನ್ನೂ, ಇನ್ನೊಂದು ಶಾಸನ 12 ಗ್ರಾಮಗಳನ್ನು ದೇವಾಂಬಸಮುದ್ರವೆಂಬ ಅಗ್ರಹಾರವನ್ನಾಗಿ ಮಾಡಿ 225 ವೃತ್ತಿಗಳನ್ನಾಗಿ ವಿಭಾಗಿಸಿ ದತ್ತಿಬಿಟ್ಟಿದ್ದನ್ನು ತಿಳಿಸುತ್ತದೆ. ಇವುಗಳಲ್ಲಿ ಪ್ರತಿಗ್ರಹಿಗಳಿಗೆ ವೃತ್ತಿಯೊಂದಿಗೆ ಹಾಸಿಗೆ, ದಿಂಬು, ಪೀಠೋಪಕರಣಗಳು, ದೇವೋಪಕರಣಗಳು, ಗೃಹೋಪಕರಣಗಳು ಮತ್ತು ಸರ್ವಸಾಂಭಾರಗಳಿಂದ ತುಂಬಿದ ಮನೆಗಳನ್ನು ಒದಗಿಸಿದ ವಿವರಗಳಿವೆ.

ಮೈಸೂರು ಒಡೆಯರು ಸಾಹಿತ್ಯ ಹಾಗೂ ಲಲಿತಕಲೆಗಳಲ್ಲಿ ಆಸಕ್ತಿಹೊಂದಿದ್ದು ವಿದ್ವಾಂಸರ, ಪಂಡಿತರ ಪೋಷಕರಾಗಿದ್ದರು ಎನ್ನುವುದಕ್ಕೆ ಅವರ ಏಚಿಗನಹಳ್ಳಿ, ಶಂಕಹಳ್ಳಿ ಮತ್ತು ಚಕ್ಕೂರು ಗ್ರಾಮಗಳ ಶಾಸನಗಳೇ ಸಾಕ್ಷಿಯಾಗಿದೆ.

ಒಟ್ಟಿನಲ್ಲಿ ಈ ಜಿಲ್ಲೆಯ ಶಾಸನಗಳ ವಿಶ್ಲೇಷಣೆಯಿಂದ ಅವು ದೊರೆತ ಸ್ಥಳಗಳ ಬಗ್ಗೆ ಐತಿಹಾಸಿಕ ಹಾಗೂ ಸಾಂಸ್ಕೃತಿಕ ದೃಷ್ಟಿಗಳಿಂದ ಸ್ವಾರಸ್ಯವಾಗಿರುವ ಸಂಗತಿಗಳು ಅನೇಕ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ವಿಷಯಗಳು, ಭಾಷೆ, ಸಾಹಿತ್ಯ ಶಾಸನ ಕವಿಗಳು, ರುವಾರಿಗಳು ಮುಂತಾದ ಉಪಯುಕ್ತ ವಿಷಯಗಳು ನಮಗೆ ತಿಳಿದುಬರುತ್ತವೆ. ಹೀಗೆ ಮೈಸೂರು ಜಿಲ್ಲೆಯ ಶಾಸನಗಳು ವಿವಿಧ ವಿಷಯಗಳನ್ನೊಳಗೊಂಡು ನಮ್ಮ ನಾಡಿನ ಅತ್ಯಮೂಲ್ಯವಾದ ಸೊತ್ತಾಗಿ ಉಳಿದಿವೆ.

ಜಗತ್ತಿನ ಇತಿಹಾಸದಲ್ಲಿ ಮಹಾತ್ಯಾಗಗಳನ್ನು ಮಾಡುವವರು ಮಹಾ ಪುರುಷರು, ಆದರೆ ಫಲಗಳನ್ನು ಅನುಭವಿಸುವವರು ಸಾಮಾನ್ಯ ಜನರು.

—ಸ್ವಾಮಿ ವಿವೇಕಾನಂದ

ಪ್ರಾಚೀನ ಭಾರತದ ವೈಭವವನ್ನು ಪುನರುಜ್ಜೀವನಗೊಳಿಸುವುದು ನಮ್ಮಿಂದ ಸಾಧ್ಯವಿಲ್ಲ, ಆದರೆ ಭಾರತದ ಭವಿಷತ್ತನ್ನು ಉಜ್ವಲಗೊಳಿಸುವುದು ನಮ್ಮಿಂದ ಸಾಧ್ಯ.

—ನ್ಯಾಯಮೂರ್ತಿ ರಾನಡೆ

ಮೂರ್ಖರು ಜ್ಞಾನಿಗಳಿಂದ ಏನೂ ಕಲಿಯುವುದಿಲ್ಲ, ಆದರೆ ಜ್ಞಾನಿಗಳು ಮೂರ್ಖರಿಂದ ಬಹಳಷ್ಟು ಕಲಿಯುತ್ತಾರೆ.

—ಡಚ್ ಗಾದೆ.

ಪರಿಸ್ಥಿತಿ ದುರ್ಬಲರ ಯಜಮಾನ, ಆದರೆ ಬುದ್ಧಿವಂತರಿಗೆ ಅದು ಅಸ್ತ್ರ.

—ಸ್ಯಾಮುಯಲ್ ಲವರ್

ಡಾ. ಪುರುಷೋತ್ತಮ ಬಿಳಿಮಲೆ

ಗೌಡ ಜನಾಂಗ—ಮದುವೆಯ ಸಾಂಕೇತಿಕತೆ*

ಪ್ರವೇಶ :

ಕಳೆದ ಒಂದು ಶತಮಾನದಲ್ಲಿ ಮಾನವ ಶಾಸ್ತ್ರಜ್ಞರು ಪ್ರಪಂಚದ ಬೇರೆ ಬೇರೆ ಮೂಲೆಗಳಲ್ಲಿ ನೆಲೆ ನಿಂತು, ಕ್ಷೇತ್ರಕಾರ್ಯದ ಮೂಲಕ, ಸಾವಿರಾರು ಸಮುದಾಯ ಗಳನ್ನು ಅಧ್ಯಯನ ಮಾಡಿದ್ದಾರೆ. ಬೇರೆ ಬೇರೆ ಸಂಸ್ಕೃತಿಗಳನ್ನು ತೌಲನಿಕವಾಗಿ ನೋಡುತ್ತ, ಅವುಗಳ ನಡುವೆ ಇರುವ ವೈವಿಧ್ಯತೆಗಳನ್ನೋ, ಸಮಾನತೆಗಳನ್ನೋ ಗುರುತಿಸಲು ಯತ್ನಿಸುತ್ತ ಅವುಗಳಿಗೆ ವಿವರಣೆಯನ್ನೋ, ವ್ಯಾಖ್ಯಾನವನ್ನೋ ನೀಡಿದ್ದಾರೆ. ಇದರ ಜೊತೆಗೆ ಪುರಾತತ್ತ್ವ ಸಂಶೋಧನೆಗಳಿಂದ ಬೆಳಕಿಗೆ ಬಂದ ಪುರಾತನ ಸಂಸ್ಕೃತಿಗಳನ್ನು ಗಮನದಲ್ಲಿರಿಸಿಕೊಂಡು, ಮನುಕುಲ ನಡೆದು ಬಂದ ದಾರಿಯನ್ನು ಚಾರಿತ್ರಿಕವಾಗಿ ವಿಶ್ಲೇಷಿಸಲು ಯತ್ನಿಸಿದ್ದಾರೆ. ಒಟ್ಟಿನಲ್ಲಿ ಮಾನವ ಜೀವನದಲ್ಲಿ ಸಮಾಜ ವ್ಯವಸ್ಥೆಯ ಭಿನ್ನ ಭಿನ್ನ ಅಂಗಗಳು ಕಾರ್ಯ ನಿರತವಾಗುವ ಬಗೆ, ಆ ಮೂಲಕ ಸಂಸ್ಕೃತಿಯೊಂದು ಸಮಗ್ರತೆಯನ್ನು ಸಾಧಿಸಲು ಯತ್ನಿಸುವ ಬಗೆಯನ್ನು ಅಪಾರವಾದ ವಿಷಯ ಸಂಗ್ರಹಣೆಯ ಮೂಲಕ ತಿಳಿಸಿ ಹೇಳುವ ಕೆಲಸ ವನ್ನು ಮಾನವಶಾಸ್ತ್ರ ಮಾಡಿದೆ.

ಇಂಥ ಸಂಸ್ಕೃತಿಯ ಮೂಲ ಘಟಕ ಗಂಡು ಮತ್ತು ಹೆಣ್ಣು. ಇವೆರಡೂ ಪರಸ್ಪರ ಪೂರಕ ಮತ್ತು ವಿರೋಧ ಗುಣವುಳ್ಳದ್ದು. ಮದುವೆ ಮತ್ತು ಸಂತಾನ ದಿಂದ ಅದು ಬೆಳೆದು ಬಂದು ತನಗಗತ್ಯವಾದ ಕುಟುಂಬವನ್ನು ರಚಿಸಿಕೊಳ್ಳುತ್ತದೆ. ಆಸ್ಕರ್ ಲೀವಿಸ್ ಅವರು ತಮ್ಮ ಅಧ್ಯಯನವನ್ನು 'ಕುಟುಂಬ'ಕ್ಕೆ ಮಿತಿಗೊಳಿಸಿ ಮಹತ್ವದ ತೀರ್ಮಾನಗಳನ್ನು ಕೊಡಲು ಶಕ್ತರಾದರು. ಕುಟುಂಬವು 'ಕೂಡಿ ಉಂಬ'(ಕೂಡಿ ಊಟ ಮಾಡುವ) ಗಂಡು ಹೆಣ್ಣಿನ ವ್ಯವಸ್ಥೆಯನ್ನು ಹೇಳುತ್ತದೆ. ಆಹಾರದ ನಿಯಮಕ್ಕೆ ಮತ್ತು ಸಹಬಾಳ್ವೆಗೆ ಸಂಬಂಧಿಸಿದ 'ಕುಟುಂಬ' ಪದವು ಸಂಬಂಧ ವಾಚಕ (Kinship term) ವಲ್ಲ. ಬದಲಾಗಿ ಮೂಲತಃ ಮದುವೆಯೆಂಬ ಘಟನೆಗನುಸಾರವಾಗಿ ರೂಪಗೊಳ್ಳುವಂಥದ್ದು. ಅಂದರೆ ಕುಟುಂಬವೊಂದರ

---

* ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದಲ್ಲಿ ಓದಿದ ಲೇಖನ.

ನಡಾವಳಿ (Behaviour) ಯನ್ನು ಮದುವೆಯ ವಿಧಿವಿಧಾನಗಳು ಸಾಂಕೇತಿಕವಾಗಿ ಅಭಿವ್ಯಕ್ತಿಸಲೇ ಬೇಕಾಗುತ್ತದೆ. ಇಂಥ ಕಡೆ ಸಮಾನ ಆಚರಣೆ ಇರುವ ಒಂದು ಗುಂಪಿಗೆ, ಆ ಗುಂಪಿನ ಮದುವೆ ಕ್ರಮವು ಸಹಜವಾಗಿ ತೋರಿದರೆ, ಇತರರ ಆದರ್ಶಗಳು, ಭಾವನೆಗಳು ನಡಾವಳಿಗಳು ವಿಚಿತ್ರವೆಂದೋ, ಅಸಂಬದ್ಧವೆಂದೋ ತೋರಬಹುದು. ಒಂದು ಕುಟುಂಬದ ಆಹಾರ ನಿಯಮ, ಉಡುಪಿನ ಕ್ರಮಗಳು, ತೊಡುಗೆಗಳು, ಅಲಂಕಾರ, ವಿವಾಹ ಸಂಬಂಧಗಳು, ವ್ಯಕ್ತಿ ಸಂಬಂಧಗಳು, ಕೃಷಿ ಪದ್ಧತಿಗಳು—ಹೀಗೆ ಸಕಲವೂ ಅದರ ಅಧ್ಯಯನದ ವ್ಯಾಪ್ತಿಗೆ ಬರುತ್ತದೆ. ದಯೆ, ಕರುಣೆ, ದ್ವೇಷ, ಭಕ್ತಿ, ವಿನಯ, ಗೌರವ ಈ ಭಾವನೆಗಳನ್ನು ಯಾರು ಯಾರಲ್ಲಿ ಯಾವ ಮಟ್ಟದಲ್ಲಿ, ಏಕೆ ತೋರಬೇಕೆಂಬುದೂ ಇದರಲ್ಲಿ ಸೇರುತ್ತದೆ. ಹೊರ ಸಂಸ್ಕೃತಿಗಳ ಸಂಪರ್ಕವು ತೀವ್ರವಾದಂತೆ ಈ ಭಾವನೆ ಕಡಮೆಯಾಗುವುದು ಹೌದಾದರೂ ಪ್ರತಿ ಸಂಸ್ಕೃತಿಯಲ್ಲೂ ತನ್ನದು ಎಂಬುದಕ್ಕೆ ವಿಶಿಷ್ಟ ಸ್ಥಾನವೊಂದು ಇದ್ದೇ ತೀರುತ್ತದೆ ಇದರಿಂದಾಗಿ ಒಂದು ಜನಾಂಗದ ಕುಟುಂಬ ವ್ಯವಸ್ಥೆಯು ತನ್ನ ವಿವಿಧ ರೀತಿಯ ಹೊಂದಾಣಿಕೆಗಳ ಪರಿಣಾಮವಾಗಿ ತನ್ನ ಆಶ್ರಯದಲ್ಲಿ ಇರುವವರಿಗೆ ತೃಪ್ತಿಯನ್ನೋ, ನಿರಾಶೆಯನ್ನೋ, ಸಮುಚಿತ್ತತೆಯನ್ನೋ, ನೀಡುತ್ತದೆ. ಇವುಗಳನ್ನು ಒಂದು ಕುಟುಂಬದ ಅಧ್ಯಯನದಲ್ಲಿ ಸ್ಪಷ್ಟವಾಗಿ ಗುರುತಿಸಲು ಸಾಧ್ಯ.

ಈಗಾಗಲೇ ನಾನು ಸ್ಪಷ್ಟಪಡಿಸಿರುವಂತೆ, ಒಂದು ಕುಟುಂಬದ ನಡಾವಳಿ, ಮತ್ತು ದೃಷ್ಟಿಕೋನವನ್ನು ಆ ಕುಟುಂಬ ಯಾವ ಗುಂಪಿಗೆ ಸೇರಿದೆಯೋ ಅವರಲ್ಲಿರುವ ಮದುವೆ ಕ್ರಮದಲ್ಲಿ ನಾವು ಗುರುತಿಸಬಹುದು. ಸುಳ್ಯ ಪರಿಸರದ ಗೌಡ ಜನಾಂಗದಲ್ಲಿ ಬಳಕೆಯಲ್ಲಿರುವ ಮದುವೆ ಕ್ರಮವನ್ನು ವಿಶ್ಲೇಷಿಸುವುದರ ಮೂಲಕ ಮೇಲಿನ ಮಾತನ್ನು ಸಮರ್ಥಿಸುವುದು ಈ ಪ್ರಬಂಧದ ಉದ್ದೇಶ.

ಗೌಡ ಜನಾಂಗದ ಸಂಕ್ಷಿಪ್ತ ಪರಿಚಯ :

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕು, ಪುತ್ತೂರು ತಾಲೂಕು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಸುಮಾರು ಎರಡುಲಕ್ಷದ ಹತ್ತು ಸಾವಿರದಷ್ಟು ಸಂಖ್ಯೆಯಲ್ಲಿ ಗೌಡರಿದ್ದಾರೆ. ಬಂಟ್ವಾಳ ಮತ್ತು ವಿಟ್ಲ ಪರಿಸರದಲ್ಲಿ, ಕೊಡಗಿನ ಭಾಗಮಂಡಲ ಪರಿಸರದಲ್ಲಿಯೂ ಗೌಡರು ಇದ್ದಾರೆ. ಭಾಷಿಕವಾಗಿ ಇವರಲ್ಲಿ ಎರಡು ಪ್ರಭೇದಗಳಿವೆ. ಸುಳ್ಯ ಮತ್ತು ಭಾಗಮಂಡಲ ಪರಿಸರದಲ್ಲಿ ‘ ಗೌಡಕನ್ನಡ ’ ಇದ್ದರೆ ಇತರೆಡೆಗಳಲ್ಲಿ ತುಳು ಭಾಷೆಯನ್ನಾಡುತ್ತಾರೆ.[1]

ಸುಳ್ಯ ಪರಿಸರಕ್ಕೆ ಗೌಡರು ಮೂಲನಿವಾಸಿಗಳಲ್ಲ. ಇವರು ಹಾಸನ ಪರಿಸರದ ಐಗೂರು ಸೀಮೆಯಿಂದ ಕ್ರಿ.ಶ. 1450–1600ರ ಮಧ್ಯೆ ಕರಾವಳಿಗೆ ವಲಸೆ ಬಂದಿದ್ದಾರೆ. ವಲಸೆ ಬಂದ ಕಾಲದಲ್ಲಿ ರಾಗಿ ಪ್ರಧಾನ ಬೆಳೆಯಾಗಿದ್ದರೂ ಅನಂತರದ

ಕಾಲದಲ್ಲಿ ಆ ಸ್ಥಾನವನ್ನು ಬತ್ತ ಮತ್ತು ಅಡಿಕೆ ಆಕ್ರಮಿಸಿಕೊಂಡಿತು. ಬತ್ತವನ್ನು ಹಣವನ್ನಾಗಿ ಮಾರ್ಪಡಿಸುವ ಬ್ರಿಟಿಷರ ಧೋರಣೆಯನ್ನು ಪ್ರತಿಭಟಿಸಿದ ಗೌಡರು ಕ್ರಿ.ಶ. 1830ರ ದಶಕದಲ್ಲಿ 'ಅಮರ ಸುಳ್ಯದ ದಂಗೆ'ಗೆ ಕಾರಣಕರ್ತರಾದರು. ಪರಿಣಾಮವಾಗಿ ಆಳರಸರ ಅವಕೃಪೆಗೆ ತುತ್ತಾಗಿ ಹಿಂದುಳಿದರು. ಸ್ವಾತಂತ್ರ್ಯ ನಂತರವೂ ಈ ಜನಾಂಗದ ಜೀವನ ಕ್ರಮದಲ್ಲಿ ಗಂಭೀರ ಬದಲಾವಣೆಗಳೇನೂ ಆಗಿಲ್ಲ.

ಮದುವೆ: ಕ್ರಮ ಮತ್ತು ವಿಶ್ಲೇಷಣೆ:

ಗೌಡರು ಮದುವೆಯನ್ನು ಬದುಕಿನ ಅತ್ಯಂತ ಮುಖ್ಯ ಘಟ್ಟವೆಂದು ಮಾನ್ಯ ಮಾಡಿದ್ದಾರೆ. ಅದು 'ಮನೆತನದ ಗೌರವ'ವನ್ನು ಪ್ರತಿನಿಧಿಸುತ್ತದೆ ಎಂದು ಅವರ ನಂಬಿಕೆ. ಕುಟುಂಬ ಮತ್ತು ಸಮಾಜದ ವ್ಯಾಪ್ತಿಯನ್ನು ನಿರ್ಧರಿಸುವ ಪ್ರಮುಖ ಮಾನದಂಡವಾಗಿ 'ಮದುವೆ' ಅವರಲ್ಲಿ ಅನುಷ್ಠಾನಕ್ಕೆ ಬರುತ್ತದೆ.[2]

ಗೌಡರ ಮದುವೆಯ ಮೊದಲ ಹಂತ ಆರಂಭವಾಗುವುದು 'ಬಳಿ'ಯ ಆಯ್ಕೆಯಲ್ಲಿ. ಪ್ರಸ್ತುತ ಗೌಡರಲ್ಲಿ ಬಳಕೆಯಲ್ಲಿರುವ 12 ಬಳಿಗಳಲ್ಲಿ, ವರನು ತನ್ನ ಗೋತ್ರವನ್ನು ಬಿಟ್ಟು, ತನಗೆ ಸರಿ ಹೊಂದುವ 'ಬಳಿ'ಯೊಂದನ್ನು ಆಯ್ದುಕೊಳ್ಳಬೇಕಾಗುತ್ತದೆ. ಇಂಥ ಆಯ್ಕೆಯಲ್ಲಿ ವರನ ತಂದೆ ಮತ್ತು ತಾಯಿಯರ ಬಳಿಯನ್ನೇ ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತಾರೆ. ಆಸ್ತಿಯ ಒಡೆತನ ಹಾಗೆ ಬಳಿಯೂ ತಂದೆಯಿಂದ ಮಗನಿಗೆ ಇಳಿದು ಬರುವುದರಿಂದ, ತಂದೆಯ 'ಬಳಿ'ಯ ಹುಡುಗಿಯನ್ನು ಮದುವೆಯಾಗುವಂತಿಲ್ಲ. ಆದರೆ ತಂದೆಯ ತಂಗಿಯನ್ನು ಬೇರೆ ಕಡೆಗೆ ಕೊಟ್ಟಿರುವುದರಿಂದ ಆಕೆಯಲ್ಲಿ ಹುಟ್ಟಿದ ಹೆಣ್ಣನ್ನು ಮತ್ತೆ ಮನೆಗೆ ಮದುವೆಯ ಮೂಲಕ ತರಬಹುದು; ಮಗಳನ್ನು ಕೊಡಬಹುದು. ಅದೇ ಪ್ರಕಾರ ಮಗಳನ್ನು ತಾಯಿಯ ಸಹೋದರನೇ ಮದುವೆ ಮಾಡಿಕೊಳ್ಳಬಹುದು. ಇಲ್ಲವೇ ಸೋದರ ಮಾವನ ಮಗನಾದರೂ ಮದುವೆ ಆಗಬಹುದು. ಇಲ್ಲಿ ಮೂಲ ನಿಷೇಧ ಇರುವುದು 'ಒಂದೇ ಬಳಿಯಲ್ಲಿ ಮದುವೆಯಾಗಕೂಡದು' ಎಂಬುದು ಮಾತ್ರ. 'ಒಂದೇ ಬಳಿಯವರೆಲ್ಲ ಸಹೋದರ ಸಹೋದರಿಯರಾದ್ದರಿಂದ' ಮತ್ತು ಅದು ತಂದೆಯಿಂದ ನೇರವಾಗಿ ಇಳಿದು ಬಂದಿರುವುದರಿಂದ ಅಲ್ಲಿ ಮದುವೆ ನಿಷಿದ್ಧವಾಗುತ್ತದೆ.[3] ಇಲ್ಲಿ ತಾಯಿಯ 'ಬಳಿಯ' ವಧುವಾದರೆ ಅದಕ್ಕೆ ಪ್ರಾಶಸ್ತ್ಯ ಹೆಚ್ಚು. ತಂದೆಯ ಆಯ್ಕೆಯೇ ಮಗನ ಆಯ್ಕೆಯೂ ಆಗುತ್ತದೆ. ಬಳಿಯ ಈ 'ಆಯ್ಕೆ' ಹೆಣ್ಣಿನ ಆಯ್ಕೆಯನ್ನೂ ಸಮರ್ಥಿಸುತ್ತದೆ. ಅಕ್ಕನ ಮಗಳನ್ನು ಅಣ್ಣನಾದರೂ ಮದುವೆಯಾಗಬಹುದು ಇಲ್ಲವೇ ಅಣ್ಣನ ಮಗನಾದರೂ ಮದುವೆಯಾಗಬಹುದು. ಅಂದರೆ ಒಂದು ಹೆಣ್ಣಿನ ಮೇಲೆ ಆಕೆಯ ಸೋದರ ಮಾವ ಮತ್ತು ಸೋದರ ಮಾವನ ಮಗನಿಗೂ ಸಮಾನ ಮದುವೆಯ ಹಕ್ಕು ಇರುವುದು ಕಂಡುಬರುತ್ತದೆ. ತನಗೆ ಮದುವೆ ಆಗಲಾಗದ ಸಂದರ್ಭದಲ್ಲಿ ಹಕ್ಕನ್ನು ಮುಂದಿನ ತಲೆಮಾರಿಗೆ ದಾಟಿಸಿ, ಆಕೆಯನ್ನು ಒಳತರುವ ಕ್ರಮವಿದು. ಗೌಡರ ಮದುವೆಯ

ಶೇಕಡಾ 30 ಭಾಗವನ್ನು ನಂದರ, ಹೆಮ್ಮನ, ಬಂಗಾರ, ಮತ್ತು ಮೂಲರ ಬಳಿಗಳೇ ಹಂಚಿಕೊಂಡಿದ್ದೂ, ಅಲ್ಲಿ ಕ್ವಚಿತ್ತಾಗಿ ಒಂದೇ ಬಳಿಯಲ್ಲಿ ಮದುವೆಯಾದದ್ದೂ ಇದೆ.[4]

ತಂದೆಯ ತಂಗಿಯ ಕಡೆಯಿಂದ (ಆಕೆಯ ಬಳಿ ಬೇರೆಯಾಗುತ್ತದೆ) ‘ ಹೆಣ್ಣನ್ನು ತರುವುದು ’ ಮತ್ತು ತಾಯಿಯ ಸಹೋದರನ ಕಡೆಗೆ ‘ ಹೆಣ್ಣನ್ನು ಕೊಡುವುದು ’ ಗೌಡರಲ್ಲಿ ಪುನರಾವರ್ತನೆಗೊಳ್ಳುವ ಘಟನೆ[5]. ಇಲ್ಲಿ ‘ ಕೊಡುವ ’ ಮತ್ತು ‘ ತರುವ ’ ಎಂಬ ಎರಡು ಕನಿಷ್ಠ ಗುಂಪುಗಳ ಅವಶ್ಯಕತೆಯಿದೆ. ಇದನ್ನು ‘ ಹೆಣ್ಣಿನ ಕಡೆ ’ ಮತ್ತು ‘ ಗಂಡಿನ ಕಡೆ ’ ಎಂದು ಗೌಡರು ಕರೆಯುತ್ತಾರೆ.

ಮದುವೆಯಲ್ಲಿ ಗಂಡಿನ ಕಡೆಯವರೇ ಹುಡುಗಿ ನೋಡಲು (ಗೂಡೆ ನೋಡ್ದು) ಹೋಗುತ್ತಾರೆ. ಹಾಗೆ ಹೋಗುವಾಗ ಎರಡು ವಿಭಿನ್ನ ಗುಂಪುಗಳ ಮಧ್ಯೆ ಸಮಾಲೋಚನೆ ನಡೆಸಲು ಮಧ್ಯವರ್ತಿಯೊಬ್ಬನನ್ನು ಆಯ್ಕೆ ಮಾಡುತ್ತಾರೆ. ಇವನಿಗೆ ‘ ದಲ್ಲಾಳಿ ’ ಎಂದು ಹೆಸರು. ಈ ದಲ್ಲಾಳಿ ಎರಡೂ ಕಡೆಗಳ ಪರಿಚಯಸ್ಥನಾಗಿರಬೇಕು. ಈತ ಎರಡು ಗುಂಪಿನ ಜನರ ಭೇಟಿ ಸಂದರ್ಭದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುತ್ತಾನೆ. ಹುಡುಗಿ ಒಪ್ಪಿಗೆಯಾದರೆ, ಅನಂತರ ‘ ಹುಡುಗಿ ಕಡೆ ’ಯವರು ‘ ಹುಡುಗನ ಕಡೆ ’ ಮನೆ ನೋಡಲು (ಹೈದನ ಮನೆ ನೋಡ್ದು) ಬರುತ್ತಾರೆ. ಪರಸ್ಪರ ಊಟೋಪಚಾರಗಳು ಸಂದಾಯವಾದ ಅನಂತರ, ವಧುವಿನ ಮನೆಯಲ್ಲಿ ‘ ಮದುವೆ ದಿನ ’ ಮತ್ತು ‘ ಮುಹೂರ್ತ ’ವನ್ನು ನಿಗದಿ ಪಡಿಸುತ್ತಾರೆ.

ಈ ಮದುವೆ ದಿನ ನಿರ್ಧಾರ ಮತ್ತು ಮುಹೂರ್ತದ ನಿರ್ಧಾರವನ್ನು ‘ ಮನೆಯ ಜಗಲಿಯಲ್ಲಿ ’ ಅಥವಾ ಗೌಡಕನ್ನಡದಲ್ಲಾದರೆ ‘ ಕೈಯ್ಯಾಲೆ ’ಯಲ್ಲಿಯೇ ಮಾಡಬೇಕು.[6] ಕೈಯಾಲೆ ಅಥವಾ ಜಗಲಿ ಮನೆಯ ಒಳಗೂ ಅಲ್ಲದ, ಹೊರಗೂ ಅಲ್ಲದ ಮಧ್ಯದ ಸ್ಥಳ. ದಲ್ಲಾಳಿಯ ಹಾಗೆ ಸಮತೋಲವುಳ್ಳ ಜಾಗ. ಹೊರಗಿನವರನ್ನು ಒಳಗೆ ಬರಮಾಡಿಕೊಳ್ಳುವ ಮೊದಲು ಕುಳ್ಳಿರಿಸುವ ಜಾಗ. ಅಂದರೆ, ಜಗಲಿಯು ಸಂಸ್ಕೃತಿಯ ಅಂತರಂಗ ಮತ್ತು ಬಹಿರಂಗಗಳ ಮಧ್ಯದ, ಅವೆರಡರ ಮಧ್ಯೆ ಸಂಬಂಧ ಕಲ್ಪಿಸಲು ಸಹಾಯಕವಾಗುವ ಸ್ಥಳ. ಹೆಣ್ಣು ಇನ್ನೂ ಮನೆಯೊಳಕ್ಕೆ ಬಂದಿಲ್ಲವಾದ ಕಾರಣ ಹೆಣ್ಣಿನ ಕಡೆಯವರು ಜಗಲಿಯಲ್ಲಿಯೇ ಮಾತುಕತೆಗಳನ್ನಾಡುತ್ತಾರೆ. ಈ ಮಾತುಕತೆ ಅತಿ ಮುಖ್ಯದ್ದಾದ್ದರಿಂದ ಮದುವೆ ಇರುವ ಎಲ್ಲಾ ಗೌಡರ ಮನೆಯಲ್ಲಿಯೂ ‘ ಜಗಲಿ ’ ಇದ್ದೇ ಇರಬೇಕು. ಇದು ಅವರ ವಾಸ್ತುವಿನ ಮೂಲ ಘಟಕಗಳಲ್ಲಿ ಒಂದಾಗಿದೆ. ಅವಿಭಕ್ತ ಕುಟುಂಬ ಪದ್ಧತಿ ಇರುವಲ್ಲಿ ಮೂಲ ಮನೆ (ತರವಾಡಿನ ಮನೆ, ಐನ್ ಮನೆ)ಯಲ್ಲಿಯೇ ಜಗಲಿ ಇದ್ದು, ಅಲ್ಲಿಯೇ ಮದುವೆ ನಿರ್ಧಾರಗಳಾಗುತ್ತವೆ. ಜಗಲಿ ಇಲ್ಲದೆ ಗೌಡರಲ್ಲಿ ಮದುವೆ ನಡೆಯದು.[7]

ಮದುವೆ ದಿನ ನಿರ್ಧಾರದ ಅನಂತರ ವರ ಮತ್ತು ವಧುವಿನ ಮನೆಯಲ್ಲಿ ಪ್ರತ್ಯೆ ಪ್ರತ್ಯೇಕವಾಗಿಯೇ ತಯಾರಿ ನಡೆಯುತ್ತದೆ. ಎರಡೂ ಕಡೆಯ ಆಚರಣೆಗಳೂ ಮನೆಯೊಳಗಡೆ, ಅಡುಗೆ ಮನೆಯಲ್ಲಿ (ಗೌಡ ಕನ್ನಡದಲ್ಲಿ ‘ ಉಂಜೊಳಗ ’ ಊಟ

ಮಾಡುವ ಒಳಗಿನ ಸ್ಥಳ) ನಡೆಯುತ್ತದೆ. ಅಡುಗೆ ಮನೆಯಲ್ಲಿ ಹಾಕಿಟ್ಟಿರುವ 'ಕನ್ನಿ ಕಂಬ'ವೇ ಅತ್ಯಂತ ಪವಿತ್ರ ಜಾಗವಾಗಿರುತ್ತದೆ.[8] ಈ ಸ್ಥಳದಲ್ಲಿ ಮದು ಮಗನನ್ನೋ, ಮದುಮಗಳನ್ನೋ ಕುಳ್ಳಿರಿಸುವುದರಿಂದ ಅವರಿಗೆ 'ಪ್ರತ್ಯೇಕ ಅಸ್ತಿತ್ವ' ವೊಂದು ಸಿದ್ಧವಾಗುತ್ತದೆ. ಮೈಗೆ ಅರಸಿನ ತಿಕ್ಕಿ, ಕೊರಳಿಗೆ ಮುಹೂರ್ತದ ಮಣಿ ಕಟ್ಟಿದ ಅನಂತರ ಮದುಮಗ–ಳು ಮನೆಯ ವಾತಾವರಣವನ್ನು ಬಿಟ್ಟು ಹೊರಗೆ ಹೋಗಬಾರದೆಂಬ ನಿಷೇಧವಿದೆ. ಅರಸಿನ ತಿಕ್ಕಿದ ಅನಂತರ ಅವರು 'ಹಸಿಮೈ' ವ್ಯಕ್ತಿಗಳಾಗುತ್ತಾರೆ.

ಸಾಮಾನ್ಯವಾಗಿ ಮದುವೆಯ ಹಿಂದಿನ ದಿನ ನಡೆಯುವ ಎಲ್ಲಾ ಆಚರಣೆಗಳೂ ಮದುಮಗ–ಳನ್ನು ಸಾಮಾನ್ಯ ಜೀವನಕ್ರಮದಿಂದ ಪ್ರತ್ಯೇಕಿಸುತ್ತದೆ. ಮತ್ತು ಹಾಗೆ ಪ್ರತ್ಯೇಕಿಸುವುದರಿಂದಾಗಿ ಮಾತ್ರ ಸಾಮಾನ್ಯ ಜೀವನಕ್ರಮದಲ್ಲಿ ಅವರು 'ಅಸಾಮಾನ್ಯ'ರಾಗಿ ಪ್ರತ್ಯೇಕ ಸ್ಥಾನವನ್ನು ಗಳಿಸಿಕೊಳ್ಳುತ್ತಾರೆ. ಇದು ಸ್ಪಷ್ಟ ವಾಗಲು ಅವರಿಗೆ ಸ್ನಾನಮಾಡಿಸುತ್ತಾರೆ, ಬಿಳಿ ಬಟ್ಟೆ ಉಡಿಸುತ್ತಾರೆ. ಗಂಡಿಗೆ ಕ್ಷೌರ ಮಾಡಿಸುತ್ತಾರೆ, ಪಟ್ಟೆ ಬಾಸಿಂಗ ಕಟ್ಟುತ್ತಾರೆ, ಮುಂಡಾಸು ಕಟ್ಟುತ್ತಾರೆ ಮತ್ತು ಆಗಾಗ ಶೋಭಾನೆಗಳನ್ನು ಹಾಡಿ ಅವರನ್ನು ಪುರಾಣಗಳ ಎತ್ತರಕ್ಕೆ ಕೊಂಡೊಯ್ಯು ತ್ತಾರೆ. ವ್ಯಕ್ತಿಗಳನ್ನು ಪ್ರತ್ಯೇಕಿಸಿದ ಹಾಗೆ ಸಮಯವನ್ನೂ ಪ್ರತ್ಯೇಕಿಸಿ 'ಮುಹೂರ್ತ' ವನ್ನು ನಿರ್ಧರಿಸುತ್ತಾರೆ. ಸ್ಥಳವನ್ನು ಪ್ರತ್ಯೇಕಿಸಿ 'ಧಾರಾಮಂಟಪ'ವನ್ನು ಮಾಡು ತ್ತಾರೆ. ಮುಹೂರ್ತಕ್ಕೆ ಮಹತ್ವ ಇದ್ದ ಹಾಗೇ ಧಾರಾ ಮಂಟಪಕ್ಕೂ ಇರುವುದ ರಿಂದ ಅದನ್ನು ವಿಶೇಷವಾಗಿ ಶೃಂಗರಿಸುತ್ತಾರೆ. 'ವ್ಯಕ್ತಿ', 'ಮುಹೂರ್ತ' ಮತ್ತು 'ಸ್ಥಳ' ಒಂದು ನಿರ್ದಿಷ್ಟ ಉದ್ದೇಶಕ್ಕೆ ಬದ್ಧವಾಗಿಯೇ ಸಮಾನವಾದ ಮಹತ್ವವನ್ನು ಪಡೆದು ಒಟ್ಟು ಮದುವೆಯಲ್ಲಿ ಪಾವಿತ್ರ್ಯವನ್ನು ಪಡೆದಿರುತ್ತದೆ.

ಧಾರಾ ಮಂಟಪಕ್ಕೆ ಹೆಣ್ಣು ಮನೆಯೊಳಗಿನಿಂದ ಬಂದು ಪ್ರವೇಶವಾದರೆ, ಗಂಡು ಚಪ್ಪರದಿಂದ ಹೊರಗಿನಿಂದ ಒಳಗೆ ಬರುತ್ತಾನೆ. ಗಂಡಿನ ಮನೆಯಲ್ಲಿಯೇ ಮದುವೆಯಾಗುವುದಿದ್ದರೂ ಆತ ಮನೆಯನ್ನು ತತ್ಕಾಲಕ್ಕೆ ಹೆಣ್ಣಿನ ಕಡೆಯವರಿಗೆ ಬಿಟ್ಟುಕೊಟ್ಟು, ತಾನು ಹೊರಗಿನಿಂದ ಬರುತ್ತಾನೆ. ಅಂದರೆ ಗಂಡು ಮನೆಯಿಂದ ಹೊರಗಡೆಗೆ ಹೋಗಿ ಹೆಣ್ಣನ್ನು ತರುತ್ತಾನೆ ಹೀಗೆ ತರುವಾಗ ಎರಡೂ ಕಡೆಯ ಹಿರಿಯರು ಚಪ್ಪರದಡಿಯಲ್ಲಿ ಒಟ್ಟು ಸೇರಿ ವೀಳ್ಯಕೊಟ್ಟು ಪರಸ್ಪರ ಒಪ್ಪಂದ ಮಾಡಿ ಕೊಳ್ಳುತ್ತಾರೆ. ಈ ಒಪ್ಪಂದ 12 ವಿಧದಲ್ಲಿ ನಡೆಯುತ್ತದೆ—ಅವುಗಳೆಂದರೆ—

1. ಹೆಣ್ಣು ಮಾತಾಡುವುದು : (5 ಕವಳಿಗೆ ಎಲೆ ಮತ್ತು 5 ಅಡಿಕೆ)[9]
2. ಬಳಿ ನಿರ್ಣಯಮಾಡುವುದು : (,, ,,)
3. ಹೆಣ್ಣನ್ನು ಒಪ್ಪಿಕೊಳ್ಳುವುದು : (,, ,,)
4. ಲಗ್ನ ನಿಶ್ಚಯಿಸುವುದು : (,, ,,)

5. ದೇವರಿಗೆ ಗೌರವ : (5 ಕವಳಿಗೆ ಎಲೆ ಮತ್ತು 5 ಅಡಿಕೆ)
6. ಹಿರಿಯರಿಗೆ ಗೌರವ : (,, ,,)
7. ಬಂಧುಗಳಿಗೆ ಗೌರವ : (,, ,,)
8. ತಂದೆಗೆ ಗೌರವ : (,, ,,)
9. ತಾಯಿಗೆ ಗೌರವ : (,, ,,)
10. ಅಚ್ಚುಕಟ್ಟಾಗಿ ಮದುವೆ ಆಗುವುದರ ಬಗ್ಗೆ : (,, ,,)
11. ಬಣ್ಣ ಬಂಗಾರದ ಗೌರವ : (,, ,,)
12 ಎಲ್ಲರಿಗೂ ಗೌರವ : (,, ,,)

ಮದುವೆಯಂಥ ಮುಖ್ಯ ಘಟನೆ ಎಲ್ಲರನ್ನೂ ಒಳಗೊಳ್ಳುವ, ಗೌರವ ಸೂಚಿಸುವ ಕೆಲಸ ಆದ ಅನಂತರ ಧಾರಾಕಾರ್ಯ ನಡೆಯುತ್ತದೆ ಧಾರೆಗೋಸ್ಕರ ಮದುಮಗ ಚಪ್ಪರದೊಳಗೆ ಬರುತ್ತಿದ್ದಂತೆ ಮುತ್ತೈದೆಯರು 5 ಅಕ್ಕಿ ಆರತಿ ಮಾಡುತ್ತಾರೆ. ಅವುಗಳೆಂದರೆ—

1. ತಾಯಿ ಅಕ್ಕಿ ಆರತಿ
2. ಕಟ್ಟೆಮನೆ ಅಕ್ಕಿ ಆರತಿ
3. ಗ್ರಾಮ ಗಉಡನ ಅಕ್ಕಿ ಆರತಿ
4. ಗ್ರಾಮದ ಅಕ್ಕಿ ಆರತಿ ಮತ್ತು
5. ಕುರ್ದಿ ನೀರಿನ ಅಕ್ಕಿ ಆರತಿ.

ಇಲ್ಲಿ ಅಕ್ಕಿಯ ಆರತಿಯ ಮೂಲಕ ಮದುವೆಯ ಸಮಾರಂಭಕ್ಕೆ ಬಂದ ಎಲ್ಲರನ್ನೂ ಗೌರವಿಸಲಾಗುವುದು. ನೇರವಾದ ನೋಟಕ್ಕೆ ಅದು ಮದುಮಗನಿಗೆ ಸಂದಾಯವಾದರೂ ಪರೋಕ್ಷವಾಗಿ ಅದು ಇಡೀ ಊರನ್ನೇ ಒಳಗೊಳ್ಳುತ್ತದೆ. ಅನಂತರ ಧಾರಾ ಮಂಟಪದೊಳಗೆ ಇರಿಸಲಾದ ಅಕ್ಕಿಯ ಮೇಲೆ ವರನನ್ನು ನಿಲ್ಲಿಸುತ್ತಾರೆ. ವಧುವೂ ಅಕ್ಕಿಯ ಮೇಲೆ ನಿಲ್ಲುತ್ತಾಳೆ. ಇಬ್ಬರ ಮಧ್ಯೆ ಪರದೆಯನ್ನು ಹಿಡಿದು ಮುಹೂರ್ತಕ್ಕಾಗಿ ಕಾಯುತ್ತಾರೆ. ನಿಗದಿ ಪಡಿಸಿದ ಸಮಯದಲ್ಲಿ ವರನ ಕೈ ಮೇಲೆ ವಧುವಿನ ಕೈಯನ್ನು ಇಟ್ಟು, ವಧುವಿನ ತಂದೆ, ನೀರೆರೆದು ಧಾರೆ ಮಾಡಿ ಕೊಡುತ್ತಾನೆ. ಪ್ರತ್ಯೇಕಿಸಲಾದ ಕಾಲ, ಸ್ಥಳ, ಮತ್ತು ಗಂಡು–ಹೆಣ್ಣುಗಳು, ಒಂದು ಹಂತದಲ್ಲಿ ಐಕ್ಯರಾಗುವುದಕ್ಕೆ ಮುಖ್ಯವಾದ ಎರಡು ಉದ್ದೇಶಗಳಿವೆ.

(ಅ) ಈ ದಂಪತಿಗಳ ಭವಿಷ್ಯದಲ್ಲಿ ಒಳಿತಾಗಲಿ ಎಂಬ 'ಮಂಗಳದ ಕಲ್ಪನೆ'. ಇದು ಅಲೌಕಿಕ ಸ್ವರೂಪದಲ್ಲಿಲ್ಲ. ಮುಂದಿನ ದಾಂಪತ್ಯದಲ್ಲಿ ಕೆಡುಕುಂಟಾಗದಿರಲಿ ಎಂಬ ಸದಾಶಯ ಹೊಸ ತಲೆಮಾರಿನ ಜೀವನ ಕ್ರಮಕ್ಕೆ ಸಂಬಂಧಿಸಿದೆ.

(ಆ) ಧಾರೆ ಹೊಯ್ಯುವ ಘಟನೆಯ ಅನಂತರ ವಧೂವರರು ಹೆಂಡತಿ ಮತ್ತು ಗಂಡರಾಗಿ ಮಾರ್ಪಡುವುದರಿಂದ ವಂಶಾಭಿವೃದ್ಧಿಗೆ ಅನುಮತಿ ದೊರೆತಂತಾಗುತ್ತದೆ. ಪರೋಕ್ಷವಾಗಿ ಆಸ್ತಿಗೆ ಉತ್ತರಾಧಿಕಾರಿಯ ನೇಮಕಾತಿ ನಡೆದಂತೆಯೂ ಆಗುತ್ತದೆ. ಒಕ್ಕಲಿಗರ ಮೂಲವೃತ್ತಿ 'ಒಕ್ಕಲುತನ' ಅಥವಾ ಅಕ್ಕಿಗೆ ಸಂಬಂಧಿಸಿರುವುದರಿಂದ, ಮುಹೂರ್ತದಲ್ಲಿ ಅಕ್ಕಿಗೆ ಒಡೆಯನನ್ನು ಅಧಿಕೃತವಾಗಿ ಒಪ್ಪಿಕೊಳ್ಳಲಾಗುತ್ತದೆ. ನೆರೆದವರೆಲ್ಲರೂ ಇದಕ್ಕೆ ಸಾಕ್ಷಿಗಳಾಗುತ್ತಾರೆ. ಇದು ಮುಹೂರ್ತಕ್ಕೆ ಇರುವ ಆರ್ಥಿಕ ಮತ್ತು ಸಾಮಾಜಿಕ ಆಯಾಮವಾಗಿದೆ.[10]

ಮುಹೂರ್ತದ ಸಂದರ್ಭದಲ್ಲಿ ಅನಪೇಕ್ಷಿತ ಘಟನೆ ಏನಾದರೂ ನಡೆದರೆ ಅದರಿಂದ ದಾಂಪತ್ಯಕ್ಕೆ ಕೇಡು ಸಂಭವಿಸುತ್ತದೆ ಎಂಬ ನಂಬಿಕೆಯಲ್ಲಿಯೂ ಭವಿಷ್ಯದ ಬಗೆಗೆ ತೀವ್ರತಮವಾದ ಕಾಳಜಿ ವ್ಯಕ್ತವಾಗುತ್ತದೆ.

ಮದುವೆಯಾದನಂತರ ವಧೂವರರನ್ನು ಮಂಟಪದೊಳಕ್ಕೆ ಕುಳ್ಳಿರಿಸಿ ಅವರ ಮೈಮೇಲೆ ಅಕ್ಕಿಯನ್ನು ತಳಿಯುತ್ತಾರೆ. ಮೊಣಕಾಲಿನ ಗಂಟು, ಮೊಳಕೈಗಂಟು, ಭುಜದ ಸಂದುಗಳಿಗೆ ಅಕ್ಕಿಯನ್ನು ತಾಗಿಸಿ ಕೊನೆಗೆ ನೆತ್ತಿಯ ಮೇಲೆ ಅಕ್ಕಿಯನ್ನು ಚೆಲ್ಲುತ್ತಾರೆ. ಕೆಲವು ಸಂದರ್ಭದಲ್ಲಿ ಅಕ್ಕಿಯನ್ನು ಬಾಯಿಗೆ ಇಟ್ಟು ತಿನ್ನಿಸುವುದೂ ಇದೆ. ಇಲ್ಲಿ ಜೀವಧಾತುವಾಗಿರುವ ಮತ್ತು ಉತ್ಪಾದನಾ ಘಟಕವಾಗಿರುವ ಅಕ್ಕಿಯ ಅನಂತ ಶಕ್ತಿಯನ್ನು ನವದಂಪತಿಗಳಿಗೆ ದಾಟಿಸುವ ಸಾಂಕೇತಿಕ ಅಭಿವ್ಯಕ್ತಿಯಿದೆ. ಇದನ್ನು ಒಟ್ಟು ಮದುವೆಯಲ್ಲಿ ಅಕ್ಕಿಗೆ ಇರುವ ಸ್ಥಾನವನ್ನು ಲಕ್ಷಿಸಿ ಇನ್ನಷ್ಟು ವಿವರಿಸಲು ಸಾಧ್ಯ ಉಂಟು.

ವಿವಾಹದ ಹಿಂದಿನ ದಿನ ವಧುವನ್ನು ಶೃಂಗರಿಸುವಾಗ ಆಕೆ ಉಟ್ಟ ಸೀರೆಯ ಒಂದು ತುದಿಗೆ ಒಂದು ಮುಷ್ಟಿಯಷ್ಟು ಅಕ್ಕಿಯನ್ನು ಕಟ್ಟುತ್ತಾರೆ. ಇದಕ್ಕೆ 'ಮಡಿಲಕ್ಕಿ' ಎಂದು ಹೆಸರು. ಇದನ್ನು ಕಟ್ಟುವಾಗ ಹೆಂಗಸರು ಶೋಭಾನೆ ಪದಗಳನ್ನು ಹಾಡುತ್ತಾರೆ. ಈ ಹಾಡುಗಳು 'ಮಡಿಲಕ್ಕಿ ಪದ'ಗಳೆಂದೇ ಜನಪ್ರಿಯವಾಗಿವೆ. ಧಾರೆಯಾದನಂತರ ವಧುವು ಗಂಡನ ಮನೆಗೆ ಹೋದ ಮೇಲೆ, ಈ ಮಡಿಲಕ್ಕಿಯನ್ನು ಬೇಯಿಸಿ ಗಂಡನಿಗೆ ಉಣಬಡಿಸಬೇಕು. ಇಲ್ಲಿ 'ಅಕ್ಕಿ'ಯು ವಿವಾಹದೊಂದಿಗೇ ಅನುಷ್ಠಾನದ ಅರ್ಥ ಪಡೆದಿರುವುದನ್ನು ಗಮನಿಸಬಹುದು. ಧಾರಾಮಂಟಪಕ್ಕೆ ಮದುಮಕ್ಕಳು ಸುತ್ತು ಬರುವಾಗಲೂ, ಮಂಟಪದ ಮೇಲ್ಬದಿಗೆ ಅಕ್ಕಿಯನ್ನು ತಳಿಯುವಲ್ಲಿಯೂ ಇದೇ ಅರ್ಥವಿದೆ. ಅಕ್ಕಿ ಇಲ್ಲದೆ ಗೌಡರಲ್ಲಿ ಮದುವೆ ಇಲ್ಲ.[11] ಈ ಅರ್ಥದಲ್ಲಿ ಮದುವೆಯು ಅಕ್ಕಿಯ ಒಡೆತನವನ್ನು ಮತ್ತು ಅನಂತ ಶಕ್ತಿಯನ್ನು, ಹೊಸ ತಲೆಮಾರಿಗೆ ವರ್ಗಾಯಿಸುವ ಒಂದು ಪ್ರಕ್ರಿಯೆಯಾಗುತ್ತದೆ.

ಧಾರೆಯಾದ ಅನಂತರ ಮದುಮಕ್ಕಳು ಮನೆತನದ ಹಿರಿಯರ ಕಾಲು ಸ್ಪರ್ಶಿಸುವ ಗೌರವ ಸೂಚಿಸಬೇಕು. ಇದಕ್ಕೆ 'ಮರ್ಯಾದೆ ಕೊಡುವುದು' ಎಂದು ಹೆಸರು. ಈ 'ಮರ್ಯಾದೆ ಕೊಡುವ' ಕ್ರಿಯೆಯ ಮೂಲಕ ಪ್ರತ್ಯೇಕಿಸಲ್ಪಟ್ಟ

ಮದುವೆಯಾದ ದಂಪತಿಗಳು ಮತ್ತೆ ಸಹಜ ಜೀವನ ಕ್ರಮಕ್ಕೆ ಹಿಂದಿರುಗುತ್ತಾರೆ. ಅಲ್ಲದೆ ಹಿರಿಯ ತಲೆಮಾರಿನ ಮೂಲಕ ಇಳಿದು ಬಂದ ಪರಂಪರೆಯ ಅವಿಭಾಜ್ಯ ಅಂಗವಾಗುತ್ತಾರೆ. 'ಕಾಲು ಹಿಡಿಯುವುದು' ಹಿಂದಿನ ತಲೆಗಳೊಡನೆ ತಾವು ಸೇರಿಕೊಳ್ಳುವುದನ್ನು ಸಂಕೇತಿಸುತ್ತದೆ. ಈ ಮದುವೆಯ ಹಿಂದಿನ ದಿನ ಮದುಮಗನ ಸಹಿತವಾಗಿ ಮನೆಯ ಹಿರಿಯರು, ಈಗಾಗಲೇ ಸತ್ತು ಹೋಗಿರುವ 16 ತಲೆಮಾರಿಗೆ ಗೌರವ ಸೂಚಿಸುವ ಸಲುವಾಗಿ 'ತೊಲೆಗಳಿಗೆ ಇಡುವ' ಕಾರ್ಯಕ್ರಮವನ್ನು ನೆರವೇರಿಸುತ್ತಾರೆ.[12] ಈ ಕಾರ್ಯಕ್ರಮವು ಕೂಡಾ ಜೀವಂತ ಇರುವವರು ಈಗಾಗಲೇ ಅಸ್ತಿಯನ್ನು ಆಳಿ ಸತ್ತು ಹೋದ ಹಿರಿಯರ ಪರಂಪರೆಯನ್ನು ಮುಂದುವರಿಸುವ ಆಶಯವುಳ್ಳದ್ದಾಗಿದೆ. ಹಿರಿಯರಿಂದ ಮದುವೆಯ ಮೂಲಕ ಹೊಸ ತಲೆಮಾರಿಗೆ ಮತ್ತೆ ದಾಟಬರುತ್ತದೆ. ಮದುವೆ ಇಲ್ಲದೆ ಪರಂಪರೆ ದಾಟಿ ಬರಲು ಸಾಧ್ಯವಿಲ್ಲ. ಇದರ ಜೊತೆಗೆ ಮದುವೆಯ ಮೂಲಕ ಪರಂಪರೆಯ ಜವಾಬ್ದಾರಿ ಹೊತ್ತ ಮದುಮಗ, ತನ್ನ ಮನೆಯೊಳಕ್ಕೆ ನುಗ್ಗುವ ಮುನ್ನ ತಂಗಿಯ ಮಗನಿಗೆ ತನ್ನ ಮಗಳನ್ನು ಕೊಡುತ್ತೇನೆಂಬ ಭರವಸೆ ಕೊಡುವುದರ ಮೂಲಕ, ಇನ್ನೂ ಹುಟ್ಟದ ಮಗುವಿನ ಭವಿಷ್ಯದ ಬಗ್ಗೆಯೂ ತೀರ್ಮಾನ ತಗೊಳ್ಳುತ್ತಾನೆ.[13] ಇದನ್ನು ಒಟ್ಟನಿಂದ ಗಮನಿಸಿದರೆ ಗೌಡರ ಮದುವೆ ಕನಿಷ್ಠ 19 ತಲೆಮಾರುಗಳ ಬಗ್ಗೆ ನಿರ್ಣಾಯಕವಾದ ಮಾತುಗಳನ್ನು ಮೌನವಾಗಿಯೇ ಹೇಳುತ್ತದೆ

ಧಾರೆಯಾದನಂತರ ಎರಡು ಆಚರಣೆಗಳಿವೆ :

1. ಭೂಮಿಕ್ಕುವ ಶಾಸ್ತ್ರ
2. ನಾಗೋಲಿ ಶಾಸ್ತ್ರ.

ಮೊದಲನೆಯದು 'ಭೂಮಿಗೆ ಇಕ್ಕುವ' ಆಚರಣೆಗೆ ಸಂಬಂಧಿಸಿದೆ. ಇಲ್ಲಿ ವಧೂವರರು ಹಾಲು ಮತ್ತು ತುಪ್ಪವನ್ನು ಕೈ ಬೆರಳುಗಳ ಮೂಲಕ ಭೂಮಿಗೆ ಸಿಂಪಡಿಸಬೇಕು. ಈ ಮೂಲಕ ಅಕ್ಕಿಯನ್ನು ಅಥವಾ ಆಹಾರವನ್ನು ಬೆಳೆಯುವ ಭೂಮಿಗೆ ಗೌರವ ಸಲ್ಲಿಸಲಾಗುವುದು.[14] ನಾಗೋಲಿ ಶಾಸ್ತ್ರದಲ್ಲಿ ವಧೂವರರು ಪರಸ್ಪರ ಅರಸಿನ ನೀರನ್ನು ಸಿಂಪಡಿಸಿಕೊಂಡು, ಒದ್ದೆಯಾಗಿ ಅನಂತರ ಹಾಲು ಬರುವಂಥ ಹಾಲೆ ಮರದ ಗಿಡವನ್ನು ತಂದು ನೆಲದಲ್ಲಿ ನೆಟ್ಟು ಅದಕ್ಕೆ ಗೊಬ್ಬರವನ್ನು ಹೊತ್ತು ತಂದು ಹಾಕುತ್ತಾರೆ. ವಂಶಾಭಿವೃದ್ಧಿ ಮತ್ತು ಆಹಾರ ಪೂರೈಕೆಯ ಎರಡು ಆಶಯಗಳು ಇಲ್ಲಿ ಅದ್ಭುತವಾಗಿ ಮೇಳವಿಸಿವೆ.

ಮದುವೆಯ ನಿಮಿತ್ತವಾಗಿ ಹಾಕುವ 'ಊಟ' ದಿಂದಾಗಿ ಹೆಣ್ಣಿನ ಕಡೆ ಮತ್ತು ಗಂಡಿನ ಕಡೆಯವರು ಒಂದೇ ಆಹಾರ ಸೇವಿಸುವ ಒಂದಾಗುವ ಭಾವಕ್ಕೆ ಪಕ್ಕಾಗುತ್ತಾರೆ—ಅಂದರೆ ತಮ್ಮಲ್ಲಿದ್ದ ಭಿನ್ನತೆಯನ್ನು ಮರೆತು ಊಟದಮಟ್ಟಿಗೆ 'ಕುಟುಂಬ'ದವರಾಗುತ್ತಾರೆ. ಮದುವೆಯಿಂದ ಊಟವನ್ನು ಪ್ರತ್ಯೇಕಿಸಲಾಗದ ಸ್ಥಿತಿ ಇದೆ.

ಮದುವೆಯ ಬಗೆಗಣ ಈ ನಿಷ್ಠೆ ಗೌಡರಲ್ಲಿ ಬಳಕೆಯಲ್ಲಿರುವ, ‘ ತೊಲೆಮದುವೆ’ ಯಲ್ಲಿ ಇನ್ನಷ್ಟು ನಿಚ್ಚಳವಾಗಿ ಅಭಿವ್ಯಕ್ತಿ ಹೊಂದಿದೆ. ಮದುವೆಯಾಗದೆ ಸತ್ತ ಹುಡುಗ, ಮತ್ತು ಮದುವೆಯಾಗದೆ ಸತ್ತ ಹುಡುಗಿ— ಇವರನ್ನು ಆಯ್ದು, ಜೀವಂತ ವ್ಯಕ್ತಿಗಳಿಗೆ ಹೇಗೆ ಮದುವೆ ಮಾಡುತ್ತಾರೋ ಅದೇ ರೀತಿ (ಬಳಿಸಂಬಂಧ, ಹುಡುಗಿ ನೋಡುವುದು, ನಿಶ್ಚಯ, ಧಾರೆ, ಊಟ ಇತ್ಯಾದಿ) ಮದುವೆ ಮಾಡುತ್ತಾರೆ. ಸತ್ತವರನ್ನು ಮೂರ್ತಗೊಳಿಸಲು, ಹಾಲೆಮರದ ಅಥವಾ ಬೈಹುಲ್ಲಿನ, ಅಥವಾ ಬಾಳೆ ಗಿಡದ ತೊಗಟೆಯಿಂದ ವಧೂವರರ ಆಕೃತಿಯನ್ನು ಮಾಡುತ್ತಾರೆ. ಮನೆ ಅಥವಾ ಹಲಗೆಯಲ್ಲಿ ಚಿತ್ರ ಬರೆಯುವ ಕ್ರಮವೂ ಇದೆ.[15] ಮನೆಯ ಒಳಗೂ ಅಲ್ಲದ ಹೊರಗೂ ಅಲ್ಲದ ‘ ಸೂರಡಿ ’ (ಸೂರಿನ ಅಡಿ, ಮಾಡಿನಿಂದ ನೀರು ಬೀಳುವ ಜಾಗ) ಯಲ್ಲಿ ಧಾರೆ ನಡೆಯುವುದೊಂದು ವಿಶೇಷ. ಗೌಡ ಸಂಸ್ಕೃತಿಯಲ್ಲಿ ಮದುವೆಗಿರುವ ಸ್ಥಾನವನ್ನು ‘ ಕೊಲೆಮದುವೆ ’ ಸಾಂಕೇತಿಕವಾಗಿ ವಿವರಿಸುತ್ತದೆ.

ಒಟ್ಟಿನಿಂದ ಗೌಡರ ಮದುವೆ ಕ್ರಮವು ಆ ಜನಾಂಗದ ಸಾಂಸ್ಕೃತಿಕ ದೃಷ್ಟಿ ಕೋನವನ್ನು ಸಾಂಕೇತಿಕವಾಗಿ, ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ಅದನ್ನು ಹೀಗೆ ಸಂಗ್ರಹಿಸಿ ಕೊಡಬಹುದು.

1. ಪುನರಾವರ್ತನೆಗೊಳ್ಳುವ ಮದುವೆ ಸಂಬಂಧಗಳೇ ಗೌಡರ ಇತಿಹಾಸದ ಪ್ರಾಮುಖ್ಯ ಅಂಶವನ್ನು ನಿರ್ಧರಿಸಿದೆ

2. ಮದುವೆ ಆಚರಣೆಗೂ ಅಕ್ಕಿಗೂ ಗಾಢವಾದ ಸಂಬಂಧ ಇದ್ದು, ಉತ್ಪಾದನಾ ವಿಧಾನಗಳು ಮದುವೆಯ ಒಟ್ಟು ರಚನೆಯನ್ನು ನಿಯಂತ್ರಿಸಿದೆ. ಹಾಗೇ ಸಂಸ್ಕೃತಿಯ ಇತರ ಅಂಶಗಳನ್ನು ಕೂಡ.

3. ತಂದೆ ಮತ್ತು ತಾಯಿಯ ಬಳಿಗಳೇ ಆದರ್ಶವಾಗಿರುವ ಹಿನ್ನೆಲೆಯಲ್ಲಿ ಬಳಿಯೇ ಗೌಡರ ಪ್ರಧಾನ ಮಾನದಂಡ. ಇದರ ವ್ಯಾಪ್ತಿ ಜಾತಿಗಿಂತ ಬೇರೆಯದಾಗಿದೆ.

4. ‘ ಉಂಬೊಳಗೆ ’ ಮತ್ತು ‘ ಜಗಲಿ ’ ಗೌಡರ ವಾಸ್ತುವಿನ ಮುಖ್ಯ ಘಟಕಗಳು. ಇದು ‘ ಕುಟುಂಬ ’ದ ನಿರ್ಧಾರದಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ. ಇವೆರಡೂ ಇಲ್ಲದೆ ಮದುವೆ ನಡೆಯದು, ಗೌಡರ ಜೀವನ ನಡೆಯದು.

5. ಅಣ್ಣ ತಂಗಿಯರ ಮಧ್ಯೆ ಮದುವೆ ನಡೆಯಬಾರದು. ಪ್ರಧಾನ ನಿಷೇಧ ಇಲ್ಲಿದೆ.

6. ಹುಟ್ಟಿನಿಂದ ಸಾಯುವಲ್ಲಿವರೆಗೆ ಮತ್ತು ವರ್ಷದಿಂದ ವರ್ಷಕ್ಕೆ ನಡೆಯುವ ಅನೇಕ ಆಚರಣೆಗಳಲ್ಲಿ ಅಕ್ಕಿ ಮತ್ತು ಅರಸಿನಕ್ಕೆ ಪ್ರಧಾನ ಸ್ಥಾನವಿದೆ. ಅವೆರಡೂ ಮದುವೆಯಲ್ಲಿ ಅತ್ಯಂತ ಅಗತ್ಯವಾದುವು. ಹಸಿವು ಮತ್ತು ಕಾಮದ ಪೂರೈಕೆಯೇ ಈ ಸಂಸ್ಕೃತಿಯ ಸಿಮರ್ಾತೃಶಕ್ತಿಗಳಾಗಿರುವುದು, ಇದರಿಂದ ಸ್ಪಷ್ಟ.

7. ಮಧ್ಯಕಾಲೀನ ರಹಸ್ಯ ತಾಂತ್ರಿಕ ಪಂಥಗಳ ಆಚರಣೆಯೆಲ್ಲವೂ ಹಸಿವು ಮತ್ತು ಕಾಮದ ಸುತ್ತ ಕೇಂದ್ರೀಕೃತವಾಗಿದ್ದು ಅದಕ್ಕೂ ಗೌಡರಿಗೂ ಸಂಬಂಧ ಇರುವುದು, ಗೌಡರ ಮದುವೆಯಲ್ಲಿಯೇ ಸ್ಪಷ್ಟ. ಗೌಡರ ಧಾರ್ಮಿಕ ದೃಷ್ಟಿ ಕೋನವೂ ಇದರ ಸುತ್ತೇ ಇದೆ.

8. ಗೌಡ ಜನಪದ ಸಾಹಿತ್ಯದಲ್ಲಿ ಹೆಚ್ಚು ಒತ್ತು ಬಿದ್ದಿರುವ ಕೌಟುಂಬಿಕ ಭಾವಗಳು ಮತ್ತು ಸಂಬಂಧಗಳನ್ನು ಅಧಿಕೃತವಾಗಿ ಮದುವೆಯೇ ನಿರ್ಧರಿಸುತ್ತದೆ.

ಹೀಗೆ ಅನ್ನ ಮತ್ತು ಸಂತಾನ ಗೌಡ ಸಂಸ್ಕೃತಿಯನ್ನು ನಿರ್ಮಿಸಿದೆ. ಬಹುಪಃ ಬಹುತೇಕ ಸಂಸ್ಕೃತಿಗಳನ್ನು ಕೂಡಾ.

ಅಡಿಟಿಪ್ಪಣಿಗಳು

1. ತಾಂತ್ರಿಕವಾಗಿ 'ಗೌಡಕನ್ನಡ' ಎಂಬ ಪದವು ಗೌಡರಲ್ಲಿ ಪ್ರಚಲಿತವಾಗಿರುವ 'ಅರೆಭಾಷೆ'ಗೆ ಸಂವಾದಿಯಾಗಿ ಬಂದಿದೆ. ಇದನ್ನು ಮೊದಲು ಬಳಕೆಗೆ ತಂದವರು ಪ್ರೊ. ಎಂ. ಮರಿಯಪ್ಪಭಟ್ಟರು. ಈ ಭಾಷೆಯ ಬಗೆಗೆ ಮೊದಲ ಬಾರಿಗೆ ವೈಜ್ಞಾನಿಕ ಅಧ್ಯಯನ ನಡೆಸಿದ ಪ್ರೊ. ಕೆ. ಕುಶಾಲಪ್ಪ ಗೌಡರು ತಮ್ಮ ಗ್ರಂಥದಲ್ಲಿ 'ಗೌಡಕನ್ನಡ' ಎಂಬ ಪದವನ್ನೇ ಅಧಿಕೃತವಾಗಿ ಬಳಸಿದ್ದಾರೆ.

2. ವಿವಾಹ ಸಂಬಂಧಗಳಲ್ಲಿ ವಿಧಿ ನಿಷೇಧಗಳು ಕೆಲಸ ಮಾಡುವ ಪರಿಗೆ ನೋಡಿರಿ: ವಿವೇಕ ರೈ : 1985

3. ಸುಳ್ಯ ಪರಿಸರದ ಗೌಡರಲ್ಲಿ ಜನಪ್ರಿಯವಾಗಿರುವ ಅನೇಕ ಜನಪದ ಕತೆ, ಕವನಗಳಲ್ಲಿ ಸಹೋದರ—ಸಹೋದರಿಯರ ಮದುವೆ ನಿಷೇಧದ, ಬಗ್ಗೆ ಉಲ್ಲೇಖವಿದೆ ಉದಾಹರಣೆಗೆ ಒಂದನ್ನು ಇಲ್ಲಿ ಸಂಕ್ಷೇಪವಾಗಿ ನೋಡಬಹುದು:

ಒಂದೂರಿನಲ್ಲಿ ಅಣ್ಣ ತಂಗಿ ಇಬ್ಬರಿದ್ದರು. ಅಣ್ಣ ತಂಗಿಯನ್ನು ಮದುವೆಯಾಗುತ್ತೇನೆ ಎಂದಾಗ ತಂಗಿ ಅದಕ್ಕೆ ಒಪ್ಪದೆ ಮನೆ ಬಿಟ್ಟು ಓಡಿದಳು. ಅಣ್ಣ ಬೆನ್ನಟ್ಟಿದ. ಬೆದರಿದ ತಂಗಿ ಹೊಳೆ ಬದಿಯಲ್ಲಿರುವ ಮರವೇರಿದಳು. ಅಣ್ಣ ಬೇಡಿಕೊಂಡ. ತಂಗಿಯ ಮನಕರಗಲಿಲ್ಲ. ಅಣ್ಣನೂ ಮರವೇರಿದಾಗ ಆಕೆ ಗೆಲ್ಲಿನಲ್ಲಿ ನಡೆದಳು. ಅಣ್ಣ ಗೆಲ್ಲಲ್ಲೆ ನಡೆದಾಗ ಆಕೆ ಎಲೆಯಲ್ಲಿ ನಡೆದಳು. ಅಣ್ಣ ಎಲೆಯಲ್ಲಿ ನಡೆದಾಗ ಆಕೆ ಎಲೆ ತುದಿಗೆ ಬಂದು 'ಅಪ್ಪನ ನಾನಿನ್ನು ಮಾವನೆಂದು ಹೇಳಲೇ, ಅವ್ವನ ನಾನಿಂದು ಅತ್ತೆಯೆಂದು ಹೇಳಲೇ' ಎಂದು ಹೊಳೆಗೆ ಧುಮುಕಿದಳು. ಅಣ್ಣನೂ ಧುಮುಕಿದ ಹೊಳೆಯಲ್ಲಿ ತಂಗಿ 'ಬಾಳೆಮೀನು' ಆಗಿ ಮಾರ್ಪಟ್ಟಳು. ಅಣ್ಣ 'ಮೂಡು ಮೀನು' ಆಗಿ ಮಾರ್ಪಟ್ಟ. ಇಂದಿಗೂ ಈ ಎರಡು ಮೀನನ್ನು ಗೌಡರು ಒಟ್ಟಿಗೇ ಬೇಯಿಸುವುದಿಲ್ಲ. ಆಹಾರದ ಬಗೆಗಳ ನಿಷೇಧ ಮೂಲದಲ್ಲಿ ಅಣ್ಣ ತಂಗಿಯರ ಮದುವೆಯ ಬಗೆಗಣ ನಿಷೇಧವಾಗಿರುವುದನ್ನು ಕಾಣಬಹುದು.

ಪಂಜುರ್ಲಿ ಪಾಡ್ದನದಲ್ಲಿ ಅಣ್ಣ ತಂಗಿಯರು ಮದುವೆಯಾಗಿ ಹುಟ್ಟಿದ ಸಂತಾನವನ್ನು 'ಅನಿಷ್ಟಬೀಜ'ವೆಂದು ವರ್ಣಿಸಲಾಗಿದ್ದು, ಅಲ್ಲಿಯೂ ಇದೇ ಆಶಯವಿದೆ.

4. ಈ ಬಳಿಯವರ ಸಂಖ್ಯೆ ಅತ್ಯಂತ ಹೆಚ್ಚಿಗೆ ಇರುವುದೇ ಇದಕ್ಕೆ ಕಾರಣವಿರಬಹುದು. 'ಒಳಗಿನಿಂದಲೇ' ಹೆಣ್ಣು ತರುವ ರೂಢಿ ಕಡಿಮೆಯಾದಂತೆ ಗೌಡರು 'ಹೊರಗಡೆ' ನೋಡ

ಬೇಕಾಗುತ್ತದೆ. ಆಗ ತನ್ನ ಬಳಿಯವರೇ ವಿಸ್ತಾರವಾಗಿ ಹರಡಿಕೊಂಡಾಗ ‘ಆಯ್ಕೆ’ ಬಳಿಯೊಳಗಡೇ ನಡೆದು ಬಿಡುತ್ತದೆ. ಜೊತೆಗೆ ‘ಪ್ರೇಮವಿವಾಹ’ಗಳಿಗೆ ಬಳಿ ಅಡ್ಡ ಬರುವುದಿಲ್ಲ. ನೂರು ಮದುವೆಗಳಲ್ಲಿ ನಡೆದ ಬಳಿಗಳ ಆಯ್ಕೆಗೆ ಅನುಬಂಧ: 1 ನೋಡಿರಿ.

5. ಹೆಣ್ಣು ಮೈನೆರೆತಾಗಣ ಆಚರಣೆಯಲ್ಲಿ, ಹೆಣ್ಣಿನ ಮೇಲೆ ಸೋದರ ಮಾವನಿಗೆ ಇರುವ ಲೈಂಗಿಕ ಹಕ್ಕು ನಿಚ್ಚಳವಾಗಿ ಕಾಣಿಸುತ್ತದೆ. ಮೈನೆರೆದ ಏಳು ದಿವಸಗಳ ವರೆಗೆ ಆಕೆಗೆ ‘ಹೊಲೆ’ ಇರುತ್ತದೆ. ಏಳನೇ ದಿನ ಆಕೆ ‘ಮಡಿ’ ಆಗುತ್ತಾಳೆ. ಆ ದಿವಸ ಮೈಗೆ ಅರಸಿನ ತಿಕ್ಕಿದ ಆಕೆ ಒನಕೆಯನ್ನು ದಾಟಬೇಕು ಮತ್ತು ವೀಳ್ಯವನ್ನು ತಿನ್ನಬೇಕು. ಇದಾದ ಅನಂತರ ಸೋದರ ಮಾವ ಆಕೆಯನ್ನು ಕರೆದುಕೊಂಡು ತನ್ನ ಮನೆಗೆ ಹೋಗುತ್ತಾನೆ.

6. ‘ಜಗಲಿ’ಗಿರುವ ಅರ್ಥವ್ಯಾಪ್ತಿ ಏನೆಂಬುದು ಖಚಿತವಾಗಿ ತಿಳಿಯದು. ‘ಇಲ್ಲ್‌ನ ಜಾಗ’ (ಇಲ್ = ಮನೆ) ಎಂಬ ಅರ್ಥದಲ್ಲಿ ಬಳಕೆಯಾಗಿರಬಹುದು. ಕೈ ಶಾಲೆಯೇ ಕೈಯ್ಯಾಲೆಯಾಗಿವೆ. ವಿವರಗಳಿಗೆ ನೋಡಿರಿ ಅನುಬಂಧ: 2

7. ಮನೆಯ ಒಳಗಿನಿಂದ ಮಗು ಮೊದಲಬಾರಿಗೆ ಜಗಲಿಗೆ ಇಳಿದಾಗ ಮತ್ತು ಜಗಲಿಯಿಂದ ಅಂಗಳಕ್ಕೆ ಇಳಿದಾಗ, ಗೌಡರು ‘ಜಗಲಿ ಪೂಜೆ’ ಮಾಡುತ್ತಾರೆ. ಹೊರಗೂ ಅಲ್ಲದ ಒಳಗೂ ಅಲ್ಲದ ಈ ಸಂಕೀರ್ಣ ಪ್ರದೇಶವೇ ಮಾಟ–ಮಂತ್ರಗಳ ಸ್ಥಾನವೂ ಹೌದು, ಆತಂಕಗಳ ಸ್ಥಾನವೂ ಹೌದು.

8. ಮನೆಕಟ್ಟುವಾಗ ಅಡುಗೆ ಮನೆಯಲ್ಲಿ ಪೂರ್ವಾಭಿಮುಖವಾಗಿ ಹುಗಿದಿಟ್ಟಿರುವ ಮರದ ಒಂದು ಚಿಕ್ಕ ಕಂಬವನ್ನು ‘ಕನ್ನಿಕಂಬ’ ಎಂದು ಹೇಳುತ್ತಾರೆ. ಹಾಗೆ ಹುಗಿಯುವಾಗ ಅದರಡಿಯಲ್ಲಿ ಚೂರು ಚಿನ್ನವನ್ನು ಹಾಕಿರುತ್ತಾರೆ. ಹುಟ್ಟಿನಿಂದ ಸಾಯುವಲ್ಲಿವರೆಗಿನ ಕ್ರಿಯಾಚರಣೆಗಳು, ಹಾಗೇ ಋತು ಮಾನದ ಆಚರಣೆಗಳೆಲ್ಲ ಈ ಕನ್ನಿಕಂಬದ ಕೆಳಗೇ ನಡೆಯುವುದರಿಂದ ಇದು ಇಡೀ ಗೌಡ ಸಂಸ್ಕೃತಿಯ ಕೇಂದ್ರಸ್ಥಳವಾಗಿದೆ. ಹಸಿವನ್ನು ತೀರಿಸಲು ಅನ್ನ ಕೊಡುವ ಅಡುಗೆ ಮನೆಯಲ್ಲಿಯೇ ಇದನ್ನು ಸ್ಥಾಪಿಸುತ್ತಾರೆ. ಕನ್ನಿಕಂಬವಿಲ್ಲದ ಗೌಡರ ಮನೆಗಳಿಲ್ಲ. ಇದು ಕೂಡಾ, ಅಂದರೆ ಅಡುಗೆ ಮನೆ ಸಹಿತವಾದ ಕನ್ನಿಕಂಬವು ಗೌಡ ವಾಸ್ತುವಿನ ಮೂಲ ಘಟಕವಾಗಿಯೂ ಕೆಲಸ ನಿರ್ವಹಿಸಿದೆ.

9. ಒಂದು ಕವಳಿಗೆ ಎಂದರೆ ಇಪ್ಪತ್ತೈದು ವೀಳ್ಯದೆಲೆಗಳಿರುವ ಒಂದು ಕಟ್ಟು. ಅಂಥ ನಾಲ್ಕು ಕವಳಿಗೆ ಸೇರಿದರೆ ‘ಒಂದು ಸೂಡಿ’ ಆಗುತ್ತದೆ. ಗೌಡರ ಮದುವೆಯಲ್ಲಿನ 12 ಒಪ್ಪಂದಗಳಿಗೆ ಪ್ರಕೃತ ಒಂದೂವರೆ ಸಾವಿರ ವೀಳ್ಯದೆಲೆ ಮತ್ತು 60 ಅಡಿಕೆಗಳ ಅಗತ್ಯವಿದೆ. ಅದರಲ್ಲಿ ಒಂದು ಕಡಿಮೆಯಾದರೂ ಮದುವೆಯೇ ನಿಂತು ಹೋಗಬಹುದು.

10. ಈ ಅರ್ಥದಲ್ಲಿ ಎಂ. ಎನ್. ಶ್ರೀನಿವಾಸ್ ಹೇಳುವ ‘ಸಂಸ್ಕೃತೀಕರಣ’ ಇಲ್ಲಿ ನಡೆದಿಲ್ಲ.

11. ಗೌಡರ ಧಾರ್ಮಿಕ ಸಂಪ್ರದಾಯದಲ್ಲಿ ಭತ್ತವನ್ನು ಕ್ರಿಮಿಕೀಟಗಳಿಂದ ರಕ್ಷಿಸುವ “ಗೊರವ”ನಿಗೆ ವಿಶೇಷ ಸ್ಥಾನವಿದೆ. ಮಧ್ಯಕಾಲೀನ ಕರ್ನಾಟಕದ ರಹಸ್ಯ ತಾಂತ್ರಿಕ ಪಂಥಗಳಲ್ಲಿ ಹಸಿವು ಮತ್ತು ಕಾಮದ ಪೂರೈಕೆಗೆ ಅಕ್ಕಿ ಮತ್ತು ಹೆಣ್ಣನ್ನು ಬಳಸುತ್ತಿದ್ದು, ಇದರಿಂದ ಒಕ್ಕಲಿಗರು ವಿಶೇಷವಾಗಿ ಪ್ರಭಾವಿತರಾಗಿದ್ದಾರೆ. ಸಿದ್ಧವೇಷದ ಕುಣಿತ, ಪುರುಷ ಭೂತದ ಆರಾಧನೆಯಲ್ಲಿ ಇದು ಸ್ಪಷ್ಟವಾಗುತ್ತದೆ.

12. ಇಲ್ಲಿ ಹಿಂದಿನ ತಲೆಮಾರುಗಳ ಸಂಖ್ಯೆ 16 ಮಾತ್ರ ಏಕೆಂದು ನನಗೆ ತಿಳಿಯದು. ಸತ್ತು 16 ದಿನಗಳ ಅನಂತವೂ ಇದೇ 16 ತೊಲೆಗಳಿಗೆ ಗೌರವ ಸೂಚಿಸಿ, ಸತ್ತವನನ್ನು

ಅವರೊಂದಿಗೆ ಸೇರಿಸಲಾಗುವುದು. ಆಗ ಒಬ್ಬ ಹೆಚ್ಚು ಸೇರಿದ್ದರಿಂದ ಮೊದಲ 16ರಲ್ಲಿ ಒಂದು ಎಲೆಯನ್ನು ಹೊರಗೆ ಹಾಕಿ ಒಟ್ಟು ಸಂಖ್ಯೆಯನ್ನು 16ರಲ್ಲಿಯೇ ನಿಲ್ಲಿಸುತ್ತಾರೆ. ಇದರ ಔಚಿತ್ಯವೇನೆಂದು ನಾನು ಹೇಳಲು ಅಸಮರ್ಥನಾಗಿದ್ದೇನೆ.

13. ಗೌಡ ಜನಪದ ಸಾಹಿತ್ಯದುದ್ದಕ್ಕೂ (ಮುಖ್ಯವಾಗಿ ಮದುವೆ ಹಾಡುಗಳಲ್ಲಿ) ತಂಗಿ ಮತ್ತು ತಂಗಿಯ ಮಕ್ಕಳ ಬಗ್ಗೆ ವಿಶೇಷ ಉಲ್ಲೇಖ ಇರುವುದು ಈ ಕಾರಣಕ್ಕೆ. ಆಕೆ ಮದುವೆಗೆ ಬರಲೇ ಬೇಕಾಗುತ್ತದೆ.

ಉದಾ: ಮದುವೆ ಹಾಡೊಂದರಲ್ಲಿ ಅಕ್ಕನನ್ನು ಕರೆಯಲು ಹೊರಟು ಬಂದ ಅಣ್ಣನ ವರ್ಣನೆ:

“ಸೂಡಿ ಸೂಡಿ ವೀಳ್ಯವ ತೆಗೆದಾನು ಅಣ್ಣಯ್ಯ
ಕೀಲೆ ಕೀಲೆ ಅಡಿಕೆ ತೆಗೆದಾನು
ಅಕ್ಕನ ಕರೆಯಲಿಕೆ ಹೊರಟಾನು ಅಣ್ಣಯ್ಯ
ಸಣ್ಣಕ್ಕಿ ಬಯಲಲ್ಲಿ ನಡೆದಾನು.”

14. ಕೆಡ್ಡಸದ ದಿನದಂದು ಕೂಡಾ ಭೂಮಿಗೆ ವಿಶೇಷ ಗೌರವ ಸಲ್ಲಿಸಲಾಗುವುದು. ಆ ದಿನ ಭೂಮಿತಾಯಿ ಮುಟ್ಟಾಗುವಳೆಂಬ ನಂಬಿಕೆ ಗೌಡರಲ್ಲಿದೆ. ಆ ದಿನದಿಂದ ಮುಂದೆ ಕೃಷಿ ಕೆಲಸ ಆರಂಭವಾಗುವುದರಿಂದ ಇಡೀ ಆಚರಣೆಯಲ್ಲಿ ಭೂಮಿಯನ್ನು ಹೆಣ್ಣಾಗಿ ಕಂಡು, ಫಲವಂತಿಕೆಗೆ ಸಂಕೇತವಾಗಿ ಬಳಸಿಕೊಳ್ಳಲಾಗಿದೆ.


15. ತೊಲೆ ಮದುವೆಯ ಆಕೃತಿಗಾಗಿ ನೋಡಿರಿ ಅನುಬಂಧ: 3.

ಹೆಣ್ಣು

ಗಂಡು \ ಬಳಿಗಳು	ಸಂದರ	ಬಂಗಾರ	ಹೆಮ್ಮನ	ಮೂಲರ	ನಾಯರ	ಚಾಲ್ಯೆರ	ಗೋಳಿ	ಗುಂಡರ	ಕಬಳೆ	ಚಿತ್ತೆರೆ	ಗಾಡರ	ಬಳಸನ್ನ
ಸಂದರ	•	••••	•••	•	•							
ಬಂಗಾರ	•••	•	•••		•	•		•				•
ಹೆಮ್ಮನ	••	••	•					••				•
ಮೂಲರ	••	••	••	•			•					••
ನಾಯರ	••	•		••	•	•	•		••			
ಚಾಲ್ಯೆರ	•••	•	•••		••						•	
ಗುಂಡರ	•			••		•	•		•••	•	•	
ಕಬಳೆ	••			••		•		••		•		••
ಚಿತ್ತೆರೆ	•	••	•		•••	•		•			•	
ಗಾಡರ		••	•••		•			••		•		•
ಬಳಸನ್ನ	••	•	••	•		••			•	•		
ಗೋಳಿ	•••	•	•••		••						•	

ಬಳಿ ಸಂಬಂಧಗಳು.

ಅನುಬಂಧ ಚಿತ್ರ 1


ವರಕಿನ ಕೋಂಬ್ರೆ
ಕೋಂಬ್ರೆ-೧
ಕೋಂಬ್ರೆ-೨
ಕೋಂಬ್ರೆ-೩
ಕೋಂಬ್ರೆ-೪
ಬಾಡಿ
ತೊಂಬಾರ
ಉಂಡೊಳಗೆ
ಕೈಯಾಲೆ
ಕತ್ತಲೆ ಕೋಣೆ
ಕೋಂಬ್ರೆ-೫
ದೇವರ ಕೋಣೆ
ಜಗಲಿ
ಕೋಂಬ್ರೆ-೬
ದ
ಉತ್ತರ
ಪ
ಪೂ

ಅನುಬಂಧ ಚಿತ್ರ 2

ಕೊಲೆ ಮದುವೆಯಲ್ಲಿ ವರ ಮತ್ತು ವಧು (ಹಾಲೆ ಮರದ ರಚನೆ)



ಅನುಬಂಧ. ಚಿತ್ರ ಸಂಖ್ಯೆ 3

ಡಾ॥ ಬಿ. ಎಸ್. ಸುಜಾತ

ಮೌಲ್ಯಮಾಪನ ವಿಧಾನಗಳು

ಅಪೇಕ್ಷಿತ ದಿಕ್ಕಿನಲ್ಲಿ ವಿದ್ಯಾರ್ಥಿಯ ವರ್ತನೆಯಲ್ಲಿ ಬದಲಾವಣೆ ತರುವುದೇ ಬೋಧನೆಯ ಮುಖ್ಯ ಉದ್ದೇಶ. ಬೋಧನೆಯ ಮೂಲಕ, ಬೋಧನೋದ್ದೇಶಗಳಿಗನು ಗುಣವಾಗಿ, ವಿದ್ಯಾರ್ಥಿಗಳ ವರ್ತನೆಯುಲ್ಲಿ ಎಷ್ಟರ ಮಟ್ಟಿಗೆ ಬದಲಾವಣೆಯನ್ನು ತರಲಾಗಿದೆ ಎಂಬುದನ್ನು ನಿರ್ಧರಿಸುವುದು ಮೌಲ್ಯಮಾಪನದ ಉದ್ದೇಶ. ಆದ್ದರಿಂದ ಬೋಧನೆ ಮತ್ತು ಮೌಲ್ಯಮಾಪನಗಳು ಪರಸ್ಪರ ಸಂಬಂಧ ಹೊಂದಿವೆ ಮತ್ತು ಮೌಲ್ಯ ಮಾಪನವು ಬೋಧನಾ ಪ್ರಕ್ರಿಯೆಯ ಒಂದು ಮುಖ್ಯ ಮತ್ತು ಅವಿಭಾಜ್ಯ ಅಂಗ ವಾಗಿದೆ ಎಂದು ಪರಿಗಣಿಸಬಹುದು.

ವಿವಿಧ ವಿಧಾನಗಳನ್ನು ಬಳಸುವುದು ಮೌಲ್ಯಮಾಪನ ಪ್ರಕ್ರಿಯೆಯ ಒಂದು ವಿಶಿಷ್ಟ ಲಕ್ಷಣ. ಅವುಗಳನ್ನು ಉಪಯೋಗಿಸಲಾಗುವ ಆಧಾರಾಂಶದ ಚೌಕಟ್ಟನ್ನು ಅನುಸರಿಸಿ ಹಲವಾರು ರೀತಿಗಳಲ್ಲಿ ವರ್ಗೀಕರಿಸಬಹುದು ಮತ್ತು ವಿವರಿಸಬಹುದು. ಮೌಲ್ಯಮಾಪನ ತಂತ್ರಗಳನ್ನು ತಿಳಿಯಲು ಮತ್ತು ಬೋಧನೆಯಲ್ಲಿ ಅವುಗಳನ್ನು ಉಪಯೋಗಿಸಲು ಈ ಕೆಳಕಂಡ ವರ್ಗೀಕರಣ ಆಧಾರಗಳು ಬಹಳ ಮುಖ್ಯವಾದದ್ದೆಂದು ಪರಿಗಣಿಸಬಹುದು.

I. ಅಳತೆಯ ಸ್ವರೂಪದ ಆಧಾರಕ್ಕನುಸಾರವಾಗಿ—ಅಳತೆಯ ಸ್ವರೂಪ ಕ್ಕನುಗುಣವಾಗಿ ಮೌಲ್ಯಮಾಪನ ವಿಧಾನಗಳನ್ನು ಗರಿಷ್ಠ ಸಾಧನಾ ಮಾನಗಳು (Measures of maximum performance) ಮತ್ತು ಸಾಧಾರಣ ಸಾಧನಾ ಮಾನಗಳು (Measures of typical performance) ಎಂಬುದಾಗಿ ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು.

ಗರಿಷ್ಠ ಸಾಧನಾ ಮಾನಗಳು—ಈ ಕ್ರಮಗಳನ್ನು ಒಬ್ಬ ವ್ಯಕ್ತಿಯ ಸಾಮರ್ಥ್ಯವನ್ನು ನಿರ್ಧರಿಸಲು ಉಪಯೋಗಿಸಲಾಗುತ್ತವೆ. ಒಬ್ಬ ವ್ಯಕ್ತಿಯನ್ನು ತನ್ನಲ್ಲಿರುವ ಸಾಮರ್ಥ್ಯವನ್ನು ವ್ಯಕ್ತಪಡಿಸಲು ಪ್ರೇರೇಪಿಸಿದಾಗ ಅವನು ಎಷ್ಟರ ಮಟ್ಟಿಗೆ ಸಾಧಿಸಬಲ್ಲ ಎಂಬುದರ ಬಗ್ಗೆ ಗರಿಷ್ಠ ಸಾಧನಾ ಮಾನಗಳು ತಿಳಿಸುತ್ತವೆ. ಈ ರೀತಿಯ, ಮೌಲ್ಯಮಾಪನ ಫಲಿತಾಂಶಗಳು ಒಬ್ಬ ವ್ಯಕ್ತಿಯು 'ತಾನು ಏನು ಮಾಡಬಲ್ಲ'

ಎಂಬುದನ್ನು ತಿಳಿಸುತ್ತವೆ. ಅಭಿಸಾಮರ್ಥ್ಯ (aptitude) ಹಾಗೂ ಸಾಧನಾ (achievement) ಪರೀಕ್ಷಣಗಳು ಈ ಗುಂಪಿಗೆ ಸೇರುತ್ತವೆ. (ಈ ಎರಡು ಪರೀಕ್ಷಣಗಳನ್ನು ಸಾಮಾನ್ಯವಾಗಿ ಅವುಗಳ ಗುಣಕ್ಕಿಂತ ಅವುಗಳ ಫಲಿತಾಂಶಗಳ ಉಪಯೋಗಕ್ಕನುಸಾರವಾಗಿ ಬೇರ್ಪಡಿಸಲಾಗುತ್ತವೆ. ಅಭಿಸಾಮರ್ಥ್ಯ ಪರೀಕ್ಷಣವು ಯಾವುದಾದರೂ ಭಾವೀಕಲಿಕಾ ಚಟುವಟಿಕೆಯಲ್ಲಿನ ಸಾಫಲ್ಯದ ಬಗ್ಗೆ ಮುನ್ಸೂಚನೆ ನೀಡುತ್ತದೆ. ಆದರೆ ಸಾಧನಾ ಪರೀಕ್ಷಣವು ಯಾವುದಾದರೂ ನಡೆದುಹೋದ ಕಲಿಕಾ ಚಟುವಟಿಕೆಯಲ್ಲಿನ ಸಾಫಲ್ಯದ ಬಗ್ಗೆ ಮುನ್ಸೂಚನೆ ನೀಡುತ್ತದೆ. ಕೆಲವು ವೇಳೆ ಒಂದೇ ಪರೀಕ್ಷಣವನ್ನು ಎರಡು ಉದ್ದೇಶಗಳಿಗೂ ಉಪಯೋಗಿಸಬಹುದಾದ್ದರಿಂದ ಈ ಎರಡು ಪರೀಕ್ಷಣಗಳ ನಡುವಣ ವ್ಯತ್ಯಾಸ ಕೇವಲ ನಾವು ನೀಡುವ ಒತ್ತನ್ನು ಅವಲಂಬಿಸುತ್ತದೆ.)

ಸಾಧಾರಣ ಸಾಧನಾ ಮಾನಗಳು—ಸಾಧಾರಣ ಸಾಧನಾ ಮಾನಗಳು ಒಬ್ಬ ವ್ಯಕ್ತಿಯ ಸಾಮಾನ್ಯ ವರ್ತನೆಯನ್ನು ತಿಳಿಯಲು ಉಪಯೋಗಿಸುವ ವಿಧಾನಗಳು. ಸಾಮಾನ್ಯ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯು ಸಾಧಾರಣವಾಗಿ ಹೇಗೆ ವರ್ತಿಸುತ್ತಾನೆ ಎಂಬುದನ್ನು ಸಾಧಾರಣ ಸಾಧನಾ ಮಾನಗಳು ತಿಳಿಸುತ್ತವೆ. ಈ ಕ್ಷೇತ್ರದಲ್ಲಿನ ಫಲಿತಾಂಶಗಳು ಒಬ್ಬ ವ್ಯಕ್ತಿಯು 'ಏನು ಮಾಡಬಲ್ಲ' ಎನ್ನುವುದಕ್ಕಿಂತ 'ಏನುಮಾಡುತ್ತಾನೆ' ಎಂಬುದನ್ನು ತಿಳಿಸುತ್ತವೆ. ಉದಾ : ವಿಜ್ಞಾನದಲ್ಲಿ ಗಣನೀಯವಾದ ಸಾಮರ್ಥ್ಯವನ್ನು ಹೊಂದಿರುವ ಒಬ್ಬ ವ್ಯಕ್ತಿಯು ವಿಜ್ಞಾನವನ್ನು ಕಲಿಯಲು ಆಸಕ್ತಿಯನ್ನು ತೋರದಿರುವುದು.

ಸಾಧಾರಣ ವರ್ತನೆಯ ಮೌಲ್ಯಮಾಪನವು ವ್ಯಕ್ತಿತ್ವ ಮೌಲ್ಯಮಾಪನದ ಸಾಮಾನ್ಯ ಕ್ಷೇತ್ರಕ್ಕೆ ಸೇರುತ್ತದೆ. ಅಭಿರುಚಿ (interest), ಅಭಿವೃತ್ತಿ (attitude) ಮತ್ತು ವೈಯಕ್ತಿಕ-ಸಾಮಾಜಿಕ ಸಮಾಯೋಜನೆ (Personal-Social adjustment) ಯ ಇತರ ಮುಖಗಳ ಮೌಲ್ಯಮಾಪನ ಮಾಡುವ ವಿಧಾನಗಳು ಈ ಗುಂಪಿಗೆ ಸೇರುತ್ತವೆ. ಸಾಧಾರಣ ವರ್ತನೆಯ ಮೌಲ್ಯಮಾಪನವು ವಿದ್ಯಾರ್ಥಿಯ ವರ್ತನೆಯ ಮೌಲ್ಯಮಾಪನದ ಒಂದು ಕ್ಷೇತ್ರವಾಗಿದ್ದರೂ, ಈ ಮೌಲ್ಯಮಾಪನವು ಅನೇಕ ತೊಂದರೆಗಳಿಂದ ಕೂಡಿದೆ. ಈ ಕ್ಷೇತ್ರದಲ್ಲಿ ಪರೀಕ್ಷಾ ಸಾಧನಗಳ ಕೊರತೆ ಇರುವುದರಿಂದ ಸಂದರ್ಶನಗಳು (interviews), ಪ್ರಶ್ನಾವಳಿಗಳು (questionnaires), ದೃಶಾಂತ ಲೇಖನಗಳು (anecdotal records), ನಿರ್ಧಾರಣಾ ಮಾಪನಿಗಳು (rating scales) ಮತ್ತು ಇತರ ಸ್ವಯಂ ವರದಿ (self report) ಹಾಗೂ ವೀಕ್ಷಣ ತಂತ್ರಗಳನ್ನು ಉಪಯೋಗಿಸಲಾಗುತ್ತಿದೆ. ಮೇಲೆ ಹೇಳಿದ ಯಾವುದೇ ಒಂದು ಸಾಧನವನ್ನು ಪ್ರತ್ಯೇಕವಾಗಿ ಉಪಯೋಗಿಸಿದಾಗ ವ್ಯಕ್ತಿಯ ಸಾಮಾನ್ಯ ವರ್ತನೆಯ ಬಗ್ಗೆ ಸಾಕಷ್ಟು ಮಾಹಿತಿ ದೊರೆಯುವುದಿಲ್ಲ. ಆದರೆ ಹಲವಾರು ಸಾಧನಗಳನ್ನು ಉಪಯೋಗಿಸಿ ದೊರೆತ ಸಂಯುಕ್ತ ಫಲಿತಾಂಶಗಳು ಶಿಕ್ಷಕನಿಗೆ ಈ ಕ್ಷೇತ್ರಗಳಲ್ಲಿ

ವಿದ್ಯಾರ್ಥಿಯ ಪ್ರಗತಿಯ ಹಾಗೂ ಬದಲಾವಣೆಗಳ ಬಗ್ಗೆ ನಿಖರವಾದ ನಿರ್ಧಾರವನ್ನು ಕೈಗೊಳ್ಳಲು ಸಹಾಯಕವಾಗುತ್ತವೆ.

II. ಮೌಲ್ಯಮಾಪನವನ್ನು ತರಗತಿಯ ಬೋಧನೆಯಲ್ಲಿ ಉಪಯೋಗಿಸುವ ಆಧಾರಕ್ಕನುಸಾರವಾಗಿ—ತರಗತಿಯ ಬೋಧನೆಯಲ್ಲಿ ಮೌಲ್ಯಮಾಪನ ತಂತ್ರಗಳನ್ನು ಉಪಯೋಗಿಸಬಹುದಾದ ಅನುಕ್ರಮದ ಆಧಾರದ ಮೇಲೆ ಮೌಲ್ಯಮಾಪನ ವಿಧಾನಗಳನ್ನು ಈ ಕೆಳಕಂಡ ರೀತಿಯಲ್ಲಿ ವರ್ಗೀಕರಿಸಬಹುದು.

1. ವಿದ್ಯಾರ್ಥಿಯ ಪ್ರವೇಶ ವರ್ತನೆ (entry behaviour) ಯ ಮೌಲ್ಯಮಾಪನ—ಸ್ಥಾನ ನಿರ್ದೇಶಕ ಮೌಲ್ಯಮಾಪನ (Placement Evaluation).
2. ಬೋಧನಾ ಸಮಯದಲ್ಲಿ ವಿದ್ಯಾರ್ಥಿಯ ಕಲಿಕಾ ಪ್ರಗತಿಯ ಮೌಲ್ಯಮಾಪನ—ರೂಪಣಾತ್ಮಕ ಮೌಲ್ಯಮಾಪನ (Formative Evaluation)
3. ಬೋಧನಾ ಸಮಯದಲ್ಲಿ ವಿದ್ಯಾರ್ಥಿಯ ಕಲಿಕಾ ತೊಂದರೆಗಳ ಮೌಲ್ಯಮಾಪನ—ನೈದಾನಿಕ ಮೌಲ್ಯಮಾಪನ (Diagnostic Evaluation).
4. ಬೋಧನೆಯ ಅಂತ್ಯದಲ್ಲಿ ವಿದ್ಯಾರ್ಥಿಯ ಸಾಧನೆಯ ಮೌಲ್ಯಮಾಪನ ಸಂಚಯಿತ ಮೌಲ್ಯಮಾಪನ (Summative Evaluation).

1. ಸ್ಥಾನ ನಿರ್ದೇಶಕ ಮೌಲ್ಯಮಾಪನ—ಈ ರೀತಿಯ ಮೌಲ್ಯಮಾಪನವು ವಿದ್ಯಾರ್ಥಿಯ ಪ್ರವೇಶ ವರ್ತನೆಗೆ ಸಂಬಂಧಿಸಿದ್ದಾಗಿರುತ್ತದೆ ಮತ್ತು ಸಾಮಾನ್ಯವಾಗಿ ಈ ಕೆಳಕಂಡ ರೀತಿಯ ಪ್ರಶ್ನೆಗಳಿಗೆ ಗಮನ ನೀಡುತ್ತದೆ.

(i) ಯೋಜಿತ ಬೋಧನೆಗೆ ಬೇಕಾಗಿರುವ ಜ್ಞಾನ ಮತ್ತು ಕೌಶಲ್ಯಗಳನ್ನು ವಿದ್ಯಾರ್ಥಿಯು ಹೊಂದಿದ್ದಾನೆಯೇ ?

(ii) ಯೋಜಿತ ಬೋಧನೆಯ ಬೋಧನೋದ್ದೇಶಗಳನ್ನು ಎಷ್ಟರ ಮಟ್ಟಿಗೆ ವಿದ್ಯಾರ್ಥಿಯು ಈಗಾಗಲೇ ಸಾಧಿಸಿದ್ದಾನೆ ?

(iii) ವಿದ್ಯಾರ್ಥಿಗಳ ಅಭಿರುಚಿಗಳು, ಕಾರ್ಯವಿಧಾನಗಳು (work habits) ಮತ್ತು ವ್ಯಕ್ತಿತ್ವ ಲಕ್ಷಣಗಳಿಗೆ ಯಾವ ರೀತಿಯ ಬೋಧನಾ ವಿಧಾನ ಹೆಚ್ಚು ಸೂಕ್ತವಾದದ್ದು.

ಈ ರೀತಿಯ ಪ್ರಶ್ನೆಗಳನ್ನು ಉತ್ತರಿಸಲು ವಿವಿಧ ರೀತಿಯ ತಂತ್ರಗಳನ್ನು ಬಳಸಬೇಕಾಗುವುದು : ಸಿದ್ಧತಾ ಪರೀಕ್ಷಣಗಳು (readiness tests), ಅಭಿಸಾಮರ್ಥ್ಯ ಪರೀಕ್ಷಣಗಳು, ವ್ಯಾಸಂಗಾವಧಿಯ ಪೂರ್ವ ಪರೀಕ್ಷಣಗಳು (pre-tests on course objectives), ಸ್ವಯಂ ವರದಿ ಅಂಶಾವಳಿಗಳು (self-report inventories), ವೀಕ್ಷಣ

ತಂತ್ರಗಳು ಮುಂತಾದುವು. ಬೋಧನಾ—ಪೂರ್ವ ಸ್ಥಾನ ನಿರ್ಧಾರ ಮತ್ತು ಪ್ರತಿಯೊಂದು ವಿದ್ಯಾರ್ಥಿಯ ಪರಮಾವಧಿ ಸಾಧನೆಗೆ ಸೂಕ್ತವಾದ ಬೋಧನಾ ವಿಧಾನವನ್ನು ನಿರ್ಧರಿಸುವುದೇ ಸ್ಥಾನ ನಿರ್ದೇಶನ ಮೌಲ್ಯಮಾಪನದ ಮುಖ್ಯ ಗುರಿಯಾಗಿರುತ್ತದೆ.

2. **ರೂಪಣಾವಧಿ ಮೌಲ್ಯಮಾಪನ—ಬೋಧನಾ** ಸಮಯದಲ್ಲಿ ವಿದ್ಯಾರ್ಥಿಯ ಕಲಿಕಾ ಪ್ರಗತಿಯನ್ನು ತಿಳಿಯಲು ರೂಪಣಾವಧಿ ಮೌಲ್ಯಮಾಪನ ವನ್ನು ಉಪಯೋಗಿಸಲಾಗುವುದು. ವಿದ್ಯಾರ್ಥಿ ಮತ್ತು ಶಿಕ್ಷಕನಿಗೆ ಕಲಿಕಾ ಸಾಧನೆ ಗಳನ್ನು ಮತ್ತು ವಿಫಲತೆ (failure) ಗಳನ್ನು ನಿರಂತರವಾಗಿ ಪ್ರತಿ ಪುಷ್ಟೀಕರಿಸುವುದೇ (providing feedback) ರೂಪಣಾವಧಿ ಮೌಲ್ಯಮಾಪನದ ಮುಖ್ಯ ಉದ್ದೇಶ. ಪ್ರತಿಪುಷ್ಟೀಕರಣವು ವಿದ್ಯಾರ್ಥಿಗೆ ಸಫಲವಾದ ಕಲಿಕೆಯನ್ನು ಪುನರ್ಬಲನಗೊಳಿಸಲು (reinforcement) ಮತ್ತು ಸರಿಪಡಿಸಬೇಕಾದ ನಿರ್ದಿಷ್ಟವಾದ ಕಲಿಕಾ ತೊಂದರೆ ಗಳನ್ನು ಗುರುತಿಸಲು ಸಹಾಯಕವಾಗುತ್ತದೆ. ಶಿಕ್ಷಕನಿಗೆ ಪ್ರತಿಪುಷ್ಟೀಕರಣವು ಕಲಿಕೆಯನ್ನು ಸುಧಾರಿಸಲು ಮತ್ತು ವೈಯಕ್ತಿಕ ಹಾಗೂ ಸಾಮೂಹಿಕ ಪರಿಹಾರ ಕಾರ್ಯ (remedial work) ವನ್ನು ಒದಗಿಸಲು ಸಹಾಯಕವಾಗುತ್ತದೆ. ರೂಪಣಾವಧಿ ಮೌಲ್ಯಮಾಪನವು ಬೋಧನೆಯ ಪ್ರತಿಯೊಂದು ಹಂತಕ್ಕೂ ವಿಶೇಷ ವಾಗಿ ತಯಾರಿಸಲಾಗಿರುವ ಪರೀಕ್ಷಣಗಳನ್ನು ಅವಲಂಬಿಸುತ್ತದೆ. ಪರೀಕ್ಷಣೆಯ ಒಂದೊಂದು ಅಂಶಕ್ಕೂ ಅಥವಾ ಬೇರೆ ಬೇರೆ ಕೌಶಲಗಳನ್ನು ಮಾಪನಮಾಡುವ ಪ್ರತಿ ಯೊಂದು ಪ್ರಶ್ನೆಗಳ ಗುಂಪಿಗೂ ವೈಕಲ್ಪಿಕ (alternative) ಅಥವಾ ಪರಿಹಾರಾತ್ಮಕ (remedial) ಬೋಧನೆಯನ್ನು ಸಾಮಾನ್ಯವಾಗಿ ಸೂಚಿಸಲಾಗುತ್ತದೆ. ರೂಪಣಾವಧಿ ಮೌಲ್ಯಮಾಪನಕ್ಕೆ ಉಪಯೋಗಿಸಲಾಗುವ ಪರೀಕ್ಷಣಗಳು ಸಾಮಾನ್ಯವಾಗಿ ಅಧ್ಯಾಪಕಕೃತ (teacher made) ಪರೀಕ್ಷೆಗಳಾಗಿರುತ್ತವೆ. ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಅವಲೋಕಿಸಲು ಮತ್ತು ಕಲಿಕಾ ದೋಷಗಳನ್ನು ತಿಳಿಯಲು ವೀಕ್ಷಣಾ ತಂತ್ರಗಳೂ ಸಹ ಸಹಾಯಕವಾಗುತ್ತವೆ. ರೂಪಣಾವಧಿ ಮೌಲ್ಯಮಾಪನವು ಬೋಧನೆ ಮತ್ತು ಕಲಿಕೆಯನ್ನು ಉತ್ತಮಗೊಳಿಸಲು ಉದ್ದೇಶಿಸಿರುವುದರಿಂದ ಸಾಮಾನ್ಯವಾಗಿ ಈ ಮೌಲ್ಯಮಾಪನದ ಫಲಿತಾಂಶಗಳನ್ನು ವ್ಯಾಸಂಗ ಶ್ರೇಣಿ (course grades) ಗಳನ್ನು ನಿರ್ಧರಿಸಲು ಉಪಯೋಗಿಸುವುದಿಲ್ಲ.

3. **ನೈದಾನಿಕ ಮೌಲ್ಯಮಾಪನ**–ನೈದಾನಿಕ ಮೌಲ್ಯಮಾಪನವು ಮಾನಕ ಪರಿಷ್ಕೃತ ನಿಯಮ (standard corrective prescriptions) ಗಳಿಂದ ಸರಿಪಡಿಸ ಲಾಗದ ವಿದ್ಯಾರ್ಥಿಗಳ ನಿರಂತರ ಅಥವಾ ಪುನರಾವರ್ತಿತವಾಗುತ್ತಿರುವ ಕಲಿಕಾ ತೊಂದರೆಗಳಿಗೆ ಸಂಬಂಧಿತವಾದದ್ದು. ಒಬ್ಬ ವಿದ್ಯಾರ್ಥಿಯು ಸತತವಾಗಿ ಗಣಿತ, ಓದುಗಾರಿಕೆ ಅಥವಾ ಇನ್ನಿತರ ವಿಷಯಗಳಲ್ಲಿ ವೈಕಲ್ಪಿಕ ಬೋಧನಾ ವಿಧಾನ [ಯೋಜಿತ ಬೋಧನೆ, ದೃಶ್ಯಸಾಧನಗಳು (Visual aids)] ಉಪಯೋಗದ

ನಂತರವೂ ನಿರಂತರವಾಗಿ ಅನುತ್ತೀರ್ಣನಾಗುತ್ತಿದ್ದರೆ ಇನ್ನೂ ವಿವರವಾದ ನೈದಾನಿಕ ಕಾರ್ಯವನ್ನು ಮಾಡಬೇಕಾಗುವುದೆಂದು ತಿಳಿಸುತ್ತದೆ. ನೈದಾನಿಕ ಮೌಲ್ಯ ಮಾಪನದಲ್ಲಿ ವಿಶೇಷವಾಗಿ ತಯಾರಿಸಲಾದ ನೈದಾನಿಕ ಪರೀಕ್ಷಣಗಳನ್ನು ಮತ್ತು ವಿವಿಧ ವೀಕ್ಷಣಾ ತಂತ್ರಗಳನ್ನು ಬಳಸಬೇಕಾಗುವುದು. ಗಂಭೀರ ಕಲಿಕಾ ಸಮಸ್ಯೆಗಳಿಗೆ ಪರಿಹಾರಾತ್ಮಕ, ಮನೋವೈಜ್ಞಾನಿಕ ಮತ್ತು ವೈದ್ಯಕೀಯ ತಜ್ಞರ ಸಹಾಯವನ್ನು ಪಡೆಯಬೇಕಾಗುತ್ತದೆ. ಕಲಿಕಾ ಸಮಸ್ಯೆಗಳ ಕಾರಣಗಳನ್ನು ನಿರ್ಧರಿಸಿ ಚಿಕಿತ್ಸಾ ಕಾರ್ಯವನ್ನು ನಿಯೋಜಿಸುವುದು ನೈದಾನಿಕ ಮೌಲ್ಯಮಾಪನದ ಮುಖ್ಯ ಗುರಿಯಾಗಿರುತ್ತದೆ.

4. **ಸಂಯೋಜಿತ ಮೌಲ್ಯಮಾಪನ**—ಈ ವಿಧದ ಮೌಲ್ಯಮಾಪನವು ಸಾಮಾನ್ಯವಾಗಿ ಬೋಧನೆಯ ಅಂತ್ಯದಲ್ಲಿ ಮಾಡಲಾಗುತ್ತದೆ. ಈ ರೀತಿಯ ಮೌಲ್ಯ ಮಾಪನವು ಬೋಧನೋದ್ದೇಶಗಳನ್ನು ಎಷ್ಟರ ಮಟ್ಟಿಗೆ ಸಾಧಿಸಲಾಗಿವೆ ಎಂಬುದನ್ನು ತಿಳಿಯಲು ಸಹಾಯಕವಾಗುತ್ತದೆ ಮತ್ತು ಮೂಲಭೂತವಾಗಿ ವ್ಯಾಸಂಗ ಶ್ರೇಣಿ ಗಳನ್ನು ನಿರ್ಧರಿಸಲು ಅಥವಾ ವಿದ್ಯಾರ್ಥಿಗಳ ಕಲಿಕಾ ಫಲಿತಗಳ ಪ್ರಾವೀಣ್ಯತೆ ಯನ್ನು ಪ್ರಮಾಣೀಕರಿಸಲು ಉಪಯೋಗಿಸಲಾಗುತ್ತದೆ. ಬೋಧನೋದ್ದೇಶಗಳು ಸಂಯೋಜಿತ ಮೌಲ್ಯಮಾಪನದ ತಂತ್ರಗಳನ್ನು ನಿರ್ಧರಿಸುತ್ತವೆ. ಆದರೆ ಸಾಮಾನ್ಯ ವಾಗಿ ಅವುಗಳು ಬೋಧಕ ಕೃತ ಸಾಧನಾ ಪರೀಕ್ಷಣಗಳು, ವಿವಿಧ ನಿಷ್ಪಾದನ ನಿರ್ಧಾರಣ ಮಾಪನಿಗಳು (ratings on various types of performance) ಮತ್ತು ಉತ್ಪಾದನೆಗಳ (products) ಮೌಲ್ಯಮಾಪನವನ್ನೊಳಗೊಂಡಿರುತ್ತವೆ. ಶ್ರೇಣೀಕರಣ ಅಥವಾ ವಿದ್ಯಾರ್ಥಿಗಳ ಪ್ರಾವೀಣ್ಯತೆಯ ಪ್ರಮಾಣೀಕರಣ ಸಂಯೋಜಿತ ಮೌಲ್ಯಮಾಪನದ ಮುಖ್ಯಕಾರ್ಯವಾಗಿದ್ದರೂ, ಅದು ವ್ಯಾಸಂಗಾವಧಿ ಉದ್ದೇಶಗಳ ಉಪಯುಕ್ತತೆ ಮತ್ತು ಬೋಧನೆಯ ಪರಿಣಾಮ ನಿರ್ಧರಿಸಲು ಮಾಹಿತಿ ಯನ್ನು ಒದಗಿಸುತ್ತದೆ.

III. ಮೌಲ್ಯಮಾಪನದ ಫಲಿತಾಂಶಗಳನ್ನು ವ್ಯಾಖ್ಯಾನಿಸುವ ಆಧಾರ ಕ್ಕನುಸಾರವಾಗಿ—ಫಲಿತಾಂಶಗಳನ್ನು ವ್ಯಾಖ್ಯಾನಿಸುವ ರೀತಿಯನ್ನನುಸರಿಸಿ ಮೌಲ್ಯಮಾಪನ ವಿಧಾನಗಳನ್ನು ವಿವರಿಸುವುದು ಇತ್ತೀಚಿನ ಕ್ರಮ. ಪರೀಕ್ಷಣ ಅಥವಾ ಇನ್ನಿತರ ಮೌಲ್ಯಮಾಪನ ಸಾಧನಗಳಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಮೂಲತಃ ಈ ಎರಡು ರೀತಿಗಳಲ್ಲಿ ವ್ಯಾಖ್ಯಾನಿಸಬಹುದು—ನಿರ್ಣಯಾಂಶ/ನಿರ್ಧಾರಕ ಆಧರಿತ (Criterion Referenced) ಮತ್ತು ಪ್ರಮಾಣಕ/ಸಾಮಾನ್ಯಕ ಆಧರಿತ (Norm Referenced) ವ್ಯಾಖ್ಯಾನಗಳು. ನಿರ್ಧಾರಕ ಆಧರಿತ ವ್ಯಾಖ್ಯಾನವು ವ್ಯಕ್ತಿ ತೋರಿಸ ಬಹುದಾದ ನಿರ್ದಿಷ್ಟ ರೀತಿಯ ವರ್ತನೆಗಳ ರೂಪದಲ್ಲಿ ಅವನ ಸಾಧನೆಯನ್ನು ವರ್ಣಿಸುತ್ತದೆ.

ಉದಾ : ವಿದ್ಯಾರ್ಥಿಯೊಬ್ಬ ಒಂದು ನಿಮಿಷದಲ್ಲಿ 45 ಪದಗಳನ್ನು ತಪ್ಪಿಲ್ಲದೆ ಬೆರಳಚ್ಚು ಮಾಡಬಲ್ಲ.

ಒಂದು ಪರೀಕ್ಷಣದಲ್ಲಿ ವಿದ್ಯಾರ್ಥಿಯೊಬ್ಬ ಶೇಕಡ 70 ಅಂಶಗಳನ್ನು ಸರಿಯಾಗಿ ಉತ್ತರಿಸಿದ್ದಾನೆ.

ಸಾಮಾನ್ಯಕ ಆಧರಿತ ವ್ಯಾಖ್ಯಾನವು ವಿದ್ಯಾರ್ಥಿಯ ಸಾಧನೆಯನ್ನು ಗುಂಪಿನಲ್ಲಿ ಆ ವಿದ್ಯಾರ್ಥಿಯ ಸಾಪೇಕ್ಷ ಸ್ಥಾನಕ್ಕೆ ಸಂಬಂಧಿಸಿದಂತೆ ವರ್ಣಿಸುತ್ತದೆ.

ಉದಾ : ವಿದ್ಯಾರ್ಥಿ A ತರಗತಿಯ ಶೇಕಡ 80 ವಿದ್ಯಾರ್ಥಿಗಳಿಗಿಂತ ಚೆನ್ನಾಗಿ ಬೆರಳಚ್ಚು ಮಾಡಬಲ್ಲ.

ಒಂದು ಪರೀಕ್ಷಣದಲ್ಲಿ ವಿದ್ಯಾರ್ಥಿ A ಶೇಕಡ 70 ವಿದ್ಯಾರ್ಥಿಗಳಿಗಿಂತ ಚೆನ್ನಾಗಿ ಸಾಧನೆಯನ್ನು ತೋರಿಸಿದ್ದಾನೆ.

ಶಿಕ್ಷಕನಿಗೆ ಮೌಲ್ಯಮಾಪನ ಕಾರ್ಯದಲ್ಲಿ ಈ ರೀತಿಯ ಎರಡೂ ವ್ಯಾಖ್ಯಾನಗಳು ಉಪಯೋಗಕರವಾದದ್ದು.

ಒಬ್ಬ ವಿದ್ಯಾರ್ಥಿಯು ಇತರ ವಿದ್ಯಾರ್ಥಿಗಳಿಗೆ ಸಂಬಂಧಿಸದಂತೆ ಏನು ಮಾಡಬಲ್ಲ ಎಂಬುದನ್ನು ತಿಳಿಯಲು ನಿರ್ಧಾರಕ ಆಧರಿತ ವ್ಯಾಖ್ಯಾನಗಳು ಸಹಾಯಕವಾಗುತ್ತವೆ. ವಿದ್ಯಾರ್ಥಿಯ ಕಾರ್ಯಸಾಧನೆಯನ್ನು ಯಾವುದಾದರೂ ಪೂರ್ವನಿಶ್ಚಿತವಾಗಿರುವ ಒಂದು ನಿರಪೇಕ್ಷ ಮಾನಕ (absolute standard)ಕ್ಕೆ ಹೋಲಿಸಿ ನಿರ್ಧರಿಸಬಹುದು. (ಉದಾ: ವಿದ್ಯಾರ್ಥಿಯೊಬ್ಬ ಒಂದು ಘಟಕದಲ್ಲಿ ಶೇಕಡ 50 ಪದಗಳನ್ನಾದರೂ ವಿವರಿಸಬಲ್ಲ). ಒಬ್ಬ ವ್ಯಕ್ತಿಯ ಸಾಧನೆಯನ್ನು ಇತರ ವ್ಯಕ್ತಿಗಳಿಗೆ ಹೋಲಿಸಿದರೆ ಹೇಗಿದೆ ಎಂಬುದನ್ನು ವಿವರಿಸಲು ಸಾಮಾನ್ಯಕ ಆಧರಿತ ವ್ಯಾಖ್ಯಾನಗಳು ಸಹಾಯಕವಾಗುತ್ತವೆ. ಹೋಲಿಸುವ ಗುಂಪು ಫಲಿತಾಂಶಗಳನ್ನು ಉಪಯೋಗಿಸಬೇಕಾದ ಆಧಾರವನ್ನು ಅವಲಂಬಿಸುತ್ತದೆ. (ಹೋಲಿಸುವ ಗುಂಪು ತರಗತಿ, ಸ್ಥಳೀಯ, ರಾಜ್ಯ ಅಥವಾ ದೇಶವ್ಯಾಗಿರಬಹುದು). ಸಾಮಾನ್ಯಕ ಆಧರಿತ ವ್ಯಾಖ್ಯಾನದಲ್ಲಿ ನಾವು ಒಬ್ಬ ವಿದ್ಯಾರ್ಥಿಯು ಒಂದು ಪರೀಕ್ಷಣದ ಶೇಕಡ ಎಷ್ಟು ಅಂಶಗಳನ್ನು ಸರಿಯಾಗಿ ಉತ್ತರಿಸಿದ್ದಾನೆ ಎಂಬುದನ್ನು ತಿಳಿಸುವುದಿಲ್ಲ. ಆದರೆ ಒಬ್ಬ ವಿದ್ಯಾರ್ಥಿಯು ಪ್ರಮಾಣಿಕ ಗುಂಪಿನ ವಿದ್ಯಾರ್ಥಿಗಳಿಗಿಂತ ಶೇಕಡ ಎಷ್ಟು ವಿದ್ಯಾರ್ಥಿಗಳನ್ನು ಮೀರಿಸಿದ್ದಾನೆ ಅಥವಾ ಹೆಚ್ಚು ಅಂಶಗಳನ್ನು ಸರಿಯಾಗಿ ಉತ್ತರಿಸಿದ್ದಾನೆ ಎಂಬುದನ್ನು ತಿಳಿಸುತ್ತದೆ.

'ನಿರ್ಧಾರಕ ಆಧರಿತ' ಮತ್ತು 'ಸಾಮಾನ್ಯಕ ಆಧರಿತ' ಎಂಬುದು ಕೇವಲ ಮೌಲ್ಯಮಾಪನದ ಫಲಿತಾಂಶಗಳನ್ನು ವ್ಯಾಖ್ಯಾನಿಸುವುದಕ್ಕೆ ಅನ್ವಯಿಸುತ್ತದೆ. ವಿವಿಧ ರೀತಿಯ ವ್ಯಾಖ್ಯಾನಕ್ಕನುಸಾರವಾಗಿ ನಿರ್ದಿಷ್ಟವಾಗಿ ಮೌಲ್ಯಮಾಪನ ಸಾಧನಗಳನ್ನು (ಸಾಮಾನ್ಯಕ ಆಧರಿತ ಮತ್ತು ನಿರ್ಧಾರಕ ಆಧರಿತ ಸಾಧನ ಪರೀಕ್ಷಣಗಳನ್ನು) ತಯಾರಿಸಿದಾಗಲೇ ಈ ಎರಡು ವಿಶಿಷ್ಟ ರೀತಿಯ ವ್ಯಾಖ್ಯಾನಗಳು ಅರ್ಥಪೂರ್ಣ ಮತ್ತು ಉಪಯೋಗಕರವಾಗುತ್ತವೆ.

ಸಾಮಾನ್ಯಕ ಆಧರಿತ ಸಾಧನಾ ಪರೀಕ್ಷಣಗಳು (Norm referenced achievement tests)

ಸಾಮಾನ್ಯಕ ಆಧರಿತ ಪರೀಕ್ಷಣಗಳು ವಿದ್ಯಾರ್ಥಿಗಳ ಸಾಪೇಕ್ಷ ಸಾಧನೆಯನ್ನು ಕನಿಷ್ಠದಿಂದ ಗರಿಷ್ಠದವರೆಗೆ ಶ್ರೇಣಿಬದ್ಧಗೊಳಿಸಲು ಅನುಕೂಲವಾಗುವಂತೆ ತಯಾರಿಸಲಾಗಿರುತ್ತವೆ. ವಿದ್ಯಾರ್ಥಿಯ ಸಾಧನೆಯಲ್ಲುಂಟಾಗುವ ಬೆಳವಣಿಗೆಯನ್ನು ಅಳತೆ ಮಾಡಲು ಮತ್ತು ಅವನ ಸಾಧನೆಯ ಮಟ್ಟವನ್ನು ಇತರ ವಿದ್ಯಾರ್ಥಿಗಳು ಅಥವಾ ಒಂದು ಮಾನಕ ಸಮೂಹವು ತಲುಪಿರುವ ಮಟ್ಟದೊಂದಿಗೆ ಹೋಲಿಸಲು ಸಹಾಯಕವಾಗುವಂತೆ ಸಾಮಾನ್ಯಕ ಆಧರಿತ ಪರೀಕ್ಷಣಗಳನ್ನು ತಯಾರಿಸಲಾಗಿರುತ್ತವೆ. ಇದರಿಂದ ವಿದ್ಯಾರ್ಥಿಗಳ ಸಾಪೇಕ್ಷ ಸಾಧನೆಯ ಆಧಾರದ ಮೇಲೆ ಕೆಲವು ತೀರ್ಮಾನಗಳನ್ನು (ಆಯ್ಕೆ, ಸಮೂಹೀಕರಣ, ಶ್ರೇಣೀಕರಣ) ಹೆಚ್ಚಿನ ವಿಶ್ವಾಸದೊಂದಿಗೆ ಕೈಗೊಳ್ಳಬಹುದು.

ವ್ಯಾಪಕವಾದ ಅಂಕಗಳನ್ನು ಪಡೆಯಲು ಸೂಕ್ತವಾದ ಪರೀಕ್ಷಣದ ಅಂಶಗಳನ್ನು ಆಯ್ಕೆ ಮಾಡುವುದು ಸಾಮಾನ್ಯಕ ಆಧರಿತ ಪರೀಕ್ಷಣಗಳ ರಚನೆಯ ಮುಖ್ಯವಾದ ಲಕ್ಷಣ. ಇದನ್ನು ಪಡೆಯಲು ಶೇಕಡ 50ರಷ್ಟು ಕ್ಲಿಷ್ಟತೆ ಇರುವ ಅಂಶಗಳನ್ನು ಆಯ್ಕೆಮಾಡಿ ಎಲ್ಲಾ ವಿದ್ಯಾರ್ಥಿಗಳು ಸರಿಯಾಗಿ ಉತ್ತರಿಸಬಲ್ಲ ಇನ್ನಿತರ ಅಂಶಗಳನ್ನು ತೆಗೆದುಹಾಕಲಾಗುವುದು. ಈ ರೀತಿಯ ಅಂಶಗಳು ವಿದ್ಯಾರ್ಥಿಗಳ ನಡುವೆ ಇರುವ ಸಾಧನೆಯ ವ್ಯತ್ಯಾಸವನ್ನು ಗರಿಷ್ಟಮಟ್ಟಕ್ಕೇರಿಸಲು ಮತ್ತು ವಿದ್ಯಾರ್ಥಿಗಳನ್ನು ವಿಶ್ವಸನೀಯವಾಗಿ ಶ್ರೇಣೀಕರಣ ಮಾಡಲು ಸಹಾಯಕವಾಗುತ್ತವೆ.

ನಿರ್ಧಾರಕ ಆಧರಿತ ಸಾಧನಾ ಪರೀಕ್ಷಣಗಳು

ವಿದ್ಯಾರ್ಥಿಗಳು ತೋರಿಸಬಲ್ಲ ನಿರ್ದಿಷ್ಟ ಕಾರ್ಯಸಾಧನೆಯ ಮಟ್ಟಗಳಿಗೆ ಸಂಬಂಧಿಸಿದಂತೆ ನೇರವಾಗಿ ವ್ಯಾಖ್ಯಾನಿಸಲು ಅನುಗುಣವಾಗುವಂತಹ ಅಳತೆಗಳನ್ನು ಪಡೆಯುವ ಉದ್ದೇಶದಿಂದ ನಿರ್ಧಾರಕ ಆಧರಿತ ಸಾಧನಾ ಪರೀಕ್ಷಣಗಳನ್ನು ತಯಾರಿಸಲಾಗುತ್ತದೆ. (ಕಾರ್ಯಕ್ಷೇತ್ರಗಳ ಪರಿಭಾಷೆಯ ಮೂಲಕ ಕಾರ್ಯಸಾಧನೆಯ ಮಟ್ಟವನ್ನು ನಿರ್ಣಯಿಸಲಾಗುವುದು).

ನಿರ್ಧಾರಕ ಆಧರಿತ ಸಾಧನಾ ಪರೀಕ್ಷಣಗಳು ವಿದ್ಯಾರ್ಥಿಗಳು ಸಾಪೇಕ್ಷ ಸಾಧನೆಯನ್ನು ಕುರಿತದ್ದಲ್ಲವಾಗಿರುವುದರಿಂದ ಅಂಶಗಳ ಕ್ಲಿಷ್ಟತೆ ಮತ್ತು ಅವುಗಳ ವಿಭೇದಿಕರಣ ಶಕ್ತಿಯನ್ನು ಪರೀಕ್ಷಣದ ಅಂಶಗಳನ್ನು ಆಯ್ಕೆಮಾಡಲು ಆಧಾರಾಂಶವಾಗಿ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಬದಲಾಗಿ ಅಂಶಗಳು ನಿರ್ದಿಷ್ಟವಾದ ಕಲಿಕಾ ಅನುಭವಗಳನ್ನು ಎಷ್ಟರಮಟ್ಟಿಗೆ ಪ್ರತಿಬಿಂಬಿಸುತ್ತವೆ ಎಂಬುದರ ಆಧಾರದ ಮೇಲೆ ಪರೀಕ್ಷಣದ ಅಂಶಗಳನ್ನು ಆಯ್ಕೆಮಾಡಲಾಗುತ್ತದೆ. ಸುಲಭ ಅಂಶಗಳನ್ನು ತೆಗೆದು

ಹಾಕುವ ಅಥವಾ ವ್ಯಾಪಕತೆಯನ್ನು ಹೆಚ್ಚಿಸಲು ಉದ್ದೇಶಪೂರ್ವಕವಾಗಿ ಅಂಶಗಳ ಕ್ಲಿಷ್ಟತೆಯನ್ನು ಬದಲಾಯಿಸುವ ಪ್ರಯತ್ನವನ್ನು ಮಾಡುವುದಿಲ್ಲ.

ತರಗತಿಯ ಬೋಧನೆಯಲ್ಲಿನ ನಾಲ್ಕು ರೀತಿಯ ಮೌಲ್ಯಮಾಪನದ ಉಪಯೋಗಗಳನ್ನು ನಿರ್ಧಾರಕ ಆಧರಿತ ಮತ್ತು ಸಾಮಾನ್ಯಕ ಆಧರಿತ ಅಳತೆಯಿಂದ ಪಡೆಯಬಹುದು. ಆದರೂ ರೂಪಣಾವಧಿ ಮತ್ತು ನೈದಾನಿಕ ಮೌಲ್ಯಮಾಪನ ಕಾರ್ಯಗಳನ್ನು ನಿರ್ಧಾರಕ ಆಧರಿತ ಮಾಪನಗಳು ಚೆನ್ನಾಗಿ ಮಾಡಬಲ್ಲವು ಮತ್ತು ಸಂಯೋಜಿತ ಮೌಲ್ಯಮಾಪನದ ಕಾರ್ಯಗಳನ್ನು ಸಾಮಾನ್ಯಕ ಆಧರಿತ ಮಾಪನಗಳು ಚೆನ್ನಾಗಿ ನಿರ್ವಹಿಸಬಲ್ಲವು. ಸ್ಥಾನ ನಿರ್ದೇಶಕ ಮೌಲ್ಯಮಾಪನಕ್ಕೆ ನಿರ್ಧಾರಕ ಆಧರಿತ ಮತ್ತು ಸಾಮಾನ್ಯಕ ಆಧರಿತ ಅಳತೆಗಳೆರಡೂ ಬೇಕಾಗುತ್ತವೆ.

ಮೇಲೆ ವಿವರಿಸಿದ ಮೌಲ್ಯಮಾಪನ ವಿಧಾನಗಳ ವರ್ಗೀಕರಣದ ಆಧಾರಗಳು, ವಿಧಗಳು, ಕಾರ್ಯಗಳು ಮತ್ತು ಸಲಕರಣೆಗಳ ಸಾರಾಂಶವನ್ನು ಈ ಕೆಳಗಿನ ತಾಲಿಕೆಯು ಸೂಚಿಸುತ್ತದೆ.

ತರಗತಿಯ ಮೌಲ್ಯಮಾಪನ ಕ್ರಮಗಳನ್ನು ವಿವರಿಸುವ ಮೂಲಭೂತ ರೀತಿಗಳು

ವರ್ಗೀಕರಣ ಆಧಾರ	ಮೌಲ್ಯಮಾಪನದ ವಿಧ	ಮೌಲ್ಯಮಾಪನದ ಕಾರ್ಯ	ಸಲಕರಣೆಗಳು
ಅಳತೆಯ ಲಕ್ಷಣಕ್ಕನುಸಾರವಾಗಿ	ಗರಿಷ್ಠ ಸಾಧನೆ	ಒಬ್ಬ ವ್ಯಕ್ತಿಯು ತನ್ನಲ್ಲಿರುವ ಸಾಮರ್ಥ್ಯಕ್ಕನುಸಾರವಾಗಿ ಕೆಲಸಮಾಡುವಾಗ 'ಏನು ಮಾಡಬಲ್ಲ' ಎಂಬುದನ್ನು ತಿಳಿಸುವುದು.	ಅಭಿಸಾಮರ್ಥ್ಯ ಪರೀಕ್ಷಣಗಳು ಸಾಧನಾ ಪರೀಕ್ಷಣಗಳು
	ಸಾಧಾರಣ ಸಾಧನೆ	ಸಾಮಾನ್ಯ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯು 'ಏನು ಮಾಡುವನು' ಎಂಬುದನ್ನು ತಿಳಿಸುವುದು	ಅಭಿವೃತ್ತಿ ಮಾಪನಿಗಳು ಅಭಿರುಚಿ ಅಂಶಾವಳಿಗಳು ವ್ಯಕ್ತಿತ್ವ ಅಂಶಾವಳಿಗಳು
ತರಗತಿಯ ಬೋಧನೆಯಲ್ಲಿನ ಉಪಯೋಗಕ್ಕನುಸಾರವಾಗಿ	(i) ಸ್ಥಾನ ನಿರ್ದೇಶನ	ಬೋಧನಾಪೂರ್ವ ಕೌಶಲಗಳನ್ನು ಬೋಧನೋದ್ದೇಶಗಳ ಸಾಧನೆಯನ್ನು ಮತ್ತು/ಅಥವಾ ಕಲಿಯಲು ಉತ್ತಮವಾದ ವಿಧಾನವನ್ನು ನಿರ್ಧರಿಸಲು	ವೀಕ್ಷಣಾತಂತ್ರಗಳು, ಸಹಮೌಲ್ಯಮಾಪನ ಸಿದ್ಧತಾ ಪರೀಕ್ಷಣಗಳು ಅಭಿಸಾಮರ್ಥ್ಯ ಪರೀಕ್ಷಣಗಳು ವ್ಯಾಸಂಗಾವಧಿ ಪೂರ್ವ ಪರೀಕ್ಷಣಗಳು ಸ್ವಯಂವರದಿ ಅಂಶಾವಳಿಗಳು ವೀಕ್ಷಣಾ ತಂತ್ರಗಳು

1	2	3	4
	(ii) ನಿರುಪಣಾವಧಿ	ಕಲಿಕೆಯ ಪ್ರಗತಿಯನ್ನು ತಿಳಿಯಲು, ಕಲಿಕೆಯ ಪುನರ್ಬಲನಕ್ಕೆ ಪ್ರತಿಪುಷ್ಟಿ ನೀಡಲು ಮತ್ತು ಕಲಿಕೆಯ ತಪ್ಪುಗಳನ್ನು ಗುರುತಿಸಿ ಸರಿಪಡಿಸಲು.	ಬೋಧಕಕೃತ ಪ್ರಾವಿಣ್ಯತಾ ಪರೀಕ್ಷಣಗಳು, ಪ್ರಕಾಶಿತ ಪರೀಕ್ಷಣಗಳು, ವೀಕ್ಷಣ ತಂತ್ರಗಳು
	(iii) ನೈದಾನಿಕ	ನಿರಂತರ ಅಥವಾ ಪುನರಾವರ್ತಿತವಾಗುತ್ತಿರುವ ಕಲಿಕಾ ತೊಂದರೆಗಳ ಕಾರಣಗಳನ್ನು ತಿಳಿಯಲು	ಪ್ರಕಾಶಿತ ನೈದಾನಿಕ ಪರೀಕ್ಷಣಗಳು ಬೋಧಕಕೃತ ನೈದಾನಿಕ ಪರೀಕ್ಷಣಗಳು, ವೀಕ್ಷಣ ತಂತ್ರಗಳು
	(iv) ಸಂಯೋಜಿತ	ವರ್ಗೀಕರಣ ಮಾಡಲು ಅಥವಾ ಬೋಧನೋದ್ದೇಶಗಳ ಸಾಧನೆಯನ್ನು ದೃಢೀಕರಿಸುವುದಕ್ಕಾಗಿ ವ್ಯಾಸಾಂಗಾನಂತರದ ಸಾಧನೆಯನ್ನು ತಿಳಿಯಲು	ಅಧ್ಯಾಪಕಕೃತ ಸಮೀಕ್ಷೆಗಳು, ನಿಷ್ಪಾದನಾ ನಿರ್ಧಾರಣ ಮಾಪನಿಗಳು, ಉತ್ಪನ್ನ ಮಾಪನಿಗಳು
ಫಲಿತಾಂಶಗಳನ್ನು ವ್ಯಾಖ್ಯಾನಿಸುವ ರೀತಿಗನುಸಾರವಾಗಿ	ನಿರ್ಧಾರಕ/ನಿರ್ಣಯಾಂಶ ಆಧರಿತ	ಬೋಧನಾತ್ಮಕವಾಗಿ ಸಂಬಂಧಿತ ಕಾರ್ಯಗಳ ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯ ವರ್ತನೆಯನ್ನು ವಿವರಿಸುವುದು	ಬೋಧಕಕೃತ ಪ್ರಾವೀಣ್ಯತಾ ಪರೀಕ್ಷಣಗಳು, ಪ್ರಕಾಶಿತ ಪರೀಕ್ಷಣಗಳು, ವೀಕ್ಷಣ ತಂತ್ರಗಳು
	ಸಾಮಾನ್ಯಕ/ಪ್ರಮಾಣಿಕ ಆಧರಿತ	ಗೊತ್ತಾದ ಒಂದು ಗುಂಪಿನಲ್ಲಿ ವಿದ್ಯಾರ್ಥಿಯ ಸಾಧನೆಯನ್ನು ಆ ವಿದ್ಯಾರ್ಥಿಯ ಸಾಪೇಕ್ಷ ಸ್ಥಾನಕ್ಕೆ ಸಂಬಂಧಿಸಿದಂತೆ ವಿವರಿಸುವುದು	ಮಾನಕೀಕೃತ ಅಭಿಸಾಮರ್ಥ್ಯ ಪರೀಕ್ಷಣಗಳು ಮಾನಕೀಕೃತ ಸಾಧನಾ ಪರೀಕ್ಷಣಗಳು, ಅಧ್ಯಾಪಕಕೃತ ಸಮೀಕ್ಷೆಗಳು, ಸಮಾಯೋಜನೆ ಅಂಶಾವಳಿಗಳು.

References

1. Gronlund, N. E. Measurement and Evalution in Teaching (3rd ed) Macmillan Publishing Co., Inc, New York, Collier Macmillan London, 1976.

2. Martuza, V. R. Applying Norm–Referenced and criterion Referenced Measurement in Education, Allyn and Bacon, Inc. Boston, 1977.

3. Nitko, A. J. Educational Tests and Measurement An Introduction. Hurcourt Brace Jovanovich, Inc, New York, 1983.

4. Popham, W. J. Educational Evaluation, Prentice Hall, Inc, Englewood Cliffs, New Jersy, 1975.

5. Popham, W. J. Modern Educational Measurement Englewood Cliffs, N. J. Pentice Hall, 1986.

ನಾವು ಇಷ್ಟ ಪಟ್ಟಿದ್ದನ್ನೆಲ್ಲ ನಾವ ಪಡೆಯಲು ಸಾಧ್ಯವಿಲ್ಲವಾದ್ದರಿಂದ ನಾವು ಪಡೆದದ್ದನ್ನು ಇಷ್ಟಪಡೆಯಲು ಪ್ರಯತ್ನಿಸೋಣ.

—ಸ್ಪ್ಯಾನಿಷ್ ಗಾದೆ

ಕೆಲವೊಮ್ಮೆ ಉದಾತ್ತವಾದ ವೈಫಲ್ಯವೂ ಜಗತ್ತಿಗೆ ಭಾರಿಯಶಸ್ಸಿನಷ್ಟೇ ಉಪಯುಕ್ತ ಸೇವೆ ಸಲ್ಲಿಸುತ್ತದೆ

—ಡೌಡನ್

ಸತ್ಯಕ್ಕೆ ನಾವು ಕೊಡುವ ಅತ್ಯಂತ ಹೆಚ್ಚಿನ ಗೌರವವೆಂದರೆ ಅವನ್ನು ಅನುಸರಿಸುವುದು.

—ಎಮರ್ಸನ್

ಎಸ್. ಚಂದ್ರೇಗೌಡ

ಆಂಗ್ಲ ಸಾಹಿತ್ಯದಲ್ಲಿ ಕಂಡುಬರುವ ರಾಜಕೀಯ ಚಿಂತನೆ–ಒಂದು ಪಕ್ಷಿನೋಟ

೧

ವಾಗರ್ಥಾವಿವ ಸಂಪೃಕ್ತೌ ವಾಗರ್ಥ : ಪ್ರತಿಪತ್ತಯೇ
ಜಗತಃ ಪಿತರೌವಂದೇ ಪಾರ್ವತೀ ಪರಮೇಶ್ವರೌ ॥

—ಕಾಳಿದಾಸ

ಶಬ್ದ ಮತ್ತು ಅರ್ಥಗಳ ಸಂಗಮವೇ ಸಾಹಿತ್ಯ. ಈ ಅಭಿಪ್ರಾಯವನ್ನು ಕೊಟ್ಟವರು ಪ್ರಾಚೀನ ಭಾರತದ ಸಂಸ್ಕೃತ ಸಾಹಿತಿಗಳು. ಆದರೆ ಸಾಹಿತ್ಯಕ್ಕೂ ಭಾಷೆಗೂ ಇರುವ ವ್ಯತ್ಯಾಸವನ್ನು ಗಮನಿಸಿದರೆ ಕೇವಲ ಶಬ್ದ ಮತ್ತು ಅರ್ಥಗಳಿಗೆ ಮಾತ್ರ ಸೀಮಿತವಾಗುವುದಿಲ್ಲ. ಸಾಹಿತ್ಯವು ಮುಖ್ಯವಾಗಿ ಮಾತಿನ ಕಲೆ. ಹಾಬ್ಸನು ಹೇಳುವಂತೆ ಅದು ಬುದ್ಧಿವಂತನ ವಿತ್ತ. ಆದರೆ ಅದು ದಡ್ಡನ ಋಣವೂ ಆಗಬಹುದು. ಸೊಗಸಾದ ಮಾತೇ ಸಾಹಿತ್ಯವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ. ಭಾವನೆ, ಕಲ್ಪನೆ, ವರ್ಣನೆ, ವಿವರಣೆ, ಶೃಂಗಾರ ಸೌಂದರ್ಯ, ಸೊಬಗು, ಅಲಂಕಾರ–ಮುಂತಾದವೆಲ್ಲವೂ ಕೂಡಿರುವುದೇ ಸಾಹಿತ್ಯ. ಒಂದುಕಡೆ ತಾತ್ತ್ವಿಕ ವಿಚಾರ, ಮತ್ತೊಂದುಕಡೆ ನಿಜತ್ವಗಳನ್ನು ಸಾಹಿತ್ಯದ ಕೃತಿಗಳಲ್ಲಿಯೂ ಕಾಣಬಹುದು. ಅದರಲ್ಲಿ ರೂಪ ಹಾಗೂ ವಿಷಯ ಜಿಜ್ಞಾಸೆ ಇರುತ್ತದೆ. ಕೇವಲ ವಿಷಯ ಜಿಜ್ಞಾಸೆಯೇ ಇದ್ದಲ್ಲಿ ಅದು ಶಾಸ್ತ್ರ (Science)ವೇ ಹೊರತು ಸಾಹಿತ್ಯವಾಗುವುದಿಲ್ಲ. ಅಥವಾ ಕೇವಲ ಶಬ್ದಾಡಂಬರ, ಶೈಲಿಗಳಿದ್ದಲ್ಲಿ ಅಂಥ ಗ್ರಂಥವು ಒಂದು ಸಾಹಿತ್ಯದ ಕೃತಿಯಾಗಬಹುದು. ಆದರೆ ವಿಷಯ ನಿರೂಪಣೆ ಇಲ್ಲದಿದ್ದಲ್ಲಿ ಅದಕ್ಕೆ ಮಹತ್ವವು ಬಹಳ ಕಾಲ ಇರುವುದಿಲ್ಲ.

ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ತತ್ವಶಾಸ್ತ್ರ, ದೇವತಾಶಾಸ್ತ್ರ (ಥಿಯಾಲಜಿ) ಮುಂತಾದುವುಗಳನ್ನು ಕುರಿತು ಬರೆದಿರುವ ಗ್ರಂಥಗಳನ್ನು ಸಾಹಿತ್ಯವೆಂದು ಪರಿಗಣಿಸಲು ಸಾಧ್ಯವಿಲ್ಲ. ಹಡ್‌ಸನ್‌ರವರ ಪ್ರಕಾರ ಸಾಹಿತ್ಯವು ಕೇವಲ

ಕಾವ್ಯ, ಗದ್ಯ, ಕಥೆ, ಕಾದಂಬರಿ, ವಿಮರ್ಶೆ ಮುಂತಾದವುಗಳಿಗೆ ಮಾತ್ರ ಅನ್ವಯವಾಗುತ್ತದೆ. ಪಠ್ಯಪುಸ್ತಕಗಳನ್ನಾಗಲೀ, ಪ್ರಚಾರಕ್ಕೋಸ್ಕರ ರಚಿಸಿದಂತಹ ಗ್ರಂಥಗಳನ್ನಾಗಲೀ ಸಾಹಿತ್ಯವೆಂದು ಪರಿಗಣಿಸಬಾರದೆಂದು ಅವರ ಅಭಿಪ್ರಾಯ.

ರಾಜ್ಯಶಾಸ್ತ್ರದಲ್ಲಿ ವಿಷಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇರುವುದರಿಂದ ರೂಪ ಮತ್ತು ಶೈಲಿಗೆ ಹೆಚ್ಚಿನ ಮನ್ನಣೆ ಇರುವುದಿಲ್ಲ. ಅನುದಿನದ ರಾಜಕಾರಣವಾದರೋ ಅಧಿಕಾರವನ್ನು ಪಡೆಯುವ ಹಾಗೂ ಅದನ್ನು ಚಲಾಯಿಸುವ ರೀತಿನೀತಿಗಳನ್ನು ತಿಳಿಸುವಂಥದ್ದು. ಅದರಲ್ಲಿ ನಾವು ಹೋರಾಟ, ಘರ್ಷಣೆ, ಪೈಪೋಟಿ ಮತ್ತು ಮಹತ್ವಕಾಂಕ್ಷೆಗಳನ್ನು ಕಾಣುತ್ತೇವೆ. ಇಷ್ಟಲ್ಲದೆ ಆಧುನಿಕಯುಗದಲ್ಲಿ ರಾಜಕೀಯ ಮೌಲ್ಯಗಳಿಗೆ ಸ್ಥಾನವಿರಬಾರದು ಎಂಬ ವಾದವನ್ನು ಮುಂಡಿಸುವವರೂ ಇದ್ದಾರೆ. ಆದ್ದರಿಂದ ರಾಜಕೀಯವು ಸಾಹಿತ್ಯದಂತೆ ಒಂದು ಕಲೆಯಲ್ಲ ಈ ಕಾರಣದಿಂದ ಸಾಹಿತ್ಯಕ್ಕೂ, ರಾಜಕೀಯಕ್ಕೂ ಯಾವ ಸಂಬಂಧವಾಗಲೀ, ಹೊಂದಾಣಿಕೆಯಾಗಲೀ ಇರುವುದಿಲ್ಲ ಎಂದು ವಾದಿಸುವವರೂ ಇದ್ದಾರೆ. ವಿಚಾರಮಾಡಿದಲ್ಲಿ ಈ ವಾದಗಳಲ್ಲಿ ಹುರುಳಿಲ್ಲ. ಸಾಹಿತ್ಯಕ್ಕೂ, ರಾಜಕೀಯಕ್ಕೂ ಇರುವ ಅನ್ಯೋನ್ಯತೆಯನ್ನು ತಿಳಿಯಲು ನಾವು ರಾಜ್ಯಶಾಸ್ತ್ರದ ಚಿಂತನೆಗೆ ಸಾಹಿತಿಗಳ ಕೊಡುಗೆಯನ್ನು ಸೂಕ್ಷ್ಮವಾಗಿ ಪರಿಶಿಲೀಸಬೇಕು.

೬

ಸಾಹಿತಿಯೂ ಸಮಾಜದಲ್ಲಿಯೇ ಹುಟ್ಟಿಬೆಳೆಯುತ್ತಾನೆ. ಸಮಾಜವನ್ನು ವೀಕ್ಷಿಸುತ್ತಾನೆ. ಪರಿಸರವು ಅವನ ಮೇಲೆ ತನ್ನ ಪ್ರಭಾವ ಉಂಟುಮಾಡುವುದು ಸಹಜ. ಮ್ಯಾಥ್ಯೂ ಆರ್ನಾಲ್ಡ್ ಅವರ ಪ್ರಕಾರ "ಕಾವ್ಯವು ಜೀವನದ ವಿಮರ್ಶೆ". ಈ ಅಭಿಪ್ರಾಯವು ಎಲ್ಲಾ ವಿಧವಾದ ಸಾಹಿತ್ಯಕ್ಕೂ ಅನ್ವಯಿಸಬಹುದು. ಕತೆಗಾರರೂ ಕಾದಂಬರಿಕಾರರೂ, ಪ್ರಬಂಧಕಾರರೂ ತಮ್ಮ ಕೃತಿಗಳಲ್ಲಿ ಜೀವನವನ್ನು ವಿಮರ್ಶಿಸಿದ್ದಾರೆ. ವಿಮರ್ಶಿಸುವುದು ಮಾತ್ರವಲ್ಲ, ಯಥಾವತ್ತಾಗಿ ಜೀವನವನ್ನು ಪ್ರತಿಬಿಂಬಿಸಿದ್ದಾರೆ. ಜೀವನದ ರೀತಿನೀತಿಗಳಲ್ಲಿ ಮಾರ್ಪಾಡನ್ನು ಉಂಟುಮಾಡಲು ಪ್ರಯತ್ನಿಸಿದ್ದಾರೆ. ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ತಮ್ಮ ಪಾತ್ರಧಾರಿಗಳ ಬಾಯಿಂದ ಆಡಿಸುತ್ತಾರೆ. ಆ ಸಮಸ್ಯೆಗಳನ್ನು ಬಿಡಿಸಲು ನೇರವಾದ ಸಲಹೆಗಳನ್ನು ಕೊಡದಿದ್ದರೂ, ಅವರ ಕೃತಿಗಳಿಂದ ಓದುಗರನ್ನು ವಿಚಾರವಂತರನ್ನಾಗಿ ಮಾಡಿರುತ್ತಾರೆ. ಉದಾಹರಣೆಗೆ:—ಡೀಕನ್ಸ್, ಮಿಸೆಸ್ ಗಾಸ್ಕೆಲ್‌ರವರ ಕಾದಂಬರಿಗಳಲ್ಲಿ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಓದುಗರ ಮುಂದಿಟ್ಟಿದ್ದಾರೆ. ಓದುಗರಮೇಲೆ ಆದ ಪರಿಣಾಮದ ಫಲವಾಗಿ ಇಂಗ್ಲೆಂಡಿನಲ್ಲಿ ಅನೇಕ ಸುಧಾರಣೆಗಳಾಗಲು ಕಾರಣವಾದುದರಲ್ಲಿ ಆಶ್ಚರ್ಯವೇನೂ ಇಲ್ಲ.

೭

ಪ್ರಾಚೀನ ಗ್ರೀಕರು ಕವನ ನಾಟಕಗಳಂತೆ ಭಾಷಣವನ್ನೂ ಒಂದು ಕಲೆಯೆಂದು

ಭಾವಿಸಿದ್ದರು. ಈ ಕಲೆಯನ್ನು ಬೋಧಿಸುವಂಥ ಶಿಕ್ಷಕರೂ ಇದ್ದರು. ಕೆಲವು ಭಾಷಣಗಳಲ್ಲಿ ದೀರ್ಘವಾದ ತತ್ವ ವಿಚಾರವೂ ಅಡಗಿತ್ತು. ಪೆಲೋಪನಿಶಿಯನ್ ಯುದ್ಧದಲ್ಲಿ ಮಡಿದ ದೇಶ ಭಕ್ತರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವಂಥ ಸಂದರ್ಭದಲ್ಲಿ ಪೆರಿಕ್ಲೀಸನು ಮಾಡಿದ ಭಾಷಣವನ್ನು ಒಂದು ಉತ್ತಮ ಸಾಹಿತ್ಯವೆಂದು ಇಂದಿಗೂ ಹೇಳುವವರಿದ್ದಾರೆ. ಆ ಭಾಷಣದಲ್ಲಿ ಪೆರಿಕ್ಲೀಸನು ಅಥೆನ್ಸ್ ಪ್ರಜಾಪ್ರಭುತ್ವದ ಹಿರಿಮೆಯನ್ನು ಕೊಂಡಾಡುತ್ತಾನೆ. ಅದರ ಮುಖ್ಯಾಂಶಗಳು ಈ ಕೆಳಗೆ ಕಂಡಂತಿವೆ:

1. ಅಥೆನ್ಸ್‌ನ ರಾಜಕೀಯ ಸಂಸ್ಥೆಗಳು ಬೇರೊಬ್ಬರ ಅನುಕರಣೆಯಲ್ಲ. ಅವು ಇತರರಿಗೆ ಮಾದರಿಯಾಗಿವೆ. ಅನ್ಯರ ಸಂಸ್ಥೆಗಳೊಡನೆ ಪೈಪೋಟಿ ಮಾಡುವುದಿಲ್ಲ.

2. ಅಥೆನ್ಸ್‌ನ ರಾಜಕೀಯ ವ್ಯವಸ್ಥೆಯನ್ನು ಪ್ರಜಾಪ್ರಭುತ್ವವೆಂದು ಕರೆಯಲಾಗಿದೆ. ಅಲ್ಲಿ ಆಡಳಿತವು ಬಹು ಜನರ ಹಸ್ತದಲ್ಲಿರುವುದು ಮಾತ್ರವಲ್ಲದೆ, ಅಲ್ಲಿಯ ಕಾಯಿದೆಯು ಸಮಾನ ನ್ಯಾಯವನ್ನು ದೊರಕಿಸಿಕೊಟ್ಟಿದೆ.

3. ಯೋಗ್ಯತೆಗೆ, ಉತ್ತಮತೆಗೆ, ಮಾನ್ಯತೆ ಇದೆ

4. ಸಾರ್ವಜನಿಕ ಕ್ಷೇತ್ರದಲ್ಲಿ ಯಾರೊಬ್ಬರಿಗೂ ವಿಶೇಷ ಸವಲತ್ತು (ಪ್ರಿವಿಲೇಜ್) ಇರುವುದಿಲ್ಲ. ಕಾರ್ಯದಕ್ಷತೆಗೆ ಮಾತ್ರ ಮಾನ್ಯವುಂಟು.

5. ಬಡತನವು (ಪಾವರ್ಟಿ) ಯಾರಿಗೂ ಯಾವ ವಿಧವಾದ ಅಡಚಣೆ ಮಾಡುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಶಕ್ತ್ಯಾನುಸಾರ ಸಾರ್ವಜನಿಕ ಸೇವೆಯನ್ನು ಮಾಡಲು ಅವಕಾಶವಿರುತ್ತದೆ.

6. ಅಭಿಪ್ರಾಯಗಳ ಭಿನ್ನತೆಯ ಕಾರಣದಿಂದಾಗಿ ಯಾರನ್ನೂ ದೇಶಭ್ರಷ್ಟರನ್ನಾಗಿ ಮಾಡಲಾಗುವುದಿಲ್ಲ.

7. ಪ್ರತಿಯೊಂದು ಕಾರ್ಯಗಳನ್ನೂ ಮಾಡುವಾಗ ಎಲ್ಲರೂ ಪೂಜ್ಯ ಭಾವನೆಯಿಂದ ತಮ್ಮ ಪಾಲಿನ ಕರ್ತವ್ಯ ನಿರ್ವಹಿಸುತ್ತಾರೆ.

8. ನಾವು ರಾಜ್ಯಾಧಿಕಾರ ನಡೆಸುತ್ತಿರುವುದು, ಕಾನೂನಿಗೆ ವಿಧೇಯತೆ ತೋರಿಸುವುದು, ಶಿಕ್ಷೆಯ ಹೆದರಿಕೆಯಿಂದಲ್ಲ ; ನಮ್ಮ ನಿಯಮ ನಿಷ್ಠೆಯಿಂದ....

9. ಮೊದಲು ನಾವು ಸ್ವಾತಂತ್ರ್ಯ ಸಾಧಿಸಲು ಹೋರಾಡಿದೆವು ; ನಂತರ ಸುಖಸಾಧನೆಗಾಗಿ ಪ್ರಯತ್ನಿಸುತ್ತಿರುವೆವು.

ಇದೇ ರೀತಿ ಅನೇಕ ರಾಜಕೀಯ ತತ್ವಗಳನ್ನು ಆ ದೀರ್ಘಭಾಷಣದಲ್ಲಿ ಕಾಣಬಹುದು. ಭಾಷಣದ ಪ್ರತಿಯೊಂದು ವಾಕ್ಯವೂ ಆಕರ್ಷಣೀಯವಾಗಿವೆ. ಭಾಷಣದಲ್ಲಿ ಭೀಕರತೆ ಇಲ್ಲ ; ಮನರಂಜನೆ ಇದೆ ; ಗಂಭೀರತೆ ಇದೆ. ಸಭಿಕರಲ್ಲಿ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸಿ ಅವರನ್ನು ತ್ಯಾಗ—ಬಲಿದಾನಗಳಿಗೆ ಹುರಿದುಂಬಿಸುವ ಉದ್ದೇಶದಿಂದ ಮಾಡಿದ ಭಾಷಣ. ಇದನ್ನು ಒಂದು ಸೃಜನಾತ್ಮಕ (ಕ್ರಿಯೇಟೀವ್) ಸಾಹಿತ್ಯ ಎಂದು ಹೇಳಲಿಕ್ಕೆ ಬರುವುದಿಲ್ಲ. ವಾಕ್ಯ ರಚನೆ ಹಾಗೂ ಸಭಿಕರಲ್ಲಿ, ಓದುಗರಲ್ಲಿ

ಉಂಟುಮಾಡುವ ಆವೇಶ (ಎಮೋಷನ್)ವನ್ನು ಉಂಟುಮಾಡುವ ಅಂಶಗಳನ್ನು ಮಾತ್ರ ಗಮನಿಸಿದರೆ ಅದನ್ನು ಒಂದು ಸಾಮಾನ್ಯ ಸಾಹಿತ್ಯ ಎನ್ನಬಹುದು.

ಉತ್ತಮವಾದ ವಾಗ್ಮಿಗಳನ್ನು ರೋಮನ್ ಚಕ್ರಾಧಿಪತ್ಯದ ಕಾಲದಲ್ಲೂ, ಆಧುನಿಕ ಕಾಲಗಳಲ್ಲೂ ಕಾಣಬಹುದು ಸಿಸಿರೊ, ಲಿಂಕನ್, ಪ್ಯಾಟ್ರಿಕ್ ಹೆನ್ರಿ, ಡಿಸ್ರೇಲಿ, ಗ್ಲಾಡ್‌ಸ್ಟನ್, ಬರ್ಕ್, ಚರ್ಚಿಲ್, ಹಿಟ್ಲರ್ ಮುಂತಾದವರುಗಳೆಲ್ಲಾ ಪ್ರಸಿದ್ಧ ಭಾಷಣಕಾರರು. ತಮ್ಮ ವಾಗ್ಝರಿಯಲ್ಲಿ ದೇಶಭಕ್ತಿ (ಪೇಟ್ರಿಯಾಟಿಸಂ), ರಾಜನಿಷ್ಠೆ (ಪೊಲಿಟಿಕಲ್ ಆಬ್ಲಿಗೇಷನ್) ಕರ್ತವ್ಯಪಾಲನೆಯ ಜ್ಞಾನ (ಸೆನ್ಸ್ ಆಫ್ ಡ್ಯೂಟಿ) ಇನ್ನೇ ಮುಂತಾದ ಆದರ್ಶಗಳ ಬಗ್ಗೆ ಜನತೆಯಲ್ಲಿ ಉತ್ಸಾಹವನ್ನು ಕೆರಳಿಸುವ ಸಾಮರ್ಥ್ಯವನ್ನು ವ್ಯಕ್ತಪಡಿಸಿದರು. ಆದರೂ ಇವುಗಳು ದೀರ್ಘಕಾಲ ನಿಲ್ಲುವ ಸಾಹಿತ್ಯಗಳಲ್ಲ. ಇಂಥ ಭಾಷಣಗಳ ಮುಖ್ಯ ಉದ್ದೇಶವಾದರೂ ಪ್ರಚಾರ. ಪ್ರಚಾರಕ್ಕೋಸ್ಕರ ಕೈಗೊಂಡ ಅಥವಾ ಮುಖ್ಯವಾಗಿರುವಂಥ ಕೃತಿಗಳನ್ನು ಸಾಹಿತ್ಯವೆಂದು ತಿಳಿಯಬಾರದೆಂದು ಹಡ್ಸನ್‌ರು ತಿಳಿಸುತ್ತಾರೆ.

ನಿಜವಾದ ರಾಜಕೀಯ ವಿಚಾರಕ್ರಾಂತಿಯನ್ನುಂಟುಮಾಡಿದವರು ಪ್ರಜ್ಞಾಶೀಲರಾದ ಸಾಹಿತಿಗಳು ಮಾತ್ರ. ಕೆಲವು ವೇಳೆ ವಿಚಾರಾತ್ಮಕವಾಗಿ ರಾಜಕೀಯ ತತ್ವಗಳನ್ನು ಚರ್ಚೆಮಾಡಲು ಹೊರಟ ಗ್ರಂಥಗಳೂ ಉತ್ತಮವಾದ ಸಾಹಿತ್ಯಕೃತಿಗಳಾಗಿ ಪರಿಣಮಿಸಬಹುದು. ಪ್ಲೇಟೋವಿನ ಗಣರಾಜ್ಯ, ಥಾಮಸ್ ಮೋರನ 'ಯುಟೋಪಿಯಾ', ಡಾಂಟೆಯ ಕೃತಿಗಳು ಮುಂತಾದವುಗಳನ್ನು ಈ ಗುಂಪಿಗೆ ಸೇರಿಸಬಹುದು.

ಈ

ಇಂಗ್ಲೆಂಡಿನ ಆಧುನಿಕ ರಾಜಕೀಯ ಸಾಹಿತ್ಯವು ಪ್ರಾರಂಭವಾದುದು ಹದಿನೇಳನೇ ಶತಮಾನದಲ್ಲಿ. ಈ ವೇಳೆಗೆ ಧಾರ್ಮಿಕ ಹಾಗೂ ದೇವತಾಶಾಸ್ತ್ರದ (ಥಿಯಾಲಜಿ) ಪ್ರಭಾವ ಕಡಿಮೆಯಾಗಿದ್ದರೂ ಧಾರ್ಮಿಕ ವಿಷಯಗಳ ಬಗ್ಗೆ ಸಾಹಿತ್ಯದಲ್ಲಿ ಚರ್ಚೆ ಇದ್ದೇ ಇದ್ದಿತು. ಬೇಕನ್ ಎಂಬ ಆಂಗ್ಲ ಪ್ರಬಂಧಕಾರನು ಮತೀಯ ಶಾಸ್ತ್ರಕ್ಕಿಂತಲೂ ವೈಜ್ಞಾನಿಕ ದೃಷ್ಟಿಕೋನವು ಬೆಳೆಯಲು ಅನುಕೂಲವಾಗುವಂತೆ ತನ್ನ ಕೃತಿಗಳನ್ನು ರಚಿಸಿದನು. ಈತನು ನಿರ್ದಿಷ್ಟವಾದ ರಾಜಕೀಯ ಚಿಂತನೆಯನ್ನು ನೀಡಿಲ್ಲ. ಆದರೆ ವಿಚಾರಶಕ್ತಿಯನ್ನು ಸಾಮಾಜಿಕ ವಿಜ್ಞಾನ ಶಾಸ್ತ್ರದಲ್ಲಿ ಅಳವಡಿಸಿಕೊಳ್ಳಲು ಈತನ ಪ್ರಬಂಧಗಳೂ, ಲೇಖನಗಳೂ ಸಾಕಷ್ಟು ಸಹಾಯ ಮಾಡಿದವು.

ರಾಜಕೀಯ ಕ್ಷೇತ್ರದಲ್ಲಿ ಮತೀಯ ಕಲಹಗಳು ಕಂಡುಬರುತ್ತಿದ್ದ ಆ ಕಾಲದಲ್ಲಿ ಗದ್ಯ ಸಾಹಿತ್ಯವು ವೃದ್ಧಿಯಾಗಲು ಶೈಲಿಯಲ್ಲಿ ನವೀನರೀತಿಯು ಉದ್ಭವವಾಗಲು ಈ ಹೋರಾಟವೂ ಒಂದು ಕಾರಣವೆಂದು ಜಿ ಡಿ.ಎಚ್. ಕೋಲ್‌ರವರು ತಿಳಿಸುತ್ತಾರೆ. ರಾಜ ಜೇಮ್ಸ್—Iರವರ ನೇತೃತ್ವದಲ್ಲಿ ಪ್ರಚುರವಾದ 'ಅಧಿಕೃತ ಬೈಬಲ್' (ಅತರೈಸ್ಡ್ ವರ್ಷನ್) ಮತ್ತು ಅದಕ್ಕೂ ಪೂರ್ವಭಾವಿಯಾಗಿ ಪ್ರಸಿದ್ಧವಾದ ಹೂಕರನ

'ಎಕ್ಲಿಸಿಯಾಸ್ಟಿಕಲ್ ಪಾಲಿಟಿ' ಎಂಬ ಗ್ರಂಥಗಳು ಉತ್ತಮ ಸಾಹಿತ್ಯ ಕೃತಿಗಳು. ಹೂಕರನ ಗ್ರಂಥವೇ ಜಾನ್‌ಲಾಕನ ಬರವಣಿಗೆಗಳಿಗೆ ಸ್ಫೂರ್ತಿನೀಡಿತು. ಹೂಕರನು ಗದ್ಯ ಸಾಹಿತ್ಯಕ್ಕೆ ಹೊಸತಿರುವನ್ನು ಕೊಟ್ಟನೆಂದೂ ಅವನ ನಂತರ ಬಂದ ಲೇಖಕರೂ ಇವನ ಶೈಲಿಯನ್ನೇ ಅನುಸರಿಸಿದರೆಂದೂ ಕೋಲ್‌ರವರು ತಿಳಿಸುತ್ತಾರೆ. ಆದರೆ ಇದನ್ನು ಒಪ್ಪಲು ಸಾಧ್ಯವಿಲ್ಲ. ಅಂದಿನ ಪರಿಸ್ಥಿತಿಗೆ ತಕ್ಕಂಥ ರಾಜಕೀಯ ಸಿದ್ಧಾಂತಗಳನ್ನು ಪ್ರಚಾರಮಾಡಲು ಹೊರಟಂಥವರು ಸಾಮಾನ್ಯವಾಗಿ ಎಲ್ಲರಿಗೂ ತಿಳಿಯುವಂಥ ಸರಳವಾದ ಶೈಲಿಯಲ್ಲಿ ಬರೆಯಲು ಪ್ರಾರಂಭಿಸಿದ್ದರು. ಇದಕ್ಕೆ ಕಾವ್ಯಕ್ಕಿಂತ ಗದ್ಯವೇ ಹೆಚ್ಚು ಅನುಕೂಲವಾಗಿ ಕಂಡುಬಂದುದರಿಂದ ರಾಜಕೀಯ ಪ್ರಚಾರವೆಲ್ಲವೂ ಗದ್ಯ ಪ್ರಬಂಧಗಳ ಮೂಲಕವೇ ನಡೆಯಬೇಕಾಯಿತು. ನಿಜಕ್ಕೂ ಉತ್ತಮವಾದ ಗದ್ಯ ಉಪನ್ಯಾಸದಲ್ಲಿ ರಾಜಕೀಯ ಚಿಂತನೆ ಮಾಡಿದವರೆಂದರೆ ಪ್ರಸಿದ್ಧ ಸಾಹಿತಿ ಮಿಲ್ಟನ್ ಮತ್ತು ಹ್ಯಾರಿಂಗ್ಟನ್. ಹೂಕರರ ಪ್ರಕಾರ ಮನುಷ್ಯನಲ್ಲಿ ವಿವೇಚನಾ ಶಕ್ತಿಯು ಸ್ವಾಭಾವಿಕವಾಗಿ ಇರುತ್ತದೆ. ಇಂಥ ವಿವೇಚನಾ ಶಕ್ತಿಯ ದೆಸೆಯಿಂದ ಮಾತ್ರ ಉತ್ತಮವಾದ ಕಾನೂನುಗಳು ಸಾಧ್ಯ. ವಿವೇಚನೆಯ ಆಧಾರದ ಮೇಲೆ ರೂಪಿಸಲ್ಪಟ್ಟ ಕಾಯಿದೆಗಳೇ ರಾಷ್ಟ್ರದ ಅಸ್ತಿಭಾರವೇ ಹೊರತು ಕೇವಲ ಚರ್ಚೆಯ ಆಧಾರದ ಮೇಲೆ ರೂಪಿಸಲ್ಪಟ್ಟ ನಿಯಮಗಳಲ್ಲ. ಹೂಕರನ ವಿಚಾರಧಾರೆಯ ಪರಿಣಾಮವಾಗಿ ಪಾರ್ಲಿಮೆಂಟಿನ ಬೆಳವಣಿಗೆ ಹಾಗೂ ಉದಾರವಾದದ ಪ್ರಚಾರದ ಸಮರ್ಥನೆ ವೃದ್ಧಿಯಾಯಿತು. ಹೂಕರರು ರಾಜಕಾರಣಿಯಲ್ಲ. ಆದರೆ ನಂತರ ಪ್ರಸಿದ್ಧರಾದ ಜಾನ್ ಮಿಲ್ಟನ್ ಸುಮಾರು ಇಪ್ಪತ್ತು ವರ್ಷಗಳ ಕಾಲ ರಾಜಕೀಯ ದಲ್ಲಿಯೇ ಕಳೆದಿದ್ದರು. ಇವರು ಆಲಿವರ್ ಕ್ರಾಮ್‌ವೆಲ್‌ರ ಬೆಂಬಲಿಗರಾಗಿದ್ದರು. ಇವರ ರಾಜಕೀಯ ಚಿಂತನೆಗಳನ್ನು ಇವರ ಕೃತಿಗಳಾದ 'ಟೆನ್ಯೂರ್ ಆಫ್ ಕಿಂಗ್ಸ್ ಅಂಡ್ ಮ್ಯಾಜಿಸ್ಟ್ರೇಟ್ಸ್' ಮತ್ತು 'ಏರಿಯೋಪೆಜಿಟಿಕ' ಎಂಬ ಗ್ರಂಥಗಳಲ್ಲಿ ಕಾಣಬಹುದು.

ಮನುಷ್ಯನು ಜನ್ಮತಃ ಸ್ವತಂತ್ರ ಹಾಗೂ ವಿವೇಚನೆಯಿಂದ ಕೂಡಿದವನು. ತನ್ನ ಜೀವನವನ್ನು ಅಭಿವೃದ್ಧಿಗೊಳಿಸಿಕೊಳ್ಳಲು ತನಗೆ ಬೇಕಾದ ಕಾರ್ಯಗಳನ್ನು ಕೈಗೊಳ್ಳುವ ಹಕ್ಕು ಪ್ರತಿಯೊಬ್ಬನಿಗೂ ಇರುತ್ತದೆ. ಮನುಷ್ಯರು ಒಟ್ಟುಗೂಡಿದರೆ ರಾಜ್ಯವಾಗುತ್ತದೆ. ಆದ್ದರಿಂದ ಮ್ಯಾಜಿಸ್ಟ್ರೇಟ್ ಮತ್ತು ಅಧಿಕಾರಿಗಳನ್ನು ಆರಿಸುವ ಹಕ್ಕು ಜನಸ್ತೋಮಕ್ಕೆ ಇರುವುದು. ಈ ಅಧಿಕಾರಿಗಳು ನ್ಯಾಯದ ಚೌಕಟ್ಟಿನಲ್ಲಿ (ಪ್ರಜೆಗಳ ಪ್ರತಿನಿಧಿಗಳಾದುದರಿಂದ) ಪ್ರಜಾಸೇವೆಯನ್ನು ಮಾಡಬೇಕು. ಅವರು ವ್ಯಕ್ತಿ ಸ್ವಾತಂತ್ರ್ಯವನ್ನು, ವ್ಯಕ್ತಿ ವಿಕಾಸವನ್ನು ಉತ್ತೇಜಿಸಬೇಕೇ ಹೊರತು ಅದನ್ನು ನಾಶಮಾಡಲಾಗದು. ಮಿಲ್ಟನ್ ಪ್ರಕಾರ ಆತ್ಮವೃದ್ಧಿ, ಆತ್ಮವಿಕಾಸಗಳು ಸ್ವಾಭಾವಿಕ ಹಕ್ಕುಗಳು. ಅವು ಪವಿತ್ರವಾದುವು. ಅವುಗಳನ್ನು ನಾಶಪಡಿಸಲು ಯಾವ ಸರ್ಕಾರಕ್ಕೂ ಅಧಿಕಾರವಿಲ್ಲ. ಅಂಥ ದಬ್ಬಾಳಿಕೆ ಏನಾದರೂ ನಡೆದಲ್ಲಿ ಅದನ್ನು ಎದುರಿಸುವ ಹಕ್ಕು ಪ್ರಜೆಗಳಿಗಿದೆ.

ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿದರೂ ಮಿಲ್ಟನ್‌ಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರಲಿಲ್ಲ. ಪ್ರಭುತ್ವ (Sovereignty) ಮತ್ತು ರಾಜಕೀಯ ಅಧಿಕಾರ (ಪೊಲಿಟಿಕಲ್ ಪವರ್)ಗಳನ್ನು ಪ್ರಜೆಗಳು ದೇಶಕಾಲಕ್ಕನುಗುಣವಾದ ಸಂಸ್ಥೆಗಳ ಮೂಲಕ ಚಲಾಯಿಸಬೇಕು.

ಮಿಲ್ಟನ್ (1608-1674) ಸ್ವಾತಂತ್ರ್ಯವನ್ನು ಎತ್ತಿಹಿಡಿಯುತ್ತಾರೆ. ಪುಸ್ತಕ ಮತ್ತು ಲೇಖನಗಳ ಮೇಲಿನ ಸರ್ಕಾರದ ಹತೋಟಿ ಹಾಗೂ ನಿಷೇಧಾಜ್ಞೆಗಳನ್ನು ವಿರೋಧಿಸುತ್ತಾ 'ಪುಸ್ತಕಗಳ ನಾಶದಿಂದ ವಿದ್ವತ್ ನಾಶವಾಗುತ್ತದೆ' ಎಂದಿದ್ದಾರೆ. ಪುಸ್ತಕಗಳು ನಿರ್ಜೀವ ವಸ್ತುಗಳಲ್ಲ. ಅವುಗಳಲ್ಲಿ ಗ್ರಂಥಕರ್ತರ ಜೀವನ ಧಮನಿಯು ಹರಿಯುತ್ತದೆ. ಇನ್ನೂ ಮುಂದುವರಿಯುತ್ತಾ ಅವರು ಹೇಳುತ್ತಾರೆ—

"ಇವುಗಳನ್ನು ನಾಶಮಾಡಿದರೆ ಒಳ್ಳೆಯ ಭಾವನೆಗಳನ್ನೂ, ಆದರ್ಶಗಳನ್ನೂ ನಾಶಮಾಡಿದಂತೆಯೇ...... ಪ್ರತಿಭಾಶಾಲಿಗಳಿಂದ, ಸತ್ವಶಾಲಿಗಳಿಂದ ರಚಿತವಾದ ಉತ್ತಮ ಗ್ರಂಥಗಳು ಅಮೂಲ್ಯಭಾವನೆಗಳನ್ನು ವ್ಯಕ್ತಪಡಿಸುತ್ತವೆ. ಆದ್ದರಿಂದ ಇವುಗಳನ್ನು ಎಚ್ಚರಿಕೆಯಿಂದ ಕಾಪಾಡಬೇಕು".

ಮುಖ್ಯವಾಗಿ ಮಿಲ್ಟನ್ ಸ್ವಾತಂತ್ರ್ಯವಾದಿ. ಕಾರಣ ಸ್ವಾತಂತ್ರ್ಯವೇ ತಿಳಿವಿನ ಹೆಬ್ಬಾಗಿಲು. ಇವರ ಪ್ರಕಾರ ವಂಶಪಾರಂಪರ್ಯ ರಾಜತ್ವವು ನಿರಂತರವಾದ ಗುಲಾಮಗಿರಿಯ ಲಕ್ಷಣ. ರಾಜನು ದೇವರಿಗೆ ಮಾತ್ರ ಜವಾಬ್ದಾರನೆಂಬ ಮಾತಿನಲ್ಲಿ ಹುರುಳಿಲ್ಲ. ಆಚರಣೆಯಲ್ಲಿ ಇರುವ ಕಾಯಿದೆಗೆ ರಾಜನೂ ಬದ್ಧನೆಂಬ ಅಂಶವನ್ನು ಮೊದಲಿಗೆ ತಿಳಿಸಿದ ಕೀರ್ತಿ ಮಿಲ್ಟನ್‌ಗೆ ಸಲ್ಲುತ್ತದೆ. ಮಿಲ್ಟನ್‌ರವರ ಲೇಖನಗಳಲ್ಲಿ ಮುಖ್ಯವಾಗಿ ಕಂಡುಬರುವ ಅಂಶವೆಂದರೆ ವ್ಯಕ್ತಿಸ್ವಾತಂತ್ರ್ಯ, ಮುದ್ರಣ ಸ್ವಾತಂತ್ರ್ಯ, ಬೌದ್ಧಿಕ ಸ್ವಾತಂತ್ರ್ಯ, ಭಾಷಣ ಸ್ವಾತಂತ್ರ್ಯ, ಮತೀಯ ಸ್ವಾತಂತ್ರ್ಯ—ಇವೇ ಅವರ ಮುಖ್ಯ ಕೊಡುಗೆ.

ಆಲಿವರ್ ಕ್ರಾಮ್‌ವೆಲ್‌ನ ಮರಣಾನಂತರ ಇಂಗ್ಲೆಂಡ್‌ನಲ್ಲಿ ಒಂದು ರಾಜಕೀಯ ವಿಚಾರಕ್ರಾಂತಿ ಉಂಟಾಯಿತು ಪುನಃ ರಾಜತ್ವವನ್ನು ಸ್ಥಾಪಿಸಬೇಕೇ? ಅಥವಾ ಗಣರಾಜ್ಯ ಪದ್ಧತಿಯನ್ನು ಶಾಶ್ವತಗೊಳಿಸಬೇಕೇ? ಎಂಬ ಪ್ರಶ್ನೆ ಎದ್ದಿತು. ಆ ಕಾಲದ ಮುಖ್ಯ ಚಿಂತನಕಾರ ಹ್ಯಾರಿಂಗ್ಟನ್ (1611-1677). ಇವರ ಪ್ರಸಿದ್ಧ ಗ್ರಂಥ 'ದಿ ಕಾಮನ್‌ವೆಲ್ತ್ ಆಫ್ ಓಷಿಯಾನ'. ಅರಿಸ್ಟಾಟಲ್ ಮತ್ತು ಮೆಕೆವೆಲ್ಲಿಯನ್ನು ಮೆಚ್ಚಿದ ಇವರು ಹಾಬ್ಸನನ್ನು ಕಟುವಾಗಿ ಟೀಕಿಸಿದ್ದಾರೆ.

ಇವರ ಪ್ರಕಾರ ಸರ್ಕಾರಗಳಲ್ಲಿ ಎರಡು ವಿಧ—ಕಾಯಿದೆಯ ಸರ್ಕಾರ ಹಾಗೂ ಮನುಷ್ಯರ ಸರ್ಕಾರ. ಮೊದಲನೆಯದರಲ್ಲಿ ಕಾಯಿದೆಯ ಸ್ವಾಮ್ಯವಿರುತ್ತದೆ. ಎಲ್ಲರೂ ಕಾಯಿದೆಗಳಿಗೆ ವಿಧೇಯತೆಯನ್ನು ತೋರಿಸುತ್ತಾರೆ. ಕಾಯಿದೆಯ ಮುಂದೆ ಎಲ್ಲರೂ ಸಮಾನರಾದುದರಿಂದ, ಸಾರ್ವತ್ರಿಕ ಸೌಖ್ಯವು ಹೆಚ್ಚುತ್ತದೆ. ಮನುಷ್ಯರ ಸರ್ಕಾರವೆಂದರೆ ಅಧಿಕಾರಶಾಹೀ ಸರ್ಕಾರ, ಅಧಿಕಾರದಲ್ಲಿರುವವರು ಮಾಡಿದ್ದೇ ಶಾಸನ.

ಆದಕ್ಕೆ ವಿಧೇಯತೆಯನ್ನು ತೋರಿಸುವಲ್ಲಿ ಕಾಯಿದೆಯ ಅಂತಸ್ತನ್ನು ಕಡಿಮೆ ಮಾಡಿದಂತಾಗುತ್ತದೆ. ಇಂಥ ಸರ್ಕಾರದಲ್ಲಿ ಸ್ವಾರ್ಥಕ್ಕೆ ಹಿರಿಯ ಸ್ಥಾನ ದೊರೆತು ಸಾರ್ವತ್ರಿಕ ಹಿತಕ್ಕೆ ಧಕ್ಕೆಯುಂಟಾಗುತ್ತದೆ. ಸರ್ಕಾರದ ಸುಭದ್ರತೆಯೆಂದರೆ ಕಾಯಿದೆಯ ಸುಭದ್ರತೆ ಎಂಬುದನ್ನು ಖಚಿತವಾಗಿ ವ್ಯಕ್ತಪಡಿಸುತ್ತಾರೆ.

ಇವರ ಪ್ರಕಾರ ರಾಜಕೀಯ ಅಧಿಕಾರವು ಸಂಪತ್ತಿನ ವಿತರಣೆಯನ್ನು ಅವಲಂಬಿಸುತ್ತದೆ. ಹೆಚ್ಚಿನ ಆಸ್ತಿ ಉಳ್ಳವರಲ್ಲಿ ಪ್ರಭುತ್ವವು ಇದ್ದಲ್ಲಿ ಸರ್ಕಾರವು ಸುಭದ್ರವಾಗಿ ಇರುತ್ತದೆ. ಭೂಮಿಯ ಆಸ್ತಿಯೇ ಮುಖ್ಯ ಸಂಪತ್ತಾದ ರಾಜ್ಯಗಳಲ್ಲಿ ರಾಜ್ಯತ್ವವೂ ಶ್ರೀಮಂತ ಪ್ರಭುತ್ವವೂ ಭದ್ರವಾಗಿರುತ್ತದೆ. ಆದರೆ ಟ್ಯೂಡರ್ ನಿರಂಕುಶ ಪ್ರಭುತ್ವದ ಕಾಲದಲ್ಲಿ ಶ್ರೀಮಂತ ವರ್ಗ ಹಾಗೂ ಮಠಗಳು ಅವನತಿ ಹೊಂದಿದ್ದರಿಂದ ಇಂಗ್ಲೆಂಡಿಗೆ ಜನನಾಯಕತ್ವದ ಸರ್ಕಾರವೇ ಉತ್ತಮವೆಂದು ವಾದಿಸುತ್ತಾರೆ ಹ್ಯಾರಿಂಗ್ಟನ್.

ಜನನಾಯಕತ್ವದ ರಾಜ್ಯದಲ್ಲಿ ಎರಡು ಸಭೆಗಳು (ಸೆನೇಟ್ ಮತ್ತು ಕೌನ್ಸಿಲ್) ಇರಬೇಕೆಂದೂ, ಇವುಗಳ ನಿರ್ಣಯವನ್ನು ಜಾರಿಗೆ ತರಲು ಒಂದು ಆಡಳಿತಾತ್ಮಕ ಮ್ಯಾಜಿಸ್ಟ್ರಸಿ ಇರಬೇಕೆಂದೂ ತಿಳಿಸುತ್ತಾರೆ. ಗುಪ್ತ ಮತದಾನ ಪದ್ಧತಿಯನ್ನು ಮೊಟ್ಟಮೊದಲು ಸೂಚಿಸಿದವರು ಹ್ಯಾರಿಂಗ್ಟನ್ನರೇ.

ಹ್ಯಾರಿಂಗ್ಟನ್‌ರವರ ಗ್ರಂಥವು ಕೇವಲ ಒಂದು ಕಾಲ್ಪನಿಕ ಗ್ರಂಥವೆಂದೂ, ಅದೊಂದು ಸಾಹಿತ್ಯದ ವಿಡಂಬನೆಯೆಂದೂ ಇಂಗ್ಲೆಂಡಿನಲ್ಲಿ ಪರಿಗಣಿಸಲಾಯಿತು. ಅದರ ಪ್ರಭಾವ ಇಂಗ್ಲೆಂಡ್ ರಾಜಕೀಯದಲ್ಲಿ ಅಷ್ಟಾಗಿ ಆಗಲಿಲ್ಲ. ಆದರೆ ಅಮೆರಿಕಾದ ವಸಾಹತುಗಳಲ್ಲಿ ಈ ಗ್ರಂಥವನ್ನು ಬಹುಮಟ್ಟಿಗೆ ಅಭ್ಯಾಸಮಾಡಲಾಯಿತು. ಅಮೆರಿಕನ್ ಚಿಂತನಕಾರರಾದ ಓಟಿಸ್, ಜಾನ್ ಆಡಂಸ್, ಮತ್ತು ಜೆಫರ್‌ಸನ್‌ರವರ ಚಿಂತನೆಯಲ್ಲಿ ಇದರ ಪ್ರಭಾವವನ್ನು ಕಾಣಬಹುದು. ಫ್ರಾನ್ಸಿನ ಮಹಾಕ್ರಾಂತಿಯ ಕಾಲದಲ್ಲಿ ಈ ಗ್ರಂಥವನ್ನು ಫ್ರೆಂಚ್ ಭಾಷೆಗೆ ತರ್ಜುಮೆ ಮಾಡಲಾಯಿತು.

೮

ಹದಿನೆಂಟನೆ ಶತಮಾನದ ಪೂರ್ವಾರ್ಧದ ಆಂಗ್ಲ ಸಾಹಿತ್ಯದಲ್ಲಿ ರಾಜಕೀಯ ಚಿಂತನೆಯು ಅಷ್ಟಾಗಿ ಕಂಡುಬರುವುದಿಲ್ಲ. ಶತಮಾನದ ಅಂತ್ಯಕಾಲದಲ್ಲಿ ಎರಡು ಮುಖ್ಯ ಘಟನೆಗಳು ಜಗತ್ತಿನ ಎಲ್ಲಾ ರಾಜ್ಯಗಳ ಮೇಲೂ ತಮ್ಮ ಪ್ರಭಾವವನ್ನು ಬೀರಿದುವು. ಅವು ಯಾವುವೆಂದರೆ—ಅಮೆರಿಕಾದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಫ್ರಾನ್ಸಿನ ಮಹಾಕ್ರಾಂತಿ. ಅಮೆರಿಕಾದ ಸ್ವಾತಂತ್ರ್ಯ ಸಂಗ್ರಾಮದ ನಂತರ ಲಿಖಿತ ಸಂವಿಧಾನ, ಪ್ರಜೆಗಳ ಮೂಲಭೂತ ಹಕ್ಕುಗಳು, ಪ್ರಜಾ ಸಾರ್ವಭೌಮತ್ವ, ನ್ಯಾಯಾಂಗದ ಸ್ವಾತಂತ್ರ್ಯ ಮುಂತಾದ ತತ್ವಗಳಿಗೆ ಮನ್ನಣೆ ದೊರಕಿತು.

ಫ್ರಾನ್ಸಿನ ವಿಪ್ಲವಕ್ಕೆ ಪೂರ್ವಭಾವಿಯಾಗಿ ಇದ್ದ ಕಾಲವನ್ನು ಜ್ಞಾನೋದಯ

(ಎನ್‌ಲೈಟನ್ಮೆಂಟ್) ಕಾಲವೆಂದೂ, ಕ್ರಾಂತಿಯ ನಂತರದ ಕಾಲವನ್ನು ವಿವೇಚನಾ (ರೀಸನ್) ಯುಗವೆಂದೂ ಇತಿಹಾಸಕಾರರು ತಿಳಿಸುತ್ತಾರೆ. ಜ್ಞಾನೋದಯದ ಕಾಲದ ಫ್ರೆಂಚ್ ತಾತ್ವಿಕ ಚಿಂತನಕಾರರೆಂದರೆ ವಾಲ್ಟೇರ್, ಮಾಂಟೆಸ್ಕ್ಯೂ, ಡಿಡರೋ ಮುಂತಾದವರು. ಅದೇ ಕಾಲದಲ್ಲಿ ಇದ್ದರೂ ಆಗಿನ ವಿಚಾರವಾದವನ್ನು ಒಪ್ಪದೇ ಇದ್ದವನೆಂದರೆ ರೂಸೋ. ಇವರೆಲ್ಲರ ಚಿಂತನೆಯೂ ಆಂಗ್ಲ ಸಾಮಾಜಿಕ ಚಿಂತನೆಯ ಮೇಲೆ ಸಾಕಷ್ಟು ಪ್ರಭಾವಬೀರಿದವು.

ರೂಸೋವಿನ 'ಸಾಮಾಜಿಕ ಒಪ್ಪಂದ' (ಸೋಷಿಯಲ್ ಕಾಂಟ್ರಾಕ್ಟ್) ಎಮಿಲಿ ಹಾಗೂ ಅವರ ಪ್ರಾರಂಭದ ಎರಡು ಉಪನ್ಯಾಸಗಳು ಯೂರೋಪಿನ ನಾನಾ ಸಾಹಿತ್ಯಕ್ಕೆ ಹೊಸ ಮಾದರಿಯನ್ನೇ ಕಲ್ಪಿಸಿಕೊಟ್ಟವು. ಪರಿಣಾಮವಾಗಿ ಹತ್ತೊಂಭತ್ತನೇ ಶತಮಾನದ ಆದಿಯಲ್ಲಿ ಬೌದ್ಧಿಕ ಹಾಗೂ ಕಲಾತ್ಮಕ ಕ್ಷೇತ್ರಗಳಲ್ಲಿ ವಿವೇಚನಾ ಶಕ್ತಿಗೆ ಪ್ರಬಲವಾದ ವಿರೋಧ ಶಕ್ತಿಯೊಂದು ಬೆಳೆಯಲು ಕಾರಣವಾಯಿತು. ಈ ನವೀನ ಜಾಗೃತಿಯನ್ನು ಆಂಗ್ಲ ಭಾಷೆಯಲ್ಲಿ ರೊಮಾಂಟಿಸಿಸಂ ಎಂದು ಹೇಳುತ್ತಾರೆ. ಕನ್ನಡದಲ್ಲಿ ಇದನ್ನು 'ರಮ್ಯ ಭರಿತವಾದ ಸಾಹಿತ್ಯ' ಎನ್ನಬಹುದು. ಈ ಜಾಗೃತಿಯ ಮುಖ್ಯ ಲಕ್ಷಣವೇನೆಂದರೆ ಸಾಹಿತ್ಯದಲ್ಲಿ ಕಂಡುಬರುವ ಕೃತಕತೆ (ಆರ್ಟಿಫಿಷಿಯಾಲಿಟಿ) ಮತ್ತು ತೋರಿಕೆ (ಸೂಪರ್‌ಫಿಷಿಯಾಲಿಟಿ) ಗಳನ್ನು ತಳ್ಳಿಹಾಕಿ ಪ್ರಕೃತಿಯಲ್ಲಿ ಕಂಡುಬರುವ ಜೀವನದ ಸೌಂದರ್ಯವನ್ನು ಆರಾಧಿಸುವುದಾಗಿತ್ತು. ನಿಸರ್ಗದಲ್ಲಿ ಸ್ವಾತಂತ್ರ್ಯವಿದ್ದರೂ, ಕೃತಕ ಜೀವನವು ಅದನ್ನು ಹಾಳು ಮಾಡಿದೆಯೆಂದೂ, ಆದ್ದರಿಂದ ನಿಸರ್ಗಕ್ಕೆ ವಾಪಸ್ಸು ಹೋಗುವುದರಲ್ಲಿ ಮನುಷ್ಯನು ತನ್ನ ಸ್ವತಂತ್ರವಾದ ಆನಂದವನ್ನು ಅನುಭವಿಸಲು ಸಾಧ್ಯವಾಗುವುದೆಂಬ ಅಭಿಪ್ರಾಯವನ್ನು ಅನೇಕ ರಮ್ಯವಾದಿಗಳ ಲೇಖನಗಳಲ್ಲಿ ಕಾಣಬಹುದು. ಇವರ ಪ್ರಕಾರ ನಾಗರೀಕತೆಯು ಮನುಷ್ಯನ ಕಷ್ಟಕ್ಕೆ ಕಾರಣ. ಕೃತಕ ನಾಗರೀಕತೆಯಿಂದ ಬಿಡುಗಡೆಹೊಂದಿ ಸರಳ ಜೀವನದಲ್ಲಿ ಉದಾತ್ತ ಧ್ಯೇಯ ಆದರ್ಶಗಳನ್ನು ಮನುಷ್ಯನು ಕಂಡುಕೊಂಡಾಗ ಮಾತ್ರ ಅವನ ಸ್ವಾತಂತ್ರ್ಯ ಅರ್ಥಮಯವಾಗುತ್ತದೆ.* ಈ ಸಾಹಿತಿಗಳ ರಾಜಕೀಯ ಕೊಡುಗೆ ಅಷ್ಟೇನೂ ಇಲ್ಲದಿದ್ದರೂ ಇವರ ಬರವಣಿಗೆಗಳೇ ರಾಜಕೀಯ ಚಿಂತನೆಯಲ್ಲಿ ಭಾವನಾತ್ಮಕ ಬರವಣಿಗೆಗಳು ಉದಯವಾಗಲು ಕಾರಣವಾಯಿತು.

ಹದಿನೆಂಟನೇ ಶತಮಾನದ ಅಂತ್ಯಕಾಲದ ಆಂಗ್ಲೇಯ ಚಿಂತನಕಾರರಲ್ಲಿ ಪ್ರಸಿದ್ಧಿಯಾಗಿರುವವರೆಂದರೆ ಎಡ್ಮಂಡ್ ಬರ್ಕ್ (1729–97). ಇವರ ಪ್ರಕಾರ ಯುದ್ಧ, ಸಾಮಾಜಿಕ ಒಪ್ಪಂದ, ದೇವರ ಅಥವಾ ಮನುಷ್ಯರ ನಿರ್ಧಾರಗಳಿಂದ ರಾಜ್ಯ

* ಆಂಗ್ಲ ಭಾಷೆಯ ಪ್ರಸಿದ್ಧ ರೊಮಾಂಟಿಕ್ ಸಾಹಿತಿಗಳೆಂದರೆ, ವರ್ಡ್ಸ್‌ವರ್ತ್ (1770–1850), ಕೋಲರಿಡ್ಜ್ (1772–1834), ಬೈರನ್ (1788–1824), ಶೆಲ್ಲಿ (1792–1822) ಹಾಗೂ ಪ್ರಸಿದ್ಧ ಕಾದಂಬರಿಕಾರ ಸರ್‌ವಾಲ್ಟರ್ (1771–1832).

ಸ್ಥಾಪಿತವಾದುದಲ್ಲ. ಅದು ಸ್ವಾಭಾವಿಕವಾಗಿ ಬೆಳೆದುಬಂದ ಸಂಸ್ಥೆ. ಅದರ ಬೇರುಗಳು ಭೂತ ಭವಿಷ್ಯತ್ಕಾಲಗಳಲ್ಲಿ ಹರಡಿಕೊಂಡಿವೆ. ಪರಂಪರೆಯಾಗಿ ಬಂದಿರುವ ಸಂಪ್ರದಾಯಗಳೇ ರಾಜ್ಯದ ತಳಹದಿ. ಸಾಮಾಜಿಕ ಸುಧಾರಣೆಯನ್ನು ತರುವಾಗ ರಾಜನೀತಿಜ್ಞರು ಎಚ್ಚರಿಕೆಯಿಂದಲೂ, ಜಾಣ್ಮೆಯಿಂದಲೂ ವರ್ತಿಸಬೇಕೇ ಹೊರತು, ದುಡುಕಿನಿಂದ ಬದಲಾವಣೆಯನ್ನು ತರಬಾರದು. ದುಡುಕಿನಿಂದ ಹಿಂದಿನ ಕಾಲದ ಅಮೂಲ್ಯ ಅನುಭವ, ಜ್ಞಾನವನ್ನು ನಾಶಮಾಡಿದಲ್ಲಿ ರಾಷ್ಟ್ರಕ್ಕೆ ಕೇಡಾಗುತ್ತದೆ. ಇಂಗ್ಲೆಂಡಿನ ರಾಜಕೀಯ ವ್ಯವಸ್ಥೆಯಾದರೋ ಅನುಭವ, ರೂಢಿ, ಹಾಗೂ ಸಂಪ್ರದಾಯಗಳ ತಳಹದಿಯ ಮೇಲೆ ನಿಂತಿರುವುದನ್ನು ಶ್ಲಾಘಿಸಿ, ಫ್ರಾನ್ಸಿನ ಕ್ರಾಂತಿಯನ್ನು ಬಹುಮಟ್ಟಿಗೆ ಕಟುವಾಗಿ ಟೀಕಿಸಿದ್ದಾರೆ. ಫ್ರಾನ್ಸಿನ ಕ್ರಾಂತಿಯು ದೆಸೆಯಿಂದ ಆ ದೇಶದ ವೈಭವಯುಕ್ತವಾದ ಹಾಗೂ ಅತಿಶ್ರೇಷ್ಠವಾದ ಮೌಲ್ಯಗಳೆಲ್ಲವೂ ನಾಶವಾಗಿ ಆಪದ್ಧರ್ಮವು ಬದಿಗೊತ್ತಲ್ಪಟ್ಟಿತೆಂದು ಆ ಕ್ರಾಂತಿಯ ಬಗ್ಗೆ ತಮ್ಮ ಖಂಡನೆಯನ್ನು ಅತಿ ಗಂಭೀರವಾದ ಶೈಲಿಯಲ್ಲಿ ವ್ಯಕ್ತಪಡಿಸಿದ್ದಾರೆ. ಭಾವನಾಪೂರಿತವಾದ ತತ್ವಗಳಿಗಿಂತ ಆಪದ್ಧರ್ಮವೇ ಶ್ರೇಯಸ್ಕರ ಎಂಬುದು ಇವರ ಅಭಿಪ್ರಾಯ. ಬರ್ಕರ ಪ್ರಕಾರ ಜನತೆಯ ಸ್ವಾತಂತ್ರ್ಯಕ್ಕೆ ಒಂದು ಮಿತಿ ಇರಬೇಕು. ಜನರ ಆಸ್ತಿಪಾಸ್ತಿಗಳನ್ನು ಸರ್ಕಾರ ರಕ್ಷಿಸಬೇಕೇ ಹೊರತು ಅವನ್ನು ಲಪಟಾಯಿಸಕೂಡದು.

ಸಾಮಾಜಿಕ ಒಪ್ಪಂದದ ಬಗ್ಗೆ ಅವರ ವ್ಯಾಖ್ಯಾನ ವಿಚಿತ್ರವಾಗಿದೆ. ಅವರು ಪ್ರಕೃತಿ ಸಿದ್ಧ ಹಕ್ಕು (ನ್ಯಾಚುರಲ್ ರೈಟ್ಸ್) ಗಳನ್ನು ಒಪ್ಪುವುದಿಲ್ಲ. ಆದರೂ ಸಮಾಜವು ಒಪ್ಪಂದದಿಂದ ಉಂಟಾದುದೆಂದೂ ಹೇಳುವಾಗ ಅದು ಲಾಭವನ್ನು ಹಂಚಿಕೊಳ್ಳುವ ವಾಣಿಜ್ಯ ರೀತಿಯ ಒಪ್ಪಂದವಲ್ಲವೆಂದೂ, ಅದು ಸಮಗ್ರ ಮಾನವ ಜನಾಂಗದ ಸಾಹಿತ್ಯ, ಕಲೆ, ವಿಜ್ಞಾನ ಮೊದಲಾದವುಗಳನ್ನು ಒಗ್ಗೂಡಿಸುವ ಸಾರ್ವತ್ರಿಕ ಹಾಗೂ ಸಾಂಸ್ಕೃತಿಕ ಒಪ್ಪಂದವೆಂದೂ ತಿಳಿಸುತ್ತಾರೆ. ಇಂಥ ಒಪ್ಪಂದವು ಹಿಂದಿನವರನ್ನೂ, ಇಂದಿನವರನ್ನೂ, ಮುಂದೆ ಹುಟ್ಟುವವರನ್ನೂ ಒಗ್ಗೂಡಿಸುವ ಒಂದು ವಿಶೇಷ ಬಂಧನದ ಕಟ್ಟೆಂದೂ ತಿಳಿಸುತ್ತಾರೆ. ಇನ್ನೂ ಮುಂದುವರಿದು, ಸಾಮಾಜಿಕ ಒಪ್ಪಂದದ ಫಲವಾಗಿ ಪ್ರಜಾನಿರ್ಧಾರ ಶಕ್ತಿ ಕೊನೆಗೊಂಡಿತೆಂದೂ, ಬಹುಸಂಖ್ಯಾತರ ಆಳ್ವಿಕೆಯು ಅಸಮರ್ಪಕವೆಂದೂ, ಶ್ರೀಮಂತರೇ ಜನ್ಮತಃ ಯೋಗ್ಯರೂ, ಅರ್ಹರೂ ಆಗಿರುವುದರಿಂದ ಅವರ ನಾಯಕತ್ವದಲ್ಲಿಯೇ ಉತ್ತಮ ಸರ್ಕಾರ ಲಭ್ಯವೆಂದೂ ತಿಳಿಸುತ್ತಾರೆ. ಇವರ ಆಳ್ವಿಕೆಯಿಲ್ಲದಿದ್ದರೆ ಸಮಾಜದಲ್ಲಿ ಅರಾಜಕತೆ ಯುಂಟಾಗುವುದು ಖಚಿತವೆಂದೂ, ಆದುದರಿಂದ ರಾಜಕೀಯ ಮುಖಂಡರು 'ಸಂಪ್ರದಾಯದ ರೊಟ್ಟಿ' ಯನ್ನು ಮುರಿಯಬಾರದೆಂದೂ ಎಚ್ಚರಿಕೆ ನೀಡಿದ್ದಾರೆ.

ಬರ್ಕರವರ ಸಂಪ್ರದಾಯವಾದಕ್ಕೆ ಹಾಗೂ ಅವರು ಫ್ರೆಂಚ್ ಕ್ರಾಂತಿಯ ಬಗ್ಗೆ ಮಾಡಿದ ಅನುಚಿತ ಟೀಕೆಗೆ ಸಮರ್ಪಕವಾದ ಉತ್ತರವಿತ್ತವರು ಥಾಮಸ್ ಪೇನ್ (1737–1809).

ಥಾಮಸ್‌ಪೇನ್ ಮೂಲತಃ ಇಂಗ್ಲೆಂಡಿಗೆ ಸೇರಿದ ಪ್ರಜೆ. ಆದರೆ ಅಮೆರಿಕಾದ ವಸಾಹತುಗಳು ಸ್ವಾತಂತ್ರ್ಯಕ್ಕಾಗಿ ಶ್ರಮಿಸುತ್ತಿದ್ದ ಕಾಲದಲ್ಲಿ ಅಲ್ಲಿಗೆ ಹೋಗಿ ಜಾರ್ಜ್ ವಾಷಿಂಗ್ಟನ್ ಅವರ ನಿಕಟವರ್ತಿಯಾದರು. ಅಲ್ಲಿಯೇ 'ಕಾಮನ್‌ಸೆನ್ಸ್' ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದರು. ವಿಪ್ಲವ ಕಾಲದಲ್ಲಿ ಫ್ರಾನ್ಸಿಗೆ ಹೋಗಿ ಕ್ರಾಂತಿಕಾರೀ ಚಳುವಳಿಗೆ ಸಕ್ರಿಯವಾದ ಸಹಕಾರವನ್ನು ನೀಡಿದರು. ಬರ್ಕ್‌ರ ಅಭಿಪ್ರಾಯಗಳಿಗೆ ತೀವ್ರವಾದ ಉತ್ತರ ಕೊಟ್ಟ ಗ್ರಂಥ ಪೇನ್‌ರವರ 'ರೈಟ್ಸ್ ಆಫ್ ಮ್ಯಾನ್'. ಅವರ ಕಟ್ಟಕಡೆಯ ಗ್ರಂಥ 'ಏಜ್ ಆಫ್ ರೀಸನ್'.

ಕಾಮನ್ ಸೆನ್ಸ್ ಗ್ರಂಥವು ಯಾವ ರಾಜಕೀಯ ಸಿದ್ಧಾಂತವನ್ನೂ ಪ್ರತಿಪಾದಿಸುವುದಿಲ್ಲ. 'ಪೇನ್'ರ ಉದ್ದೇಶವಾದರೋ ಅಮೆರಿಕಾದವರೂ ಸ್ವರಾಜ್ಯವನ್ನು ಪಡೆಯುವುದು ಮಾತ್ರವಲ್ಲ, ಅದೊಂದು ಗಣರಾಜ್ಯವಾಗಿ ಇರಬೇಕೆಂಬ ತಮ್ಮ ಇಚ್ಛೆಯನ್ನು ಪ್ರಚಾರ ಮಾಡುವುದೇ ಆಗಿದ್ದಿತು.

ಪೇನ್‌ರವರ ಪ್ರಕಾರ ಅರಸೊತ್ತಿಗೆ ಒಂದು ಅನವಶ್ಯಕವಾದ ಅನಿಷ್ಟ ಸರ್ಕಾರೀ ಪದ್ಧತಿ. ಮೂಲತಃ ರಾಜಕೀಯ ನಿಯಮಗಳಿಗೆ ವಿರುದ್ಧವಾದಂಥ ಸಂಸ್ಥೆ, ಅದನ್ನು ತೊಡೆದು ಹಾಕಬೇಕು. "ನಮ್ಮ ಆವಶ್ಯಕತೆ ದೆಸೆಯಿಂದಾಗಿ ಸಮಾಜವು ಉದ್ಭವವಾಯಿತು. ಆದರೆ ನಮ್ಮ ದೌರ್ಜನ್ಯದ ಫಲವಾಗಿ ಸರ್ಕಾರವು ಜನಿಸಿತು. ಸಮಾಜವು ನಮ್ಮ ಸೌಖ್ಯವನ್ನು ಹೆಚ್ಚಿಸಿ ನಮ್ಮಲ್ಲಿ ಐಕ್ಯಮತ್ಯವನ್ನು ತರುತ್ತದೆ. ಆದರೆ ಸರ್ಕಾರವು ನಮ್ಮ ಕೆಟ್ಟತನವನ್ನು ತಡೆದು ನಮ್ಮನ್ನು ಒಗ್ಗೂಡಿಸುತ್ತದೆ". ಸರ್ಕಾರವು ಮಿತಿಮೀರಿ ಹೋದಾಗ ಅಸಹನೀಯವಾಗಿ ವರ್ತಿಸುತ್ತದೆ. ಸ್ವರ್ಗದ ಸುಖವು ನಾಶವಾದ ಮೇಲೆ ಅದರ ಗೋರಿಯ ಮೇಲೆ ರಾಜರ ಅರಮನೆಗಳು ನಿರ್ಮಿತವಾಗುತ್ತವೆ. ಇವೇ ಮುಂತಾದ ವಾದಸರಣಿಗಳಿಂದ ರಾಜತ್ವವು ಅಪಹರಣದಿಂದ ಉದ್ಭವಿಸಿತೆಂದು 'ಕಾಮನ್ ಸೆನ್ಸ್' ಗ್ರಂಥದಲ್ಲಿ ತಿಳಿಸಿದ್ದಾರೆ.

'ರೈಟ್ಸ್ ಆಫ್ ಮ್ಯಾನ್' ಗ್ರಂಥವಾದರೋ ಹಿಂದೆ ತಿಳಿಸಿದಂತೆ ಬರ್ಕ್‌ರ ಟೀಕೆಗೆ ಉತ್ತರ ರೂಪದಲ್ಲಿರುವ ಅತ್ಯುತ್ತಮ ಗ್ರಂಥ. ಬರ್ಕ್‌ರ ಶೈಲಿಗಿಂತಲೂ ಉತ್ತಮವಾದುದೆಂಬುದನ್ನು ಅನೇಕ ಪಂಡಿತರೂ ಒಪ್ಪುತ್ತಾರೆ. ಫ್ರಾನ್ಸಿನ ಮಹಾಕ್ರಾಂತಿಯ ತಾತ್ವಿಕ ಸಮರ್ಥನೆ ಮಾಡಿದ ಗ್ರಂಥಗಳಲ್ಲಿ ಇದೇ ಮೊದಲನೆಯದು. ಬಾಸ್ಟೀಲ್ ಪತನವು ಯೂರೋಪಿನಲ್ಲಿ ನವೋದಯವವನ್ನುಂಟು ಮಾಡುವುದೆಂದೂ ಹಳೆಯ ಕುಮಾಚಾರ ಪದ್ಧತಿಗಳು ತೊಲಗಿ ಜಾಗ್ರತಿಕ ವಿಶ್ವವು ಸೃಷ್ಟಿಯಾಗುವ ಭರವಸೆಯನ್ನು ಪೇನರು ಹೊಂದಿದ್ದರು.

ಇವರ 'ಏಜ್ ಆಫ್ ರೀಸನ್' ಎಂಬ ಗ್ರಂಥದಲ್ಲಿ ಕ್ರೈಸ್ತ ಧರ್ಮದ ಪವಿತ್ರ ಗ್ರಂಥವಾದ 'ಬೈಬಲ್'ನ ಉಗ್ರ ಟೀಕೆ ಕಂಡುಬರುತ್ತದೆ. ಆದರೂ ಅದರಲ್ಲಿ 'ವಿಶ್ವಮಾನವ' ಧರ್ಮದ ಪ್ರಸ್ತಾಪವಿದೆ. "ನಾನು ರೋಮನ್ ಚರ್ಚನ್ನಾಗಲೀ, ಜರ್ಮನ್ ಚರ್ಚನ್ನಾಗಲೀ, ಆಂಗ್ಲಿಕನ್ ಚರ್ಚನ್ನಾಗಲೀ ಆರಾಧಿಸುವುದಿಲ್ಲ. ನನ್ನ

ಮನಸ್ಸೇ ನನ್ನ ಚರ್ಚು . . . . . . ಮಾನವ ವರ್ಗವೇ ನನ್ನ ಧರ್ಮ, ಮಾನವ ಕಲ್ಯಾಣವೇ ನನ್ನ ಅಭೀಷ್ಟ" ಎಂದು ತಿಳಿಸಿದ್ದಾರೆ. ಧರ್ಮಸಹಿಷ್ಣುತೆಯೂ ವಿಚಾರ ಜ್ಞಾನದ ಫಲ. ಅದು ದೊರೆತಾಗ ಮಾತ್ರ ವಿಶ್ವಮಾನವನ ಅಭ್ಯುದಯ ಸಾಧ್ಯ.

ಊ

ಹತ್ತೊಂಬತ್ತನೆಯ ಶತಮಾನದ ಪ್ರಥಮ ದಶಕದಲ್ಲಿ ಇಂಗ್ಲೆಂಡ್ ನೆಪೋಲಿಯಾನಿಕ್ ಯುದ್ಧದಲ್ಲಿ ತೊಡಗಿದ್ದಿತು. ದ್ವಿತೀಯ ದಶಕ ಪ್ರಾರಂಭವಾಗುವುದಕ್ಕೆ ಮುನ್ನ ಅದು ಕೊನೆಗೊಂಡು ಬ್ರಿಟಿಷ್ ಸಾಮ್ರಾಜ್ಯದ ವೃದ್ಧಿಗೆ ಯಾವ ಅಡ್ಡಿ ಆತಂಕಗಳೂ ಇಲ್ಲದಂತಾಯಿತು. ಏನತ್ಮಧ್ಯೆ ಯೂರೋಪಿನಲ್ಲಿ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಚಿಂತನೆಯಲ್ಲಿ ಮಹತ್ವ ಬದಲಾವಣೆಗಳಾದವು

ಫ್ರಾನ್ಸಿನ ಕ್ರಾಂತಿಯ ನಂತರ ಮೂರು ಪ್ರಸಿದ್ಧ ತತ್ವಗಳು ಎಲ್ಲೆಲ್ಲೂ ಹರಡಿದವು. ಅವು ಯಾವುವೆಂದರೆ-(ಅ) ಸಾಮಾಜಿಕ ಸಮಾನತೆ (ಆ) ರಾಜಕೀಯ ಪ್ರಜಾಪ್ರಭುತ್ವ ಮತ್ತು (ಇ) ರಾಷ್ಟ್ರೀಯ ಜಾಗೃತಿ. ಇಷ್ಟಲ್ಲದೆ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಉತ್ಪನ್ನ ಹಾಗೂ ವಿತರಣಾ ವ್ಯವಸ್ಥೆಯಲ್ಲೂ ವಿಶೇಷ ಬದಲಾವಣೆಗಳಾದವು. ಇದರಿಂದ ಬಂಡವಾಳಶಾಹೀ ವರ್ಗವೂ ಉದ್ಭವವಾಯಿತು. ಫ್ರಾನ್ಸಿನಲ್ಲಿ ಫಿಸಿಯೊಕ್ರಾಟ್ಸ್ ಎಂಬ ಆರ್ಥಿಕ ಚಿಂತನಕಾರರು ವ್ಯಾಪಾರ—ವಾಣಿಜ್ಯಗಳಲ್ಲಿ ನಿರ್ಬಂಧಗಳು ಇರಬಾರದೆಂಬ ತತ್ವವನ್ನು ತಿಳಿಸಿದರು. ಇಂಗ್ಲೆಂಡಿನಲ್ಲಿ ಆಡಂಸ್ಮಿತ್ ಎಂಬುವರು ಲೇಸೇಫೇರ್ ತತ್ವವನ್ನು ಪ್ರತಿಪಾದಿಸಿದರು. ಇವರ ವಾದವನ್ನು ನಿರಾತಂಕವಾದವೆಂದು ಹೇಳುತ್ತಾರೆ. ಈ ಕಾಲದ ಇಂಗ್ಲೆಂಡಿನಲ್ಲಿ ಸಂಸದೀಯ ಸುಧಾರಣೆಯನ್ನು ಒತ್ತಾಯಿಸಿದವರು ತಾತ್ವಿಕ ಉಗ್ರಗಾಮಿಗಳು. ಇವರಲ್ಲಿ ಪ್ರಸಿದ್ಧ ಚಿಂತನಕಾರರೆಂದರೆ ಜೆರಿಮಿಬೆಂಥಾಂ (1748–1832). ಇವರ ಚಿಂತನೆಯನ್ನು ಉಪಯುಕ್ತತಾವಾದ (ಯುಟಿಲಿಟೇರಿಯನಿಸಂ) ಎಂದು ಕರೆಯಲಾಗಿದೆ. ಈ ಸಿದ್ಧಾಂತದ ಸಾರಾಂಶ ಕೆಳಕಂಡಂತೆ ಇರುವುದು :

1. ಪ್ರತಿಯೊಬ್ಬ ಮನುಷ್ಯನೂ ಸಂತೋಷವನ್ನು ಅಪೇಕ್ಷಿಸುತ್ತಾನೆ. ಯಾತನೆಯಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಾನೆ. ಸಂತೋಷ, ಯಾತನೆಗಳೇ ಮನುಷ್ಯರ ಮುಖ್ಯ ಸಾರ್ವಭೌಮರು.

2. ನಾವು ಏನು ಮಾಡಬೇಕು, ಏನು ಮಾಡಬಾರದೆಂಬುದನ್ನು ಸೂಚಿಸಿ ಕೊಡುವ ಪ್ರಭುಗಳು ಇವರೇ ;

3. ಯಾವುದು ನಮಗೆ ಸಂತಸವನ್ನು ನೀಡುವುದೋ ಅದೇ ಉಪಯುಕ್ತವಾದುದು. ಅದೇ ಶ್ರೇಯಸ್ಕರ ;

4. ಐಹಿಕ ಸುಖಕ್ಕೆ ಯಾವುದು ಹಿತಕರವೋ ಅದನ್ನೇ ನಾವು ಅನುಸರಿಸಬೇಕು. ಸಂತೋಷ, ದುಃಖಗಳನ್ನು ಅಳತೆಮಾಡಿ ಸಂತೋಷವನ್ನು ಹೆಚ್ಚಿಸುವ ಕಾರ್ಯಗಳನ್ನು ಮಾತ್ರ ಕೈಗೊಳ್ಳಬೇಕು ;

5. ರಾಜ್ಯವು ಮಾಡುವ ಪ್ರತಿಯೊಂದು ಶಾಸನವೂ, ಸುಧಾರಣೆಯೂ ಹೆಚ್ಚು ಜನರಿಗೆ ಹೆಚ್ಚು ಸುಖವನ್ನು ಕೊಡುವಂಥದ್ದಾಗಿರಬೇಕು ಸೌಂದರ್ಯ, ಸುಶೀಲತೆ, ರಸಿಕತೆ, ಮುಂತಾದವುಗಳನಿಮಿತ್ತ ಮಾಡಿದಂಥ ಕಾಯಿದೆಗಳು ಉಪಯೋಗವಿಲ್ಲದವುಗಳು.

6. ಪ್ರತಿಯೊಬ್ಬರೂ ತನ್ನ ಸುಖವನ್ನು ಬಯಸುವುದರಿಂದ, ಒಟ್ಟಾರೆ ರಾಜ್ಯದ ಸುಖವೂ ಹೆಚ್ಚಿ, ಪ್ರಗತಿಯುಂಟಾಗುತ್ತದೆ.

ಈ ರೀತಿಯ ಉಪಯುಕ್ತವಾದವನ್ನು ಮಂಡಿಸಿದ ಬೆಂಥಮ್ ಅನೇಕ ಟೀಕೆಗಳಿಗೆ ಗುರಿಯಾಗಬೇಕಾಯಿತು. ಆದರೂ ಬೆಂಥಮರ ಹಾಗೂ ಅವರ ಅನುಯಾಯಿಗಳ ಪ್ರಯತ್ನದ ಫಲವಾಗಿ ಇಂಗ್ಲೆಂಡ್ ಅನೇಕ ಸುಧಾರಣೆಗಳನ್ನು ಜಾರಿಗೆ ತಂದಿತು. ನ್ಯಾಯಾಂಗ, ಆಡಳಿತಾಂಗ ಮುಂತಾದ ಎಲ್ಲಾ ಕ್ಷೇತ್ರಗಳ ಮೇಲೂ ಇದರ ಪ್ರಭಾವದಿಂದಾಗಿ ಅನೇಕ ಸುಧಾರಣೆಗಳಾದವು. 1832ರಲ್ಲಿ ಮೊಟ್ಟಮೊದಲನೇ ಪಾರ್ಲಿಮೆಂಟರೀ ಸುಧಾರಣೆಯಾಯಿತು ಇದರಿಂದ ಮಧ್ಯಮ ವರ್ಗದವರು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಲು ದಾರಿಮಾಡಿಕೊಟ್ಟಂತಾಯಿತು. ನಂತರ 19ನೇ ಶತಮಾನದಲ್ಲಿ ಮತ್ತೂ ಎರಡು ಸುಧಾರಣೆಗಳು ಬಂದವು (1867 ಮತ್ತು 1884).

ಬಿ

ಹತ್ತೊಂಬತ್ತನೇ ಶತಮಾನದ ಮುಖ್ಯ ಸಾಹಿತಿಗಳಾದ ಕೋಲರಿಡ್ಜ್ (1772–1834) ಮತ್ತು ಥಾಮಸ್ ಕಾರ್ಲೈಲ್ (1795–1881) ರವರು ಬೆಂಥಮನ ಉಪಯುಕ್ತತಾ ವಾದವನ್ನು ತೀವ್ರವಾಗಿ ಖಂಡಿಸಿದರು ಕೋಲರಿಡ್ಜ್‌ರ ಪ್ರಕಾರ ಉಪಯೋಗವಾಗದ ಮಾನಸಿಕ ಹಾಗೂ ರಾಜಕೀಯ ತತ್ವವು ಮನುಷ್ಯನನ್ನು ಕೇವಲ ಸ್ವಾರ್ಥಪರನನ್ನಾಗಿ ಮಾಡುತ್ತದೆ. ಉಪಯುಕ್ತತಾವಾದದ ಪ್ರಕಾರ ವಾಸ್ತವವಾದುದೆಂದರೆ ಸಮಾಜದ ಹೊರಗೆ ಇರುವ ವ್ಯಕ್ತಿ ಮಾತ್ರ. ರಾಜ್ಯವೆಂಬುದು ಒಂದು ಕಲ್ಪನೆ ಮಾತ್ರ. ಇದರಿಂದ ರಾಜ್ಯಕ್ಕೆ ಇರುವ ವಿಶಿಷ್ಟ ಶಕ್ತಿಯನ್ನು ಅದು ನಿರ್ಲಕ್ಷಿಸುತ್ತದೆ ಇಂಥ ಅಭಿಪ್ರಾಯಗಳನ್ನು ತಳ್ಳಿಹಾಕುವ ಕೆಲಸವನ್ನು ಕೋಲರಿಡ್ಜರು ಕೈಗೊಳ್ಳುತ್ತಾರೆ. ಅವರ ಪ್ರಕಾರ ವ್ಯಕ್ತಿ ಒಂದು ಸಂಗತಿ ಮಾತ್ರ. ರಾಜ್ಯವೇ ವ್ಯಕ್ತಿಯನ್ನು ನಾಗರಿಕನನ್ನಾಗಿ ಮಾಡುವ ಸಾಧನ ಮನುಷ್ಯನಲ್ಲೂ ಅಡಗಿರುವ ಗುಪ್ತವಾದ ಚೇತನಶಕ್ತಿಯನ್ನು ಉಜ್ವಲಗೊಳಿಸುವುದು ಹಾಗೂ ವ್ಯಕ್ತಿಯ ಸರ್ವತೋಮುಖವಾದ ಏಳಿಗೆಯನ್ನು ತರುವುದರಲ್ಲಿ ಸಹಾಯ ಮಾಡುವುದು ರಾಜ್ಯ ಮಾತ್ರ. ಆದ್ದರಿಂದ ವ್ಯಕ್ತಿಗೂ ರಾಜ್ಯಕ್ಕೂ ಯಾವ ವಿಧವಾದ ವಿರೋಧಾಭಾಸವೂ ಇರುವುದಿಲ್ಲ. ಹೀಗೆ ಹೇಳುವಾಗ ಕೋಲ್‌ರಿಡ್ಜ್‌ರು ಪ್ಲೇಟೋನಿನ ವಾದಸರಣಿಯನ್ನೇ ಪುನರುಚ್ಚಾರ ಮಾಡುತ್ತಾರೆ. ಇವರು ಜರ್ಮನಿಯ ಆದರ್ಶವಾದವನ್ನು ಬ್ರಿಟನ್ನಿನ ಉದಾರವಾದದೊಂದಿಗೆ ಮಿಲನಮಾಡಲು ಪ್ರಯತ್ನಿಸಿದರು. ಆದರೆ

ಇವರಿಂದ ಅದು ಸಾಧ್ಯವಾಗಲಿಲ್ಲ. ಅದನ್ನು ಸಾಧಿಸಿದವರು ಟಿ. ಎಚ್. ಗ್ರೀನರು. ಕೋಲ್‌ರಿಡ್ಜ್‌ರು ಯಾಂತ್ರಿಕ ನಾಗರೀಕತೆಗೆ ವಿರುದ್ಧವಾಗಿದ್ದರು. ಈ ಅಭಿಪ್ರಾಯವನ್ನು ಇನ್ನೂ ಹೆಚ್ಚು ಮುಂದುವರಿಸಿದವರು ಥಾಮಸ್ ಕಾರ್ಲೈಲ್‌ರವರು.

ಥಾಮಸ್ ಕಾರ್ಲೈಲ್ (1795–1881) ರವರ ಪ್ರಸಿದ್ಧ ಗ್ರಂಥಗಳೆಂದರೆ— 'ಸಾರ್ಟರ್ ರಿಸಾರ್ಟ್‌ಸ್', 'ಫ್ರೆಂಚ್ ರೆವೆಲ್ಯೂಶನ್', 'ಪಾಸ್ಟ್ ಅಂಡ್ ಪ್ರಸೆಂಟ್', 'ಚಾರ್ಟಿಸಂ', ಹಾಗೂ 'ಹೀರೋ ಅಂಡ್ ಹಿರೋ ವರ್ಷಿಪ್'. ಆದರೆ ರಾಜಕೀಯ ವಿಚಾರ ಮಾಡಿರುವುದು ಕೇವಲ ಒಂದೆರಡು ಕಡೆಗಳಲ್ಲಿ.

'ಸಾರ್ಟರ್ ರಿಸಾರ್ಟ್ಸ್'ಗಳಲ್ಲಿ ಮನುಷ್ಯನ ಕರ್ತವ್ಯದ ಕಡೆಗೆ ಹೆಚ್ಚು ಗಮನವನ್ನಿತ್ತಿದ್ದಾರೆ. ಹಕ್ಕುಗಳು ಕರ್ತವ್ಯದ ಪರಿಣಾಮವೇ ಹೊರತು, ಅವು ಮೂಲಭೂತವಾದವುಗಳಲ್ಲ. 'ಕಾಯಕವೇ ಕೈಲಾಸ' ವೆಂಬ ಬಸವಣ್ಣನವರ ವಚನದ ಅಭಿಪ್ರಾಯವನ್ನೇ ಈ ಗ್ರಂಥದಲ್ಲಿ ಕಾಣಬಹುದು. ಕರ್ತವ್ಯವನ್ನು ಸಂತೋಷದಿಂದಲೂ ಫಲಾಪೇಕ್ಷೆಯಿಲ್ಲದೆ ಮಾಡಬೇಕೆಂಬ ತತ್ವವನ್ನು ಇದರಲ್ಲಿ ತಿಳಿಸಲಾಗಿದೆ. ಸಮಾಜದ ಸುಧಾರಣೆಯನ್ನು ಕಾಯಿದೆಗಳ ಮೂಲಕ ಮಾಡುವುದು ಸಾಧ್ಯವಿಲ್ಲ. ವ್ಯಕ್ತಿಯು ಮೊದಲು ತನ್ನನ್ನು ತಾನು ಅರಿತುಕೊಂಡು ತನ್ನ ಸುಧಾರಣೆಯತ್ತ ಗಮನ ಹರಿಸಬೇಕು. ಒಂದು ರಾಷ್ಟ್ರದ ಚಾರಿತ್ರ್ಯವು ಆ ರಾಷ್ಟ್ರದ ವ್ಯಕ್ತಿಗಳ ನೀತಿ ಮತ್ತು ಸಂಸ್ಕೃತಿಯನ್ನು ಅವಲಂಬಿಸಿರುವುದರಿಂದ ಆ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯೂ ತನ್ನ ಸಮೀಪದಲ್ಲಿರುವ ಎಂದರೆ ತನಗೆ ಸಾಧ್ಯವಾದ ಕರ್ತವ್ಯವನ್ನು ಮಾಡತಕ್ಕದ್ದು.

ಸೈನ್ ಆಫ್ ಟೈಂಸ್ (18 .9) ಎಂಬ ಪುಸ್ತಕದಲ್ಲಿ ಕಾರ್ಲೈಲ್‌ರವರು ತತ್ಕಾಲದ ಯಾಂತ್ರಿಕ ಮನೋವೃತ್ತಿಯನ್ನು ಕಟುವಾಗಿ ಟೀಕಿಸುತ್ತಾರೆ. ನಮ್ಮ ಸಾಮಾಜಿಕ ಕಲ್ಯಾಣವು ನಮ್ಮ ಮಾನಸಿಕ ಸ್ಥಿತಿಯನ್ನು ಅವಲಂಭಿಸಿದೆ. ಆದ್ದರಿಂದ ಶಾಸನಗಳಿಂದಾಗಲೀ, ಬಾಹ್ಯದ ಪರಿಸರದಿಂದಾಗಲೀ ಸಮಾಜ ಕಲ್ಯಾಣವನ್ನು ತರಲು ಅಶಕ್ಯ. ಬುದ್ಧಿವಂತನಾದ ಯಾವ ಮನುಷ್ಯನೂ ರಾಜ್ಯದ ಅಥವಾ ಜಗತ್ತಿನ ಸುಧಾರಣೆಯನ್ನು ಮಾಡಲು ಪ್ರಯತ್ನಿಸುವುದಿಲ್ಲ. ದಡ್ಡರು ಮಾತ್ರ ಶಾಸನಗಳ ಮೂಲಕ ಪರಿಸರದ ಪರಿವರ್ತನೆಯನ್ನು ಮಾಡಲು ಯತ್ನಿಸುತ್ತಾರೆ. ಇವೇ ಮುಂತಾದ ಅಭಿಪ್ರಾಯಗಳನ್ನು ಚಾರ್ಟಿಸಂ (1839) ಗ್ರಂಥದಲ್ಲಿಯೂ, ಮುಂದುವರಿಸುತ್ತಾ 'ಅನ್ಯಾಯವೆಂದರೆ ಕಾರ್ಯೋನ್ಮುಖವಾದಂಥ ಅಸತ್ಯ (ಇನ್‌ಜಸ್ಟಿಸ್ ಈಸ್ ಬಟ್ ಆಕ್ಟೆಡ್ ಆನ್ ಟ್ರೂತ್) ಎಂದು ಹೇಳುತ್ತಾರೆ. ಲೇಸ್‌ಫೇರ್ ತತ್ವವನ್ನು ವಿರೋಧಿಸುವ ಸಂದರ್ಭದಲ್ಲಿ ಅದು ಹಣದ ದುರಾಶೆಗಾಗಿ ಮನುಷ್ಯನನ್ನು ಕೇವಲ ಸ್ವಾರ್ಥಿಯನ್ನಾಗಿ ಮಾಡುತ್ತದೆ. ಅಂದಿನ ರಾಜಕಾರಣದಲ್ಲಿ ಕಂಡುಬರುತ್ತಿದ್ದ ಭೌತಿಕ ತತ್ವವನ್ನು ವಿರೋಧಿಸುತ್ತಾ 'ಇಂದಿನ ರಾಜಕಾರಣದಲ್ಲಿ ಪ್ರಾಮಾಣಿಕತೆಯಿಲ್ಲ, ಪ್ರಜಾಪ್ರಭುತ್ವದಲ್ಲಿ ಗೌರವವಿಲ್ಲ, ಆರ್ಥಿಕ ಸ್ಥಿತಿಯಲ್ಲಿ ಆಂದೋಲನೆಯ ಪ್ರಭಾವವಿಲ್ಲ ಹಾಗೂ ದಾನ ಧರ್ಮಗಳಲ್ಲಿ ವಿವೇಚನೆ ಇಲ್ಲ' ಎಂದು ಹೇಳಿದ್ದಾರೆ. ತಾವು ಒಬ್ಬ ತೀವ್ರ

ವಾದಿಯೆಂದು ಆದರೆ ಪ್ರಜಾಪ್ರಭುತ್ವವಾದಿಯಲ್ಲವೆಂದು ಸಾರಿದ್ದರೂ, ವ್ಯಕ್ತಿಯ ಘನತೆ ಹಾಗೂ ಪ್ರತಿಷ್ಠೆಯನ್ನು ಎತ್ತಿ ಹಿಡಿಯುವುದರಲ್ಲಿ ಕಾರ್ಲೈಲ್ ಒಬ್ಬ ಪ್ರಮುಖ ವ್ಯಕ್ತಿ. ಬರ್ಕ್ ಮತ್ತು ವರ್ಡ್ಸ್‌ವರ್ತ್‌ನಂತೆ ಇವರು ಸಂಪ್ರದಾಯವಾದಿಗಳಾಗಿದ್ದರು. ಆದರೂ ಇವರನ್ನು ಒಬ್ಬ ಸಮಾಜವಾದಿಯೆಂದು ಬ್ರಿಟನ್ನಿನ ಲೇಬರ್ ಪಕ್ಷದ ಖೈರ್ ಹಾರ್ಡಿಯವರು ಪರಿಗಣಿಸುತ್ತಾರೆ.

ಕಾರ್ಲೈಲ್‌ವರು ಒಬ್ಬ ವ್ಯವಸ್ಥಿತ ಚಿಂತನಕಾರರಲ್ಲ. ಅವರಲ್ಲಿ ವಿವೇಚನೆಗಿಂತಲೂ ಹೆಚ್ಚಾಗಿ ಉತ್ಸಾಹವು ಕಂಡುಬರುತ್ತದೆ. ಅರ್ಥಶಾಸ್ತ್ರದ ಬಗ್ಗೆ ಅವರು ಸರಿಯಾದ ನೀತಿಯನ್ನು ತಳೆದಿರಲಿಲ್ಲ. ಅರ್ಥಶಾಸ್ತ್ರವನ್ನು ಒಂದು ಮಂಕು ಕವಿದ (ಡಿಸ್ಮಲ್ ಸೈನ್ಸ್) ಶಾಸ್ತ್ರವೆಂದು ತಿಳಿಸುತ್ತಾರೆ. ಅರ್ಥಶಾಸ್ತ್ರವು ವಾಸ್ತವಿಕ, ಆರ್ಥಿಕ ಸ್ಥಿತಿ, ರೀತಿ ನೀತಿಗಳನ್ನು ತಿಳಿಸುತ್ತದೆಯೇ ಹೊರತು ನೀತಿಯನ್ನು ಬೋಧಿಸಲು ಇರುವಂತಹ ಶಾಸ್ತ್ರವಲ್ಲ. ಈ ಅಂಶವನ್ನು ಕಾರ್ಲೈಲರು ಗಮನಿಸಲಿಲ್ಲ. ಲೇಸೇಫೇರ್ ತತ್ವದ ಬಗ್ಗೆ ಇವರು ಮಾಡಿರುವ ಉಗ್ರಟೀಕೆಯು ಮುಂದೆ ಇಂಗ್ಲೆಂಡಿನಲ್ಲಿ ಅನೇಕ ಸುಧಾರಣೆಗಳಾಗಲು ದಾರಿಮಾಡಿಕೊಟ್ಟಿತು.

ಇವರು ಬರೆದಿರುವ 'ಪಾಸ್ಟ್ ಅಂಡ್ ಪ್ರೆಸೆಂಟ್' ಗ್ರಂಥವು 1842ರಲ್ಲಿ ಪ್ರಕಟವಾಯಿತು. ಇದರಲ್ಲಿ ಅಂದಿನ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿಸುತ್ತಾರೆ.

'ಸಾರ್ಟರ್ ರಿಸಾರ್ಟಸ್' ಗ್ರಂಥದಲ್ಲಿ ಅವರು ಕರ್ತವ್ಯದ ಬಗ್ಗೆ ತಿಳಿಸಿರುವಂತಹ ಯಾವ ಅಭಿಪ್ರಾಯಗಳನ್ನು ಕೊಟ್ಟಿದ್ದರೋ ಅದೇ ಅಭಿಪ್ರಾಯಗಳನ್ನು ಇತರ ಗ್ರಂಥಗಳಲ್ಲಿಯೂ ಕೊಟ್ಟಿದ್ದಾರೆ. ಇವರ ಪ್ರಕಾರ ಎಲ್ಲ ಕಾರ್ಯವು ಪವಿತ್ರವಾದುದು. ಎಲ್ಲಾ ಕಾರ್ಯದಲ್ಲಿಯೂ (ಅದರಲ್ಲೂ ಶ್ರಮದ ಕೆಲಸವೂ ಕೂಡಿ) ದೈವತ್ವವಿದೆ. ಕಾರ್ಯ ಮತ್ತು ಸೇವೆಯೇ ಮನುಷ್ಯನ ಗುರಿಯಾಗಬೇಕು ಹಾಗೂ ಪ್ರತಿಯೊಂದು ಕಾರ್ಯಕ್ಕೂ ದೊರಕಬೇಕಾದ ಕೂಲಿ ದೊರಕಲೇಬೇಕು. ಈ ಕಾರಣದಿಂದ ಶಾಸನವು ಕೂಲಿಗಾರರ ಹಿತರಕ್ಷಣೆಗೆ ಅನುಕೂಲವಾಗುವಂಥದ್ದಾಗಿರಬೇಕು.

'ಹೀರೋ ಮತ್ತು ಹೀರೋ ವರ್ಷಿಪ್' ಮತ್ತು 'ಲೇಟರ್ ಡೇ ಪ್ಯಾಂಪ್ಲೆಟ್' ಗಳಲ್ಲಿ ಅವರು ವ್ಯಕ್ತಿಪೂಜೆಯನ್ನು ಸಮರ್ಥಿಸುತ್ತಾರೆ. ಸರ್ಕಾರವು ಪ್ರಜೆಗಳಿಗೋಸ್ಕರ ಇರುವುದಾದರೂ ಅದು ಪ್ರಜೆಗಳ ಸರ್ಕಾರವಾಗಲಾರದು. ಪ್ರಜಾಪ್ರಭುತ್ವವನ್ನು ಬಹಳ ಕಟುವಾಗಿ ಟೀಕಿಸುತ್ತಾ ಶಾಸಕಾಂಗವೆಂದರೆ ಅದು ಗೊಡ್ಡು ಹರಟೆಯ ಒಂದು ಸಭೆ ಎಂದು ತಿಳಿಸುತ್ತಾರೆ. ಬಹು ಸಂಖ್ಯಾತರು ಸಾಧಾರಣವಾಗಿ ದಡ್ಡರಿರುವುದರಿಂದ ಅಂತಹ ಸರ್ಕಾರದಲ್ಲಿ ದಡ್ಡರ ಆಳ್ವಿಕೆಯು ಅತಿಯಾಗಿರುತ್ತದೆ.

ಕಾರ್ಲೈಲ್‌ರು ಮಿಲ್ಲರ ಸ್ವಾತಂತ್ರ್ಯವಾದವನ್ನು ಒಪ್ಪಲಿಲ್ಲ. ಅವರ ಪ್ರಕಾರ ಹಕ್ಕುಗಳೆಂದರೆ ಜಾಣರು ತಿಳಿವಳಿಕೆ ಇಲ್ಲದವರಿಗೆ ದಾರಿ ತೋರಿಸುವುದೇ ಆಗಿರುತ್ತದೆ. ಆದ್ದರಿಂದ ತಿಳಿವಳಿಕೆಯಿಲ್ಲದವರಿಗೆ ರಾಜಕೀಯದಲ್ಲಿ ಅವಕಾಶವಿರಬಾರದೆಂಬುದೇ

ಇವರ ಮತ. ಅವಿವೇಕಿಗಳಾಗಲೀ, ದಡ್ಡರಿಗಾಗಲೀ, ಹೇಡಿಗಳಿಗಾಗಲೀ, ಹುಚ್ಚರಿಗಾಗಲೀ, ಸ್ವಾತಂತ್ರ್ಯದ ಸರಿಯಾದ ಕಲ್ಪನೆ ಇಲ್ಲದಿರುವುದರಿಂದ ಅವರನ್ನು ಸರಿಯಾದ ಮಾರ್ಗಕ್ಕೆ ತರುವ ವಿಶೇಷ ಜವಾಬ್ದಾರಿ ಜಾಣನಾದ ನಾಯಕನಿಗೆ ಇರುತ್ತದೆ. ಆದ್ದರಿಂದ ರಾಜಕೀಯ ಹಕ್ಕುಗಳು ಸಾಮಾನ್ಯ ಜನರಿಗೆ ಇರಬಾರದೆಂಬುದೇ ಇವರ ವಾದ.

ಏ

ಬೆಂಥಮ್‌ರ ಉಪಯುಕ್ತತಾವಾದವನ್ನು ಬಹುಮಟ್ಟಿಗೆ ಮಾರ್ಪಡಿಸಿದವರು ಜಾನ್ ಸ್ಟೂವರ್ಟ್ ಮಿಲ್‌ರವರು(1806–1873). ಪ್ರಾರಂಭದಲ್ಲಿ ಉಪಯುಕ್ತತಾವಾದವನ್ನು ಒಪ್ಪಿದ್ದರೂ ಅದರಲ್ಲಿ ಕಂಡುಬರುವ ಅನೇಕ ದೋಷಗಳನ್ನು ತೊಡೆದು ಹಾಕಿ, ವ್ಯಕ್ತಿ ಸ್ವಾತಂತ್ರ್ಯವನ್ನು ಬಹುಮಟ್ಟಿಗೆ ಎತ್ತಿಹಿಡಿದ ಕೀರ್ತಿ ಮಿಲ್‌ಗೆ ಸಲ್ಲುತ್ತದೆ. ಮಿಲ್‌ರವರ ಪ್ರಕಾರ ಸುಖದುಃಖಗಳು ಅಳತೆಗೆ ನಿಲುಕದ ವಿಷಯಗಳು, ಕಾರಣ ಸುಖವು ಅನೇಕ ಬಗೆಯದಾಗಿರುತ್ತದೆ. ಮಾನಸಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸುಖವು ದೈಹಿಕ ಸುಖಕ್ಕಿಂತಲೂ ಉತ್ತಮಮಟ್ಟದ್ದಾಗಿರುವುದರಿಂದ ಅವುಗಳನ್ನು ಇಚ್ಛಿಸುವುದು ಶ್ರೇಯಸ್ಕರ. "ತೃಪ್ತಿ ಪಡೆದ ಹಂದಿಗಿಂತ ಅತೃಪ್ತಿ ಹೊಂದಿದ ಸಾಕ್ರಟೀಸನೇ ಉತ್ತಮ" ಎಂದು ಹೇಳುವಾಗ ಮಿಲ್‌ರವರು ಸುಖದ ಬಗೆಗಳಲ್ಲಿರುವ ವ್ಯತ್ಯಾಸವನ್ನು ತಿಳಿಸುತ್ತಾರೆ. ಪ್ರತಿಯೊಬ್ಬ ಮಾನವನೂ ಸದಾ ದೈಹಿಕ ಸುಖವನ್ನೇ ಬಯಸುತ್ತಾನೆಂಬುದು ಸುಳ್ಳು. ಮನುಷ್ಯನು ಸಾಧಾರಣವಾಗಿ ಉದಾತ್ತವಾದ ಸುಖವನ್ನೇ ಅಪೇಕ್ಷಿಸುತ್ತಾನೆ. ಸರಿಯಾದ ಪರಿಸರದಲ್ಲಿ ಸರಿಯಾದ ಶಿಕ್ಷಣವು ದೊರೆತರೆ ಮನುಷ್ಯನು ತನ್ನ ಆನಂದವನ್ನು ನಿಸರ್ಗದಲ್ಲಿ ಸಾಹಿತ್ಯ, ಸಂಗೀತ ಮುಂತಾದ ಕಲೆಗಳ ಅಧ್ಯಯನದಲ್ಲಿ ಅವುಗಳ ಆಸಕ್ತಿಯಲ್ಲಿ ಕಂಡುಕೊಳ್ಳುತ್ತಾನೆ. ಆದರೆ ಎಲ್ಲ ವ್ಯಕ್ತಿಗಳಲ್ಲೂ ಒಂದೇ ಬಗೆಯ ಮನೋಭಾವ ಇಲ್ಲದಿರುವುದರಿಂದ ಎಲ್ಲರಿಗೂ ಒಂದೇ ವಿಷಯ ತೃಪ್ತಿಯಿಂದ ಸುಖ ದೊರೆಯುವುದಿಲ್ಲ. ಇನ್ನೂ ಮುಂದುವರಿದು ಮಿಲ್ ತಿಳಿಸುವುದೇನೆಂದರೆ ಮನುಷ್ಯನಿಗೆ ಅತ್ಯಂತ ಹೆಚ್ಚಿನ ಸುಖವನ್ನು ಕೊಡುವುದು ತನ್ನ ವಿವೇಚನಾ ಸ್ವಾತಂತ್ರ್ಯ. ಅದಕ್ಕೆ ತಕ್ಕಂತೆ ತನ್ನ ಜೀವನವನ್ನು ಹೊಂದಿಸಿಕೊಳ್ಳಲು ವ್ಯಕ್ತಿಗೆ ಯಾವ ಅಡ್ಡಿ ಆತಂಕಗಳೂ ಇರಬಾರದು. ಪರರ ಸ್ವಾತಂತ್ರ್ಯಕ್ಕೆ ಅಡ್ಡಿ ಬರದಂತೆ ತನ್ನ ನ್ಯಾಯವಾದ ಹಾಗೂ ವಿವೇಚನಾಪೂರಿತವಾದ ಸ್ವಾತಂತ್ರ್ಯವನ್ನು ವ್ಯಕ್ತಿಯು ಅನುಭವಿಸಲು ಸಾಧ್ಯವಾದಾಗ ಮಾತ್ರ ಆತನ ಸುಖ ಹೆಚ್ಚಿನ ಮಟ್ಟದ್ದಾಗುತ್ತದೆ. ಈ ರೀತಿ ಉಪಯುಕ್ತತಾವಾದವನ್ನು ಪುಷ್ಟೀಕರಿಸಿದ ನಂತರ ಮಿಲ್‌ರವರು ತಮ್ಮ ಪ್ರಸಿದ್ಧ ಗ್ರಂಥಗಳಾದ 'ಸ್ವಾತಂತ್ರ್ಯವನ್ನು ಕುರಿತು' (ಆನ್ ಲಿಬರ್ಟಿ) ಮತ್ತು 'ಪ್ರತಿನಿಧಿ ಸರ್ಕಾರ' ಎಂಬ ಗ್ರಂಥಗಳನ್ನು ಪ್ರಕಟಪಡಿಸಿದರು. ಇವರ 'ಸ್ವಾತಂತ್ರ್ಯವನ್ನು ಕುರಿತು' ಎಂಬ ಗ್ರಂಥವು

ಮಿಲ್ಟನ್‌ರವರು ಬರೆದ 'ಏರೋಪೆಜಿಟಿಕ' ಎಂಬ ಗ್ರಂಥದಷ್ಟೇ ಮಾನ್ಯತೆಯನ್ನು ಪಡೆದಿದ್ದು. ಅದನ್ನು ಒಂದು ಉತ್ತಮ ಸಾಹಿತ್ಯ ಕೃತಿ ಎಂದೂ ಪರಿಗಣಿಸಲಾಗಿದೆ.

ಬೆಂಥಮ್ ಮತ್ತು ಮಿಲ್‌ರವರು ವ್ಯಕ್ತಿವಾದಿಗಳೆಂದು ಪ್ರಸಿದ್ಧರಾಗಿದ್ದಾರೆ. ಮಿಲ್‌ರವರ ವ್ಯಕ್ತಿವಾದದ ದೆಸೆಯಿಂದಾಗಿ ಇಂಗ್ಲೆಂಡಿನಲ್ಲಿ ಉದಾರವಾದವು ಹರಡಿತು. ಈ ವಾದದ ಜತೆಯಲ್ಲಿಯೇ ಅದಕ್ಕೆ ಸಮಾನಾಂತರವಾಗಿ ನಿರಾಂತಕವಾದ (ಲೇಸೆಫೇರ್) ವು ಪ್ರಚಲಿತವಾಯಿತು ಇದನ್ನು ಮ್ಯಾಂಚೆಸ್ಟರ್‌ನ ಅರ್ಥಶಾಸ್ತ್ರಜ್ಞರು ಪುಷ್ಟೀಕರಿಸಿದರು. 19ನೇ ಶತಮಾನದ ಅಂತ್ಯದವರೆಗೂ ಈ ತತ್ವಗಳಿಗೆ ವಿಶೇಷ ಮನ್ನಣೆ ದೊರಕಿತು.

ಮಿಲ್‌ರು, ಬೆಂಥಮ್‌ರ ಉಪಯುಕ್ತತಾವಾದವನ್ನು ಮಾರ್ಪಡಿಸುವ ಮುಂಚೆ ಕೋಲರಿಡ್ಜ್ ಹಾಗೂ ಕಾರ್ಲೈಲ್ ರವರ ಟೀಕೆಗಳನ್ನು ಓದಿದ್ದರು. ಕಾರ್ಲೈಲ್‌ರು ಮಿಲ್‌ರ ಆಪ್ತಮಿತ್ರರು. ಆದರೆ ಅವರ ವಿಚಾರ ಧಾರೆಯಲ್ಲಿ ದೃಷ್ಟಿಕೋನಗಳ ವ್ಯತ್ಯಾಸವುಂಟು.

ಬೆಂಥಮ್ ಮತ್ತು ಮಿಲ್ ಅವರ ಸಿದ್ಧಾಂತದ ಪರಿಣಾಮವಾಗಿ ಇಂಗ್ಲೆಂಡ್ ದೇಶದಲ್ಲಿ ಉದಾರವಾದವು (ಲಿಬರಲಿಸಂ) ಉದ್ಭವವಾಗಲು ಕಾರಣವಾಯಿತು. ಇದರ ಮೂಲ ತತ್ವಗಳು ಯಾವುವೆಂದರೆ—

1. ನಾಗರಿಕ ಸ್ವಾತಂತ್ರ್ಯ; 2. ಹಣಕಾಸಿನ ಸ್ವಾತಂತ್ರ್ಯ, 3. ವೈಯುಕ್ತಿಕ ಸ್ವಾತಂತ್ರ್ಯ, 4. ಸಾಮಾಜಿಕ ಸ್ವಾತಂತ್ರ್ಯ, 5. ಕೌಟುಂಬಿಕ ಸ್ವಾತಂತ್ರ್ಯ ಮುಂತಾದವುಗಳು.

ಈ ತತ್ವಗಳ ಪ್ರಭಾವದಿಂದ ಉದಾರವಾದೀ ಪ್ರಜಾಪ್ರಭುತ್ವವು ವಿಕಾಸ ಗೊಳ್ಳಲು ಸಾಧ್ಯವಾಯಿತು.

ಆ ಕಾಲದ ಪ್ರಸಿದ್ಧ ಸಾಹಿತಿ ಹಾಗೂ ಕಲಾವಿದರೆಂದರೆ ಜಾನ್ ರಸ್ಕಿನ್ (1819-1900). ರಸ್ಕಿನ್ನರು ಪ್ರಮುಖ ಕಲಾವಿದರು. ಕಲೆಗಾರರ ಸೌಂದರ್ಯೋಪಾಸನೆಯನ್ನು ನೀತಿವಂತನು ಸಾಮಾಜಿಕ ನ್ಯಾಯದ ಬಗ್ಗೆ ತೋರಿಸುವ ಶ್ರದ್ಧೆಯೊಂದಿಗೆ ಮಿಳಿತಮಾಡಿರುವುದನ್ನು ರಸ್ಕಿನ್ನರವರ ಲೇಖನಗಳಲ್ಲಿ ಕಾಣಬಹುದು. ಸಮಾಜದ ಸಮಸ್ಯೆಗಳ ಪರಿಹಾರವನ್ನು ಕಲಾತ್ಮಕವಾಗಿ ಮಾಡಬಹುದು. ಕಲೆಯು ರಾಷ್ಟ್ರೀಯ ಚಾರಿತ್ರ್ಯವನ್ನು ತಿಳಿಸುವಂಥಾದ್ದು. ಕಲೆಯಲ್ಲಿ ಪರಿಪೂರ್ಣತೆಯನ್ನು ಕಾಣಲು ರಾಷ್ಟ್ರೀಯ ಚಾರಿತ್ರ್ಯದ ಪರಿಶುದ್ಧತೆ ಅಗತ್ಯ. ಅದರ ಸಲುವಾಗಿ ಸಾಮಾಜಿಕ ಸಂಸ್ಥೆಗಳ ಸುಧಾರಣೆ ಅತ್ಯವಶ್ಯಕ. ಇವರಂತೆಯೇ ವಿಚಾರ ಮಾಡಿದವರು ವಿಲಿಯಂ ಮಾರಿಸ್. ಅವರ ಪ್ರಕಾರ ಉತ್ತಮವಾದ ಕಲಾಕೃತಿಗಳು ಉತ್ಸಾಹಭರಿತರಾದ, ಸಂತಸದಿಂದ ಕೂಡಿದ ಕೆಲಸಗಾರರಿಂದ ಮಾತ್ರ ಸಾಧ್ಯ. ಅಂಥ ಕೆಲಸಗಾರರು ಸಮಾಜವಾದೀ ರಾಜ್ಯದಲ್ಲಿ ಮಾತ್ರ ಸಾಧ್ಯ. ರಸ್ಕಿನ್ ಮತ್ತು ಮಾರಿಸ್‌ರವರ ಪ್ರಕಾರ ಉತ್ತಮವಾದ ಹಾಗೂ ಸುಂದರವಾದ ಕೃತಿಗಳು ಉತ್ತಮವಾದ ಹಾಗೂ

ಸುಂದರವಾದ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯ. 'ಕಲೆಯು ಕಲೆಗಾಗಿ ಮಾತ್ರವಲ್ಲ' ಅದು ಸಮಾಜಕ್ಕೆ ಸಂಬಂಧಿಸಿದುದು ದುಡಿಮೆ ಯಿಲ್ಲದ ಜೀವನವು ತಪ್ಪಾದುದು; ಹಾಗೆಯೇ ಕಲೆಯಲ್ಲದ ದುಡಿಮೆಯು ನಿರರ್ಥಕ ವಾದುದು ಹಾಗೂ ಒರಟಾದುದು. ಸಾಮಾಜಿಕ ನ್ಯಾಯದ ಒಡೆತನಕ್ಕೆ ಒಳಗಾದ ಸೌಂದರ್ಯವೇ ನಿಜವಾದ ಸಂತಸವನ್ನು ಕೊಡುವುದು ಇದೇ ರಸ್ಕಿನ್ನರ ಉಪದೇಶದ ತಿರುಳು. ಕಾರ್ಲೈಲ್‌ರಂತೆ ರಸ್ಕಿನ್ ಕೂಡ ಪ್ಲೇಟಾನಿಕ್ ಆದರ್ಶವಾದ ಆತ್ಮೀಯ ಜ್ಞಾನದ ಕಡೆಗೆ ಗಮನ ಹರಿಸಿದರು. 1857ರಲ್ಲಿ ಮ್ಯಾಂಚೆಸ್ಟರ್‌ನಲ್ಲಿ ಅನೇಕ ಭಾಷಣಗಳನ್ನು ಮಾಡಿದರು

ಈ ಭಾಷಣಗಳಲ್ಲಿ ಅವರ ಮುಖ್ಯ ವಿಚಾರಧಾರೆ ಕಂಡುಬರುತ್ತದೆ. ಪೈಪೋಟಿಗೆ ಬದಲಾಗಿ ಸಹಕಾರ, ಸರ್ಕಾರಿ ಶಿಕ್ಷಣ, ಸರ್ಕಾರೀ ಉದ್ಯೋಗ, ವೃದ್ಧರಿಗೆ ಹಾಗೂ ಕಾರ್ಮಿಕರಿಗೆ ಸರ್ಕಾರೀ ಸೌಲಭ್ಯಗಳು ಮುಂತಾದ ವಿಷಯಗಳನ್ನು ಒಳಗೊಂಡಿವೆ. "ಸರ್ಕಾರ ಮತ್ತು ಸಹಕಾರ ಜೀವನದ ನಿಯಮಗಳು: ಅರಾಜಕತೆ ಮತ್ತು ಪೈಪೋಟಿಗಳು ಮರಣದ ನಿಯಮಗಳು'' ಎಂದು ಹೇಳುತ್ತಾರೆ ರಸ್ಕಿನ್. ಇಂಥ ವ್ಯವಸ್ಥೆಯನ್ನು ತರಲು ಕೆಲಸಗಾರರನ್ನು ಸೈನಿಕರಂತೆ ಪರಿಗಣಿಸಬೇಕು. ಕೆಲಸ ಗಾರರೂ ಕೂಡ ಸೈನಿಕರಂತೆಯೇ ಸರ್ವತ್ಯಾಗಕ್ಕೂ ಸಿದ್ಧರಿರಬೇಕು.

1860ರಲ್ಲಿ ರಸ್ಕಿನ್‌ರು 'ಅನ್ ಟು ದಿ ಲಾಸ್ಟ್' ಎಂಬ ಗ್ರಂಥವನ್ನು ರಚಿಸಿದರು. ಈ ಪುಸ್ತಕವು ತಮ್ಮ ಮೇಲೆ ಬಲವತ್ತರವಾದ ಪ್ರಭಾವವನ್ನು ಬೀರಿತೆಂದು ಗಾಂಧೀಜೀಯವರು ತಮ್ಮ ಆತ್ಮಕಥೆಯಲ್ಲಿ ತಿಳಿಸುತ್ತಾರೆ.

ಈ ಗ್ರಂಥವು ಅರ್ಥಶಾಸ್ತ್ರವನ್ನು ನೀತಿಯ ಕಟ್ಟಿಗೆ ಸಿಲುಕಿಸುವ ಪ್ರಯತ್ನ ವಾಗಿದೆ. ವಿಜ್ಞಾನವು ಸಮಾಜದ ಹಿತಕ್ಕಾಗಿ, ಅದು ಉತ್ತಮ ಪ್ರಜೆಗಳನ್ನು ಸೃಷ್ಟಿಸಲು ರಾಜ್ಯಕ್ಕೆ ಸಹಾಯವಾಗತಕ್ಕದ್ದು ರಾಜ್ಯವು ಪ್ರಜೆಗಳ ಆರೋಗ್ಯ, ನೀತಿ ನಡತೆಗಳನ್ನು ಹೆಚ್ಚಿಸಿ ಉತ್ತಮ ಮಟ್ಟದ ಕುಶಲತೆಯನ್ನು ಪ್ರೋತ್ಸಾಹಿಸಲು ಯಾವ ಕಾರ್ಯಗಳನ್ನು ಕೈಗೊಳ್ಳಬೇಕು, ಸರ್ಕಾರಿ ವರ್ಕ್‌ಷಾಪ್‌ಗಳನ್ನು ತೆರೆಯ ಬೇಕು, ನಿರುದ್ಯೋಗಿಗಳಿಗೆ ಕಡ್ಡಾಯವಾಗಿ ಉದ್ಯೋಗಮಾಡುವಂತೆ ಕಾಯಿದೆಗಳನ್ನು ಮಾಡುವುದಲ್ಲದೆ, ಅವರಿಗೆ ಉದ್ಯೋಗಾವಕಾಶ ಏರ್ಪಡಿಸಬೇಕು. ವೃದ್ಧರಿಗೆ ಮತ್ತು ದೀನರಿಗೆ ಅನುಕೂಲವಾಗುವಂತೆ ವಸತಿ, ವಿಶ್ರಾಂತಿ ಗೃಹಗಳನ್ನು ಏರ್ಪಡಿಸಬೇಕು. ಆದ್ದರಿಂದಲೇ ಲೇಸೇಫೇರ್ ತತ್ವ ಕೊನೆಗೊಂಡು ರಾಜ್ಯವು ಸಕ್ರಿಯವಾದ ಪ್ರಜಾ ಹಿತವಾದ ಕಾರ್ಯಗಳನ್ನು ಕೈಗೊಳ್ಳಬೇಕು.

'ಐಶ್ವರ್ಯವೇ ಸರ್ವಸ್ವ' ಎಂಬ ಮನೋಭಾವನೆಯನ್ನು ತೊಡೆದು ಹಾಕಲು ರಸ್ಕಿನ್ನರ ಈ ಅನೇಕ ಲೇಖನಗಳು ಕಾರಣವಾದುವು. ಕೇವಲ ರಾಜಕೀಯ ಸುಧಾರಣೆಯಿಂದ ಯಾವ ಪ್ರಯೋಜನವೂ ಇಲ್ಲ. ಸಾಮಾಜಿಕ, ಆರ್ಥಿಕ ಕ್ಷೇತ್ರ ಗಳಲ್ಲಿ ಪ್ರಗತಿಯಾದಲ್ಲಿ ಮಾತ್ರ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವುಂಟು. ಶಿಕ್ಷಣ,

ಉದ್ಯೋಗಾವಕಾಶ, ವೃದ್ಧರ ಮತ್ತು ದೀನರ ಯೋಗಕ್ಷೇಮ, ಪ್ರಜೆಗಳ ಆತ್ಮಾಭಿವೃದ್ಧಿ ಮುಂತಾದುವುಗಳ ಬಗ್ಗೆ ಕಾರ್ಲೈಲ್ ಮತ್ತು ರಸ್ಕಿನ್ನರು ಪ್ರತಿಪಾದಿಸಿದ ತತ್ವಗಳು ರಾಜಕೀಯ ಕ್ಷೇತ್ರದಲ್ಲಿ ಪ್ರಬಲವಾದ ಪರಿಣಾಮವನ್ನುಂಟು ಮಾಡಿದವು. ಇದರಿಂದ ಸುಖೀ ರಾಜ್ಯ (ವೆಲ್‌ಫೇರ್ ಸ್ಟೇಟ್) ತತ್ವ ಬೆಳೆಯಲು ಕಾರಣವಾಯಿತು.

ಪ್ರಜಾಪ್ರಭುತ್ವದಲ್ಲಿ ಮಾನವೀಯತೆ, ಕಲಾಪ್ರೇಮ ಹಾಗೂ ಸೌಂದರ್ಯೋಪಾಸನೆಗೀಗೆ ಅವಕಾಶವಿಲ್ಲ ಎಂಬುದಾಗಿ ಪ್ರಜಾಪ್ರಭುತ್ವವನ್ನು ಖಂಡಿಸಿದ ರಸ್ಕಿನ್, ಕಾರ್ಲೈಲ್‌ಗಳ ಕೃತಿಗಳನ್ನು ಅನೇಕರು ಸಾಹಿತ್ಯದ ಕಾರಣಕ್ಕಾಗಿ ಮೆಚ್ಚಿದರು. ಆದರೆ ಅವರ ರಾಜಕೀಯ ವಿಚಾರಗಳನ್ನು ಅನೇಕರು ಗಮನಕ್ಕೆ ತೆಗೆದುಕೊಳ್ಳಲಿಲ್ಲ.

ಹತ್ತೊಂಭತ್ತನೆಯ ಶತಮಾನವು ಕಳೆಯುವ ಹೊತ್ತಿಗೆ ಬ್ರಿಟನ್ 'ರವಿ ಮುಳುಗದ' ಸಾಮ್ರಾಜ್ಯದ ಒಡತಿಯಾಗಿತ್ತು. ಬ್ರಿಟನ್ ಕಡಲರಾಣಿ ಎಂಬ ಕೀರ್ತಿಯನ್ನು ಪಡೆದಿತ್ತು. ಶತಮಾನದ ೧೮೭೫ ವರ್ಷದಲ್ಲಿ ಪ್ರಕಟಿತವಾದ ಜೆ ಬಿ. ಬ್ಯೂರಿಯವರ ಲೇಖನವೊಂದರಲ್ಲಿ ಮನುಷ್ಯನು ಪ್ರಗತಿಪಥದಲ್ಲಿದ್ದಾನೆಂದೂ, ಪ್ರಜಾಪ್ರಭುತ್ವ ಹಾಗೂ ವೈಜ್ಞಾನಿಕ ಶಿಕ್ಷಣಗಳ ದೆಸೆಯಿಂದ ಮರ್ತ್ಯವೇ ಬಹು ಶೀಘ್ರದಲ್ಲಿ ಸ್ವರ್ಗಮಯವಾಗುವುದೆಂದೂ ತಿಳಿಸಿದ್ದರು.

ಇಪ್ಪತ್ತನೆಯ ಶತಮಾನದ ಆರಂಭಕಾಲಕ್ಕೆ ಎಲ್ಲೆಲ್ಲಿಯೂ ಭೌತವಾದ ಹಾಗೂ ಸಮಾಜವಾದವೂ ಪ್ರಚಲಿತವಾಗಿದ್ದವು. ಪ್ರಗತಿಯೆಂದರೆ ಎಲ್ಲರಿಗೂ ಬ್ರೆಡ್ ಮತ್ತು ಸರ್ಕಸ್ ಒದಗಿಸುವುದೇ ಆಗಿದೆ ಎಂಬ ಅಭಿಮತವನ್ನು ಅನೇಕರು ವ್ಯಕ್ತಪಡಿಸಿದರು.

ಹತ್ತೊಂಭತ್ತನೆ ಶತಮಾನದಲ್ಲಿಯೇ ಕಾದಂಬರಿಗಳಲ್ಲಿ ಹಾಗೂ ನಾಟಕಗಳಲ್ಲಿ ಸಾಮಾಜಿಕ ಚಿಂತನೆಗಳ ಛಾಯೆಯನ್ನು ಕಾಣಬಹುದು. ಇಪ್ಪತ್ತನೇ ಶತಮಾನದಲ್ಲಿ ಆಂಗ್ಲಸಾಹಿತ್ಯದಲ್ಲಿ ಸಾಮಾಜಿಕ ಹಾಗೂ ರಾಜಕೀಯ ವಿಚಾರಧಾರೆಯ ಪ್ರಭಾವವನ್ನು ಕಾಣಬಹುದು.

ಹತ್ತೊಂಭತ್ತನೆಯ ಶತಮಾನವು ಕ್ಯಾಲೆಂಡರ್ ಪ್ರಕಾರ ಡಿಸೆಂಬರ್ 31 1899ಕ್ಕೆ ಕೊನೆಗೊಂಡಿತು. ಆದರೆ ಇತಿಹಾಸಕಾರರ ಪ್ರಕಾರ ಇಪ್ಪತ್ತನೆಯ ಶತಮಾನದ ಪ್ರಾರಂಭ ವಿಕ್ಟೋರಿಯಾ ರಾಣಿಯ ಮರಣಾನಂತರ (1901)ದಲ್ಲಿ. ಬಹಳ ವೈಭವಯುಕ್ತವಾದ ವಿಕ್ಟೋರಿಯಾಯುಗದ ಕೊನೆಗಾಲದಲ್ಲಿ ಆಂಗ್ಲ ಸಾಹಿತ್ಯದಲ್ಲಿ ರೊಮ್ಯಾಂಟಿಕ್ ಕಾವ್ಯವು ಕೊನೆಗೊಂಡಿತು.

ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಸಾಹಿತ್ಯವು ಸಮಾಜದ ವಿಮರ್ಶೆಯತ್ತ ಗಮನಕೊಡಲು ಪ್ರಾರಂಭಿಸಿತು. ಸ್ತ್ರೀಯರ ಹಕ್ಕುಗಳು, ಖಾಸಗಿ ಆಸ್ತಿ, ವಿವಾಹ ಹಾಗೂ ಕುಟುಂಬಗಳ ಸ್ಥಿತಿಗತಿಗಳು, ಖಾಸಗಿಆಸ್ತಿ, ಬಂಡವಾಳ ಹಾಗೂ ಕೂಲಿ, ಕ್ರಿಮಿನಲ್ ನ್ಯಾಯ, ಪೀನಲ್ ಶಾಸನ ಮುಂತಾದ ಅನೇಕ ವಿಷಯಗಳನ್ನು ಸಾಹಿತ್ಯದ ಕೃತಿಯಲ್ಲಿಯೂ ಅಳವಡಿಸಿಕೊಂಡಿರುವುದನ್ನು ಕಾಣಬಹುದು. ಆ ಕಾಲದಲ್ಲಿ ಪುಸ್ತಕಗಳ ಪ್ರಕಟನೆಗಳೂ ಅಧಿಕವಾದವು, ಲೇಖಕರೂ ಹೆಚ್ಚಾದರೂ,

1909-1910ರ ವೇಳೆಗೆ ನಾಟಕ ರಂಗದಲ್ಲಿ ಜಾರ್ಜ್ ಬರ್ನಾರ್ಡ್ ಷಾ ಮತ್ತು ಗಾಲ್ಸವರ್ದಿಯವರೂ, ಬೆನೆಟ್, ಎಚ್. ಜಿ. ವೆಲ್ಸ್ ಮತ್ತು ಗಾಲ್ಸ್‌ವರ್ದಿಯವರು ಕಾದಂಬರಿಯಲ್ಲೂ, ಚೆಸ್ಟರ್‌ಟನ್ ಮತ್ತು ಬೆಲಕ್‌ರವರು ಪತ್ರಿಕೋದ್ಯಮ ಸಾಹಿತ್ಯದಲ್ಲೂ ಪ್ರಸಿದ್ಧರಾಗಿದ್ದರು. ಅವರಲ್ಲಿ ಹೆಚ್ಚಿನ ಖ್ಯಾತಿಯನ್ನು ಪಡೆದವರು ವೆಲ್ಸ್, ಷಾ, ಗಾಲ್ಸವರ್ದಿ ಮತ್ತು ಬೆನೆಟ್. ರೆಬೆಕ್ಕವೆಸ್ಟರವರ ಪ್ರಕಾರ ಈ ನಾಲ್ವರೂ ಕಲಾತ್ಮಕರಾಗಿದ್ದುದೂ ಅಲ್ಲದೆ ಉತ್ತಮವಾದ ಬೋಧಕರೂ ಆಗಿದ್ದರೂ. ಅನೇಕ ಯುವಕರು ಇವರ ಪ್ರಭಾವಕ್ಕೊಳಗಾಗಿದ್ದರು. ಬೀರ್‌ಭಾವರವರ್‌ರ ವ್ಯಂಗ್ಯಚಿತ್ರ ವೊಂದರಲ್ಲಿ ಈ ನಾಲ್ವರ ಚಿತ್ರಗಳನ್ನು ಒಂದು ಚಿತ್ರಕಲಾಮಂದಿರದಲ್ಲಿ ನೇತುಹಾಕಿ ರುವುದನ್ನು ತೋರಿಸುತ್ತದೆ.

ಗಾಲ್ಸವರ್ದಿ (1867-1933) ಕ್ರಾಂತಿಕಾರಕ ಚಿಂತನಕಾರರಲ್ಲ. ಇವರ ಪ್ರಸಿದ್ಧ ಕಾದಂಬರಿ 'ಫೋರಸೈಟ್ ಸಾಗ' (Forsyte Saga) ವಿಕ್ಟೋರಿಯನ್ ಯುಗದ ಭೂಜ್ವಾ ಪದ್ಧತಿಯನ್ನು ವಿಡಂಬನಾತ್ಮಕವಾಗಿ ವರ್ಣಿಸುತ್ತದೆ. ಈ ಕಾದಂಬರಿಯ ಮೊದಲನೇ ಭಾಗ 'ಮ್ಯಾನ ಆಫ್ ಪ್ರಾಪರ್ಟಿ' (1906) ಗ್ರಂಥದಲ್ಲಿ ಆಸ್ತಿಯ ಪ್ರವೃತ್ತಿಯನ್ನು ವಿಮರ್ಶಿಸುವುದು ಮಾತ್ರವಲ್ಲದೆ ಭೂಜ್ವಾ ಮನೋರೀತಿ ಯಲ್ಲಿ ಕಂಡುಬರುವ ಬದಲಾವಣೆಗಳನ್ನು ನಿರೂಪಿಸುತ್ತದೆ. ಹೆಂಡತಿಯನ್ನು ಆಸ್ತಿ ಯೆಂದು ಪರಿಗಣಿಸುವ ಮನೋಭಾವನೆ, ಸದಾ ಸಂಪಾದನೆಯಲ್ಲಿಯೇ ಆಸಕ್ತ ವಾಗಿರುವ ಸಾಮಾಜಿಕ ಪದ್ಧತಿ, ಅದರಿಂದ ಸಂಸ್ಕೃತಿಯ ಪತನ ಮುಂತಾದುವುಗಳನ್ನು ಕಾಣಬಹುದು. ಈ ಕಾದಂಬರಿಯ ನಂತರ ಬಂದ 'ಫ್ರಿಟರ್ನಿಟಿ' (1909) ಕಾದಂಬರಿ ಯಲ್ಲಿಯೂ ಆಸ್ತಿಯ ತತ್ವವಿಚಾರದಲ್ಲಿ ಫೋರ್‌ಸೈಟ್ ಮನೆತನದಲ್ಲಿ ಉಂಟಾದ ಪರಿವರ್ತನಾ ಮನೋಭಾವವನ್ನು ತಿಳಿಸುವುದಲ್ಲದೆ, ಪಟ್ಟಣವಾಸದ ಜೀವನದಲ್ಲಿರುವ ಕೃತಕತೆ ಹಾಗೂ ಮೇಲ್ಮಟ್ಟದ ಮಧ್ಯಮವರ್ಗದವರ ಅಧೋಗತಿಯ ಸಂಸ್ಕೃತಿಯನ್ನು ತಿಳಿಸಲಾಗಿದೆ. ಈ ಕಾದಂಬರಿಯು ಒಂದು ಅಪಾಯಕಾರಿ ಹಾಗೂ ಕ್ರಾಂತಿಕಾರಿ ಗ್ರಂಥವೆಂದು ಸಾಟರ್‌ಡೇ ರಿವ್ಯೂ ಅಭಿಪ್ರಾಯ ಪಟ್ಟಿತು.

ಗಾಲ್ಸವರ್ದಿಯವರು ಮನುಷ್ಯರು ಅನುಭವಿಸುವ ಕಷ್ಟ ಕಾರ್ಪಣ್ಯಗಳನ್ನು, ಅನ್ಯಾಯವನ್ನು ಕಂಡು ಮರುಕಪಟ್ಟಂಥವರು ಇದನ್ನು ಅವರ ನಾಟಕಗಳಲ್ಲಿ ಕಾಣ ಬಹುದು. 1909ರಲ್ಲಿ ಪ್ರಕಟವಾದ 'ಸಿಲ್ವರ್ ಬಾಕ್ಸ್'ನಲ್ಲಿ ಬಡತನ ಹಾಗೂ ಸಿರಿತನ ದಿಂದ ಉಂಟಾಗುವ ಅಸಮಾನತೆಯನ್ನು ಚಿತ್ರಿಸುತ್ತಾರೆ. ಕಾಯಿದೆಯ ಮುಂದೆ ಎಲ್ಲರೂ ಸಮಾನರು. ಆದರೆ ಸಿರಿತನವು ಕಾಯಿದೆಗಿಂತಲೂ ಹೆಚ್ಚಿನ ಹಿರಿಮೆಯನ್ನು ಪ್ರದರ್ಶಿಸುವುದನ್ನು ಇದರಲ್ಲಿ ಚಿತ್ರಿಸಿದ್ದಾರೆ. ಇದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ, ಅವರು ಬರೆದಿರುವ 'ಸ್ಟ್ರೈಫ್' (STRIFE 1909) ಎಂಬ ನಾಟಕವು ವರ್ಗಗಳ ಸಂಘರ್ಷಣೆಯನ್ನೂ, ಆಧುನಿಕ ರಾಷ್ಟ್ರದ ಸಮಸ್ಯೆಯನ್ನೂ ಪ್ರತಿಬಿಂಬಿಸುತ್ತದೆ. ಟ್ರೆನಾಟ್ರೆಟನ್ ಪ್ಲೇಟ್ ಕಂಪನಿಯಲ್ಲಿ ಮುಷ್ಕರ ಉಂಟಾಗುತ್ತದೆ. ಕಂಪನಿಯ

ಬೋರ್ಡ್ ಹಾಗೂ ಮುಷ್ಕರ ಹೂಡಿದ ಕಾರ್ಮಿಕರೂ ತಮ್ಮ ಸಭೆಗಳನ್ನು ಕರೆದಿರು ತ್ತಾರೆ. ಒಂದುಕಡೆ ಕಂಪನಿಯು ದಿವಾಳಿಯತ್ತ ಸಾಗಿರುತ್ತದೆ. ಮತ್ತೊಂದು ಕಡೆ ಅನೇಕ ದಿನಗಳ ಮುಷ್ಕರದ ದೆಸೆಯಿಂದ ಕಾರ್ಮಿಕರೂ ಅವರ ಹೆಂಡರೂ ಮಕ್ಕಳೂ ಉಪವಾಸದಿಂದ ಸಾಯುವ ಸ್ಥಿತಿಯಲ್ಲಿದ್ದಾರೆ. ಕಂಪನಿಯ ಬೋರ್ಡಿನ ಛೇರ್‌ಮನ್ ಆಂಥೋನಿಯ ಪ್ರಕಾರಮುಷ್ಕರವು ನಿಲ್ಲದಿದ್ದಲ್ಲಿ ಕಂಪನಿಗೂ ಕೆಲಸಗಾರರಿಗೂ ಇರುವ ಬಾಂಧವ್ಯವು ಹದಗೆಡುವುದಲ್ಲದೆ ಸಾಮಾಜಿಕ ವ್ಯವಸ್ಥೆಯ ಮೇಲೂ, ದುಷ್ಪರಿಣಾಮ ವಾಗಬಹುದು. ಆದರೆ ಕಾರ್ಮಿಕರ ಮುಖಂಡ ರಾಬರ್ಟ್ಸ್‌ರ ಪ್ರಕಾರ ಬಂಡವಾಳ ಶಾಹಿಯ ವಿರುದ್ಧ ಕಾರ್ಮಿಕರು ನಡೆಸುವ ಹೋರಾಟದಲ್ಲಿ ಈ ಮುಷ್ಕರವು ಒಂದು ಹಂತ ಮಾತ್ರ. ರಾಬರ್ಟ್ಸ್‌ರ ಅತೃಪ್ತಿಗೆ ಮತ್ತೊಂದು ಕಾರಣವೂ ಉಂಟು. ತಾವು ಹೊಸದಾಗಿ ಕಂಡುಹಿಡಿದ ಒಂದು ಯಂತ್ರಕ್ಕೆ ಅವರಿಗೆ ಸಿಕ್ಕಿದ್ದು ಕೇವಲ ಏಳು ಪೌಂಡುಗಳು. ಆದರೆ ಆದರಿಂದ ಕಂಪನಿಯು ಪಡೆದ ಲಾಭ ಒಂದು ಲಕ್ಷ ಪೌಂಡು. ರಾಬರ್ಟ್ಸ್ ಮತ್ತು ಆಂಥೋನಿ ಇಬ್ಬರೂ ಹಠವಾದಿಗಳು. ಯಾರೂ ಒಪ್ಪಂದಕ್ಕೆ ಸಿದ್ಧ ರಿಲ್ಲ. ಈ ಸಂದರ್ಭದಲ್ಲಿಯೂ ಯುನಿಯನ್‌ನ ಮುಖಂಡರೊಬ್ಬರು ಎರಡು ಪಕ್ಷದವರೂ ಯಾವುದೋ ಒಂದು ನಿರ್ದಿಷ್ಟ ಒಪ್ಪಂದಕ್ಕೆ ಬರಬೇಕೆನ್ನುತ್ತಾರೆ. ಆದರೆ ಎರಡೂ ಪಕ್ಷವೂ ಬರುವುದಿಲ್ಲ. ಈ ಸಂದರ್ಭದಲ್ಲಿ ರಾಬರ್ಟ್ಸ್‌ರ ಹೆಂಡತಿಯೂ ಚಳಿ ಯಿಂದಲೂ, ಹಸಿವಿನಿಂದಲೂ ಮರಣಹೊಂದಿದಳೆಂಬ ವರ್ತಮಾನ. ರಾಬರ್ಟ್ಸರು ಇಲ್ಲದ ವೇಳೆಯಲ್ಲಿ ಕಾರ್ಮಿಕರ ಮಂದಗಾಮಿ ಮುಖಂಡರು ಸಂಧಾನ ಮಾಡಲು ಯತ್ನಿಸುತ್ತಾರೆ. ಆಂಥೋನಿ ಒಪ್ಪುವುದಿಲ್ಲ. ಕಂಪನಿಯು ದೀವಾಳಿಯಾಗುವಂಥ ಸ್ಥಿತಿಯಲ್ಲಿ ಬೋರ್ಡಿನ ಇತರ ಸದಸ್ಯರು ಆಂಥೋನಿಯನ್ನು ರಾಜೀನಾಮೆ ಕೊಡುವಂತೆ ಮಾಡುತ್ತಾರೆ. ಕೊನೆಯಲ್ಲಿ ಸಂಧಾನವು ಯಶಸ್ವಿಯಾಗಿ ಕಾರ್ಮಿಕರು ತಮ್ಮ ಕೆಲಸಕ್ಕೆ ಹಿಂದಿರುಗುತ್ತಾರೆ.

ಈ ನಾಟಕದಲ್ಲಿ ಸಾಮಾಜಿಕ ವಾಸ್ತವತೆಯನ್ನು ಚಿತ್ರಿಸಿರುವುದು ಮಾತ್ರವಲ್ಲದೆ ರಾಜ್ಯದ ಹೊಣೆಗಾರಿಕೆ ಎಷ್ಟರಮಟ್ಟಿನದು ಎಂಬುದು ನಾಟಕದ ಸಂವಾದಗಳಿಂದ ತಿಳಿದುಬರುತ್ತದೆ.

ಗಾಲ್ಸವರ್ದಿಯವರ ಮತ್ತೊಂದು ನಾಟಕ 'ಜಸ್ಟಿಸ್' (1910) ಎಂಬುದು. ಈ ನಾಟಕದ ಸಾರಾಂಶ :–

ಫಾಲ್ಡರ್ 23 ವರ್ಷದ ತರುಣ ಗುಮಾಸ್ತ. ತಾನು ಪ್ರೀತಿಸಿದ ಹೆಣ್ಣಿಗಾಗಿ ಫೋರ್ಜರಿ ಮಾಡುತ್ತಾನೆ. ಆ ಹೆಣ್ಣಾದರೂ ತನ್ನ ಗಂಡನಿಂದ ಬಿಡಲ್ಪಟ್ಟವಳಾಗಿ ಬಹಳ ದುಃಸ್ಥಿತಿಯಲ್ಲಿರುವವಳು. ವಿಚಾರಣಾ ಸಂದರ್ಭದಲ್ಲಿ ಇವನ ವಕೀಲರು, 'ಆ ಬಡ ಹೆಂಗಸಿನ ಕಷ್ಟವನ್ನು ಕಂಡು ಮತಿಹೀನನಾಗಿ ಇಂಥ ಕೃತ್ಯವನ್ನು ಎಸಗಿದನೆಂದೂ' ಆದ್ದರಿಂದ ಅವನನ್ನು ಬಿಡುಗಡೆ ಮಾಡಬೇಕೆಂದೂ ವಾದಿಸುತ್ತಾನೆ. ಆದರೆ ತಪ್ಪಿತಸ್ಥನೆಂದು ಸ್ಥಿರವಾದುದರಿಂದ ಮೂರು ವರ್ಷದ ಸಜಾ ಆಗುತ್ತದೆ. ಕಾರಾ

ಗೃಹದಲ್ಲಿ ಮೂರು ತಿಂಗಳಲ್ಲಿಯೇ ಈತನ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕೆಡುತ್ತದೆ. ಕಾರಾಗೃಹದಿಂದ ಬಿಡುಗಡೆಯಾದ ಮೇಲೆ ನೌಕರಿ ಪ್ರಯತ್ನಮಾಡುವ ಸಂದರ್ಭದಲ್ಲಿ ಮತ್ತೊಂದು ಕಾಗದವನ್ನು ಫೋರ್ಜರಿ ಮಾಡುತ್ತಾನೆ ಇದೇ ಸಂದರ್ಭದಲ್ಲಿ ಈತನ ಹಿಂದಿನ ಮಾಲೀಕರು ಪುನಃ ನೌಕರಿಗೆ ಸೇರಿಸಿಕೊಳ್ಳಲು ಒಪ್ಪುತ್ತಾರೆ. ಆದರೆ ಪುನಃ ದಸ್ತಗಿರಿಯಾಗುವ ಸಂದರ್ಭ ಬರುತ್ತದೆ, ಇದನ್ನರಿತು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಈ ನಾಟಕದಲ್ಲಿ 'ಸ್ಟ್ರೈಫ್'ನಲ್ಲಿ ಕಾಣುವ ಉದ್ವೇಗವನ್ನು ನಾವು ಕಾಣುವುದಿಲ್ಲ. ಇದು ಕೇವಲ ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದು. ಹಾಗೂ ಕುರುಡು ನ್ಯಾಯದ ಅಸಂಬದ್ಧತೆಯನ್ನು ಕುರಿತದ್ದು. 'ಸ್ಟ್ರೈಫ್' ನಾಟಕದಲ್ಲಿ ವಿವಿಧ ಸಿದ್ಧಾಂತಗಳಲ್ಲಿ ಕಂಡುಬರುವ ಭಿನ್ನಾಭಿಪ್ರಾಯಗಳ ತುಲನಾತ್ಮಕ ದೃಷ್ಟಿಕೋನವಿದೆ. ಅದು ಸಾಮಾಜಿಕ ಹಾಗೂ ರಾಜಕೀಯ ವಿಚಾರವನ್ನು ಜನತೆಯ ಮುಂದೆ ಇಡುತ್ತದೆ.

ಗಾಲ್ಸವರ್ದಿಯು ಮೇಲ್ಪಟ್ಟದ ಮಧ್ಯಮವರ್ಗದ ಜೀವನ ಕ್ರಮವನ್ನೂ ಆಲೋಚನೆಗಳನ್ನೂ ಪರ್ಯಾಲೋಚಿಸಿದಂತೆ, ಬೆನೆಟ್‌ರವರು (1867–1931) ಕೆಳಮಟ್ಟದ ಮಧ್ಯಮವರ್ಗದ ಸಾಮಾನ್ಯ ಜೀವನ ಕ್ರಮವನ್ನು ತಮ್ಮ ಕಾದಂಬರಿ ಗಳಲ್ಲಿ ಚಿತ್ರಿಸುತ್ತಾರೆ. ಬೆನೆಟ್‌ರು ತಮ್ಮದೇ ಆದ ಯಾವ ಸಿದ್ಧಾಂತವನ್ನೂ ಓದುಗರ ಮುಂದೆ ಇಡುವುದಿಲ್ಲ. ಅವರು ಬರೆದಿರುವ ಪಾಟರೀಸ್ (POTTRIES), ಕ್ಲೆ ಹ್ಯಾಗಂರ್ (CLAY HANGER) ಮತ್ತು ಓಲ್ಡ್ ವೈವ್ಸ್‌ಟೇಲ್ (OLD WIVES TALE) ಗಳಲ್ಲಿ ವಿಕ್ಟೋರಿಯನ್ ಯುಗದ ಕೈಗಾರಿಕೆಯ ಬೆಳವಣಿಗೆಯ ಪರಿಣಾಮವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕಂಡುಬರುವ ಕೊಳಚೆ ಪ್ರದೇಶಗಳೂ, ಕಿರಿದಾದ ಓಣಿಗಳು ಹಾಗೂ ಅಲ್ಲಿ ಕಂಡಬರುವ ಜನತೆಯ ನಿರ್ಭಾಗ್ಯ ಜೀವನ ಮುಂತಾದುವುಗಳ ವರ್ಣನೆ ಇದೆ. ಇದರಿಂದ ಪಾರ್ಲಿಮೆಂಟಿನ ಹಾಗೂ ಸರ್ಕಾರದ ಗಮನವನ್ನು ಅತ್ತಕಡೆ ಸೆಳೆಯಲು ಕಾರಣವಾಯಿತು.

ಇಪ್ಪತ್ತನೆಯ ಶತಮಾನದ ಪ್ರಸಿದ್ಧ ನಾಟಕಕಾರರೆಂದರೆ ಬರ್ನಾರ್ಡ್ ಷಾ (1856–1950). ಇವರು ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿಯೇ ಪ್ರಸಿದ್ಧರಾಗಿದ್ದರು. ಇಂಗ್ಲೆಂಡಿನ ಫೇಬಿಯನ್ ಸೋಷಿಯಾಲಿಸಂ ತತ್ವದ ಮೂಲ ಪುರುಷರಲ್ಲೊಬ್ಬರು. ಫೇಬಿಯನ್ ತತ್ವದ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದ ಇವರು ಮಾರ್ಕ್ಸ್‌ರವರ ಕ್ರಾಂತಿಕಾರೀ ಚಳವಳಿಯನ್ನು ಒಪ್ಪಲಿಲ್ಲ.

ಷಾರವರು ತಮ್ಮ ನಾಟಕಗಳನ್ನು ತಮ್ಮ ರಾಜಕೀಯ ಸಿದ್ಧಾಂತಗಳನ್ನು ಪ್ರಚಾರಮಾಡುವುದಕ್ಕಾಗಿಯೇ ರಚಿಸಿದರೆಂಬುದು ಅವರು ಬರೆದಿರುವ ಮುನ್ನುಡಿ ಗಳಿಂದ ವೇದ್ಯವಾಗುತ್ತದೆ. ಅವರು ಮಿಸಸ್ ವಾರೆನ್ಸ್ ಪ್ರೊಫೆಶನ್ (Mrs. WARREN'S PROFESSION) ಎಂಬ ನಾಟಕದಲ್ಲಿ ಒಡೆತನದ ದೆಸೆಯಿಂದಾಗಿ

ಒಬ್ಬ ತರುಣಿಯು ವೇಶ್ಯಾವೃತ್ತಿಯನ್ನು ಸೇರಿದ್ದು, ಅದರಿಂದ ಆಕೆಯ ಮಗಳಮೇಲೆ ಆದ ಮಾನಸಿಕ ಪರಿಣಾಮವನ್ನು ತಿಳಿಸುತ್ತಾರೆ.

ಷಾರವರು ಕಲೆಗಾರರು ಮಾತ್ರವಲ್ಲದೆ, ಉತ್ತಮ ಸಾಮಾಜಿಕ ಸುಧಾರಕರೂ ಆಗಿದ್ದರು. ಕಲೆಯು ಸಮಾಜದ ಸುಧಾರಣೆಯ ಸಾಧನವಾಗಬಲ್ಲದು ಎಂಬುದು ಅವರ ಅಭಿಮತ. ಅವರ ಇನ್ನೊಂದು ಪ್ರಸಿದ್ಧ ನಾಟಕ 'ದಿ ವಿಡೋಯರ್ಸ್ ಹೌಸಸ್' (THE WIDOWER'S HOUSES) ಎಂಬುದರಲ್ಲಿ ಕೊಳಚೆ ಪ್ರದೇಶದ ಭೂಮಾಲೀಕತ್ವ ಹಾಗೂ ಭ್ರಷ್ಟಾಚಾರದ ರಾಜಕಾರಣಕ್ಕೂ ಇರುವ ಅನ್ಯೋನತೆಯನ್ನು ಗಂಭೀರವಾಗಿ ಚಿತ್ರಿಸಿದ್ದಾರೆ. ಮತ್ತೊಂದು ಪ್ರಸಿದ್ಧ ನಾಟಕ 'ಮೇಜರ್ ಬರ್ಬಾರ' (MAJOR BARBARA). ಈ ನಾಟಕವನ್ನು ನೋಡಲು ಇಂಗ್ಲೆಂಡಿನ ಆಗಿನ (1905) ಪ್ರಧಾನ ಮಂತ್ರಿ ಬ್ಯಾಲ್ಫರ್ (BALFOUR) ದೊಡ್ಡ ಗುಂಪಿನೊಂದಿಗೆ ಬಂದಿದ್ದರಂತೆ. ಈ ನಾಟಕದ ಮುಖ್ಯ ಅಂಶವೆಂದರೆ ಬಡತನ ಹಾಗೂ ಐಶ್ವರ್ಯದ ವಿವಿಧ ಪರಿಣಾಮಗಳು. ಖಾಸಗೀ ಆಸ್ತಿಯ ಪವಿತ್ರತೆಯನ್ನು ವಿಡಂಬನಾತ್ಮಕವಾಗಿ ಪರಿಹಾಸ್ಯ ಮಾಡಿದ್ದಾರೆ. ಬಡತನವೇ ಎಲ್ಲಾ ದುರ್ಗುಣ ಮತ್ತು ಅಶ್ಲೀಲಗಳಿಗೆ ಕಾರಣ. ಇದನ್ನು ತಮ್ಮ ಪಾತ್ರಧಾರಿಯೊಬ್ಬನ ಬಾಯಲ್ಲಿ ಆಡಿಸುತ್ತಾರೆ.

"ಅವನು ಬಡವನಾಗಿರಲಿ ಎಂದರೆ ಏನು ಅರ್ಥ? ಹಾಗೆಂದರೆ ಅವನು ದುರ್ಬಲನಾಗಿರಲಿ. ಅವನು ಮೂಢನಾಗಿರಲಿ ಅವನ ಶರೀರವು ರೋಗದ ಮನೆಯಾಗಲೀ. ಕುರೂಪು ಹಾಗೂ ಕೊಳಕಿನ ಮಾದರಿ ಮತ್ತು ಪ್ರದರ್ಶನದ ವಸ್ತುವಾಗಲಿ. ಅವನಿಗೆ 'ರಿಕೆಟ್ಸ್' ರೋಗದ ಮಕ್ಕಳಾಗಲಿ. ಅವನ ಬೆಲೆ ಅಗ್ಗವಾಗಿ ತನ್ನಂತೆಯೇ ಇತರರೂ ಅಗ್ಗವಾದ ಬೆಲೆಗೆ ತಮ್ಮ ಶ್ರಮವನ್ನು ಮಾರಲಿ. ಅವನು ವಾಸಿಸುವ ಸ್ಥಳವು ನಮ್ಮ ಪುರಗಳನ್ನು ಕೊಳಚೆ ಹಾಗೂ ವಿಷಪೂರಿತವಾದ ಗಲ್ಲಿಗಳನ್ನಾಗಿ ಮಾಡಲಿ. ಅವನ ಹೆಣ್ಣುಮಕ್ಕಳು ನಮ್ಮ ತರುಣರ ಸಹವಾಸ ಮಾಡಿ ಅವರಿಗೆ ರೋಗಗಳನ್ನು ಅಂಟಿಸಲಿ. ಅವನ ಗಂಡುಮಕ್ಕಳು ನಮ್ಮ ಪುರುಷತ್ವವನ್ನು ಬಲಹೀನವಾಗಿ ಪರಿವರ್ತಿಸಲಿ. ನಮ್ಮ ಪುರುಷರು ಹೇಡಿಗಳಾಗಿಯೂ, ಕ್ರೂರಿಗಳಾಗಿಯೂ, ಕಪಟಿಗಳಾಗಿಯೂ ಆಗಿ ರಾಜಕೀಯ ಷಂಡತ್ವ ಹೊಂದಲಿ. ಇವೆಲ್ಲದರ ಜೊತೆಗೆ ದಬ್ಬಾಳಿಕೆ ಹಾಗೂ ಪೌಷ್ಟಿಕ ರಹಿತವಾದ ಆಹಾರ ಸೇವನೆಯಿಂದ ಉಂಟಾಗುವ ಪರಿಣಾಮಗಳೆಲ್ಲಾ ಆಗಲಿ. ಯೋಗ್ಯತೆ ಇಲ್ಲದವನು ಇನ್ನೂ ಹೆಚ್ಚಿನ ಯೋಗ್ಯತೆ ಹೀನನಾಗಲಿ. ಯೋಗ್ಯತೆ ಇರುವವನು ಸ್ವರ್ಗದ ಸುಖವನ್ನಲ್ಲ, ಇಲ್ಲಿ, ಭೂಮಿಯ ಮೇಲೆಯೇ ನರಕವನ್ನು ಅನುಭವಿಸಲಿ. ಆದುದರಿಂದ ಅವನು ಬಡವನಾಗಿರಲಿ ಎಂಬುದು ನಿಜಕ್ಕೂ ಬುದ್ಧಿವಂತಿಕೆಯೇ? ಆದ್ದರಿಂದ ಅವನು ದರೋಡೆಕೋರನಾದಲ್ಲಿ, ದುಷ್ಟನಾದಲ್ಲಿ ಕೊಲೆಗಾರನಾದಲ್ಲಿ ಈಗ ಕೊಡುವ ತೊಂದರೆಗಿಂತಲೂ ಹತ್ತುಪಾಲು ಕಡಿಮೆ ತೊಂದರೆಯನ್ನು ಕೊಡುವುದಿಲ್ಲವೆ? ಆದ್ದರಿಂದ ಇಂಥ ಘಾತುಕಗಳಿಗೆ ದೊರೆಯುವ ಶಿಕ್ಷೆಯನ್ನು

ತೊಡೆದು ಹಾಕಿ ಬಡತನವನ್ನೇ ಒಂದು ಭಾರೀ ಪ್ರಮಾಣದ ಅಪರಾಧವೆಂದು ಘೋಷಿಸಿ ವಾರ್ಷಿಕ ಆದಾಯ 365 ಪೌಂಡುಗಳಿಗೆ ಕಡಿಮೆ ಇರುವವರೆಲ್ಲರಿಗೂ ಮರಣದಂಡನೆ ವಿಧಿಸಿದರೆ, ಅರ್ಧ ಬೆತ್ತಲೆ ಹಾಗೂ ಹಸಿವಿನಿಂದ ಕೂಡಿದ ಮಕ್ಕಳಿಗೆ ಬಟ್ಟೆ ಮತ್ತು ಆಹಾರಗಳನ್ನು ಬಲತ್ಕಾರವಾಗಿ ಒದಗಿಸಿದರೆ ಅದೊಂದು ಉತ್ತಮವಾದ ಸುಧಾರಣೆಯಲ್ಲವೇ ?''

ಇದೇ ರೀತಿಯಾಗಿ ಬಡತನವನ್ನು ಶ್ಲಾಘಿಸುವ ಅನೇಕ ಬಂಡವಾಳಶಾಹೀ ಪದ್ಧತಿಯ ಹೊಗಳುಭಟ್ಟರನ್ನೂ, ಧಾರ್ಮಿಕ ಪ್ರವೃತ್ತಿಯನ್ನು ಚುರುಕುಗೊಳಿಸಲು ಹೊರಟಿರುವ ಮುಕ್ತಿಸೇನೆ ಯನ್ನು ಪರಿಹಾಸ್ಯಕ್ಕೆ ಗುರಿಮಾಡುತ್ತಾರೆ.

ಷಾರವರ ನಾಟಕಗಳ ಉಪೋದ್ಘಾತಗಳಲ್ಲಿ ಬಡವರ ಚಿಂತನೆಯು ಚೆನ್ನಾಗಿ ಮನದಟ್ಟಾಗುತ್ತದೆ. ಷಾ ರವರು ಬರ್ಗ್‌ಸನ್‌ನಂತೆ ಸೃಜನಾತ್ಮಕ ವಿಕಾಸವನ್ನು ತಿಳಿಸುತ್ತಾರೆ. ಜೀವನಸತ್ವ (ಲೈಫ್ ಫೋರ್ಸ್) ವು ಮಾನಸಿಕದಾದುದು. ಜೀವನ ಸತ್ವಕ್ಕೆ ತನ್ನದೇ ಆದ ಮಾರ್ಗದರ್ಶನವಿದೆ. ಅದು ಮೂಲತಃ ಸೃಜನಾತ್ಮಕವಾದುದು ಹಾಗೂ ಉದ್ದೇಶಪೂರ್ವಕವಾದುದು. ಅದು ಜೀವನವನ್ನು ಉತ್ತಮ ಮಟ್ಟಕ್ಕೆ ಏರಿಸುತ್ತಾ ಹೋಗುತ್ತದೆ. ಮನುಷ್ಯನ ಬೌದ್ಧಿಕ ಬೆಳವಣಿಗೆಯ ಉತ್ತಮತೆಯನ್ನು ಮುಟ್ಟಲು ಜೀವನ ಸತ್ವವೇ ಕಾರಣ. ನಂತರ ಸಾಮಾನ್ಯ ಮಾನವನು ಅತಿ ಮಾನುಷನಾಗುತ್ತಾನೆ (ಸೂಪರ್ ಮ್ಯಾನ್). ಜೀವನವು ಪರಿಶುದ್ಧವಾದ ಚಿಂತನೆ ಯಾಗುತ್ತದೆ. ಈ ಅಭಿಪ್ರಾಯಗಳೇ ಅವರ ರಾಜಕೀಯ ಚಿಂತನೆಯ ಹಿನ್ನೆಲೆ.

ಬಡತನವೂ, ಬಂಡವಾಳಶಾಹೀ ರಾಜಕೀಯ ವ್ಯವಸ್ಥೆಯೂ ಸೃಜನಾತ್ಮಕ ವಿಕಾಸಕ್ಕೆ ಅಡ್ಡಿಬರುವಂಥ ಸಾಮಾಜಿಕ ಅನಿಷ್ಟಗಳು ಆದ್ದರಿಂದ ಸಮಾಜವಾದವು ಈ ತರಹದ ಅಡ್ಡಿ ಆತಂಕಗಳನ್ನು ನಿರ್ಮೂಲಮಾಡುವ ಸಾಧನವೇ ಹೊರತು ಅದು ಗುರಿಯಲ್ಲ.

ನಿರುದ್ಯೋಗ, ಅಲ್ಪವೇತನ, ಶ್ರೀಮಂತರ ಸೋಮಾರಿತನ, ದರಿದ್ರ ಹಾಳುತನ, ಮುಂತಾದವುಗಳತ್ತ ವಿದ್ಯಾವಂತರ ಗಮನವನ್ನು ಸೆಳೆದು ಸಾಮಾಜಿಕ ಹಾಗೂ ರಾಜಕೀಯಪ್ರಜ್ಞೆ ಯನ್ನು ಜಾಗೃತಗೊಳಿಸಿದ ಕೀರ್ತಿ ಷಾರವರಿಗೆ ಸೇರಿದೆ.

ಆ ಕಾಲದಲ್ಲಿ ಲಂಡನ್ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರದ ಪ್ರಾಧ್ಯಾಪಕರಾದ ಸಿ.ಇ.ಎಂ. ಜೋಡ್‌ರವರು, ಷಾರವರಿಂದ ತಾವು ಸಮಾಜವಾದಿಯಾದರೆಂದು ತಿಳಿಸಿದ್ದಾರೆ. ಆಸ್‌ಬರ್ಟ್ ಸ್ಟಿಲ್‌ವೆಲ್ (Osbert Stilwell)ರ ಪ್ರಕಾರ ವಾಲ್ಟೇರ್ ನಂತರ ಯೂರೋಪಿನ ಅತ್ಯಂತ ಮೇಧಾವಿಯೆಂದರೆ ಜಾರ್ಜ್ ಬರ್ನಾರ್ಡ್ ಷಾ.

ಷಾರವರಂತೆ ಹೆಚ್. ಜಿ ವೇಲ್ಸ್ (1866–1946)ಇಪ್ಪತ್ತನೇ ಶತಮಾನದ ಅಸಾಮಾನ್ಯವಾದ ವ್ಯಕ್ತಿ. ಅವರು ಷಾ ರವರಂತೆ ಕೇವಲ ಅಭಿಪ್ರಾಯಗಳನ್ನು ಪಾತ್ರಧಾರಿಗಳ ಬಾಯಿಯಿಂದ ಆಡಿಸುತ್ತಿರಲಿಲ್ಲ. ಅವರು ಬಹುಮಟ್ಟಿಗೆ ಸಕ್ರಿಯ ವಾದ ಪ್ರತಿವಾದಿಗಳಾಗಿದ್ದರು. ಇವರು ಪ್ರಸಿದ್ಧ ಕಾದಂಬರಿಕಾರರು. ವೈಜ್ಞಾನಿಕ

ಕಾಲ್ಪನಿಕ ಕಾದಂಬರಿಗಳ ಮೂಲಕ ಜನತೆಯನ್ನು ಆಕರ್ಷಿಸಿದ ಇವರು ಕ್ರಮೇಣ ಭಾವನಾತ್ಮಕ ಸಾಹಿತ್ಯದಿಂದ ದೂರಾಗಿ ವಿಷಯಾತ್ಮಕ ಉಪನ್ಯಾಸಗಳ ಕಡೆಗೆ ಲಕ್ಷ್ಯಕೊಟ್ಟರು. ಷಾ ರವರು ಭೌತವಾದಿಯ ನಿರಾಶಾ ತತ್ವಗಳನ್ನು ಪ್ರತಿಬಿಂಬಿಸಿದ್ದರು. ಆದರೆ ವೇಲ್ಸ್‌ರವರು ಆಶಾವಾದಿ. ಮೊದಲನೇ ಜಗತ್ತಿನ ಸಂಗ್ರಾಮ (1914) ಕ್ಕೆ ಪೂರ್ವದಲ್ಲಿ ಮಾನವ ವರ್ಗವು ಪ್ರಗತಿಪಥದಲ್ಲಿರುವುದೆಂದೂ, ಸರಿಯಾದ ಮಾರ್ಗದರ್ಶನ ಸಿಕ್ಕಿದರೆ ಸಂಪೂರ್ಣವಾದ ಸಾಮಾಜಿಕ ಪುನರ್‌ರಚನೆ ಸಾಧ್ಯವೆಂದೂ ನಂಬಿದ್ದರು. ಜೀವನವು ಜೇಡಿಮಣ್ಣಿನಂತೆ ಇರುತ್ತದೆ. ಅದನ್ನು ಇಷ್ಟಬಂದ ರೀತಿಯಲ್ಲಿ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದೇ ಅವರ ಅಭಿಮತವಾಗಿದ್ದಿತು. ಇವರ ದೃಷ್ಟಿಕೋನ ಸಮಾಜವಾದಿ ತತ್ವದ ಆಧಾರದ ಮೇಲೆ ಇದ್ದಿತು. ಷಾ ರವರಂತೆ ಇವರೂ ಫೇಬಿಯನ್ ಸೊಸೈಟಿಯ ಸ್ಥಾಪಕರಲ್ಲೊಬ್ಬರು. ಜಗತ್ತೆಲ್ಲಾ ಒಂದೇ ರಾಷ್ಟ್ರವಾಗಿರಬೇಕು ಎಂಬುದೇ ಇವರ ಅಭೀಷ್ಟ. ಈ ಸ್ಥಿತಿಯುಂಟಾಗಲು ವಿಜ್ಞಾನವು ಬಹಳ ಮಟ್ಟಿನ ಸಹಾಯ ನೀಡುತ್ತದೆ. ಈ ಬಗ್ಗೆ ಅವರು 1901ರಲ್ಲಿ ಬರೆದ 'ಆಂಟಿಸಿಪೇಶನ್ಸ್' ಎಂಬುದನ್ನು ತಾವೇ ವಿಮರ್ಶೆ ಮಾಡುತ್ತಾ ಹೇಳುವ ವಾಕ್ಯಗಳು ಗಮನಾರ್ಹವಾದವು.

"ನನ್ನ ಅಭಿಪ್ರಾಯದಲ್ಲಿ ಇಂದಿನ ಪ್ರಜಾಪ್ರಭುತ್ವ ಹಾಗೂ ರಾಜ್ಯದ ಬಗ್ಗೆ ಇರುವ ತೋರಿಕೆಗಳೆಲ್ಲಾ ವಿಕ್ಟೋರಿಯಾ ಯುಗದ ಅಂತ್ಯ ಕಾಲದ ರಾಜಕೀಯ ಆಷಾಢಭೂತಿತನ. ಇವು ಪ್ರಯೋಜನಕ್ಕೆ ಬಾರದ ಚಿಂತನೆಗಳು''. ಅವರು ಮುಂದೆ ಯಾವರೀತಿ ಯುದ್ಧಗಳು ವಿನಾಶಕಾರಿಯಾಗಬಹುದೆಂಬ ಭೀತಿಯನ್ನೂ ವ್ಯಕ್ತಪಡಿಸಿದರು. 1914 ರಿಂದ ನಡೆದ ಘೋರ ಯುದ್ಧವು ಟ್ರೆಂಚ್‌ವಾರ್ ಫೇರ್, ಸಬ್‌ಮೆರಿನ್ ಯುದ್ಧ, ಗಗನದಲ್ಲಿ ವಿಮಾನಗಳ ಕದನ ಮುಂತಾದವುಗಳನ್ನು ಕಂಡಿತು. ಇದರಿಂದ ವೆಲ್ಸ್‌ರ ಮೇಧಾಶಕ್ತಿ ಎಷ್ಟರಮಟ್ಟಿನದು ಎಂಬುದು ವ್ಯಕ್ತವಾಗುತ್ತದೆ.

1903ರಲ್ಲಿ ಅವರು 'ಮ್ಯಾನ್‌ಕೈಂಡ್ ಇನ್ ಮೇಕಿಂಗ್'' (Mankind in making) ಗ್ರಂಥದಲ್ಲಿ ಸಮಾಜದ ಪುನರ್‌ರಚನೆ ಶಿಕ್ಷಣದ ಮಹತ್ವವನ್ನು ಅವಲಂಬಿಸಿರುವುದೆಂದೂ, ಅದರಿಂದ ರಾಜಕಾರಣಿಗಳೂ, ಸಾರ್ವಜನಿಕ ಗಣ್ಯರೂ, ರಾಜಕೀಯ ಪಕ್ಷಗಳೂ, ಇತ್ತಕಡೆ ವಿಶೇಷ ಗಮನಹರಿಸಬೇಕೆಂದೂ ತಿಳಿಸಿದ್ದಾರೆ.

ಇದಾದನಂತರ ಇವರು 'ಮಾಡರನ್ ಯುಟೋಪಿಯಾ' (Modern Utopia 1905) ದಲ್ಲಿ ಆದರ್ಶವಾದ ಜಗತ್ತಿನ ರೂಪರೇಷೆಗಳನ್ನು ಚಿತ್ರಿಸಿದರು ಸ್ವಲ್ಪ ಕಾಲದಲ್ಲಿಯೇ ಇವರ ಮತ್ತೊಂದು ಪ್ರಸಿದ್ಧ ಗ್ರಂಥ 'ನ್ಯೂ ವರ್ಲ್ಡ್ ಫಾರ್ ಓಲ್ಡ್' (New World for Old–1908) ಪ್ರಸಿದ್ಧಿಗೆ ಬಂದಿತು. ಇದು ಸಮಾಜವಾದಿ ಕಾರ್ಯಕ್ರಮವು ಹೇಗೆ ನವ್ಯವಾದ ಜಗತ್ತಿನ ವ್ಯವಸ್ಥೆ ಮಾಡಬಹುದು ಎಂಬುದನ್ನು ತಿಳಿಸುತ್ತದೆ. ಅಂಥ ವ್ಯವಸ್ಥೆಯಲ್ಲಿ ಯುದ್ಧದ ಭೀತಿ ಇರುವುದಿಲ್ಲ. ಸಾರ್ವಜನಿಕ ಆಡಳಿತದಲ್ಲಿ ವಿಳಂಬನೆಯಾಗಲೀ, ಪಕ್ಷಪಾತವಾಗಲೀ, ಅದಕ್ಷತೆಯಾಗಲೀ ಇರುವುದಿಲ್ಲ.

ಆಹಾರದ ವಿತರಣೆಯಲ್ಲಾಗಲೀ, ಸಂಚಾರಸಾರಿಗೆ ವ್ಯವಸ್ಥೆಯಲ್ಲಾಗಲೀ ಯಾವ
ತೊಂದರೆಯೂ ಇರುವುದಿಲ್ಲ. ಇದೆಲ್ಲವೂ ಮಾನವ ಜನಾಂಗಕ್ಕೆ ಸೇರಿದ್ದು. ಸಂಕುಚಿತ
ರಾಷ್ಟ್ರೀಯತೆಯು ಕೊನೆಗೊಂಡು ವಿಶ್ವಸರ್ಕಾರವು ಎಲ್ಲವನ್ನೂ ಎಲ್ಲರಿಗಾಗಿ ಸದ್ವಿನಿ
ಯೋಗ ಮಾಡುತ್ತದೆ. ಇಂಥ ಅಭಿಪ್ರಾಯಗಳನ್ನು ಈ ಗ್ರಂಥಗಳಲ್ಲಿ ಕಾಣಬಹುದು.
ಇವರ ಇತರ ಕಾದಂಬರಿಗಳಾದ ಟೋನೋಬಂಗೆ (1909), ಹಿಸ್ಟರಿ ಆಫ್ ಮಿಸ್ಟರ್
ಪಾಲಿ (1910) ರಲ್ಲಿಯೂ ಹಣದ ದುಂದುವೆಚ್ಚ, ಹಣದ ಬಗ್ಗೆ ಇರುವ ತೀವ್ರ ಹೆದರಿಕೆ,
ದುರಾಸೆ, ಪರಿಸರದಿಂದ ಉಂಟಾಗುವ ತೀವ್ರ ದುಷ್ಪರಿಣಾಮಗಳನ್ನು ತಿಳಿಸುತ್ತಾರೆ.

1914ರ ಹೊತ್ತಿಗೆ ವೇಲ್ಸರು ಬಹುಮಟ್ಟಿಗೆ ಜನಪ್ರಿಯರಾಗಿದ್ದರು. ಇವರನ್ನು
ಸಾಮಾಜಿಕ ಚಿಂತನಕಾರರೆಂದೂ ಕೆಲವರು, ಮತ್ತೆ ಕೆಲವರು ಬೇಜವಾಬ್ದಾರಿ
ಹರಟೆಮಲ್ಲರೆಂದೂ ಟೀಕೆ ಮಾಡಿದರು. ವೇಲ್ಸರವರ ಪುಸ್ತಕಗಳನ್ನು ಓದುವುದೇ
ಒಂದು ಫ್ಯಾಶನ್ ಆಗಿತ್ತೆಂದು ಇಂಗ್ಲೆಂಡಿನ ಸಮಕಾಲೀನ ಪತ್ರಿಕೆಗಳು ಪ್ರಕಟಿಸಿದವು.

ಎರಡು ಯುದ್ಧಗಳ ನಡುವಣ ಕಾಲದಲ್ಲಿ ವೆಲ್ಸರ ಅನೇಕ ಗ್ರಂಥಗಳನ್ನು
ರಚಿಸಿದರು. ವೈಜ್ಞಾನಿಕ ಕಲ್ಪನಾ ಕಥೆಗಳಿಂದ ಪ್ರಾರಂಭಮಾಡಿ ಮನಸ್ಸನ್ನು ಸೆಳೆದ
ಇವರು ಕ್ರಮೇಣ ತಮ್ಮ ವೈಯಕ್ತಿಕ ಸಾಮಾಜಿಕ ಹಾಗೂ ರಾಜಕೀಯ ಚಿಂತನೆಗಳ
ಪ್ರಚಾರಕರಾಗಿ ಕೊನೆಗಂಡರು. ಇವರ 'ಫೇಟ್ ಆಫ್ ಹೋಮೋಸ್ಯಾಪಿಯಸ್'
ಹಾಗೂ 'ಔಟ್‌ಲೈನ್ ಆಫ್ ವರ್ಲ್ಡ್ ಹಿಸ್ಟರಿ'ಗಳು ಗ್ರಂಥಾಲಯಗಳಲ್ಲಿ ಗೆಜ್ಜಲು
ಹುಳುಗಳ ಆಹಾರವಾಗಿ ಉಳಿದುಕೊಂಡಿವೆ. ಇವರ ಸಾಹಿತ್ಯ ಇವರ ಮರಣಾನಂತರ
ಕೊನೆಗೊಂಡಿತು. ಈಗ ಓದುಗರು ವೇಲ್ಸರ ಕೃತಿಗಳನ್ನು ಓದುತ್ತಿಲ್ಲ. ಅವರ ಗ್ರಂಥಗಳು
ಅವರ ನಂತರ ಪುನಃ ಮುದ್ರಣವಾಗಿಲ್ಲ. ಅವರು ಜೀವಿಸಿದ್ದ ಕಾಲದಲ್ಲಿ ಮಿಲಿಯನ್
ಗಟ್ಟಲೆ ಅಚ್ಚುಹಾಕಲ್ಪಡುತ್ತಿದ್ದ ಗ್ರಂಥಗಳ ಅದೃಷ್ಟ ಇಷ್ಟಕ್ಕೆ ಇಳಿಯಿತು.

ಚೆಸ್ಟರಟನ್ ಮತ್ತು ಬೆಲಕ್‌ರವರು ಪ್ರಸಿದ್ಧ ಪತ್ರಿಕೋದ್ಯಮಿಗಳು ಹಾಗೂ
ಪ್ರಬಂಧಕಾರರು. ಇವರ ರಾಜಕೀಯ ಚಿಂತನೆಯು ಅಷ್ಟು ಪ್ರಸಿದ್ಧಿಯಾದುದಲ್ಲ.

ಇಪ್ಪತ್ತನೆಯ ಶತಮಾನದಲ್ಲಿ ಇನ್ನೂ ಬೇಕಾದಷ್ಟು ಸಾಹಿತಿಗಳು ರಾಜಕೀಯ
ವಿಚಾರಗಳನ್ನು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಆದರೆ ಅವರ ಕೊಡುಗೆಗಳು
ಅಷ್ಟೇನೂ ಬೆಲೆಯುಳ್ಳವುಗಳಲ್ಲ.

ಉಪಸಂಹಾರ

ಇದುವರೆಗೂ ರಾಜ್ಯಶಾಸ್ತ್ರಕ್ಕೆ ಆಂಗ್ಲಸಾಹಿತಿಗಳು ನೀಡಿದ ಕೊಡುಗೆಯನ್ನು
ಸಂಕ್ಷೇಪವಾಗಿ ತಿಳಿಸಲಾಯಿತು. ಆಧುನಿಕ ಕಾಲದಲ್ಲಿ ಬಹಳಷ್ಟು ಮಂದಿ ಸಾಹಿತಿಗಳು
ರಾಜಕೀಯದಲ್ಲಿ ಭಾಗವಹಿಸಿದ್ದಾರೆ. ಅವರ ಕೊಡುಗೆಗಳೂ ಅಪಾರ, ಅಸಾಧಾರಣ.
ಆದರೆ ಚಿಂತನೆಯಲ್ಲಿ ಅಷ್ಟೇನೂ ಮಾರ್ಪಾಡನ್ನು ಕಾಣಲಾಗದು. ಕಾರ್ಲ್‌ಮಾರ್ಕ್ಸ್
ರವರು ಸಮಾಜವಾದವನ್ನು ಮಂಡಿಸಿದ ಮೇಲೆ ಒಂದು ನವೀನ ರಾಜಕೀಯ

ಸಿದ್ಧಾಂತವೇ ಆರಂಭವಾಯಿತು. ಈ ಸಿದ್ಧಾಂತದ ಪ್ರಚಾರವನ್ನು ಬ್ರಿಟನ್ ಹಾಗೂ ಅಮೇರಿಕಾದ ಬರಹಗಳಲ್ಲಿಯೂ ಉಲ್ಲೇಖವಾಗಿರುವುದು ಸಾಮಾನ್ಯ. ದ್ವಿತೀಯ ಮಹಾಯುದ್ಧವಾದ ಮೇಲೆ ವೈಜ್ಞಾನಿಕ ಯುಗವು ಅವತಾರವನ್ನು ತಾಳಿತು. ಇಂದು ಮಾನವವರ್ಗದ ಉಳಿಯುವಿಕೆಗೇ ಭೀತಿಯುಂಟಾಗಿದೆ. ಈ ಪರಿಸರವು ತನ್ನ ಪ್ರಭೆಯನ್ನು ಸಾಹಿತ್ಯದ ಮೇಲೂ ಬೀರಿದೆ. ಇದರಿಂದ ನವ್ಯಸಾಹಿತ್ಯದಲ್ಲಿ ರಾಜಕೀಯ ಪ್ರಸ್ತಾಪಗಳಿದ್ದರೂ, ರಾಜಕೀಯ ಬೌದ್ಧಿಕಚಿಂತನೆ ವಿರಳ.

ಈ ಲೇಖನವು ಒಂದು ಪಕ್ಷಿನೋಟ ಮಾತ್ರ. ಇದರಲ್ಲಿ ಕಾವ್ಯದ ವಿಷಯ ಚರ್ಚೆಮಾಡಲಾಗಿಲ್ಲ. ಕಾವ್ಯದಲ್ಲಿ ರೂಪ, ಶೈಲಿ, ಛಂದಸ್ಸುಗಳಿಗೆ ವಿಶೇಷ ಮನ್ನಣೆ ಯಿರುವುದರಿಂದ ವಿಷಯಾತ್ಮಕ ಚಿಂತನೆ ಕೇವಲ ಗೌಣವಾದವು. ಬೈರನ್, ಷೆಲ್ಲಿಯವರ ಕಾವ್ಯದಲ್ಲಿ ದೇಶಭಕ್ತಿ, ಸ್ವಾತಂತ್ರ್ಯ, ಸಮಾನತೆ, ಮಾನವೀಯತೆ ಮುಂತಾದ ಮೌಲ್ಯಗಳನ್ನು ಭಾವನಾತ್ಮಕವಾಗಿ ನಿರೂಪಿಸಿದ್ದರೂ, ಅವುಗಳಲ್ಲಿ ವಿಚಾರಾತ್ಮಕವಾದ ಚಿಂತನೆ ಕಂಡುಬರುವುದಿಲ್ಲ. ಆದ್ದರಿಂದ ಕಾವ್ಯದಲ್ಲಿ ಕಂಡುಬರುವ ರಾಜಕೀಯ ವಿಷಯಗಳನ್ನು ಬಿಡಲಾಗಿದೆ.

ಸಾಹಿತಿಯ ಕರ್ತವ್ಯ ಬೋಧನೆ ಮಾಡುವುದಲ್ಲ ಅಥವಾ ಉಪದೇಶ ಕೊಡು ವುದಲ್ಲ. ಸಮಾಜದಲ್ಲಿ ಅಥವಾ ರಾಜಕೀಯದಲ್ಲಿ ಕಂಡುಬರುವ ಅಂಕು-ಡೊಂಕು ಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವುಗಳನ್ನು ಯಥಾವತ್ತಾಗಿ ಪ್ರೇಕ್ಷಕರ (ನಾಟಕ ವಾದರೆ) ಅಥವಾ ಓದುಗರ ಮುಂದೆ ಇಡುವುದು. ಇದು ಸರಿಯಾಗಿರಬೇಕಾದರೆ, ಗಾಲ್ಸವರ್ದಿಯವರು ತಿಳಿಸಿರುವಂತೆ ಲೇಖಕರಲ್ಲಿ ಅಂತಃಚಕ್ಷು (ಇನ್‌ಸೈಟ್) ಹಾಗೂ ಅನುಕಂಪ, ಸಹಾನುಭೂತಿ ಇರಬೇಕು ಇತರರ ಅನುಭವಗಳೊಡನೆ ತಾನು ಮಾನಸಿಕ ವಾಗಿ ಮಿಳಿತಗೊಳ್ಳುವ ಶಕ್ತಿ ಸಾಹಸವನ್ನು ಪಡೆದಿರಬೇಕು. ಹೀಗಾದಲ್ಲಿ ನಾಟಕ ವಾಗಲಿ, ಕಾದಂಬರಿಯಾಗಲೀ ಆಕರ್ಷಣೀಯವಾಗುವುದರಲ್ಲಿ ಸಂದೇಹವಿಲ್ಲ.

ಯಾವುದೇ ನಾಡಿನ ರಾಜಕೀಯ ಹಾಗೂ ಸಾಮಾಜಿಕ ಜೀವನವು ಆ ನಾಡಿನ ಸಂಸ್ಕೃತಿಯ ಫಲ. ಸಂಸ್ಕೃತಿಯು ಇತಿಹಾಸ, ಸಂಪ್ರದಾಯ, ಧರ್ಮ ಮುಂತಾದವುಗಳ ಕೂಸು. ರಾಜಕೀಯವು ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಬೆಳೆಸಿಕೊಂಡು ಬರಲು ಇವುಗಳ ಆಧಾರ ಮತ್ತು ಹಿನ್ನೆಲೆ ಅಗತ್ಯ. ಎರವಲು ರಾಜಕೀಯ ಚಿಂತನೆ ಗಳಾಗಲೀ, ಸಂಸ್ಥೆಗಳಾಗಲೀ ವಿರುದ್ಧ ವಾತಾವರಣದಲ್ಲಿ ಬೆಳೆಯಲು ಸಾಧ್ಯವಿಲ್ಲ. ಸಾಹಿತ್ಯವು ಸಾಮಾಜಿಕ ಜೀವನದಲ್ಲಿ ಸಂಸ್ಕೃತಿಯನ್ನು ಬೆಳೆಸಲು, ಪೋಷಿಸಲು ಸಾಧಕ ವಾಗುತ್ತದೆ. ಸಾಧಾರಣವಾಗಿ ನಾವು ತಿಳಿಸಿದ ಆಂಗ್ಲ ಸಾಹಿತ್ಯಕಾರರಾರೂ ತಮ್ಮದೇ ಆದ ಸಿದ್ಧಾಂತವನ್ನು ಮಂಡಿಸಿಲ್ಲ. ಆದರೆ ಪ್ರಚಲಿತ ಸಿದ್ಧಾಂತಗಳನ್ನೂ, ಸಂಸ್ಥೆಗಳನ್ನೂ ವಿಚಾರಮಾಡಿದ್ದಾರೆ, ಟೀಕಿಸಿದ್ದಾರೆ, ವಿಮರ್ಶಿಸಿದ್ದಾರೆ ಮತ್ತು ಅವುಗಳಿಗೆ ಉತ್ತಮ ಮಾರ್ಗದರ್ಶನ ನೀಡಿದ್ದಾರೆ. ಇದೇ ಅವರ ಮುಖ್ಯ ಕೊಡುಗೆ. ಇದನ್ನು ತಿಳಿದಲ್ಲಿ ಸಾಹಿತ್ಯಕ್ಕೂ ರಾಜ್ಯಶಾಸ್ತ್ರಕ್ಕೂ ಇರುವ ಸಂಬಂಧವನ್ನು ತಿಳಿದಂತೆಯೇ ಆಯಿತು.

ಮೂಲ: **ಹೆಚ್. ಜಿ. ವೇಲ್ಸ್**

ಅನು: **ಯಮುನಾಬಾಯಿ ಆರ್. ರಾವ್**

ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಮುಂದುವರೆದುದು)

52. ಯುರೋಪಿನಲ್ಲಿ ರಾಜಕೀಯ ಪ್ರಯೋಗಗಳು ಪಾರ್ಲಿಮೆಂಟು ಗಳು ಮತ್ತು ಪ್ರಜಾಪ್ರಭುತ್ವಗಳ ಯುಗ

ಲ್ಯಾಟಿನ್ ಕ್ರೈಸ್ತಸಂಘ ಒಡೆದುಹೋಗಿ ಪವಿತ್ರ ರೋಮನ್ ಸಾಮ್ರಾಜ್ಯ ಅತ್ಯಂತ ಕ್ಷೀಣಗತಿಗಿಳಿದಿತ್ತು; 16ನೆ ಶತಮಾನದ ಪ್ರಾರಂಭದಿಂದ ಮುಂದಿನ ಯುರೋಪಿನ ಚರಿತ್ರೆ ಕಾಲಕಾಲಕ್ಕೆ ಒದಗಿ ಬರುತ್ತಿದ್ದ ಹೊಸ ಪರಿಸ್ಥಿತಿಗಳಿಗೆ ಮೊದಲಿಗಿಂತ ಉತ್ತಮವಾಗಿ ಹೊಂದುವಂತಹ ಯಾವುದೋ ಒಂದು ಹೊಸ ರೀತಿಯ ಆಡಳಿತ ಪದ್ಧತಿಯ ಕಡೆ ಕತ್ತಲಿನಲ್ಲಿ ತಡಕುತ್ತಾ ಹೋಗುತ್ತಿರುವ ಮಾನವರ ಕಥೆ. ಪ್ರಾಚೀನ ಪ್ರಪಂಚದಲ್ಲಿ ರಾಜವಂಶಗಳು, ಏಕೆ ಆಳುವ ಜನರ ಬುಡಕಟ್ಟು ಮತ್ತು ಭಾಷೆಗಳೇ ಬದಲಾಯಿಸುತ್ತಿದ್ದಿರಬಹುದಾದರೂ ಎಷ್ಟೋ ಕಾಲಮಾನಗಳಲ್ಲಿಯೂ ರಾಜರ ಮತ್ತು ದೇವಾಲಯಗಳ ಮೂಲಕ ನಡೆಯುತ್ತಿದ್ದ ಆಡಳಿತದ ಕ್ರಮ, ಅದಕ್ಕಿಂತ ಹೆಚ್ಚಾಗಿ ಸಾಮಾನ್ಯ ಜನರ ಜೀವನ ಕ್ರಮ ತಕ್ಕಷ್ಟು ಸ್ಥಿರವಾಗಿಯೇ ಇರುತ್ತಿದ್ದುವು. ಹದಿನಾರನೆ ಶತಮಾನದಿಂದ ಈಚಿನ ನೂತನ ಯುರೋಪಿನಲ್ಲಿ ರಾಜವಂಶಗಳ ಬದಲಾವಣೆ ಮುಖ್ಯವಲ್ಲ. ಈಗ ಚಾರಿತ್ರಿಕ ಆಸಕ್ತಿ ಇರುವುದೆಲ್ಲ ರಾಜಕೀಯ ಮತ್ತು ಸಾಮಾಜಿಕ ಸಂಘಟನೆಗಳಲ್ಲಿ ಹೆಚ್ಚು ಹೆಚ್ಚಾಗಿ ನಡೆಯುತ್ತಾ ಬಂದ ಪ್ರಯೋಗಗಳ ವೈವಿಧ್ಯ ಮತ್ತು ವ್ಯಾಪ್ತಿಯಲ್ಲಿ.

ಹದಿನಾರನೆಯ ಶತಮಾನದಿಂದ ಈಚಿನ ಪ್ರಪಂಚದ ರಾಜಕೀಯ ಚರಿತ್ರೆ ಯೆಂದರೆ ಮಾನವ ಕುಲವು ಕೆಲವು ವಿಶಿಷ್ಟವಾದ ಹೊಸ ಪರಿಸ್ಥಿತಿಗಳಿಗೆ ತನ್ನ ರಾಜಕೀಯ ಮಾರ್ಗಗಳನ್ನು ಸರಿ ಹೊಂದಿಸಲು ಬಹುಮಟ್ಟಿಗೆ ಹಾಗೆ ಮಾಡು ತ್ತಿದ್ದೇನೆಂಬ ಅರಿವಿಲ್ಲದೆಯೇ ನಡೆಸಿದ ಪ್ರಯತ್ನ ಎಂದು ಮೊದಲೇ ಹೇಳಲಾಗಿದೆ. ಈ ಪರಿಸ್ಥಿತಿಗಳು ಬರಬರುತ್ತಾ ಹೆಚ್ಚು ಹೆಚ್ಚು ವೇಗದಿಂದ ಒಂದೇ ಸಮನೆ ಬದಲಾಗು

ತ್ತಲೇ ಇದ್ದುದರಿಂದ ಈ ಹೊಂದಾಣಿಕೆಯ ಪ್ರಯತ್ನವನ್ನು ತೊಡಕಾಗಿಸಿತು. ಸಾಮಾನ್ಯವಾಗಿ ಹೀಗಾಗುತ್ತಿದೆಯೆಂಬ ಅರಿವಿಲ್ಲದೆಯೇ ಬಹುಮಟ್ಟಿಗೆ ಮನಸ್ಸಿಲ್ಲದೆಯೇ (ತಾವಾಗಿ ಬದಲಾವಣೆ ಹೊಂದುವುದನ್ನು ಸಾಮಾನ್ಯವಾಗಿ ಮನುಷ್ಯರು ವಿರೋಧಿಸು ತ್ತಾರೆ) ಕಾರ್ಯರೂಪಕ್ಕೆ ತಂದ ಈ ಹೊಂದಾಣಿಕೆಗಳು ಪರಿಸರದ ಬದಲಾವಣೆಗಳಿಗಿಂತ ಮತ್ತು ಹಿಂದೆ ಬೀಳುತ್ತಾ ಹೋಗಿವೆ. ಹದಿನಾರನೆ ಶತಮಾನದಿಂದೀಚಿನ ಮಾನವ ಕುಲದ ಚರಿತ್ರೆಯು ರಾಜಕೀಯ ಮತ್ತು ಸಾಮಾಜಿಕ ಸಂಸ್ಥೆಗಳು ಬರ ಬರುತ್ತಾ ಪರಿಸರಕ್ಕೆ ಹೊಂದಿಕೆಯಿಲ್ಲದವೂ, ಅಹಿತಕರವಾದುವೂ, ಉಪದ್ರವಕಾರಿಗಳೂ ಆಗುತ್ತಿರುವುದನ್ನೂ, ಅದಕ್ಕೆ ಮೊದಲು ಮಾನವ ಜೀವನದಲ್ಲಿ ಯಾವಾಗಲೂ ಅನುಭವಕ್ಕೆ ಬರದಿದ್ದಂತಹ ಆವಶ್ಯಕತೆಗಳು ಮತ್ತು ಸಾಧ್ಯತೆಗಳನ್ನು ಮನಸ್ಸಿನಲ್ಲಿಟ್ಟು ಕೊಂಡು ಮಾನವ ಸಮಾಜಗಳ ಸಮಗ್ರ ವ್ಯವಸ್ಥೆಯನ್ನು ಬುದ್ಧಿಪೂರ್ವಕವಾಗಿ, ಉದ್ದೇಶಪೂರ್ವಕವಾಗಿ ಪುನರ್ರಚಿಸಬೇಕು ಎಂದು ನಿಧಾನವಾಗಿ ಮನಸ್ಸಿಲ್ಲದ ಮನಸ್ಸಿನಿಂದ ಜನರು ಗ್ರಹಿಸಿದ್ದನ್ನೂ ತಿಳಿಸಿಕೊಡುತ್ತದೆ.

ನೂರು ಶತಮಾನಗಳಿಗೂ ಹೆಚ್ಚುಕಾಲ ಪ್ರಾಚೀನ ಪ್ರಪಂಚವನ್ನು ಒಂದು ರೀತಿಯ ಓಟದಲ್ಲಿ ನಡೆಸಿಕೊಂಡು ಹೋಗುತ್ತಿದ್ದ ಆಗಿಂದಾಗ್ಯೆ ಅನಾಗರಿಕ ಧಾಳಿಗಳಿಂದ ಹೊಸ ಚೈತನ್ಯ ಪಡೆಯುತ್ತಿದ್ದ ಚಕ್ರಾಧಿಪತ್ಯ, ಅರ್ಚಕ ವರ್ಗ, ರೈತ ಮತ್ತು ವ್ಯಾಪಾರಿಗಳ ಸಮತೂಕವನ್ನು ಕೆಡಿಸಿದ, ಮಾನವ ಜೀವನ ಪರಿಸ್ಥಿತಿಗಳಲ್ಲಾದ ಈ ಬದಲಾವಣೆಗಳು ಯಾವುವು?

ಮಾನವ ವ್ಯವಹಾರಗಳು ಬಹುಸಂಖ್ಯಾತವೂ ಹೌದು, ಜಟಿಲವಾದುವೂ ಹೌದು, ಹಾಗೆಯೇ ಈ ಬದಲಾವಣೆಗಳೂ ಅನೇಕ ವಿಧದವು. ಆದರೆ ಇವುಗಳಲ್ಲಿ ಮುಖ್ಯವಾದ ಬದಲಾವಣೆಗಳೆಲ್ಲವೂ ಒಂದೇ ಒಂದು ಮೂಲದಿಂದ ಬಂದಂತೆ ಕಾಣುತ್ತವೆ. ವಸ್ತುಗಳ ಸ್ವಭಾವವನ್ನು ಕುರಿತ ಜ್ಞಾನದ ಬೆಳವಣಿಗೆ ಮತ್ತು ಪ್ರಸಾರವೇ ಈ ಮೂಲ. ಈ ಜ್ಞಾನವೃದ್ಧಿ ಮೊದಲು ಬುದ್ಧಿವಂತರಾದ ಜನರ ಸಣ್ಣ ಸಣ್ಣ ಗುಂಪುಗಳಲ್ಲಿ ಪ್ರಾರಂಭ ವಾಗಿ ಮೊದಲು ನಿಧಾನವಾಗಿ ಹರಡಿ ಕಡೆಗೆ ಕಳೆದ ಐನೂರು ವರ್ಷಗಳಲ್ಲಿ ಬಹಳ ಬೇಗನೆ ಸಾಮಾನ್ಯ ಜನರಲ್ಲಿ ಮತ್ತು ಅಧಿಕ ಪ್ರಮಾಣದಲ್ಲಿ ಹರಡಿತು.

ಮಾನವ ಜೀವನದ ಅಂತಃಚೇತನದಲ್ಲಿ ಆದ ಬದಲಾವಣೆಗಳಿಂದಲೂ ಮಾನವ ಪರಿಸರದಲ್ಲಿ ಆಳವಾದ ಬದಲಾವಣೆಗಳಾಗಿವೆ. ಇದೂ ಜ್ಞಾನಾಭಿವೃದ್ಧಿ ಮತ್ತು ಪ್ರಸಾರದೊಡನೆ ನಡೆಯುತ್ತಾ ಬಂದಿದ್ದು ಅದರೊಡನೆ ಸೂಕ್ಷ್ಮ ಸಂಬಂಧ ಪಡೆದಿದೆ. ಕೆಳಮಟ್ಟದ ಹೆಚ್ಚು ಮೂಲಭೂತವಾದ ಆಸೆಗಳು ಮತ್ತು ಅವುಗಳನ್ನು ನಡೆಸಿ ಕೊಳ್ಳುವುದರ ಮೇಲೆಯೇ ನಿಂತಿರುವ ಜೀವನ ಅಷ್ಟು ತೃಪ್ತಿಕರವಲ್ಲ ಎಂದು ಭಾವಿಸಿ ಅದಕ್ಕಿಂತ ವಿಶಾಲವಾದ ಜೀವನದೊಡನೆ ಸಂಬಂಧ ಬೆಳೆಸಿ ಅದರಲ್ಲಿ ಅರ್ಪಣೆಯ ಭಾವದಿಂದ ಭಾಗವಹಿಸಬೇಕೆಂದು ಆಶಿಸುವ ಮನೋಭಾವ ಹೆಚ್ಚು ಹೆಚ್ಚಾಗುತ್ತಾ ಬಂದಿದೆ. ಕಳೆದ ಇಪ್ಪತ್ತು ಶತಮಾನಗಳಿಗಿಂತ ಸ್ವಲ್ಪ ಹೆಚ್ಚಿನ ಕಾಲಾವಧಿಯಲ್ಲಿ

ಪ್ರಪಂಚದಾದ್ಯಂತ ಹರಡಿರುವ ದೊಡ್ಡ ಧರ್ಮಗಳಾದ ಬೌದ್ಧಧರ್ಮ, ಕ್ರೈಸ್ತಧರ್ಮ ಮತ್ತು ಇಸ್ಲಾಂಗಳಲ್ಲೆಲ್ಲಾ ಇರುವ ಸಾಮಾನ್ಯ ಅಂಶ ಇದೇ. ಮಾನವ ಚೇತನವನ್ನು ಕುರಿತು ಈ ಮತಗಳಲ್ಲಿ ಇರುವಂತಹ ಅಂಶಗಳು ಪ್ರಾಚೀನ ಮತಗಳಲ್ಲಿ ಇರಲಿಲ್ಲ. ಮೂಢಾರಾಧನೆ ಮತ್ತು ರಕ್ತಪಾತ, ಅರ್ಚಕರು ಮತ್ತು ದೈವಮಂದಿರಗಳಿಂದ ಕೂಡಿದ್ದ ಪ್ರಾಚೀನ ಕಾಲದ ಧರ್ಮಗಳನ್ನು ಭಾಗಶಃ ಮಾರ್ಪಡಿಸಿ, ಭಾಗಶಃ ಅವುಗಳ ಸ್ಥಾನವನ್ನು ಪಡೆದುಕೊಂಡಿರುವ ಈ ಧರ್ಮಗಳು ಸ್ವಭಾವ ಮತ್ತು ಪರಿಣಾಮಗಳಲ್ಲಿ ಪೂರ್ತಿ ಅವುಗಳಿಗಿಂತ ಭಿನ್ನವಾದ ಶಕ್ತಿಗಳಾಗಿವೆ. ಈ ಧರ್ಮಗಳು ಮನುಷ್ಯರಲ್ಲಿ ಆತ್ಮಗೌರವ ಮತ್ತು ಮಾನವ ವರ್ಗಕ್ಕೆಲ್ಲ ಸಾಮಾನ್ಯವಾದ ಆಗು ಹೋಗುಗಳಲ್ಲಿ ಭಾಗವಹಿಸುತ್ತಿರುವೆವೆಂಬ ಭಾವನೆಗಳು ನಿಧಾನವಾಗಿ ವಿಕಸಿಸುವಂತೆ ಮಾಡಿವೆ. ಮೊದಲಿನ ನಾಗರಿಕತೆಗಳ ಜನರಲ್ಲಿ ಈ ಭಾವನೆಗಳು ಇರುತ್ತಿರಲಿಲ್ಲ.

ರಾಜಕೀಯ ಮತ್ತು ಸಾಮಾಜಿಕ ಜೀವನ ಪರಿಸ್ಥಿತಿಗಳಲ್ಲಿ ಮೊಟ್ಟಮೊದಲ ಭಾರಿಗೆ ಗಮನಾರ್ಹ ಮಾರ್ಪಾಡಾದುದು ಪ್ರಾಚೀನ ನಾಗರಿಕತೆಗಳಲ್ಲಿ ಬರವಣಿಗೆ ಸರಳಗೊಂಡು ಅದರ ಉಪಯೋಗ ಹೆಚ್ಚಾದಾಗ. ಇದರಿಂದ ಬೃಹತ್ ಸಾಮ್ರಾಜ್ಯಗಳು ವಿಶಾಲ ವ್ಯಾಪ್ತಿಯ ರಾಜಕೀಯ ಒಪ್ಪಂದಗಳೂ ಕಾರ್ಯಸಾಧ್ಯವಾಗಿ ಅನಿವಾರ್ಯವೂ ಆದುವು. ಅನಂತರದ ಮುನ್ನಡೆ ವಾಹನಕ್ಕಾಗಿ ಕುದುರೆ, ಬಳಿಕ ಒಂಟೆಗಳನ್ನು ಉಪಯೋಗಿಸತೊಡಗಿದಾಗ, ಚಕ್ರಗಳುಳ್ಳ ವಾಹನಗಳು ಬಳಕೆಗೆ ಬಂದಾಗ, ರಸ್ತೆಗಳು ಹೆಚ್ಚು ಹೆಚ್ಚಾಗಿ ನಿರ್ಮಾಣವಾಗ ತೊಡಗಿದಾಗ, ಭೂಮಿಯಲ್ಲಿನ ಅದುರಿನಿಂದ ತೆಗೆದ ಕಬ್ಬಿಣ ಉಪಯೋಗಕ್ಕೆ ಬಂದು ಯುದ್ಧ ಸಂಬಂಧವಾದ ಕಾರ್ಯದಕ್ಷತೆ ಹೆಚ್ಚಾದಾಗ ಆಯಿತು. ಮುಂದೆ ಸೌಕರ್ಯಯುತವಾದ ಆದರೆ ಅನರ್ಥಕರವಾದ ನಾಣ್ಯವ್ಯವಸ್ಥೆ ಜಾರಿಗೆ ಬಂದು ಸಾಲ, ಒಡೆತನದ ಹಕ್ಕು ಮತ್ತು ವ್ಯಾಪಾರಗಳಲ್ಲಿ ಬದಲಾವಣೆ ಗಳಾದಾಗ ಬಹು ಆಳವಾದ ಆರ್ಥಿಕ ಕ್ಷೋಭೆಗಳುಂಟಾದುವು. ಸಾಮ್ರಾಜ್ಯಗಳ ಗಾತ್ರ ಮತ್ತು ವ್ಯಾಪ್ತಿ ಬೆಳೆದುವು. ಅದಕ್ಕೆ ಅನುಗುಣವಾಗಿ ಮನುಷ್ಯರ ಭಾವನೆಗಳೂ ಬೆಳೆದುವು. ಸ್ಥಳೀಯ ದೇವತೆಗಳು ಮಾಯವಾಗಿ ಬೇರೆ ಬೇರೆ ದೇವತೆಗಳ ಏಕೀಕರಣದ ಯುಗಬಂದು ಪ್ರಪಂಚದ ಬೃಹದ್ಧರ್ಮಗಳ ಉಪದೇಶ ಮೊದಲಾಯಿತು. ಚರಿತ್ರೆ ಮತ್ತು ಭೂಶಾಸ್ತ್ರಗಳ ತರ್ಕಬದ್ಧ ನಿರೂಪಣೆ ಪ್ರಾರಂಭವಾಗಿ ತಾನೆಷ್ಟು ಅಜ್ಞಾನಿ ಎಂದು ಮನುಷ್ಯನಿಗೆ ಮನವರಿಕೆಯಾಗಿ ಜ್ಞಾನಕ್ಕಾಗಿ ಮೊದಲಬಾರಿ ಸುವ್ಯವಸ್ಥಿತ ವಾದ ಅನ್ವೇಷಣೆ ಮೊದಲಾಯಿತು.

ಗ್ರೀಸ್ ಮತ್ತು ಅಲೆಕ್ಸಾಂಡ್ರಿಯಗಳಲ್ಲಿ ಉಜ್ಜ್ವಲವಾಗಿ ಪ್ರಾರಂಭವಾಗಿದ್ದ ವೈಜ್ಞಾನಿಕ ಮುನ್ನಡೆಗೆ ಕೆಲವು ಕಾಲ ಅಡ್ಡಿ ಬಂದಿತು. ಟ್ಯುಟಾನಿಕ್ ಕ್ರೈಸ್ತೇತರರ ದಾಳಿಗಳು, ಮಂಗೋಲ್ ಜನರ ಪಶ್ಚಿಮಾಭಿಮುಖವಾದ ಮುನ್ನಡೆ ಕ್ಷೋಭೆಯಿಂದ ಕೂಡಿದ ಮತೀಯ ಪುನರ್ರಚನೆ, ಹಾಗೂ ದೊಡ್ಡ ಪ್ರಮಾಣದಲ್ಲಿ ಬಂದ ಪಿಡುಗುಗಳಿಂದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಗಳ ಮೇಲೆ ಭಾರೀ ಹೊಡೆತಗಳು ಬಿದ್ದುವು.

ಈ ಘರ್ಷಣೆ ಮತ್ತು ಗೊಂದಲಗಳ ಅವಸ್ಥೆಯಿಂದ ಹೊರಬಿದ್ದ ಹೊತ್ತಿಗೆ ಗುಲಾಮಗಿರಿ ಆರ್ಥಿಕಜೀವನದ ತಳಹದಿಯಾಗಿದ್ದುದು ತಪ್ಪಿಹೋಗಿತ್ತು. ಪ್ರಪ್ರಥಮ ಕಾಗದದ ಕಾರ್ಖಾನೆಗಳು ಸಾಮೂಹಿಕ ಜ್ಞಾನ ಪ್ರಸಾರ ಮತ್ತು ಸಹಕಾರಗಳಿಗೆ ಅನುಕೂಲ ಮಾಡಿಕೊಡುವ ಹೊಸ ಮಾಧ್ಯಮವಾದ ಮುದ್ರಣದ ಕಾಗದವನ್ನು ತಯಾರಿಸಲು ಮೊದಲಿಟ್ಟಿದ್ದವು. ಮೆಲ್ಲಮೆಲ್ಲನೆ ಅಲ್ಲಲ್ಲೀ ಜ್ಞಾನವನ್ನು ಅನ್ವೇಷಿಸುವ ಸುವ್ಯವಸ್ಥಿತ ವೈಜ್ಞಾನಿಕ ಪ್ರಕ್ರಿಯೆ ಮತ್ತೆ ಮೊದಲಾಯಿತು.

ಈಗ, ಹದಿನಾರನೆ ಶತಮಾನದಿಂದ ಮುಂದೆ, ಸಹಜವಾಗಿಯೇ ಈ ವ್ಯವಸ್ಥಿತ ಪ್ರಕ್ರಿಯೆಯ ಅನಿವಾರ್ಯ ಸಹಉತ್ಪನ್ನಗಳಾಗಿ ಹೊಸಹೊಸ ಸಾಧನ ಸಲಕರಣೆಗಳು ಒಂದಾಗುತ್ತಲೊಂದು ಕಾಣಿಸಿಕೊಂಡವು. ಇವು ಮಾನವವ್ಯವಹಾರಗಳು ಮತ್ತು ಅವರಲ್ಲಿ ಪರಸ್ಪರ ಪ್ರತಿಕ್ರಿಯೆಗಳ ಮೇಲೆ ಪ್ರಭಾವ ಬೀರಿದುವು. ಇದೆಲ್ಲದರಿಂದ ಆಗಿದ್ದೆಂದರೆ ಎಲ್ಲ ಕ್ರಿಯೆಗಳ ವ್ಯಾಪ್ತಿ ವಿಸ್ತಾರವಾಯಿತು. ಮಾನವರಲ್ಲಿ ಪರಸ್ಪರ ಉಪಕಾರ ಮತ್ತು ಪರಸ್ಪರ ಅಪಕಾರಗಳು ಎರಡೂ ಹೆಚ್ಚಾಗಿ ಅವರಲ್ಲಿ ಒಂದುಗೂಡಿ ಕೆಲಸ ಮಾಡುವುದೂ ಹೆಚ್ಚಿತು. ಈ ಸಾಧನ ಸಲಕರಣೆಗಳು ಬರಬರುತ್ತಾ ಹೆಚ್ಚು ಹೆಚ್ಚಾಗಿ ಹೊರಬರಲಾರಂಭಿಸಿದುವು. ಮಾನವರ ಚೇತನ ಈ ಪರಿಸ್ಥಿತಿಯನ್ನೆದುರಿಸಲು ಸಿದ್ಧವಾಗಿರಲಿಲ್ಲ. ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಭಾರೀ ಅನಾಹುತಗಳು ನಡೆದು ಮನುಷ್ಯನ ಮನಸ್ಸು ಎಚ್ಚೆತ್ತುಕೊಳ್ಳುವವರೆಗೂ ಈ ರೀತಿಯಾಗಿ ಸಲಕರಣೆಗಳು ಹೆಚ್ಚುತ್ತಿರುವುದರಿಂದ ಉಂಟಾದ ಹೊಸ ಪರಿಸ್ಥಿತಿಯನ್ನೆದುರಿಸಲು ಮಾನವರು ಯಾವ ರೀತಿಯಲ್ಲೂ ಬುದ್ಧಿಪೂರ್ವಕವಾಗಿ ಪ್ರಯತ್ನ ಮಾಡಿದುದು ಚರಿತ್ರಕಾರನಿಗೆ ಕಂಡುಬರುವುದಿಲ್ಲ. ಕಳೆದ ನಾಲ್ಕು ಶತಮಾನಗಳ ಮಾನವ ಕುಲದ ಚರಿತ್ರೆ ಅಪಾಯ, ಸುಸಂದರ್ಭ ಎರಡಕ್ಕೂ ಬುದ್ಧಿಪೂರ್ವಕವಾಗಿ ಸಿದ್ಧನಾಗಿರುವ ಮನುಷ್ಯನ ಚರಿತ್ರೆಯಂತೆ ಇಲ್ಲ. ಅಂದಿನ ಮನುಷ್ಯನನ್ನು ಈ ಕೆಳಕಂಡಂತೆ ಚಿತ್ರಿಸಬಹುದು. ಸೆರೆಮನೆಯಲ್ಲಿರುವ ಒಬ್ಬ ಮನುಷ್ಯ ನಿದ್ರೆಯಲ್ಲಿದ್ದಾನೆ. ಅವನನ್ನು ಬಂಧಿಸಿಟ್ಟಿರುವ, ಅವನಿಗೆ ಆಶ್ರಯವೂ ಆಗಿರುವ ಸೆರೆಮನೆಗೆ ಬೆಂಕಿಬೀಳುತ್ತದೆ. ಆದರೆ ಇವನು ಪೂರ್ತಿಯಾಗಿ ಎಚ್ಚರಗೊಳ್ಳುವುದಿಲ್ಲ. ಈ ಬೆಂಕಿಯ ಶಾಖ ಮತ್ತು ಚಟಪಟ ಶಬ್ದದೊಂದಿಗೆ ತನ್ನದೇ ಆದ ಪ್ರಾಚೀನಕಾಲದ ಅಸಂಬದ್ಧವಾದ ಕನಸುಗಳನ್ನೂ ಅನುಭವಿಸುತ್ತಾ ಹೇಗೆ ಹೇಗೋ ನೆಮ್ಮದಿಯಿಲ್ಲದೆ ಹೊರಳಾಡುತ್ತಾ ಮಲಗಿರುತ್ತಾನೆ.

ಚರಿತ್ರೆಯೆಂದರೆ ವೈಯಕ್ತಿಕ ಜೀವನಗಳ ಕತೆಯಾಗಿರದೆ ಸಮಾಜಗಳ ಕತೆಯಾಗಿರುವುದರಿಂದ ಅದರ ನಿರೂಪಣೆಯಲ್ಲಿ ಸಾರಿಗೆ ಸಂಪರ್ಕಗಳ ಮೇಲೆ ಪ್ರಭಾವ ಬೀರುವ ಸಾಧನ ಸಲಕರಣೆಗಳು ಹೆಚ್ಚಿನ ಸ್ಥಾನಪಡೆಯುತ್ತವೆ. ಹನ್ನೊಂದನೆ ಶತಮಾನದಲ್ಲಿ ನಾವು ಗಮನಿಸಬೇಕಾದ ಮುಖ್ಯವಾದ ಹೊಸ ವಸ್ತುಗಳೆಂದರೆ ಮುದ್ರಣದ ಕಾಗದ ಮತ್ತು ಹೊಸ ಸಾಧನವಾದ ನಾವಿಕರ ದಿಕ್ಸೂಚಿಯನ್ನು ಉಪಯೋಗಿಸುತ್ತಿದ್ದ ಸಮುದ್ರಯಾನಕ್ಕೆ ಸಜ್ಜಾಗಿ ಸಾಗರಗಳನ್ನು ದಾಟಬಲ್ಲದಾಗಿದ್ದ

ಹಡಗು. ಮೊದಲನೆಯದರಿಂದ ಶಿಕ್ಷಣ, ಸಾರ್ವಜನಿಕ ಜ್ಞಾನಪ್ರಸಾರ ಮತ್ತು ರಾಜಕೀಯ ಚಟುವಟಿಕೆಗಳ ಮೂಲಭೂತ ಕಾರ್ಯಗಳ ವೆಚ್ಚ ಕಡಿಮೆಯಾಗಿ ಅವುಗಳ ವ್ಯಾಪ್ತಿ ವಿಶಾಲವಾಗಿ ಆ ಕ್ಷೇತ್ರಗಳಲ್ಲಿ ಕ್ರಾಂತಿಯಾಯಿತು. ಎರಡನೆಯದರಿಂದ ನಮ್ಮ ಗೋಳಾಕೃತಿಯ ಭೂಮಿ ಒಂದಾಯಿತು. ಆದರೆ ಹದಿಮೂರನೆ ಶತಮಾನದಲ್ಲಿಯೇ ಮಂಗೋಲರು ಮೊದಲಭಾರಿಗೆ ಪಶಿಮಕ್ಕೆ ತಂದಿದ್ದ ಬಂದೂಕು ಮತ್ತು ಬಂದೂಕಿನ ಮದ್ದುಗಳ ಸುಧಾರಣೆ ಮತ್ತು ಹೆಚ್ಚುಹೆಚ್ಚಾದ ಉಪಯೋಗಗಳೂ ಇಷ್ಟೇ ಮುಖ್ಯವಾದುವು. ಕೋಟೆಯಿಂದ ಸುತ್ತುವರಿಯಲ್ಪಟ್ಟ ನಗರ ಮತ್ತು ದುರ್ಗಗಳಲ್ಲಿರುತ್ತಿದ್ದ ಪಾಳೆಗಾರರ ಸುರಕ್ಷಿತತೆ ಹೊರಟು ಹೋಯಿತು ಬಂದೂಕುಗಳು ಪಾಳೆಗಾರಿಕೆಯನ್ನು ತೊಡೆದು ಹಾಕಿದುವು. ಕಾನ್‌ಸ್ಟಂಟಿನೋಪಲ್ ಬಂದೂಕುಗಳಿಂದಲೇ ಬಿದ್ದು ಹೋಯಿತು. ಮೆಕ್ಸಿಕೊ ಮತ್ತು ಪೆರು ಭಯೋತ್ಪಾದಕ ಸ್ಪ್ಯಾನಿಷ್ ಬಂದೂಕುಗಳಿಂದ ಪತನ ಹೊಂದಿದುವು

ಹದಿನೇಳನೆ ಶತಮಾನವು ಸುವ್ಯವಸ್ಥಿತವಾದ ವೈಜ್ಞಾನಿಕ ಬರಿಹಗಳ ಪ್ರಕಾಶನವನ್ನೂ ಕಂಡಿತು. ಇದು ಆಗ ಅಷ್ಟು ಮೇಲೆತ್ತಿ ಕಾಣುವ ಸಂಗತಿಯಾಗಿರದಿದ್ದರೂ ಆಶ್ಚರ್ಯರಾಗಿ ತುಂಬಾ ಫಲಕೊಡುವಂತಹುದಾಗಿತ್ತು. ಈ ಅತಿಮುಖ್ಯವಾದ ಮುನ್ನಡೆಯಲ್ಲಿ ಕಾಣುವ ಮುಂದಾಳು ಸರ್ ಫ್ರಾನ್ಸಿಸ್ ಬೇಕನ್ (1511–1626). ಈತನೇ ಮುಂದೆ ಲಾರ್ಡ್‌ವೆರು ಲವ್, ಇಂಗ್ಲೆಂಡಿನ ಲಾರ್ಡ್‌ಚಾನ್ಸೆಲರ್ ಆದನು. ಇವನು ಕೋಲ್ಚೆಸ್ಟರ್'ನಲ್ಲಿದ್ದ ಮತ್ತೊಬ್ಬ ಆಂಗ್ಲ ಪ್ರಾಯೋಗಿಕ ತತ್ತ್ವಶಾಸ್ತ್ರಜ್ಞ ಡಾ|| ಗಿಲ್ ಬರ್ಟ್ (1540–1603)ನ ಶಿಷ್ಯ ಮತ್ತು ಬಹುಶಃ ಅವನ ಚಿಂತನೆಗಳನ್ನು ಪ್ರಸಾರ ಮಾಡಿದವನು. ಮೊದಲನೆ ಬೇಕನ್ನನಂತೆ ಈ ಎರಡನೆ ಬೇಕನ್ನನೂ ಪ್ರಯೋಗ ಮತ್ತು ವೀಕ್ಷಣೆಗಳನ್ನು ಎತ್ತಿ ಹಿಡಿದನು. "ನೂತನ ಅಟ್ಲಾಂಟಿಸ್" ಎಂಬ ಕಾಲ್ಪನಿಕ ರಾಜ್ಯದ ಕತೆಯನ್ನು ಬರೆದನು. ಉತ್ಸಾಹ ತುಂಬಿಸುವ ಯಶಸ್ವಿಯಾದ ಈ ಮಾಧ್ಯಮದ ಮೂಲಕ ಸಂಶೋಧನೆಯ ಮೂಲಕ ಮಹತ್ತಾದ ಸೇವೆ ಆಗುತ್ತದೆ ಎಂಬ ತನ್ನ ಕನಸುಗಳಿಗೆ ಅಭಿವ್ಯಕ್ತಿ ಕೊಟ್ಟನು.

ಇಷ್ಟರಲ್ಲೇ ಸಂಶೋಧನೆ, ಅದರ ಫಲಿತಾಂಶಗಳ ಪ್ರಕಟಣೆ, ಮತ್ತು ಜ್ಞಾನ ವಿನಿಮಯಗಳನ್ನು ಉದ್ದೇಶವನ್ನಾಗಿ ಇಟ್ಟುಕೊಂಡ ಲಂಡನ್ನಿನ ರಾಯಲ್ ಸೊಸೈಟಿ, ಫ್ಲಾರೆಂಟೈನ್ ಸೊಸೈಟಿ, ಬಳಿಕ ಇನ್ನೂ ಇತರ ರಾಷ್ಟ್ರೀಯ ಸಂಸ್ಥೆಗಳು ಜನ್ಮತಾಳಿದುವು. ಈ ವೈಜ್ಞಾನಿಕ ಸಂಸ್ಥೆಗಳು ಅಸಂಖ್ಯಾತ ತಾಂತ್ರಿಕ ಸಾಧನೆಗಳಿಗೆ ಉಗಮಸ್ಥಾನಗಳಾದುವು. ಅಲ್ಲದೆ ಮಾನವನ ಚಿಂತನೆಯನ್ನು ಅನೇಕ ಶತಮಾನಗಳ ಕಾಲ ಅಧೀನದಲ್ಲಿಟ್ಟುಕೊಂಡು ಊನಗೊಳಿಸಿದ್ದ ಅಸಂಗತವಾದ ದೇವತಾಶಾಸ್ತ್ರಾನುಸಾರವಾದ ಪ್ರಪಂಚ ಚರಿತ್ರೆಯನ್ನು ಈ ಸಂಸ್ಥೆಗಳಿಂದ ಉದ್ಭವವಾದ ಟೀಕೆ ಅಳಿಸಿಹಾಕಿತು.

ಹದಿನೇಳನೇ ಶತಮಾನದಲ್ಲೇ ಆಗಲಿ, ಹದಿನೆಂಟನೇ ಶತಮಾನದಲ್ಲಿಯೇ ಆಗಲಿ ಮುದ್ರಣದ ಕಾಗದ ಮತ್ತು ಸಾಗರಗಳನ್ನು ದಾಟಬಲ್ಲ ಹಡಗಿನಷ್ಟು ತಕ್ಷಣದಲ್ಲೇ

ಕಾಂತ್ರಿಕಾರಕವಾದ ಹೊಸ ಸಾಧನಗಳು ಬೇರೆ ಯಾವುವೂ ಹೊರಬರಲಿಲ್ಲವಾದರೂ ವೈಜ್ಞಾನಿಕ ಜ್ಞಾನ ಮತ್ತು ಚೈತನ್ಯ ಒಂದೇ ಸಮನೆ ಸಂಗ್ರಹವಾಗುತ್ತಾ ಹೋಗಿ ಕಡೆಗೆ ಹತ್ತೊಂಬತ್ತನೇ ಶತಮಾನದಲ್ಲಿ ಪೂರ್ಣಫಲ ಕೊಟ್ಟವು. ಭೂಖಂಡಗಳ ಸಂಶೋಧನೆ ಮತ್ತು ಅವುಗಳ ಭೂಪಟಗಳ ತಯಾರಿಕೆ ನಡೆಯುತ್ತಾ ಹೋಯಿತು. ಭೂಪಟಗಳಲ್ಲಿ ಟಾಸ್ಮೇನಿಯ, ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್ ಕಾಣಿಸಿಕೊಂಡವು. ಬ್ರಿಟನ್ನಿನಲ್ಲಿ ಹದಿನೆಂಟನೆ ಶತಮಾನದಲ್ಲಿ ಅದುರಿನಿಂದ ಲೋಹ ಬೇರ್ಪಡಿಸಲು ಕಲ್ಲಿದ್ದಲಿನಿಂದ ಬಂದ ಕೋಕನ್ನು ಬಳಸಲಾರಂಭಿಸಿದರು. ಇದರಿಂದ ಕಬ್ಬಿಣ ಬಹು ಮಟ್ಟಿಗೆ ಅಗ್ಗವಾಯಿತು. ಕಟ್ಟಿಗೆಯು ಇದ್ದಿಲನ್ನು ಬಳಸುತ್ತಿದ್ದಾಗಿಂತಲೂ ದೊಡ್ಡಗಾತ್ರದ ಸಾಮಾನುಗಳನ್ನು ಎರಕ ಹೊಯ್ದು ಉಪಯೋಗಿಸಲು ಸಾಧ್ಯವಾಯಿತು. ಆಧುನಿಕ ಯಂತ್ರಗಳು ಜನ್ಮತಾಳಿದುವು.

ಸ್ವರ್ಗಲೋಕದ ವೃಕ್ಷಗಳಂತೆ ವಿಜ್ಞಾನ ವೃಕ್ಷದಲ್ಲಿಯೂ ಮೊಗ್ಗು, ಹೂವು, ಕಾಯಿಗಳು ಎಲ್ಲವೂ ಏಕಕಾಲದಲ್ಲಿಯೇ ಸದಾ ಬಿಡುತ್ತಿರುತ್ತವೆ. ಹತ್ತೊಂಬತ್ತನೆ ಶತಮಾನಾರಂಭದಿಂದ ವಿಜ್ಞಾನ ವೃಕ್ಷ ನಿಜವಾಗಿಯೂ ಫಲಭರಿತವಾಯಿತು. ಮೊದಲು ಹಬೆಯಂತ್ರ ಮತ್ತು ಉಕ್ಕು, ರೈಲುಗಾಡಿ, ದೊಡ್ಡ ಹಡಗುಗಳು, ಬೃಹತ್ತಾದ ಸೇತುವೆಗಳು ಮತ್ತು ಕಟ್ಟಡಗಳು, ಮಿತಿಯೇ ಇಲ್ಲದಷ್ಟು ಶಕ್ತಿಯುಳ್ಳ ಯಂತ್ರಗಳು, ಮಾನವನ ಭೌತಿಕ ಅವಶ್ಯಕತೆಗಳೆಲ್ಲವೂ ಧಾರಾಳವಾಗಿ ಪೂರೈಕೆಯಾಗುವ ಸಾಧ್ಯತೆ, ಆ ಬಳಿಕ ಇವೆಲ್ಲಕ್ಕಿಂತ ಅದ್ಭುತವಾದ ವಿದ್ಯುತ್ ವಿಜ್ಞಾನದ ನಿಗೂಢ ನಿಧಿಗಳು ಮಾನವರ ಮುಂದೆ ಕಾಣಿಸಿಕೊಂಡವು.

ಹದಿನಾರನೆ ಶತಮಾನದಿಂದ ಈಚಿನ ಮಾನವನ ರಾಜಕೀಯ ಮತ್ತು ಸಾಮಾಜಿಕ ಜೀವನವನ್ನು ತನ್ನನ್ನು ಬಂಧಿಸಿರುವ ಕಾರಾಗೃಹದ ಗೋಡೆಗಳು ಸುತ್ತಲೂ ಉರಿದು ಬೀಳುತ್ತಿರುವಾಗಲೂ ಮಲಗಿಕೊಂಡೆ ಕನಸು ಕಾಣುತ್ತಿರುವ ಕೈದಿಯ ಸ್ಥಿತಿಗೆ ಹೋಲಿಸಿದ್ದೇವೆ. ಹದಿನಾರನೆ ಶತಮಾನದಲ್ಲಿ ಐರೋಪ್ಯ ಚೇತನವು ಇನ್ನೂ ಕಾಥೊಲಿಕ್ ಕ್ರೈಸ್ತ ಸಂಘದ ನೇತೃತ್ವದಲ್ಲಿ ಒಂದುಗೂಡಿರುವ ಪವಿತ್ರ ರೋಮನ್ ಸಾಮ್ರಾಜ್ಯದ ಅಂದರೆ ಲ್ಯಾಟಿನ್ ಚಕ್ರಾಧಿಪತ್ಯದ ಕನಸಿನ ಗುಂಗಿನಲ್ಲಿಯೇ ಇದ್ದಿತು; ಆದರೆ ನಮ್ಮ ವ್ಯಕ್ತಿತ್ವದಲ್ಲಿನ ಯಾವುದೋ ಅದಮ್ಯ ಘಟಕವೊಂದು ನಮ್ಮ ಕನಸುಗಳಲ್ಲಿ ಅತ್ಯಂತ ಅಸಂಬದ್ಧವಾದ, ವಿನಾಶಕರವಾದ ವಿಷಯಗಳನ್ನು ಸೇರಿಸಿಬಿಡುವಂತೆಯೇ ಈ ಕನಸಿನಲ್ಲಿಯೂ ಇಂಗ್ಲೆಂಡಿನ ಎಂಟನೆ ಹೆನ್ರಿ ಮತ್ತು ಮಾರ್ಟಿನ್ ಲೂಥರ್ ಇಬ್ಬರೂ ಕ್ಯಾಥೋಲಿಕ್ ಕ್ರೈಸ್ತ ಸಂಘದ ಏಕತೆಯನ್ನು ಚೂರುಚೂರಾಗಿ ಹರಿದು ಹಾಕುತ್ತಿರುವ ಚಿತ್ರ ಮತ್ತು ಐದನೇ ಚಾರ್ಲ್ಸ್ ಚಕ್ರವರ್ತಿಯ ನಿದ್ದೆಗಣ್ಣಿನ ಮುಖ ಮತ್ತು ಹೊಟ್ಟೆಬಾಕತನಗಳ ಚಿತ್ರಗಳು ಬಲಾತ್ಕಾರದಿಂದ ತೂರಿಬರುತ್ತವೆ.

ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಈ ಸ್ವಪ್ನ ವೈಯಕ್ತಿಕ

ರಾಜಪ್ರಭುತ್ವದ ರೂಪ ಪಡೆಯಿತು. ಹೆಚ್ಚು ಕಡಿಮೆ ಈ ಕಾಲದ ಯೂರೋಪಿನ ಎಲ್ಲ ಭಾಗಗಳ ಚರಿತ್ರೆಗಳೂ ಒಂದೇಕತೆಯ ಭಿನ್ನರೂಪಗಳಂತೆ ಕಂಡುಬರುತ್ತವೆ. ರಾಜಪ್ರಭುತ್ವವನ್ನು ದೃಢಗೊಳಿಸಿ ಅದನ್ನು ಸರ್ವತಂತ್ರಸ್ವತಂತ್ರವನ್ನಾಗಿ ಮಾಡಿ ಅಕ್ಕಪಕ್ಕದ ಅಶಕ್ತ ಪ್ರದೇಶಗಳ ಮೇಲೆ ಅದರ ಅಧಿಕಾರವನ್ನು ಬೆಳೆಸುವುದು, ರಾಜನು ವಸೂಲು ಮಾಡುತ್ತಿದ್ದ ಮಿತಿ ಮೀರಿದ ತೆರಿಗೆಗಳಿಗೆ ಮತ್ತು ತಮ್ಮ ವ್ಯವಹಾರಗಳಲ್ಲಿ ಅವನು ಕೈ ಹಾಕುವುದಕ್ಕೆ ಮೊದ ಮೊದಲು ಜಮೀನುದಾರರಿಂದ, ಬಳಿಕ ವಿದೇಶಗಳೊಡನೆ ವ್ಯಾಪಾರ ಮತ್ತು ಕೈಗಾರಿಕೆಗಳು ಅಭಿವೃದ್ಧಿಯಾದಂತೆ ಬೆಳೆಯುತ್ತಾ ಬಂದ ಹಣವಂತ ವ್ಯಾಪಾರೀ ವರ್ಗದಿಂದ ಪ್ರತಿಭಟನೆ ಎಲ್ಲ ಕಡೆ ಕಂಡು ಬರುತ್ತವೆ. ಎಲ್ಲ ಕಡೆಯೂ ಯಾವುದೇ ಒಂದೇ ಪಕ್ಷ ಪೂರ್ತಿಜಯ ಪಡೆಯಲಿಲ್ಲ. ಒಂದು ಕಡೆ ರಾಜನದು ಮೇಲುಗೈಯಾದರೆ, ಮತ್ತೊಂದು ಕಡೆ ಖಾಸಗಿ ಸ್ವತ್ತಿನ ಶ್ರೀಮಂತ ರಾಜನನ್ನು ಮೀರಿಸಿದನು. ಒಂದು ಸಂದರ್ಭದಲ್ಲಿ ರಾಜ ತನ್ನ ರಾಷ್ಟ್ರದ ಕೇಂದ್ರ ಮತ್ತು "ಸೂರ್ಯ" ನೇ ಆಗಿ ಹೋದರೆ, ಅವನ ರಾಜ್ಯದ ಗಡಿಯಾಚೆ ಪ್ರಬಲವಾದ ವ್ಯಾಪಾರೀ ವರ್ಗದವರು ಪ್ರಜಾತಂತ್ರ ರಾಜ್ಯವನ್ನು ನಡೆಸಿಕೊಂಡು ಹೋಗುತ್ತಿದ್ದರು. ಈ ವಿಶಾಲ ವೈವಿಧ್ಯವನ್ನು ನೋಡಿದರೆ ಆಗಿನ ವಿವಿಧ ಸರ್ಕಾರಗಳು ಅದೆಷ್ಟು ಪ್ರಾಯೋಗಿಕವಾಗಿದ್ದುವು, ಹೇಗೆ ಅಲ್ಲಲ್ಲೇ ತಮ್ಮಷ್ಟಕ್ಕೆ ತಾವೇ ''ಆಕಸ್ಮಿಕ''ಗಳಾಗಿ ಸಂಭವಿಸಿದವು ಎಂದು ತಿಳಿಯುತ್ತದೆ.

ಈ ರಾಷ್ಟ್ರೀಯ ನಾಟಕಗಳೆಲ್ಲದರಲ್ಲೂ ಸಾಮಾನ್ಯವಾಗಿ ಕಂಡು ಬರುವ ವ್ಯಕ್ತಿಯೆಂದರೆ ರಾಜನ ಮಂತ್ರಿ. ಕ್ಯಾಥೋಲಿಕ್ ದೇಶಗಳಲ್ಲಿ ಎಷ್ಟೋವೇಳೆ ಈತ ಒಬ್ಬ ಉನ್ನತ ಧರ್ಮಾಧಿಕಾರಿಯಾಗಿದ್ದು ರಾಜನ ಹಿಂದೆ ಇದ್ದುಕೊಂಡು ಅವನ ಕಾರ್ಯಗಳನ್ನು ನಡೆಸಿಕೊಡುತ್ತಾ ಅತ್ಯಂತ ಅವಶ್ಯ ವ್ಯಕ್ತಿಯೆನಿಸಿ ಆ ಮೂಲಕ ರಾಜನನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುತ್ತಿದ್ದನು.

ಈ ವಿವಿಧ ರಾಷ್ಟ್ರೀಯ ಘಟನಾವಳಿಗಳನ್ನು ವಿವರವಾಗಿ ತಿಳಿಸುವುದು ಈ ಪುಸ್ತಕದ ಅವಕಾಶದಲ್ಲಿ ಸಾಧ್ಯವಿಲ್ಲ. ವ್ಯಾಪಾರಿಗಳಾದ ಹಾಲೆಂಡಿನ ಜನರು ಪ್ರಾಟೆಸ್ಟಂಟರೂ, ಪ್ರಜಾಪ್ರಭುತ್ವವಾದಿಗಳೂ ಆಗಿ ಐದನೆ ಚಾರ್ಲ್ಸ್ ಚಕ್ರವರ್ತಿಯ ಮಗ ಸ್ಪೇನಿನ ಎರಡನೆ ಫಿಲಿಪ್ಪನ ರಾಜ್ಯಭಾರದಿಂದ ಕಳಚಿಕೊಂಡುಬಿಟ್ಟರು. ಇಂಗ್ಲೆಂಡಿನಲ್ಲಿ ಎಂಟನೆಹೆನ್ರಿ ಮತ್ತು ಅವನ ಮಂತ್ರಿ ವುಲ್ಸಿ, ಎಲಿಜಬೆತ್ ರಾಣಿ ಮತ್ತು ಅವಳ ಮಂತ್ರಿ ಬರ್ಲೀ, (Burleigh) ನಿರಂಕುಶ ಪ್ರಭುತ್ವಕ್ಕೆ ತಳಹದಿಹಾಕಿದರು. ಒಂದನೆ ಜೇಮ್ಸ್ ಮತ್ತು ಒಂದನೆ ಚಾರ್ಲ್ಸರ ಮೂರ್ಖತನದಿಂದ ಇದು ಹಾಳಾಗಿ ಹೋಯಿತು. ತನ್ನ ಪ್ರಜೆಗಳಿಗೆ ದ್ರೋಹ ಮಾಡಿದನೆಂದು ಒಂದನೆ ಚಾರ್ಲ್ಸನ ಶಿರಚ್ಛೇದ ಮಾಡಲಾಯಿತು (1649). ಇದು ಯೂರೋಪಿನ ರಾಜಕೀಯ ಚಿಂತನೆಯಲ್ಲಿ ಒಂದು ಹೊಸತಿರುವು. ಹನ್ನೆರಡು ವರ್ಷಕಾಲ (1660ರವರೆಗೆ) ಬ್ರಿಟನ್ ಪ್ರಜಾರಾಜ್ಯವಾಗಿತ್ತು. ಪಾರ್ಲಿಮೆಂಟಿನ ಛಾಯೆಯಿಂದ ಮಬ್ಬುಗವಿದ

ರಾಜಪ್ರಭುತ್ವವು ಮೂರನೆ ಜಾರ್ಜ್ (1760–1820) ಕಷ್ಟಪಟ್ಟು ಅದನ್ನು ಪ್ರಧಾನಸ್ಥಾನಕ್ಕೆ ತಿರುಗಿ ಏರಿಸಲು ಪ್ರಯತ್ನಿಸುವವರೆಗೆ ಅಂತಹ ದೃಢವಾದ ಶಕ್ತಿಯಾಗಿರಲಿಲ್ಲ. ಇವನೂ ಸಹ ಇದರಲ್ಲಿ ಭಾಗಶಃ ಯಶಸ್ವಿಯಾದ ಅಷ್ಟೇ. ಆದೇ ಯೂರೋಪಿನ ರಾಜರಲ್ಲೆಲ್ಲಾ ಫ್ರಾನ್ಸಿನ ರಾಜನು ರಾಜಪ್ರಭುತ್ವವನ್ನು ಪರಿಪೂರ್ಣಗೊಳಿಸುವುದರಲ್ಲಿ ಅತ್ಯಂತ ಹೆಚ್ಚಿನ ಸಾರ್ಥಕತೆಯನ್ನು ಪಡೆದನು. ರಿಷಿಲೂ (1585–1642) ಮತ್ತು ಮಜಾರಿನ್ (1602–61) ಈ ಇಬ್ಬರು ಶ್ರೇಷ್ಠ ಪ್ರಧಾನಿಗಳು ಆ ದೇಶದಲ್ಲಿ ರಾಜನ ಶಕ್ತಿಯನ್ನು ವರ್ಧಿಸಿದರು. ಈ ಕ್ರಿಯೆಗೆ ಗ್ರಾಂಡ್ ಮಾನಾರ್ಕ್ 16ನೆ ಲೂಯಿ ರಾಜನ (1634-1715) ಗಮನಾರ್ಹ ಸಾಮರ್ಥ್ಯ ಮತ್ತು ದೀರ್ಘಾಯುಷ್ಯ ನೆರವಾದುವು.

ಹದಿನಾಲ್ಕನೆಯ ಲೂಯಿ ನಿಜವಾಗಿಯೂ ಯೂರೋಪಿನ "ಮಾದರಿ ದೊರೆ". ತನಗಿದ್ದ ಮಿತಿಗಳಲ್ಲಿ ಅವನು ಅಸಾಧಾರಣ ದಕ್ಷತೆಯುಳ್ಳ ದೊರೆಯಾಗಿದ್ದನು. ಅವನ ಬೃಹದಾಕಾಂಕ್ಷೆ ಇತರ ಕೀಳ್ಮಟ್ಟದ ಆಸೆಗಳಿಗಿಂತ ಪ್ರಬಲವಾಗಿತ್ತು. ಅತಿ ಹುರುಪಿನ ವಿದೇಶಾಂಗ ನೀತಿಯನ್ನು ಅನುಸರಿಸಿ ಕೆಡಕುಮಾಡಿಕೊಂಡು ಈತ ದೇಶವನ್ನು ದಿವಾಳಿತನದ ಕಡೆಗೆ ನಡೆಸಿಕೊಂಡು ಹೋದನು. ಇಷ್ಟೆಲ್ಲ ನಡೆದಾಗ ಈತ ತಳೆದ ಪರಿಷ್ಕೃತ, ಗಾಂಭೀರ್ಯಯುತ ನಡೆಯನ್ನು ಯಾರಾದರೂ ಮೆಚ್ಚಲೇಬೇಕು. ತಕ್ಷಣ ಇವನು ಸಾಧಿಸಬೇಕೆಂದಿದ್ದುದು ಇಷ್ಟು; ಫ್ರಾನ್ಸನ್ನು ಬಲಪಡಿಸಿ ರೈನ್ ಮತ್ತು ಪಿರೆನೀಸ್‌ಗಳವರೆಗೆ ವಿಸ್ತರಿಸಿ ಸ್ಪೇನಿನ ವಶದಲ್ಲಿದ್ದ ನೆದರ್‌ಲ್ಯಾಂಡಿನ ಭಾಗಗಳನ್ನು ವಶಪಡಿಸಿಕೊಳ್ಳಬೇಕು. ಇವನ ದೂರದ ಆಸೆ ಪುನರ್ನಿರ್ಮಿತವಾಗುವ ಪವಿತ್ರ ರೋಮನ್ ಸಾಮ್ರಾಜ್ಯಕ್ಕೆ ಫ್ರಾನ್ಸಿನ ದೊರೆಗಳು ಷಾರ್ಲಮನ್ನನ ಉತ್ತರಾಧಿಕಾರಿಗಳಾಗುವ ಸಾಧ್ಯತೆಯನ್ನು ಎದುರು ನೋಡುತ್ತಿತ್ತು. ಯುದ್ಧಕ್ಕಿಂತಲೂ ಬಹುಮಟ್ಟಿಗೆ ಲಂಚಕೋರತನವನ್ನೇ ಇವನು ಮುಖ್ಯವಾಗಿ ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಉಪಯೋಗಕ್ಕೆ ತಂದನು. ಇಂಗ್ಲೆಂಡಿನ ಎರಡನೆ ಚಾರ್ಲ್ಸ್‌ನಿಗೆ ಇವನಿಂದ ಹಣಸಂದಿತ್ತು. ಈ ಸದ್ಯದಲ್ಲೇ ಚಿತ್ರಿಸಲಿರುವ ಪೋಲೆಂಡಿನ ಶ್ರೀಮಂತರಲ್ಲಿ ಅನೇಕರು ಇವನ ಹಂಗಿನಲ್ಲಿದ್ದರು. ಇವನ ಹಣ, ಸರಿಯಾಗಿ ಹೇಳುವುದಾದರೆ ಫ್ರಾನ್ಸಿನ ತೆರಿಗೆದಾರರ ಹಣ ಎಲ್ಲಕಡೆಗೆ ಹೋಗುತ್ತಿತ್ತು. ಆದರೆ ಇವನ ಪ್ರಧಾನ ಹವ್ಯಾಸ ವೈಭವಯುತ ಜೀವನವಾಗಿತ್ತು. ದಿವಾನ್ ಖಾನೆಗಳು, ಮೊಗಸಾಲೆಗಳು, ಕನ್ನಡಿಗಳು, ಅಂತಸ್ತುಗಳಾಗಿ ರಚಿಸಿದ ಹೂ ತೋಟಗಳು, ನೀರಿನ ಚಿಲುಮೆಗಳು, ಉದ್ಯಾನವನಗಳು ಇತ್ಯಾದಿಗಳಿಂದ ಕೂಡಿದ ವರ್ಸೈನ ಭಾರೀ ಅರಮನೆ ಪ್ರಪಂಚದಲ್ಲೆಲ್ಲಾ ಮೆಚ್ಚುಗೆಯನ್ನೂ ಮಾತ್ಸರ್ಯವನ್ನೂ ಗಳಿಸಿತು.

ಜಗತ್ತಿನಲ್ಲೆಲ್ಲಕಡೆಯೂ ಇವನನ್ನು ಅನುಕರಿಸಲು ಪ್ರಾರಂಭಿಸಿದರು. ಯೂರೋಪಿನ ಎಲ್ಲ ದೊರೆಗಳು ಮತ್ತು ಶ್ರೀಮಂತರು ತಮ್ಮ ಪ್ರಜೆಗಳನ್ನು ಮತ್ತು ತಮ್ಮ ಹಣದ ಅನುಕೂಲಗಳನ್ನು ಎಷ್ಟರಮಟ್ಟಿಗೆ ಮೀರಿಹೋಗಬಹುದೋ ಅಷ್ಟು

ಏರಿ ತಮ್ಮದೇ ಆದ ವರ್ಸೈಗಳನ್ನು ಕಟ್ಟಲು ಮೊದಲಿಟ್ಟರು. ಎಲ್ಲೆಲ್ಲಿಯೂ ಶ್ರೀಮಂತವರ್ಗದವರು ತಮ್ಮ ಅರಮನೆಗಳನ್ನು ಈ ಹೊಸಮಾದರಿಯನ್ನು ಅನುಕರಿಸಿ ತಿರುಗಿ ಕಟ್ಟಿದರು ಅಥವಾ ವಿಸ್ತರಿಸಿದರು. ಸುಂದರವಾದ, ವೈವಿಧ್ಯಪೂರ್ಣವಾದ ಪೀಠೋಪಕರಣಗಳು ಮತ್ತು ಬಟ್ಟೆಗಳನ್ನು ಮಾಡುವ ಕೈಗಾರಿಕೆ ಬೆಳೆಯಿತು. ಭೋಗಸಾಮಗ್ರಿಗಳಿಗೆ ಸಂಬಂಧಿಸಿದ ಕಲೆಗಳು—ಅಲಬಾಸ್ಟರ್ ಶಿಲ್ಪ, ಗಿಲೀಟು ಮಾಡಿದ ಮರಗೆಲಸ, ಪಿಂಗಾಣಿ ಸಾಮಾನುಗಳು, ಲೋಹದ ಕೆಲಸ, ಸಂಗೀತ, ಭವ್ಯವಾದ ವರ್ಣಚಿತ್ರಣ, ಚರ್ಮದ ಕೆಲಸ, ಸುಂದರವಾದ ಮುದ್ರಣ, ಪುಸ್ತಕಗಳ ರಟ್ಟುಕಟ್ಟುವಿಕೆ, ಅಂದವಾದ ಪಿಂಗಾಣಿಯ ಊಟದ ಪಾತ್ರೆಗಳು, ಒಳ್ಳೆಯ ಮದ್ಯಗಳು—ಇವುಗಳ ತಯಾರಿಕೆ—ಎಲ್ಲ ಕಡೆ ಅಭಿವೃದ್ಧಿಯಾದುವು. ವರ್ಸೈನ ಕನ್ನಡಿಗಳು ಮತ್ತು ಉತ್ಕೃಷ್ಟ ಪೀಠೋಪಕರಣಗಳ ನಡುವೆ ಪೌಡರ್ ಹಾಕಿದ ಎತ್ತರವಾದ ಕೃತಕತಲೆಗೂದಲನ್ನು ಧರಿಸಿ ರೇಷ್ಮೆ ಮತ್ತು ಜರಿತೊಡಿಗೆಗಳನ್ನು ತೊಟ್ಟು, ಎತ್ತರವಾದ ಕೆಂಪುಬಣ್ಣದ ಹಿಮ್ಮಡಿಗಳನ್ನುಳ್ಳ ಪಾದರಕ್ಷೆಗಳನ್ನು ಮೆಟ್ಟಿಕೊಂಡು ಆಶ್ಚರ್ಯಕರವಾದ ಬೆತ್ತಗಳನ್ನು ಆನಿಕೆಯಾಗಿಟ್ಟುಕೊಂಡು ಓಡಾಡುತ್ತಿದ್ದ ವಿಚಿತ್ರವಾದ "ಸಭ್ಯಮಹನೀಯ''ರುಗಳಿರುತ್ತಿದ್ದರು. ಪೌಡರ್ ಹಾಕಿದ ಕೃತಕ ತಲೆಗೂದಲಿನ ಗೋಪುರಗಳನ್ನು ತಲೆಯ ಮೇಲೆ ಧರಿಸಿ ತಂತಿಗಳ ಮೇಲೆ ಹರಡಿದ ವಿಶಾಲವಾದ ರೇಷ್ಮೆ ಮತ್ತು ಸ್ಯಾಟಿನುಗಳ ಲಂಗಗಳನ್ನು ಧರಿಸಿದ ''ಸಭ್ಯ ಮಹಿಳೆಯರು'' ಇವರಿಗಿಂತಲೂ ಆಶ್ಚರ್ಯಕರವಾಗಿರುತ್ತಿದ್ದರು. ಇವರೆಲ್ಲರ ಮಧ್ಯೆ ದೊಡ್ಡ ಮನುಷ್ಯ ಲೂಯಿ—"ಪ್ರಪಂಚದ ಸೂರ್ಯ'' ನಾಟಕೀಯವಾಗಿ ಓಡಾಡಿಕೊಂಡಿರುತ್ತಿದ್ದನು. ಇವನಿಗೆ ತನ್ನ ವೈಭವದ ಹೊಂಬಿಸಿಲು ಹೋಗಿಮುಟ್ಟದೆಯೇ ಇರುವ ಕೆಳಮಟ್ಟದ ಕತ್ತಲಿನ ಪರಿಸರದಿಂದ ತಮ್ಮನ್ನು ನೋಡುತ್ತಿದ್ದ ಮುನಿಸಿನಿಂದ ಬಿಗಿದುಕೊಂಡಿರುತ್ತಿದ್ದ ಕಹಿಮನಸ್ಸಿನ ಬಡವರ ಅರಿವೇ ಇರಲಿಲ್ಲ.

ರಾಜಪ್ರಭುತ್ವಗಳ ಮತ್ತು ಪ್ರಾಯೋಗಿಕ ರಾಜ್ಯಾಡಳಿತಗಳ ಈ ಕಾಲದುದ್ದಕ್ಕೂ ಜರ್ಮನ್ ಜನರಲ್ಲಿ ರಾಜಕೀಯ ಒಡಕು ಇದ್ದಿತು. ಅನೇಕ ಶ್ರೀಮಂತರು ಮತ್ತು ಆಶ್ರಿತರಾಜರು ಬೇರೆಬೇರೆ ಪ್ರಮಾಣಗಳಲ್ಲಿ ವರ್ಸೈನ ವೈಭವವನ್ನು ತಮ್ಮ ತಮ್ಮ ಆಸ್ಥಾನಗಳಲ್ಲಿ ಕಾಪಿಹೊಡೆಯುತ್ತಿದ್ದರು. ಜರ್ಮನರು ಸ್ವೀಡನ್ನುಗಳ ನಡುವೆ ಬದಲಾಯಿಸುತ್ತಲೇ ಇದ್ದ ರಾಜಕೀಯ ಸವಲತ್ತುಗಳಿಗಾಗಿ ನಡೆದ ವಿನಾಶಕಾರೀ ಬಡಿದಾಟವಾದ ಮೂವತ್ತು ವರ್ಷಗಳ ಯುದ್ಧವು ಜರ್ಮನಿಯ ಕಸುವನ್ನು ಒಂದು ಶತಮಾನದ ಕಾಲ ಹೀರಿತು. ವೆಸ್ಟ್‌ಫೇಲಿಯದ ಕರಾರಿನ (1643) ಪ್ರಕಾರ ನಿರ್ಧರಿಸಲಾದ ಯೂರೋಪಿನ ಭೂಪಟವನ್ನು ನೋಡಿದರೆ ಆ ಚೂರು ಬಟ್ಟೆಗಳನ್ನು ಸಿಕ್ಕಂತೆ ಜೋಡಿಸಿ ಹೊಲಿದ ಕೌದಿಯಂತಿದ್ದ ಯೂರೋಪಿನಲ್ಲಿ ಆ ಯುದ್ಧವು ಪರ್ಯವಸಾನವಾಯಿತೆಂದು ತಿಳಿಯುತ್ತದೆ. ಅಲ್ಲಿ ಪಾಳೆಯಪಟ್ಟುಗಳು, ಜಹಗೀರುಗಳು, ಸ್ವತಂತ್ರ ಪ್ರಭುತ್ವಗಳು ಇತ್ಯಾದಿಗಳು ಕೆಲವು ಭಾಗಶಃ ಚಕ್ರಾಧಿ

ಪತ್ಯದೊಳಗೂ ಭಾಗಶಃ ಹೊರಗೂ ಇರುವುದು ಕಾಣಬರುತ್ತವೆ. ಸ್ವೀಡನ್ನು ಜರ್ಮನಿಯೊಳಗೆ ಬಹುದೂರ ಚಾಚಿಕೊಂಡಿತ್ತು. ಚಕ್ರಾಧಿಪತ್ಯದ ಒಳಗೆ ಇದ್ದು ಕೆಲವು ತುಂಡು ಪ್ರದೇಶಗಳನ್ನು ಬಿಟ್ಟರೆ ಫ್ರಾನ್ಸ್ ರೈನ್ ನದಿಗೆ ದೂರದಲ್ಲೇ ಇದ್ದಿತು. ಈ ತೇಪೆ ಕೆಲಸದೊಳಗಿನಿಂದ ಪ್ರಷ್ಯ ಸಂಸ್ಥಾನವು—1701ರಲ್ಲಿ ಇದ್ದ ಒಂದು ರಾಜ್ಯವಾಯಿತು—ಒಂದೇ ಸಮನೆ ಪ್ರಮುಖ ಸ್ಥಾನಕ್ಕೆ ಏರಿ ವಿಜಯಪ್ರದ ವಾದ ಯುದ್ಧಗಳ ಸರಣಿಯಲ್ಲಿ ಪಾಲುಗೊಂಡಿತು. ಪ್ರಷ್ಯದ ಫ್ರೆಡರಿಕ್ ಮಹಾಶಯ (1740-1786) ಪಾಟ್ಸ್‌ಡಾಮ್‌ನಲ್ಲಿ ತನ್ನದೇ ಒಂದು ವರ್ಸೈಯನ್ನು ನಡೆಸುತ್ತಿದ್ದನು. ಅವನ ಆಸ್ಥಾನದವರು ಫ್ರೆಂಚ್ ಮಾತಾಡುತ್ತಿದ್ದರು, ಫ್ರೆಂಚ್ ಸಾಹಿತ್ಯವನ್ನು ಓದುತ್ತಿದ್ದರು, ಫ್ರೆಂಚ್ ರಾಜನ ಸಂಸ್ಕೃತಿಯೊಡನೆ ಪೈಪೋಟಿ ನಡೆಸುತ್ತಿದ್ದರು.

1714ರಲ್ಲಿ ಹ್ಯಾನೋವರಿನ ಆಯ್ಕೆದಾರನು ಇಂಗ್ಲೆಂಡಿನ ರಾಜನಾದನು. ಚಕ್ರಾಧಿಪತ್ಯದ ಒಳಗೆ ಅಷ್ಟು ಹೊರಗೆ ಅಷ್ಟು ಇದ್ದ ಪ್ರಭುತ್ವಗಳ ಪಟ್ಟಿಗೆ ಹೀಗೆ ಇನ್ನೊಂದು ಪ್ರಭುತ್ವ ಸೇರಿತು.

ಐದನೆಯ ಚಾರ್ಲ್ಸನ ಸಂತತಿಯವರಲ್ಲಿ ಆಸ್ಟ್ರಿಯದಲ್ಲಿದ್ದವರಿಗೆ ಚಕ್ರವರ್ತಿಯೆಂಬ ಹೆಸರು ಉಳಿಯಿತು ಸ್ಪೇನಿನಲ್ಲಿದ್ದವರಿಗೆ ಸ್ಪೇನು ಉಳಿಯಿತು. ಆದರೆ ಇಷ್ಟು ಹೊತ್ತಿಗೆ ತಿರುಗಿ ಪೂರ್ವದಿಕ್ಕಿನಲ್ಲಿ ಒಬ್ಬ ಚಕ್ರವರ್ತಿಯಿದ್ದನು. ಕಾನ್‌ಸ್ಟಂಟಿನೋಪಲ್ಲಿನ ಪತನವಾದ ಮೇಲೆ (1453) ಮಾಸ್ಕೊವಿನ ಗ್ರಾಂಡ್‌ಡ್ಯೂಕ್ ಇವಾನ್ ಮಹಾಶಯನು (1462-1505) ಬೈಜಾಂಟೈನಿನ ಸಿಂಹಾಸನಕ್ಕೆ ತಾನೇ ಉತ್ತರಾಧಿಕಾರಿಯೆಂದು ಘೋಷಿಸಿ ಬೈಜಾಂಟೈನಿನ ಎರಡುತಲೆ ಹದ್ದಿನ ಲಾಂಛನವನ್ನು ತಾನೂ ಇಟ್ಟುಕೊಂಡನು. ಇವನ ಮೊಮ್ಮಗ ನಾಲ್ಕನೆ ಇವಾನ್—"ಭಯಂಕರನಾದ ಇವಾನ್"—ಚಕ್ರವರ್ತಿಗೆ ಸಲ್ಲತಕ್ಕ ಸೀಸರ್ (ತ್ಸಾರ್) ಎಂಬ ಬಿರುದನ್ನು ಇಟ್ಟುಕೊಂಡನು. ಆದರೆ ಹದಿನೇಳನೆ ಶತಮಾನದ ಉತ್ತರಾರ್ಧವರೆಗೂ ಯುರೋಪಿನ ಜನರಿಗೆ ರಷ್ಯಾ ಏಷ್ಯಕ್ಕೆ ಸಂಬಂಧಿಸಿದ ಅತಿದೂರದಲ್ಲಿರುವ ದೇಶ ಎನ್ನಿಸುವುದು ತಪ್ಪಲಿಲ್ಲ. ಜಾರ್ ಪೀಟರ್—ಪೀಟರ್ ಮಹಾಶಯ (1682-1785)—ರಷ್ಯಾವನ್ನು ಪಾಶ್ಚಾತ್ಯ ವ್ಯವಹಾರಗಳ ರಂಗಕ್ಕೆ ತಂದನು. ತನ್ನ ಸಾಮ್ರಾಜ್ಯಕ್ಕಾಗಿ ನೇವಾನದಿಯ ದಡದಮೇಲೆ ಪೀಟರ್ಸ್‌ಬರ್ಗ್ ಎಂಬ ಹೊಸ ರಾಜಧಾನಿಯನ್ನು ಇವನು ಕಟ್ಟಿದನು. ಈ ಪಟ್ಟಣ ರಷ್ಯಾ ಮತ್ತು ಯುರೋಪುಗಳ ನಡುವೆ ತೆರೆದ ಬಾಗಿಲಾಯಿತು. ಇದಕ್ಕೆ ಹದಿನೆಂಟು ಮೈಲಿಯಾಚೆ ಪೀಟರ್ ಹಾಫ್‌ನಲ್ಲಿ ತನ್ನ "ವರ್ಸೈ"ಯನ್ನು ಫ್ರೆಂಚ್ ವಾಸ್ತುಶಿಲ್ಪಿಯೊಬ್ಬನನ್ನು ನೇಮಿಸಿ ನಿರ್ಮಿಸಿಕೊಂಡನು. ಮಹಾರಾಜ ಪ್ರಭುತ್ವ (Grand Monarchy)ಕ್ಕೆ ಅವಶ್ಯಕವಾದ ಎಲ್ಲ ವಸ್ತುಗಳೂ—ಹಂತಹಂತವಾಗಿ ರಚಿಸಿದ ಹೂತೋಟ, ನೀರಿನ ಚಿಲುಮೆಗಳು, ಕೃತಕ ಜಲಪಾತಗಳೂ, ಚಿತ್ರಶಾಲೆ, ದೊಡ್ಡ ತೋಟ—ಇಲ್ಲಿದ್ದುವು. ಪ್ರಷ್ಯದಂತೆ ಇಲ್ಲಿಯೂ ಫ್ರೆಂಚ್ ಆಸ್ಥಾನದ ಭಾಷೆಯಾಯಿತು.

ಆಸ್ಟ್ರಿಯ, ಪ್ರಷ್ಯ ಮತ್ತು ರಷ್ಯಗಳ ನಡುವೆ ಇದ್ದು ನೆಮ್ಮದಿಯನ್ನೇ ಕಾಣದಿದ್ದ ಪೋಲೆಂಡ್ ರಾಜ್ಯದಲ್ಲಿ ಸರಿಯಾದ ರಾಜಕೀಯ ವ್ಯವಸ್ಥೆಯಿರಲಿಲ್ಲ. ಅಲ್ಲಿ ಅನೇಕ ಭಾರೀ ಜಮೀನ್ದಾರರುಗಳಿದ್ದು ಇವರು ಒಬ್ಬ ರಾಜನನ್ನು ಚುನಾಯಿಸುತ್ತಿದ್ದರು. ಆದರೆ ತಮ್ಮ ತಮ್ಮ ವೈಯಕ್ತಿಕ ವೈಭವಕ್ಕೆ ಕುಂದು ಬರುವುದೆಂಬ ಸಂಶಯದಿಂದ ಈ ರಾಜನಿಗೆ ಹೆಸರಿನಲ್ಲಿ ಮಾತ್ರ ರಾಜತ್ವ ಇರುವಂತೆ ನೋಡಿಕೊಳ್ಳುತ್ತಿದ್ದರು. ಈ ರಾಜ್ಯ ಸ್ವತಂತ್ರವಾಗಿದ್ದು ತನಗೆ ಮಿತ್ರರಾಜ್ಯವಾಗಿರಲಿ ಎಂದು ಫ್ರಾನ್ಸ್ ಎಷ್ಟು ಪ್ರಯತ್ನಿಸಿದರೂ ತನ್ನ ಸುತ್ತಲೂ ಇದ್ದ ಮೂರು ರಾಜ್ಯಗಳಲ್ಲಿ ಹಂಚಿಹೋಗುವುದು ಪೋಲೆಂಡಿನ ಅದೃಷ್ಟದಲ್ಲಿ ಬರೆದಿತ್ತು. ಸ್ವಿಟ್ಸರ್ಲೆಂಡ್ ಗಣತಂತ್ರ ಆಡಳಿತವಿದ್ದ ಜಿಲ್ಲೆಗಳ ಸಮೂಹವಾಗಿತ್ತು. ವೆನಿಸ್ ಪ್ರಜಾಪ್ರಭುತ್ವವಾಗಿತ್ತು. ಜರ್ಮನಿಯ ಅಧಿಕ ಭಾಗದಂತೆ ಇಟಲಿ ಅಮುಖ್ಯರಾದ ಡ್ಯೂಕ್‌ಗಳು ಮತ್ತು ರಾಜರ ನಡುವೆ ಹಂಚಿಹೋಗಿತ್ತು. ತನಗೆ ಸೇರಿದ ರಾಜ್ಯಗಳಲ್ಲಿ ಪೋಪ್ ಒಬ್ಬ ರಾಜನಂತೆ ಆಳಿಕೊಂಡಿದ್ದನು, ಕ್ರೈಸ್ತ ಪ್ರಪಂಚದ ಒಳಿತನ್ನು ಕುರಿತು ಪ್ರಪಂಚಕ್ಕೆ ಬೋಧನೆಮಾಡಲು ಹೊರಟರೆ ಅಥವಾ ರಾಜರು ಮತ್ತು ಅವರ ಪ್ರಜೆಗಳ ಮಧ್ಯೆ ತಲೆಹಾಕಿದರೆ ಕ್ಯಾಥೊಲಿಕರಾಗಿ ಉಳಿದುಕೊಂಡಿದ್ದ ರಾಜರೂ ಸಹ ತನಗೆ ಅವಿಧೇಯರಾಗಿಬಿಡಬಹುದೆಂಬ ಭಯ ಅವನಿಗಿತ್ತು. ನಿಜ ಹೇಳುವುದಾದರೆ ಆಗ ಯುರೋಪಿಗೆಲ್ಲ ಸಾಮಾನ್ಯವಾದ ರಾಜಕೀಯ ಚಿಂತನೆ ಯಾವುದೂ ಇರಲೇ ಇಲ್ಲ. ಯುರೋಪ್ ಸಂಪೂರ್ಣವಾಗಿ ಭಿನ್ನಾಭಿಪ್ರಾಯಗಳು ಮತ್ತು ವೈವಿಧ್ಯಗಳ ಬಿಡಾಗಿತ್ತು.

ಸರ್ವಸ್ವತಂತ್ರರಾದ ಈ ಎಲ್ಲಾ ರಾಜರೂ ಮತ್ತು ರಾಜ್ಯಗಳೂ ಒಬ್ಬರಮೇಲೊಬ್ಬರು ತಮ್ಮ ತಮ್ಮ ಪ್ರತಿಷ್ಠೆಯನ್ನು ಬೆಳಸಲು ಹಂಚಿಕೆ ಹೂಡುತ್ತಿದ್ದರು. ಪ್ರತಿರಾಜ್ಯವೂ ತನ್ನ ನೆರೆರಾಜ್ಯಗಳ ಮೇಲೆ ಆಕ್ರಮಣಪರವಾದ, ಆಕ್ರಮಣವೇ ಉದ್ದೇಶವಾದ ಮೈತ್ರಿಗಳನ್ನು ಬೆಳೆಸುವ ವಿದೇಶಾಂಗನೀತಿಯನ್ನು ಪಾಲಿಸುತ್ತಿತ್ತು. ಯುರೋಪಿಯನ್ನರಾದ ನಾವು ವಿಧವಿಧದ ಸರ್ವತಂತ್ರ ಸ್ವತಂತ್ರ ರಾಜ್ಯಗಳ ಆ ಯುಗದ ಕಡೆಯ ಅವಸ್ಥೆಯಲ್ಲಿ ಇನ್ನೂ ಬಾಳುತ್ತಿದ್ದೇವೆ, ಆ ಯುಗ ಜನ್ಮವಿತ್ತ ದ್ವೇಷ ಭಾವನೆಗಳಿಂದ ವೈರಗಳಿಂದ, ಅಪನಂಬಿಕೆಗಳಿಂದ ಇನ್ನೂ ನರಳುತ್ತಿದ್ದೇವೆ. ಅಂದಿನ ಚರಿತ್ರೆ ಬರಬರುತ್ತಾ ಗೊಡ್ಡು ಹರಟೆಯ ರೂಪ ತಾಳುತ್ತದೆ. ಆಧುನಿಕ ಪ್ರಜ್ಞೆಗೆ ಅರ್ಥಹೀನವಾಗಿ ಕಂಡು ಬೇಸರ ತರಿಸುತ್ತದೆ. ಈ ಯುದ್ಧ ಒಬ್ಬ ರಾಜನ ಉಪಪತ್ನಿಯಿಂದಾಗಿ ಆಯಿತು, ಯಾವುದೋ ಒಬ್ಬಮಂತ್ರಿ ಮತ್ತೊಬ್ಬನ ಮೇಲೆ ಹೊಟ್ಟೆಕಿಚ್ಚುಪಟ್ಟಿದ್ದರಿಂದ ಇನ್ನೇನೋ ಆಯಿತು. ಹೀಗೆಲ್ಲಾ ಚರಿತ್ರೆ ಓದುಗರಿಗೆ ಹೇಳುತ್ತಾ ಹೋಗುತ್ತದೆ. ಲಂಚ ರುಷುವತ್ತುಗಳು, ಪೋಟಾಪೋಟಿಗಳನ್ನು ಕುರಿತ ಕಾಡುಹರಟೆಗಳಿಂದ ಬುದ್ಧಿವಂತನಾದ ವಿದ್ಯಾರ್ಥಿ ರೋಸಿಹೋಗುತ್ತಾನೆ. ಆದರೆ ಇವೆಲ್ಲವುಗಳಿಗಿಂತ ಗಮನಾರ್ಹವಾದ ಸಂಗತಿ ಒಂದಿದೆ, ಅನೇಕ ಸೀಮಾರೇಖೆಗಳು ಸಾರಿಗೆ ಸಂಪರ್ಕಗಳಿಗೆ ಅಡ್ಡಿಯುಂಟುಮಾಡುತ್ತಿದ್ದರೂ ಆಗಲೂ ಓದು ಬರಹ

ಮತ್ತು ಆಲೋಚನಾ ಶಕ್ತಿಗಳು ಕಡಿಡುತ್ತಲೇ ಹೋಗಿ ಅಭಿವೃದ್ಧಿಯಾದುವು. ನೂತನ ಸಾಧನಗಳು ಹೆಚ್ಚುತ್ತಾ ಹೋದುವು. ಅಂದಿನ ರಾಜರ ಆಸ್ಥಾನಗಳನ್ನು ರಾಜ್ಯ ನೀತಿಗಳನ್ನೂ ಆಳವಾಗಿಯೇ ಟೀಕಿಸುವ, ಶಂಕಿಸುವ ಸಾಹಿತ್ಯವನ್ನು ಹದಿನೆಂಟನೆ ಶತಮಾನ ಕಂಡಿತು. ಆ ಐರೋಪ್ಯಪ್ರಪಂಚದ ವ್ಯವಸ್ಥಾಶೂನ್ಯ ಗೋಜಲನ್ನು ಕುರಿತ ಅಪಾರವಾದ ಬೇಸರದ ಅಭಿವ್ಯಕ್ತಿ ವಾಲ್ಟೇರನ ಪುಸ್ತಕ ಕಾಂದೀದ್ (Candide).

53. ವಿಶ್ವದಲ್ಲಿ ಮತ್ತು ಸಮುದ್ರೋತ್ತರ ಭೂಖಂಡಗಳಲ್ಲಿ ಯುರೋಪಿಯನ್ನರ ಹೊಸ ಸಾಮ್ರಾಜ್ಯಗಳು

ಹೀಗೆ ಮಧ್ಯಯುರೋಪು ಹಂಚಿಹೋಗಿ ಗೊಂದಲದಲ್ಲಿ ಬಿದ್ದಿದ್ದಾಗಲೇ ಪಶ್ಚಿಮಯುರೋಪಿನ ಜನರು ಅದರಲ್ಲೂ ಡಚ್ಚರು ಸ್ಕಾಂಡಿನೇವಿಯನ್ನರು, ಪೋರ್ಚುಗೀಸರು, ಫ್ರೆಂಚರು ಮತ್ತು ಬ್ರಿಟಿಷರು ತಮ್ಮ ಹೋರಾಟದ ರಂಗವನ್ನು ಸಮುದ್ರಗಳ ಆಚೆಗೆ ವಿಸ್ತರಿಸುತ್ತಿದ್ದರು. ಮುದ್ರಣಯಂತ್ರವು ಯುರೋಪಿನ ರಾಜಕೀಯ ಚಿಂತನೆಗಳನ್ನು ಕಲಕಿ ಅದರ ರೂಪ ಹೀಗೇ ಎಂದು ಹೇಳಲಾಗದ ಹದುಗು ತೊಟ್ಟಿಯ ಮಿಶ್ರಣ ರೂಪಕ್ಕೆ ತಂದು ಬಿಟ್ಟಿತ್ತು. ಆದರೆ ಸಾಗರವನ್ನು ದಾಟಬಲ್ಲ ಹಡಗು, ಅದೇಕಾಲದ ಮತ್ತೊಂದು ದೊಡ್ಡ ಸಾಧನ. ಯೂರೋಪಿಯನ್ ಅನುಭವದ ವ್ಯಾಪ್ತಿಯನ್ನು ಸಮುದ್ರಮಾರ್ಗವಾಗಿ ಮುಟ್ಟಬಲ್ಲ ಸ್ಥಳಗಳಿಗೆಲ್ಲ ಒಂದೇ ಸಮನೆ ಹರಡುತ್ತಿತ್ತು.

ಡಚ್ಚರು ಮತ್ತು ಉತ್ತರ ಅಟ್ಲಾಂಟಿಕ್ ತೀರದ ಯುರೋಪಿಯನ್ನರು ಸಮುದ್ರೋತ್ತರ ಪ್ರದೇಶಗಳಲ್ಲಿ ಮೊದಮೊದಲು ವಸಾಹತುಗಳನ್ನು ಸ್ಥಾಪಿಸಿದುದು ತಾವು ಅಲ್ಲಿಹೋಗಿ ನೆಲಸುವುದಕ್ಕಲ್ಲ, ವ್ಯಾಪಾರಕ್ಕಾಗಿ ಮತ್ತು ಗಣಿಕೆಲಸಗಳಿಗಾಗಿ. ಇದರಲ್ಲಿ ಸ್ಪೇನಿನವರೇ ಮೊದಲಿಗರು. ಇವರು ಅಮೆರಿಕೆಯ ಹೊಸ ಪ್ರಪಂಚವನ್ನು ತಮಗೇ ಸೇರಬೇಕೆಂದು ಹಕ್ಕು ಸಾಧಿಸ ಹೊರಟರು ಬಹುಬೇಗನೇ ಪೋರ್ಚುಗೀಸರು ಇದರಲ್ಲಿ ಪಾಲು ಕೇಳಿದರು. ಪೋಪ್ ಈ ಹೊಸ ಭೂಖಂಡವನ್ನು ಈ ಎರಡು ಮೊದಲ ಪಾಲುದಾರರ ನಡುವೆ ಹಂಚಿದನು. ಪ್ರಪಂಚಕ್ಕೆ ಒಡತಿಯ ಸ್ಥಾನದಲ್ಲಿ ನಿಂತು ರೋಮ್ ಮಾಡಿದ ಅಂತಿಮಕಾರ್ಯಗಳಲ್ಲಿ ಇದೂ ಒಂದು. ಈ ಆಜ್ಞೆಯ ಪ್ರಕಾರ ಕೇಪ್‌ವರ್ಡೆಸ್ ದ್ವೀಪಗಳಿಗೆ 370 ಹರಿದಾರಿಗಳ ಪಶ್ಚಿಮಕ್ಕೆ ಒಂದು ಗೆರೆ ಎಳೆದರೆ ಅದರ ಪೂರ್ವಕ್ಕಿರುವ ಸಮಸ್ತ ಭೂಪ್ರದೇಶಗಳು ಮತ್ತು ಬ್ರೆಜಿಲ್ ಪೋರ್ಚುಗಲ್ಲಿಗೂ ಉಳಿದಿದ್ದೆಲ್ಲಾ ಸ್ಪೇನಿಗೂ ಸಲ್ಲಬೇಕಾಗಿತ್ತು (1494). ಆ ಕಾಲದಲ್ಲಿಯೇ ಪೋರ್ಚುಗೀಸರು ತಮ್ಮ ಕಡಲಾಚೆಯ ವ್ಯವಹಾರಗಳನ್ನು ದಕ್ಷಿಣಕ್ಕೂ ಪೂರ್ವಕ್ಕೂ ವಿಸ್ತರಿಸುತ್ತಿದ್ದರು. 1497ರಲ್ಲಿ ವಾಸ್ಕೊಡಗಾಮನು ಲಿಸ್ಬನ್ನಿನಿಂದ ಹೊರಟು ಹಡಗಿನಲ್ಲಿ ಆಫ್ರಿಕದ ಭೂಶಿರವನ್ನು ಸುತ್ತುವರಿದು ಜಾಂಜಿಬಾರನ್ನು ಮುಟ್ಟಿ ಅಲ್ಲಿಂದ

ಇಂಡಿಯಾದ ಕಲ್ಲಿಕೋಟೆಯನ್ನು ಸೇರಿದನು. 1515ರಲ್ಲಿ ಜಾವಾ ಮತ್ತು ಮಲಕ್ಕಾಗಳಲ್ಲಿ ಪೋರ್ಚುಗೀಸ್ ಹಡಗುಗಳು ಕಂಡುಬರುತ್ತಿದ್ದವು. ಮತ್ತು ಪೋರ್ಚುಗೀಸರು ಹಿಂದೂ ಸಾಗರದ ಕರಾವಳಿಯಲ್ಲಿ ಎಲ್ಲಕಡೆ ವ್ಯಾಪಾರದ ಕೋಠಿಗಳನ್ನು ಕಟ್ಟಿ ಅವುಗಳನ್ನು ಭದ್ರಪಡಿಸುತಿದ್ದರು.* ಇಂದಿಗೂ ಮೊಜಾಬಿಂಕ್, ಇಂಡಿಯದ ಗೋವಾ ಮತ್ತು ಎರಡು ಸಣ್ಣ ಸ್ವಾಮ್ಯಗಳು, ಚೀನದ ಮಕಾವೊ ಮತ್ತು ಟಿಮರಿನ ಒಂದು ಭಾಗ ಪೋರ್ಚುಗಲ್ಲಿನ ವಶದಲ್ಲಿದೆ.

ಪೋಪನ ವ್ಯವಸ್ಥೆಯು ಪ್ರಕಾರ ಅಮೆರಿಕದ ಹೊರಗೆ ಉಳಿಯ ಬೇಕಾಗಿದ್ದ ರಾಷ್ಟ್ರಗಳು ಸ್ಪೇನು, ಪೋರ್ಚುಗಲ್ಲುಗಳ ಹಕ್ಕುಗಳಿಗೆ ಏನೂ ಮನ್ನಣೆ ನೀಡಲಿಲ್ಲ. ಇಂಗ್ಲಿಷರು, ಡೇನರು ಮತ್ತು ಸ್ವೀಡರು, ಬಳಿಕ ಬಹುಬೇಗನೆ ಡಚ್ಚರು ಉತ್ತರ ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ಗಳಲ್ಲಿ ಹಕ್ಕುಗಳನ್ನು ಸಾಧಿಸತೊಡಗಿದರು. ಪಕ್ಕಾ ಕ್ಯಾಥೊಲಿಕ್ ಎಂದುಕೊಳ್ಳುತ್ತಿದ್ದ ಫ್ರಾನ್ಸಿನ ದೊರೆ ಸಹ ಪೋಪನ ವ್ಯವಸ್ಥೆಯನ್ನು ತಿರಸ್ಕರಿಸುವುದರಲ್ಲಿ ಯಾವ ಪ್ರಾಟೆಸ್ಟಂಟರಿಗೂ ಏನೂ ಕಡಿಮೆ ಇರಲಿಲ್ಲ. ಯೂರೋಪಿನ ಯುದ್ಧಗಳು ಈ ಹಕ್ಕುಗಳನ್ನು ಹಿಂಬಾಲಿಸಿ ಈ ಸ್ವಾಮ್ಯಗಳಿಗೆ ಹಬ್ಬಿದವು.

ಸಮುದ್ರಗಳ ಆಚೆಯ ಈ ಸ್ವಾಮ್ಯಗಳಿಗಾಗಿ ನಡೆದ ಈ ಕಚ್ಚಾಟಗಳಲ್ಲಿ ಅಂತಿಮವಾಗಿ ಇಂಗ್ಲಿಷರು ಎಲ್ಲರಿಗಿಂತ ಹೆಚ್ಚು ಜಯಗಳಿಸಿದರು. ಜರ್ಮನಿಯ ತೊಡಕು ತೊಡಕಾದ ವ್ಯವಹಾರಗಳಲ್ಲಿ ಸಿಗಹಾಕಿಕೊಂಡಿದ್ದ ಡೇನರಿಗೆ ಮತ್ತು ಸ್ವೀಡರಿಗೆ ಕಡಲಾಚೆಗೆ ತಮ್ಮ ಕಾರ್ಯಗಳನ್ನು ವಿಸ್ತರಿಸಲು ಸಾಧ್ಯವಾಗಲಿಲ್ಲ. "ಉತ್ತರದ ಸಿಂಹ" ಎಂದು ಕರೆಸಿಕೊಂಡ ಗುಸ್ತಾವಸ್ ಅಡಾಲ್ಫಸ್ ಎಂಬ ವರ್ಣರಂಜಿತ ರಾಜನಿಂದಾಗಿ ಜರ್ಮನಿಯ ರಣರಂಗಗಳಲ್ಲಿ ಸ್ವೀಡನ್ ಹಾಳಾಯಿತು. ಅಮೇರಿಕದಲ್ಲಿ ಸ್ವೀಡನ್ ಗಳಿಸಿದ್ದ ಸಣ್ಣ ಸಣ್ಣ ವಸಾಹತುಗಳು ಡಚ್ಚರ ಪಾಲಿಗೆ ಬಂದರೂ ಅವರು ಫ್ರೆಂಚ್ ಆಕ್ರಮಣಕಾರರಿಗೆ ಬಹು ಸಮೀಪದಲ್ಲಿದ್ದುದರಿಂದ ಬ್ರಿಟಿಷರನ್ನು ಎದುರಿಸಿ ನಿಲ್ಲಲು ಅವರಿಗೆ ಆಗಲಿಲ್ಲ. ಸಾಮ್ರಾಜ್ಯಗಳಿಗಾಗಿ ತೀವ್ರವಾಗಿ ಸ್ಪರ್ಧಿಸುತ್ತಿದ್ದವರೆಂದರೆ ದೂರ ಪೂರ್ವದಲ್ಲಿ ಬ್ರಿಟಿಷರು, ಡಚ್ಚರು ಮತ್ತು ಫ್ರೆಂಚರು, ಅಮೆರಿಕದಲ್ಲಿ ಬ್ರಿಟೀಷರು, ಫ್ರೆಂಚರು ಮತ್ತು ಸ್ಪೇನಿನವರು. ಯೂರೋಪಿನೊಡನೆ ಹೋಲಿಸಿದರೆ ಬ್ರಿಟಿಷರಿಗೆ ದೊಡ್ಡದಾದ ಒಂದು ಅನುಕೂಲತೆ ಇದ್ದಿತು. ಅದೇ ಅವರ "ಬೆಳ್ಳಿಯ ಗೆರೆ" ನೀರಿನ ಎಲ್ಲೆಯಾದ ಇಂಗ್ಲಿಷ್ ಕಡಲ್ಗಾಲುವೆ. ಲ್ಯಾಟಿನ್ ಚಕ್ರಾಧಿಪತ್ಯದ ದೊಡ್ಡ ಹೆಸರಿನ ಪರಂಪರೆಯ ಗೋಜಲಿನಲ್ಲಿ ಇವರು ಸಿಗಹಾಕಿಕೊಂಡಿದ್ದು ತುಂಬ ಕಡಿಮೆ.

ಫ್ರಾನ್ಸ್ ದೇಶಕ್ಕೆ ಯಾವಾಗಲೂ ಯೂರೋಪೇ ಎಲ್ಲಕ್ಕಿಂತ ಮುಖ್ಯವಾದ

---

*ಇದು ಈ ಪುಸ್ತಕ ಪ್ರಕಟವಾದಾಗ ಇದ್ದ ಸ್ಥಿತಿ. ಈಗ ಮಕಾವೊ ಮಾತ್ರ ಇನ್ನೂ ಪೋರ್ಚುಗಲ್ಲಿಗೆ ಸೇರಿದೆ. ಮೊಜಾಂಬಿಕ್ ಸ್ವತಂತ್ರವಾಗಿದೆ. ಗೋವಾ ಡಾಮನ್ ದಯುಗಳು ಭಾರತಕ್ಕೂ, ಟಿಮರ್ ಇಂಡೋನೇಷಿಯಕ್ಕೂ ಸೇರಿಹೋಗಿವೆ.

ವಿಷಯವಾಗಿದೆ. 18ನೆಯ ಶತಮಾನವಾದ್ಯಂತವೂ ಯೂರೋಪಿನಲ್ಲಿ ತನ್ನದೇ ಮೇಲುಗೈಯಾಗಬೇಕೆಂಬ ಉದ್ದೇಶದಿಂದ ಸ್ಪೇನ್, ಇಟಲಿ, ಮತ್ತು ಜರ್ಮನಿಗಳ ಗೊಂದಲಗಳಲ್ಲಿ ತಲೆಹಾಕಿ ಪೂರ್ವಪಶ್ಚಿಮ ಎರಡು ಕಡೆಯಲ್ಲಿಯೂ ವಿಸ್ತರಿಸುವ ಅವಕಾಶವನ್ನು ಫ್ರಾನ್ಸ್ ಹಾಳುಮಾಡಿಕೊಂಡಿತು. 17ನೆ ಶತಮಾನದಲ್ಲಿ ಬ್ರಿಟನ್ನಿನಲ್ಲಿ ನಡೆದ ಧಾರ್ಮಿಕ ಮತ್ತು ರಾಜಕೀಯ ವಿವಾದಗಳ ಫಲವಾಗಿ ಅನೇಕ ಇಂಗ್ಲಿಷ್ ಜನರು ಖಾಯಮ್ಮಾಗಿ ನೆಲಸುವ ಉದ್ದೇಶದಿಂದ ಅಮೇರಿಕಕ್ಕೆ ಓಡಿ ಹೋಗಿ ಅಲ್ಲಿಯೇ ಬೇರು ಬಿಟ್ಟು ಅಭಿವೃದ್ಧಿ ಹೊಂದಿದ್ದರು. ಇದರಿಂದ ಅಮೇರಿಕದ ಹೋರಾಟದಲ್ಲಿ ಬ್ರಿಟಿಷರಿಗೆ ವಿಶೇಷವಾದ ಸೌಕರ್ಯವುಂಟಾಯಿತು. 1756 ಮತ್ತು 1760ರಲ್ಲಿ ಅಮೆರಿಕದ ಬ್ರಿಟಿಷ್ ನೆಲಸುಗಾರರು ಮತ್ತು ಬ್ರಿಟಿಷರೊಡನೆ ಆದ ಯುದ್ಧದಲ್ಲಿ ಫ್ರೆಂಚರು ಕೆನಡಾವನ್ನು ಕಳೆದುಕೊಂಡರು. ಕೆಲವು ವರ್ಷಗಳಾದ ಮೇಲೆ ಇಂಡಿಯಾ ಪರ್ಯಾಯ ದ್ವೀಪದಲ್ಲಿ ಫ್ರೆಂಚ್, ಡಚ್ ಮತ್ತು ಪೋರ್ಚುಗೀಸರೆಲ್ಲರಿಗಿಂತ ಬ್ರಿಟಿಷ್ ವ್ಯಾಪಾರದ ಕಂಪೆನಿಯದೇ ಮೇಲುಗೈಯಾಯಿತು. ಬಾಬರ್, ಅಕ್ಬರ್ ಮತ್ತು ಅವರ ಉತ್ತರಾಧಿಕಾರಿಗಳ ಬಲಿಷ್ಠವಾದ ಮೊಗಲ್ ಚಕ್ರಾಧಿಪತ್ಯ ಈಗ ಹೀನ ದೆಸೆಗಿಳಿದಿತ್ತು. ಲಂಡನ್ನಿನ ಒಂದು ವ್ಯಾಪಾರದ ಸಂಸ್ಥೆಯಾದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಅದನ್ನು ತನ್ನದನ್ನಾಗಿ ಮಾಡಿಕೊಂಡಿದ್ದು ಇಂತಹ ವಿಜಯಗಳ ಚರಿತ್ರೆಯಲ್ಲೆಲ್ಲಾ ಅತ್ಯಂತ ಆಶ್ಚರ್ಯಕರವಾದ ಪ್ರಸಂಗ.

ಈ ಈಸ್ಟ್ ಇಂಡಿಯಾ ಕಂಪನಿಯು ಎಲಿಜಬೆತ್ ರಾಣಿಯ ಕಾಲದಲ್ಲಿ ಸ್ಥಾಪನೆಯಾದಾಗ ಮೂಲಭೂತವಾಗಿ 20 ಸಾಹಸಿ ನಾವಿಕರ ಒಂದು ಸಂಘವಾಗಿತ್ತಷ್ಟೆ. ಬರಬರುತ್ತಾ ಇವರು ಸೈನ್ಯಕಟ್ಟಿ ಶಸ್ತ್ರಗಳಿಂದ ತಮ್ಮ ಹಡಗುಗಳನ್ನು ಬಲಪಡಿಸಲೇ ಬೇಕಾಗಿಬಂದಿತು. ಲಾಭ ಪಡೆಯುವುದರಲ್ಲಿ ಹೆಸರಾಗಿದ್ದ ಈ ಕಂಪನಿ ಈಗ ಬರಿಯ ಸಂಬಾರ ಪದಾರ್ಥಗಳು, ಟೀ, ಒಡವೆಗಳು, ವರ್ಣದ್ರವ್ಯಗಳಲ್ಲಿ ವ್ಯವಹರಿಸುವುದೇ ಅಲ್ಲದೆ ಇಂಡಿಯಾದ ದೊರೆಗಳ ರಾಜ್ಯಗಳು, ಕಂದಾಯದ ವಸೂಲಿ ಮತ್ತು ಆ ದೇಶದ ಭವಿಷ್ಯದಲ್ಲೂ ಕೈಹಾಕುವುದು ಮೊದಲಾಯಿತು. ಕೊಳ್ಳುವುದು ಮತ್ತು ಮಾರುವುದಕ್ಕಾಗಿ ಬಂದಿದ್ದ ಈ ಕಂಪೆನಿ ಭಾರೀ ಲೂಟಿಯನ್ನೇ ಪ್ರಾರಂಭಿಸಿತು. ಇದರ ಕಾರ್ಯಗಳನ್ನು ಪ್ರಶ್ನಿಸುವವರು ಯಾರೂ ಇರಲಿಲ್ಲ. ಅದರ ನಾಯಕರು, ಅಧಿಕಾರಿಗಳು, ಏಕೆ ಬರಿಯ ಗುಮಾಸ್ತರು ಮತ್ತು ಸೈನಿಕರು ಕೂಡ ಇಂಗ್ಲಂಡಿಗೆ ಅಪಾರ ಲೂಟಿಯೊಂದಿಗೆ ಹಿಂದಿರುಗುತ್ತಿದ್ದುದರಲ್ಲಿ ಆಶ್ಚರ್ಯವೇನಿದೆ?

ಅಂತಹ ದೊಡ್ಡ ಐಶ್ವರ್ಯಭರಿತ ದೇಶ ಕೈಗೆ ಸಿಕ್ಕಿದ ಆ ಸಂದರ್ಭದಲ್ಲಿ ಈ ಜನ ತಾವೇನು ಮಾಡಬಹುದು ಅಥವಾ ಮಾಡಬಾರದು ಎನ್ನುವುದನ್ನು ವಿವೇಚಿಸಲು ಶಕ್ತರಾಗಲಿಲ್ಲ. ಅವರಿಗೆ ಅದು ವಿಚಿತ್ರ ಪರಿಸರದ ಅಪರಿಚಿತ ದೇಶವಾಗಿತ್ತು. ಅಲ್ಲಿನ ಕಂದು ಬಣ್ಣದ ಜನ ಇವರಿಗೆ ತಮ್ಮ ಕುಲಕ್ಕೆ ಹೊರಗಿನವರೆನಿಸುತ್ತಿದ್ದು

ತಮ್ಮ ಅನುಕಂಪೆಯ ವ್ಯಾಪ್ತಿಗೆ ಸೇರಿದವರಲ್ಲ ಎಂದು ಕಾಣುತ್ತಿತ್ತು. ಅಲ್ಲಿನ ರಹಸ್ಯ ಪೂರ್ಣ ದೇವಾಲಯಗಳಲ್ಲಿ ವಿಲಕ್ಷಣವಾದ ಆಚರಣೆಗಳು ನಡೆಯುತ್ತಿದ್ದುವೆಂದು ಇವರಿಗೆ ತೋರುತ್ತಿತ್ತು. ಇಂಡಿಯದಿಂದ ಹಿಂದಿರುಗಿದ ಜನರಲ್ಲುಗಳು ಮತ್ತು ಅಧಿಕಾರಿಗಳು ಒಬ್ಬರ ಮೇಲೆ ಒಬ್ಬರು ಕ್ರೌರ್ಯದಿಂದ ನಡೆದರು ಮತ್ತು ಅನ್ಯಾಯದ ಸುಲಿಗೆ ಮಾಡಿದರೆಂದು ಆಪಾದನೆಗಳನ್ನು ತಂದಾಗ ಸ್ವದೇಶದಲ್ಲೇ ಇದ್ದ ಇಂಗ್ಲಿಷ್ ಜನರಿಗೆ ದಿಗ್ಭ್ರಮೆಯಾಗುತ್ತಿತ್ತು. ಪಾರ್ಲಿಮೆಂಟು ಕ್ಲೈವನನ್ನು ಖಂಡಿಸುವ ಒಂದು ನಿರ್ಣಯವನ್ನು ಅನುಮೋದಿಸಿತು 1774ರಲ್ಲಿ ಕ್ಲೈವ್ ಆತ್ಮಹತ್ಯೆ ಮಾಡಿಕೊಂಡನು. 1788ರಲ್ಲಿ ಇಂಡಿಯದ ಮತ್ತೊಬ್ಬ ಹಿರಿಯ ಆಡಳಿತಗಾರನಾದ ವಾರೆನ್ ಹೇಸ್ಟಿಂಗ್ಸ್‌ನ ಮೇಲೆ ದೋಷಾರೋಪಣೆ ಮಾಡಿ ವಿಚಾರಣೆ ನಡೆಸಲಾಯಿತು. ಅದರಲ್ಲಿ ಅವನು ತಪ್ಪಿತಸ್ಥ ಅಲ್ಲ ಎಂದು ತೀರ್ಮಾನವಾಯಿತು. ಪ್ರಪಂಚದ ಚರಿತ್ರೆಯಲ್ಲಿ ಇದು ಹಿಂದೆ ಎಲ್ಲೂ ಸಂಭವಿಸದಿದ್ದ ವಿಚಿತ್ರ ಪರಿಸ್ಥಿತಿಯಾಗಿತ್ತು.

ಲಂಡನ್ನಿನ ಒಂದು ವ್ಯಾಪಾರಿ ಸಂಸ್ಥೆಯ ಮೇಲೆ ಪಾರ್ಲಿಮೆಂಟ್ ಅಧಿಕಾರ ನಡೆಸುತ್ತಿತ್ತು. ಆ ಸಂಸ್ಥೆ ಬ್ರಿಟಿಷ್ ರಾಜನ ಸ್ವಾಮ್ಯಗಳೆಲ್ಲಕ್ಕಿಂತಲೂ ಹೆಚ್ಚಿನ ಜನರನ್ನುಳ್ಳ ಅದಕ್ಕಿಂತ ತುಂಬ ದೊಡ್ಡದಾದ ಸಾಮ್ರಾಜ್ಯದ ಮೇಲೆ ದರ್ಬಾರು ಮಾಡುತ್ತಿತ್ತು ಇಂಗ್ಲೆಂಡಿನಲ್ಲಿದ್ದವರಲ್ಲಿ ಬಹು ಜನರಿಗೆ ಇಂಡಿಯ ಎಂದರೆ ಎಲ್ಲೋ ದೂರದಲ್ಲಿದ್ದ, ವಿಚಿತ್ರವಾದ, ಹೋಗಿ ಸೇರುವುದೇ ಅಸಾಧ್ಯವೆನಿಸುತ್ತಿದ್ದ ರಾಜ್ಯವಾಗಿತ್ತು. ಅಲ್ಲಿಗೆ ಬಡವರಾದ ಸಾಹಸಿ ತರುಣರು ಹೋಗಿ ಎಷ್ಟೋ ವರ್ಷಗಳಾದ ಮೇಲೆ ಕೋಪಿಷ್ಠರಾದ ಮುದುಕರಾಗಿ ಹಿಂದಿರುಗುತ್ತಿದ್ದರು. ಪೂರ್ವದಿಕ್ಕಿನ ಆ ಬಿಸಿಲಿನ ದೇಶದ ಅಸಂಖ್ಯಾತ ಕಂದು ವರ್ಣೀಯರ ಜೀವನ ಹೇಗೆ ಸಾಗುತ್ತದೆಯೆಂದು ಊಹಿಸಿಕೊಳ್ಳುವುದು ಇಂಗ್ಲಿಷ್ ಜನರಿಗೆ ಬಹು ಕಷ್ಟವಾಗಿತ್ತು. ಈ ಕಾರ್ಯ ಅವರ ಕಲ್ಪನಾ ಶಕ್ತಿಗೆ ಮೀರಿದುದಾಗಿತ್ತು ಇವರಿಗೆ ಇಂಡಿಯ ರೋಮಾಂಚಕಾರಕ ಕಾಲ್ಪನಿಕ ರಾಜ್ಯವಾಗಿಯೇ ಉಳಿಯಿತು. ಹೀಗಾಗಿ ಕಂಪೆನಿಯ ಕಾರಭಾರಗಳ ಮೇಲೆ ಪರಿಣಾಮಕರವಾದ ಮೇಲ್ವಿಚಾರಣೆ ಮತ್ತು ನಿಯಂತ್ರಣ ಇಂಗ್ಲಿಷರಿಗೆ ಅಸಾಧ್ಯವಾಯಿತು.

ಪಶ್ಚಿಮ ಯೂರೋಪಿನ ರಾಜ್ಯಗಳು ಹೀಗೆ ಅದ್ಭುತವಾದ ಸಮುದ್ರದಾಚೆಯ ಚಕ್ರಾಧಿಪತ್ಯಗಳಿಗಾಗಿ ಪ್ರಪಂಚದ ಪ್ರತಿಯೊಂದು ಸಾಗರದ ಮೇಲೂ ಹೊಡೆದಾಡುತ್ತಿದ್ದಾಗಲೇ ಏಷ್ಯಾದ ಭೂಭಾಗದಲ್ಲಿ ಎರಡು ಭಾರೀ ವಿಜಯ ಯಾತ್ರೆಗಳು ನಡೆಯುತ್ತಿದ್ದವು. 1360ರಲ್ಲಿ ಚೀನಾ, ಮಂಗೋಲ್ ಪ್ರಭುತ್ವವನ್ನು ಕಿತ್ತೊಗೆದು ಚೀನೀಯರೇ ಆದ ಮಿಂಗ್ ಸಂತತಿಯವರ ಕೆಳಗೆ 1644ರ ವರೆಗೆ ಏಳಿಗೆ ಹೊಂದಿತು. ಅನಂತರ ಮಂಚುಗಳೆಂಬ ಮತ್ತೊಬ್ಬ ಮಂಗೋಲ್ ಜನರು ಚೀನಾವನ್ನು ತಿರುಗಿ ಗೆದ್ದುಕೊಂಡು 1912ರ ವರೆಗೆ ಅಲ್ಲಿಯ ಒಡೆಯರಾಗಿ ಉಳಿದರು. ಇದೇ ಕಾಲದಲ್ಲಿ ರಷ್ಯಾದೇಶವು ಪೂರ್ವ ದಿಕ್ಕಿಗೆ ಒತ್ತರಿಸಿಕೊಂಡು ಬರುತ್ತಾ ಇದ್ದು ಪ್ರಪಂಚ

ವ್ಯವಹಾರಗಳಲ್ಲಿ ಉನ್ನತ ಸ್ಥಾನಕ್ಕೆ ಬರುತ್ತಿತ್ತು. ನಮ್ಮ ಮಾನವ ಜನಾಂಗದ ಭವಿಷ್ಯಕ್ಕೆ ಪೂರ್ವಾರ್ಧ ಗೋಳದ ಮಧ್ಯದಲ್ಲಿರುವ ಪೌರ್ವಾತ್ಯವೂ ಎನಿಸದ, ಪಾಶ್ಚಾತ್ಯವೂ ಎನಿಸದ ಈ ಪ್ರಭುತ್ವದ ಉಚ್ಛ್ರಾಯವು ಬಹುಮುಖ್ಯವಾದುದು. ಇದರ ವಿಸ್ತರಣಕ್ಕೆ ಕಾರಣರಾದವರು ಮುಖ್ಯವಾಗಿ ಸ್ಟೆಪ್ ಪ್ರದೇಶದ ಕ್ರೈಸ್ತ ಧರ್ಮೀಯರಾದ ಕಾಸಕರು. ಇವರು ಪೋಲೆಂಡಿನ ಪಶ್ಚಿಮದಲ್ಲಿದ್ದ ಮತ್ತು ಹಂಗೆರಿಯಲ್ಲಿದ್ದ ಊಳಿಗಮಾನ್ಯ ಪದ್ಧತಿಯ ಕೃಷಿ ಪ್ರದೇಶಗಳಿಗೂ ಪೂರ್ವದ ಟಾರ್ಟರರಿಗೂ ಮಧ್ಯೆ ಇದ್ದ ತಡೆಯಾದರು. ಹತ್ತೊಂಬತ್ತನೆ ಶತಮಾನದ ಮಧ್ಯದ ಅಮೆರಿಕ ಸಂಯುಕ್ತ ಸಂಸ್ಥಾನಗಳ "ಅನಾಗರಿಕ ಪಶ್ಚಿಮ"ದಂತೆ ಈ ಕಾಸಕರು ಯೂರೋಪಿನ "ಅನಾಗರಿಕ ಪೂರ್ವ"ವಾಗಿದ್ದರು. ರಷ್ಯಾದಲ್ಲಿ ನ್ಯಾಯಬದ್ಧವಾಗಿ ಜೀವಿಸಲು ಆಗದವರೆಲ್ಲ—ಅಪರಾಧಿಗಳು, ಕಿರುಕುಳಕ್ಕೊಳಗಾದ ನಿರಪರಾಧಿಗಳು, ಮಾಲೀಕನ ಮೇಲೆ ತಿರುಗಿ ಬಿದ್ದ ಜೀತದಾಳುಗಳು, ವಿವಿಧ ಧರ್ಮ ಪಂಥೀಯರು, ಕಳ್ಳರು, ಗೊತ್ತುಗುರಿಯಿಲ್ಲದ ಅಲೆಮಾರಿಗಳು, ಕೊಲೆಗಾರರು ಇಂತಹವರೆಲ್ಲ–ದಕ್ಷಿಣ ಸ್ಟೆಪ್‌ಗಳಲ್ಲಿ ಆಸರೆಯನ್ನು ಹುಡುಕಿಕೊಂಡು ಬಂದು ಅಲ್ಲಿ ಹೊಸದಾಗಿ ಜೀವನವನ್ನು ಆರಂಭಿಸಿ ರಷ್ಯನರು, ಪೋಲರು ಮತ್ತು ಟಾರ್ಟರರು ಎಲ್ಲರ ವಿರುದ್ಧ ತಮ್ಮ ಪ್ರಾಣ ಮತ್ತು ಸ್ವಾತಂತ್ರ್ಯಗಳಿಗಾಗಿ ಹೋರಾಡಿದರು. ಪೂರ್ವದಿಕ್ಕಿಗೆ ಇದ್ದ ಟಾರ್ಟರ್ ದೇಶದಿಂದ ತಲೆ ತಪ್ಪಿಸಿಕೊಂಡು ಬಂದವರೂ ಸಹ ಈ ಕಾಸಕ್ ಮಿಶ್ರಣದಲ್ಲಿ ಸೇರಿರಲೇಬೇಕು. ದೇಶದ ಅಂಚಿನಲ್ಲಿದ್ದ ಈ ಜನರು ನಿಧಾನವಾಗಿ ರಷ್ಯನ್ ಸಾಮ್ರಾಜ್ಯದ ಸೈನ್ಯಗಳಲ್ಲಿ ಸೇರಿಹೋದರು. ಬ್ರಿಟಿಷ್ ಸರ್ಕಾರವು ಸ್ಕಾಟ್ಲೆಂಡಿನ ಮಲೆನಾಡಿನ ಬಣಗಳನ್ನು ಸೈನ್ಯದ ತುಕಡಿಗಳನ್ನಾಗಿ ಮಾಡಿದಂತೆ ಇಲ್ಲಿಯೂ ಆಯಿತು. ಅವರಿಗೆ ಏಷ್ಯದಲ್ಲಿ ಹೊಸ ಜಮೀನುಗಳನ್ನು ಕೊಡಲಾಯಿತು. ಮೊದಲು ತುರ್ಕಿಸ್ತಾನದಲ್ಲಿ ಬಳಿಕ ಸೈಬೀರಿಯದಲ್ಲಿ ಆಮೂರ್ ನದಿಯವರೆಗೂ ಇವರು ಇಳಿಮುಖವಾಗುತ್ತಿದ್ದ ಮಂಗೋಲ್ ಅಲೆಮಾರಿಗಳ ಪ್ರಾಬಲ್ಯವನ್ನು ಎದುರಿಸುವ ಸಾಧನವಾದರು.

ಹದಿನೇಳನೆ ಮತ್ತು ಹದಿನೆಂಟನೆ ಶತಮಾನಗಳಲ್ಲಿ ಮಂಗೋಲರ ಶಕ್ತಿ ಅದೇಕೆ ಇಳಿದು ಹೋಯಿತೆಂಬುದನ್ನು ವಿವರಿಸುವುದು ಬಹು ಕಷ್ಟ. ಚೆಂಗಿಸ್‌ಖಾನ್ ಮತ್ತು ತೈಮೂರ್‌ಲಂಗ್ ಜೀವಿಸಿದ್ದ ಕಾಲದಿಂದ ಎರಡು ಅಥವಾ ಮೂರು ಶತಮಾನಗಳಷ್ಟರಲ್ಲೇ ಮಧ್ಯ ಏಷ್ಯವು ಪ್ರಪಂಚದಲ್ಲೇ ಅತ್ಯುನ್ನತ ಸ್ಥಾನದಿಂದ ರಾಜಕೀಯವಾಗಿ ತೀರಾ ದುರ್ಬಲ ಸ್ಥಿತಿಗಿಳಿದುಹೋಗಿತ್ತು. ಹವಾ ಬದಲಾವಣೆ, ಮಲೇರಿಯವನ್ನು ಹೋಲುವ ಆದರೆ ಚಾರಿತ್ರಿಕವಾಗಿ ದಾಖಲಾಗದೆ ಇರುವ ಸಾಂಕ್ರಾಮಿಕ ರೋಗಗಳು ಮಧ್ಯ ಏಷ್ಯದ ಜನರ ಈ ಅವನತಿಯಲ್ಲಿ ಪಾತ್ರವಹಿಸಿರಬಹುದು. ವಿಶ್ವದ ಚರಿತ್ರೆಯ ಮಾನದಂಡದಿಂದ ನೋಡಿದರೆ ಈ ಹಿಂಜರಿತ ಬರಿ ಹಂಗಾಮಿಯಾದದ್ದಾಗಿರಬಹುದು. ಕೆಲವರು ವಿದ್ವಾಂಸರು ಚೀನದಿಂದ ಬೌದ್ಧಧರ್ಮ ಮಂಗೋಲರಲ್ಲಿಯೂ ಹರಡಿದ್ದು

ಅವರು ಶಾಂತ ಸ್ವಭಾವವನ್ನು ಪಡೆಯಲು ಕಾರಣವಾಯಿತೆನ್ನುತ್ತಾರೆ. ಏನೇ ಇರಲಿ, ಹದಿನಾರನೆ ಶತಮಾನದ ಹೊತ್ತಿಗೆ ಮಂಗೋಲ್ ಬುಡಕಟ್ಟಿನ ಟಾರ್ಟರ್ ಮತ್ತು ತುರುಕ ಜನರು ತಮ್ಮ ನೆಲೆಗಳಿಂದ ಹೊರಗೆ ಒತ್ತರಿಸಿಕೊಂಡು ಬರುವುದರ ಬದಲು ಪಶ್ಚಿಮದಿಂದ ಕ್ರೈಸ್ತ ಧರ್ಮೀಯ ರಷ್ಯಾ ಮತ್ತು ಪೂರ್ವದಿಂದ ಚೀನಾ ಅವರ ಮೇಲೆಯೇ ದಂಡೆತ್ತಿ ಹೋಗಿ ಅವರನ್ನು ಅಂಕೆಗೊಳಪಡಿಸಿ ಹಿಂದಕ್ಕೆ ಒತ್ತುತ್ತಿದ್ದರು.

ಹದಿನೇಳನೇ ಶತಮಾನವಷ್ಟು ಶಾಸಕರು ಯುರೋಪಿನ ರಷ್ಯದಿಂದ ಪೂರ್ವಕ್ಕೆ ಹರಡುತ್ತಾ ಕೃಷಿಗೆ ಅನುಕೂಲವಿದೆಯೆಂದು ತೋರಿದಲ್ಲೆಲ್ಲಾ ನೆಲಸುತ್ತಿದ್ದರು. ದುರ್ಗ ಮತ್ತು ಸೈನ್ಯ ಠಾಣ್ಯಗಳ ಸಾಲುಗಳು ಈ ನೆಲಸು ನಾಡುಗಳಿಗೆ ದಕ್ಷಿಣದಲ್ಲಿ ಒಂದು ರೀತಿಯ ಚಲಿಸುವ ಎಲ್ಲೆಯನ್ನು ನಿರ್ಮಿಸುತ್ತಿದ್ದುವು. ಏಕೆಂದರೆ ಅಲ್ಲಿ ಟರ್ಕೋಮನ್ನರು ಇನ್ನೂ ಪ್ರಬಲರಾಗಿದ್ದು ಚಟುವಟಿಕೆಯಿಂದಿದ್ದರು. ಆದರೆ ಈಶಾನ್ಯ ದಿಕ್ಕಿಗೆ ಶಾಂತ ಸಾಗರದ ಕರಾವಳಿವರೆಗೆ ಯಾವ ಎಲ್ಲೆಯೂ ಇರಲಿಲ್ಲ.

54. ಅಮೆರಿಕದ ಸ್ವಾತಂತ್ರ್ಯ ಸಮರ

ಹದಿನೆಂಟನೆಯ ಶತಮಾನದ ಮೂರನೆಯ ಪಾದದಲ್ಲಿ ಯುರೋಪ್ ಅತ್ಯಂತ ಗಮನಾರ್ಹವಾದ ಆದರೆ ಅಸ್ಥಿರವಾದ ಅವಸ್ಥೆಯಲ್ಲಿ ಇದ್ದಿತು. ಹರಿದು ಹಂಚಿ ಹೋಗಿದ್ದು ಏಕೀಕರಣವನ್ನು ತರಬಲ್ಲ ರಾಜಕೀಯ ಅಥವಾ ಧಾರ್ಮಿಕ ಭಾವನೆಗಳೆಲ್ಲ ವನ್ನೂ ಕಳೆದುಕೊಂಡಿದ್ದರೂ ಮುದ್ರಿತ ಪುಸ್ತಕಗಳು, ಭೂಪಟಗಳು ಮತ್ತು ಸಾಗರ ಗಳನ್ನು ದಾಟಬಲ್ಲ ಹಡಗುಗಳಿಂದ ಮಾನವರ ಕಲ್ಪನೆಯಲ್ಲಿ ಉಂಟಾದ ಅಪಾರ ಸ್ಫೂರ್ತಿಯಿಂದಾಗಿ ಪ್ರಪಂಚದ ಎಲ್ಲ ಕರಾವಳಿಗಳನ್ನು ಅವ್ಯವಸ್ಥಿತವಾಗಿಯಾದರೂ ಹೋರಾಡಿ ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಯುರೋಪು ಶಕ್ತವಾಯಿತು. ಉಳಿದ ಮಾನವರ ಮೇಲೆ ಉಂಟಾದ ತಾತ್ಕಾಲಿಕವಾದ, ಅಕಸ್ಮಾತ್ ಬಂದುದೆಂದು ಹೇಳಬಹುದಾದ ಮೇಲ್ಮೆಯಿಂದ ಆದ ಗೊತ್ತುಗುರಿಯಿಲ್ಲದ ಅಸಂಬದ್ಧ ಉಬ್ಬರ. ಇದು ಈ ಹೆಚ್ಚಳದಿಂದಾಗಿ ಹೊಸದಾಗಿ ಕಂಡುಹಿಡಿದಿದ್ದ ಬಹುಭಾಗ ಖಾಲಿಯಾಗಿಯೇ ಇದ್ದ ಅಮೆರಿಕ ಭೂ ಖಂಡದಲ್ಲಿ ಹೆಚ್ಚಾಗಿ ಪಶ್ಚಿಮ ಯುರೋಪಿನವರೇ ನೆಲಸಿದರು. ಮತ್ತು ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ ಮತ್ತು ನ್ಯೂಜೀಲೆಂಡ್‌ಗಳು ಯುರೋಪಿ ಯನ್ನರಿಗೆ ಭಾವೀ ನೆಲಸು ನಾಡುಗಳಾಗಿ ಮೀಸಲಾದವು.

ಪ್ರಾಚೀನ ಕಾಲದಿಂದಲೂ ನಾವಿಕರ ಪ್ರಥಮ ಉದ್ದೇಶವಾದ ವಾಣಿಜ್ಯವೇ ಕೊಲಂಬಸ್ ಅಮೆರಿಕಕ್ಕೂ ವಾಸ್ಕೋಡಗಾಮ, ಇಂಡಿಯಕ್ಕೂ ಹೋಗುವಂತೆ ಮಾಡಿತು. ಪೂರ್ವದಿಕ್ಕಿನ ಪ್ರದೇಶಗಳಲ್ಲಿ ಆಗಲೇ ಜನ ತುಂಬಿಕೊಂಡಿದ್ದರು ಮತ್ತು ಸಿದ್ಧ ಪದಾರ್ಥಗಳನ್ನು ಉತ್ಪಾದಿಸುತ್ತಿದ್ದರು. ಹೀಗಾಗಿ ವಾಣಿಜ್ಯವೇ ಅಲ್ಲೆಲ್ಲಾ ಯುರೋಪಿಯನ್ನರ ಪ್ರಮುಖ ಉದ್ದೇಶವಾಗಿ ನಿಂತಿತು. ಅಲ್ಲಿನ ಐರೋಪ್ಯ ವಸಾಹತುಗಳು ವಾಣಿಜ್ಯದ ವಸಾಹತುಗಳಾಗಿ ಉಳಿದುಕೊಂಡು ಅಲ್ಲಿನ

ಯೂರೋಪಿಯನ್ನರು ತಮ್ಮ ತಾಯ್ನಾಡಿಗೆ ಹಿಂದಿರುಗಿ ತಮ್ಮ ಸಂಪಾದನೆಯನ್ನು ಉಪಯೋಗಿಸುವ ಆಸೆಯನ್ನಿಟ್ಟುಕೊಂಡಿದ್ದರು. ಅದೇ ಅಮೆರಿಕದ ಮೂಲನಿವಾಸಿ ಸಮಾಜಗಳು ಅಷ್ಟು ಉತ್ಪನ್ನಕಾರಕವಾಗಿಲ್ಲದಿದ್ದುದರಿಂದ ಅಲ್ಲಿಗೆ ಹೋದ ಯೂರೋಪಿಯನ್ನರಿಗೆ ಚಿನ್ನ ಮತ್ತು ಬೆಳ್ಳಿಗಳಿಗಾಗಿ ಹುಡುಕಾಡುವುದೇ ಮುಖ್ಯವಾದ ಆಕರ್ಷಣೆಯಾಯಿತು. ಮುಖ್ಯವಾಗಿ ಸ್ಪ್ಯಾನಿಷ್ ಅಮೇರಿಕದ ಗಣಿಗಳಲ್ಲಿ ಬೆಳ್ಳಿ ಸಿಗುತ್ತಿತ್ತು. ಯೂರೋಪಿಯನ್ನರು ಅಮೆರಿಕಕ್ಕೆ ಬರಿಯ ಶಸ್ತ್ರಸಜ್ಜಿತವಾದ ವ್ಯಾಪಾರಿಗಳಾಗಿ ಹೋದರೆ ಸಾಕಾಗುತ್ತಿರಲಿಲ್ಲ. ಖನಿಜಕ್ಕಾಗಿ ಭೂಶೋಧನೆ ಮಾಡುವವರಾಗಿ, ಗಣಿಕೆಲಸ ನಡೆಸುವವರಾಗಿ, ಸ್ವಾಭಾವಿಕ ಉತ್ಪನ್ನಗಳನ್ನು ಹುಡುಕುವವರಾಗಿ, ಕಡೆಗೆ ಪ್ಲಾಂಟರುಗಳಾಗಿ ಇವರು ಅಲ್ಲಿಗೆ ಹೋಗಬೇಕಾಯಿತು. ಉತ್ತರದಲ್ಲಿ ಇವರು ತುಪ್ಪಳದ ಚರ್ಮಗಳನ್ನು ಹುಡುಕುತ್ತಿದ್ದರು. ಗಣಿಗಳು ಮತ್ತು ತೋಟಗಳಿಗಾಗಿ ವಸಾಹತುಗಳು ಬೇಕಾದುವು; ಹೀಗಾಗಿ ಈ ಜನ ಸಮುದ್ರದಾಚೆ ಖಾಯಂ ಆಗಿಯೇ ನೆಲಸಬೇಕಾಯಿತು. ಕಡೆಗೆ ಕೆಲವು ಸಂದರ್ಭಗಳಲ್ಲಿ, ಉದಾಹರಣೆಗೆ, ಇಂಗ್ಲೆಂಡಿನ ಪ್ಯೂರಿಟನ್ನರು ಹದಿನೇಳನೆ ಶತಮಾನದ ಮೊದಲಭಾಗದಲ್ಲಿ ಮತೀಯ ಕಿರುಕುಳವನ್ನು ತಪ್ಪಿಸಿಕೊಳ್ಳಲು ನ್ಯೂ ಇಂಗ್ಲೆಂಡ್‌ಗೆ ಹೋದಾಗ, ಹದಿನೆಂಟನೆ ಶತಮಾನದಲ್ಲಿ ಓಗೆಲ್ ಥಾರ್ಪ್ ಇಂಗ್ಲೆಂಡಿನ ಸಾಲಗಾರರ ಸೆರೆಮನೆಯಿಂದ ಜನರನ್ನು ಜಾರ್ಜಿಯಕ್ಕೆ ಕಳುಹಿಸಿದಾಗ, ಹದಿನೆಂಟನೆ ಶತಮಾನದ ಕಡೆಗೆ ಡಚ್ಚರು ತಬ್ಬಲಿ ಮಕ್ಕಳನ್ನು ಗುಡ್‌ಹೋಪ್ ಭೂಶಿರಕ್ಕೆ ಕಳುಹಿಸಿದಾಗ ಯೂರೋಪಿಯನ್ನರು ಎಂದೆಂದೂ ಹಿಂದಿರುಗುವ ಆಸೆ ಇಲ್ಲದೆ ಸಮುದ್ರವನ್ನು ದಾಟಿದರು ಹತ್ತೊಂಬತ್ತನೆಯ ಶತಮಾನದಲ್ಲಿ ಅದರಲ್ಲೂ ಹೊಗೆಜಹಜು ತಯಾರಾದಮೇಲೆ ಹೊಸ ಖಾಲಿ ಭೂ ಖಂಡಗಳಾದ ಅಮೆರಿಕ, ಆಸ್ಟ್ರೇಲಿಯಗಳಿಗೆ ಯೂರೋಪಿಯನ್ನರು ಕೆಲವು ದಶಕಗಳು ಯಾವ ಪ್ರಮಾಣದಲ್ಲಿ ನೆಲೆಸಲು ಹೋದರೆಂದರೆ ಇದು ಚರಿತ್ರೆಯ ಪ್ರಮುಖ ಜನಚಲಸೆಗಳ ಮಟ್ಟಕ್ಕೆ ಏರಿತು

ಹೀಗೆ ಸಮುದ್ರೋತ್ತರ ಪ್ರದೇಶಗಳಲ್ಲಿ ಯೂರೋಪಿಯನ್ ಜನ ಸಮುದಾಯಗಳು ಬೆಳೆದುವು. ಯೂರೋಪಿನ್ ಸಂಸ್ಕೃತಿ ಅವರ ಹುಟ್ಟು ನಾಡಿಗಿಂತಲೂ ವಿಸ್ತಾರವಾದ ಪ್ರದೇಶಗಳಲ್ಲಿ ನಾಟಿಯಾಯಿತು. ಸಿದ್ಧವಾಗಿಯೇ ಇದ್ದ ನಾಗರಿಕತೆಯೊಂದನ್ನು ತಮ್ಮೊಂದಿಗೆ ಈ ಹೊಸ ಭೂಮಿಗಳಿಗೆ ತಂದ ಈ ಜನ ಸಮುದಾಯಗಳು ಯಾವ ಯೋಜನೆಯೂ ಇಲ್ಲದೆ ಯಾರ ಗಮನವನ್ನೂ ಸೆಳೆಯದೆ ಬೆಳೆದುವು. ಯೂರೋಪಿನ ರಾಜನೀತಿಜ್ಞರು ಹೀಗಾಗಬಹುದೆಂದು ಯೋಚಿಸಿಯೇ ಇರಲಿಲ್ಲ. ಇವುಗಳನ್ನು ನಡೆಸಿಕೊಳ್ಳುವ ವಿಷಯದಲ್ಲಿಯೂ ಅವರು ಯಾವ ಹೊಸ ಅಭಿಪ್ರಾಯವನ್ನು ರೂಪಿಸಿಕೊಳ್ಳಲಿಲ್ಲ. ಈ ನೆಲಸು ನಾಡುಗಳ ಜನರು ತಮಗೇ ಹೇಳಿಸಿದ ಪ್ರತ್ಯೇಕ ಸಾಂಘಿಕ ಜೀವನವೊಂದಿದೆಯೆಂಬ ಅರಿವನ್ನು ಪಡೆದು ಬಹು ಕಾಲ ಕಳೆದ ಮೇಲೂ ಯೂರೋಪಿನ ಅಂದಿನ ರಾಜಕೀಯ ವ್ಯಕ್ತಿಗಳು ಮತ್ತು ಆಡಳಿತಗಾರರು

ಇವುಗಳು ವಿಶಿಷ್ಟ ಕಾರ್ಯಗಳಿಗಾಗಿ ಏರ್ಪಡಿಸಿದ ವ್ಯವಸ್ಥೆಗಳು, ತೆರಿಗೆಯ ಮೂಲಗಳು, ತಮ್ಮ ಸ್ವಾಮ್ಯಗಳು, ತಮ್ಮನ್ನು ಅವಲಂಬಿಸಿರುವ ಪ್ರದೇಶಗಳು ಎಂದೇ ಗಣಿಸುತ್ತಾ ಬಂದರು. ಸಮುದ್ರ ತೀರದಿಂದ ಯಾವುದೇ ರೀತಿಯ ಪರಿಣಾಮಕರ ಶಿಕ್ಷಾಕ್ರಮ ತೆಗೆದುಕೊಳ್ಳುವುದು ಅಸಾಧ್ಯವಾಗುವಷ್ಟು ದೂರ ಒಳನಾಡಿಗೆ ಈ ಜನಸಮುದಾಯಗಳು ಪಸರಿಸಿದ ಮೇಲೂ ಇವರು ಅವುಗಳ ತಮ್ಮ ತಾಯ್ನಾಡುಗಳ ಅಧೀನವಾಗಿರಬೇಕಾದ ನಿಸ್ಸಹಾಯ ಪ್ರದೇಶಗಳೆಂದೇ ನಡೆಸಿಕೊಂಡರು

ಹತ್ತೊಂಬತ್ತನೆ ಶತಮಾನದ ಅಧಿಕ ಭಾಗ ಕಳೆಯುವವರೆಗೆ ಸಹ ಈ ಸಮುದ್ರೋತ್ತರ ಸಾಮ್ರಾಜ್ಯಗಳೆಲ್ಲವನ್ನೂ ಕೂಡಿಸುವ ಕೊಂಡಿಯೆಂದರೆ ಸಾಗರ ಗಳನ್ನು ದಾಟಬಲ್ಲ ಹಾಯಿ ಹಡಗೇ ಆಗಿತ್ತು ಎಂದು ನೆನಪಿನಲ್ಲಿಡಬೇಕು. ನೆಲದ ಮೇಲೆ ಇನ್ನೂ ಸಹ ಕುದುರೆಯೇ ಅತ್ಯಂತ ವೇಗದ ಪ್ರಯಾಣ ಸಾಧನವಾಗಿತ್ತು. ಭೂಖಂಡಗಳಲ್ಲಿನ ರಾಜಕೀಯ ವ್ಯವಸ್ಥೆಗಳ ಒಂದುಗೂಡುವಿಕೆ ಮತ್ತು ಒಗ್ಗಟ್ಟು ಕುದುರೆ ಪ್ರಯಾಣವನ್ನೇ ಅವಲಂಬಿಸಿ ಅದರಿಂದಲೇ ನೇಮಿತವಾಗಿದ್ದವು

ಹದಿನೆಂಟನೆ ಶತಮಾನದ ಮೂರನೆ ಪಾದದ ಕೊನೆಗೆ ಉತ್ತರ ಅಮೆರಿಕದ ಉತ್ತರದ ಮೂರನೆ ಎರಡು ಭಾಗ ಬ್ರಿಟನ್ನಿನ ರಾಜನ ಕೈಕೆಳಗಿತ್ತು. ಫ್ರಾನ್ಸ್ ಅಮೆರಿಕವನ್ನು ಬಿಟ್ಟು ಕೊಟ್ಟಿತ್ತು. ಪೋರ್ಚುಗಲ್ಲಿಗೆ ಸೇರಿದ್ದ ಬ್ರೆಜಿಲ್ ಮತ್ತು ಫ್ರೆಂಚ್, ಬ್ರಿಟಿಷ್, ಡೇನಿಷ್ ಮತ್ತು ಡಚ್ಚರ ಅಧೀನದಲ್ಲಿದ್ದ ಯಾವುದೋ ಒಂದೆರಡು ದ್ವೀಪಗಳು ಮತ್ತು ಪ್ರದೇಶಗಳನ್ನು ಬಿಟ್ಟರೆ ಫ್ಲಾರಿಡಾ, ಲ್ಯೂಸಿಯಾನ, ಕ್ಯಾಲಿಫೋರ್ನಿಯ ಮತ್ತು ಅವುಗಳ ದಕ್ಷಿಣಕ್ಕಿದ್ದ ಅಮೆರಿಕವೆಲ್ಲ ಸ್ಪೇನಿಗೆ ಸೇರಿತ್ತು. ಹಾಯಿಹಡಗೊಂದರ ಸಹಾಯದಿಂದಲೇ ಸಾಗರೋತ್ತರ ಜನ ಸಮುದಾಯಗಳನ್ನು ಒಂದೇ ರಾಜಕೀಯ ವ್ಯವಸ್ಥೆಯಲ್ಲಿ ಹಿಡಿದಿಡುವುದು ಸಾಧ್ಯವಾಗದು ಎನ್ನುವುದು ಮೇನ್ ಮತ್ತು ಆ್ಯಂಟೇರಿಯೋ ಸರೋವರಗಳ ದಕ್ಷಿಣಕ್ಕಿದ್ದ ಬ್ರಿಟಿಷ್ ವಸಾಹತು ಗಳಲ್ಲಿ ಮೊದಲು ತಿಳಿದುಬಂದಿತು.

ಈ ಬ್ರಿಟಿಷ್ ವಸಾಹತುಗಳಲ್ಲಿ ಪ್ರತಿಯೊಂದೂ ಹುಟ್ಟಿಕೊಂಡ ವಿಧಾನಗಳಲ್ಲಿ ಮತ್ತು ಅವುಗಳ ಲಕ್ಷಣಗಳಲ್ಲಿ ತುಂಬಾ ವೈವಿಧ್ಯವಿದ್ದಿತು. ಅಲ್ಲಿ ಬ್ರಿಟಿಷರು ನೆಲಸಿದ ಪ್ರದೇಶಗಳಲ್ಲದೆ ಫ್ರೆಂಚ್, ಸ್ವೀಡಿಷ್ ಮತ್ತು ಡಚ್ ಜನರಿರುವ ಪ್ರದೇಶಗಳೂ ಇದ್ದುವು. ಮೇರಿಲ್ಯಾಂಡಿನಲ್ಲಿ ಬ್ರಿಟಿಷ್ ಕ್ಯಾಥೊಲಿಕರಿದ್ದರು. ನ್ಯೂ ಇಂಗ್ಲೆಂಡಿನಲ್ಲಿ ಬ್ರಿಟಿಷ್ ಪ್ರಾಟೆಸ್ಟಂಟರಲ್ಲೇ ಉಗ್ರಗಾಮಿಗಳಾದವರಿದ್ದರು. ನ್ಯೂ ಇಂಗ್ಲೆಂಡಿನವರು ತಮ್ಮ ಭೂಮಿಯನ್ನು ತಾವೇ ಸಾಗುವಳಿ ನಡೆಸುತ್ತಾ ಗುಲಾಮಗಿರಿಯನ್ನು ನಿಷೇಧಿಸಿ ದರೆ ವರ್ಜೀನಿಯ ಮತ್ತು ದಕ್ಷಿಣ ಭಾಗಗಳಲ್ಲಿದ್ದ ಬ್ರಿಟಿಷರು ಆಮದುಮಾಡಿಕೊಂಡ ನೀಗ್ರೋ ಗುಲಾಮರನ್ನು ಉಪಯೋಗಿಸಿಕೊಳ್ಳುತ್ತಿದ್ದ ಪ್ಲಾಂಟರ್‌ಗಳಾಗಿದ್ದರು. ಈ ಗುಲಾಮರ ಸಂಖ್ಯೆ ದಿನದಿನಕ್ಕೆ ಬೆಳೆಯುತ್ತಿತ್ತು. ಸಹಜವಾಗಿಯೇ ಇಂತಹ ರಾಜ್ಯಗಳಲ್ಲಿ ಸ್ವಾಭಾವಿಕವಾದ ಐಕಮತ್ಯವಿರಲಿಲ್ಲ. ಇವುಗಳಲ್ಲಿ ಒಂದು ಪ್ರದೇಶದಿಂದ

ಮತ್ತೊಂದಕ್ಕೆ ಹೋಗುವುದೆಂದರೆ ಕರಾವಳಿಯ ಪಕ್ಕದಲ್ಲಿ ಸಮುದ್ರಯಾನ ಮಾಡಿಯೇ ಹೋಗಬೇಕಾಗುತ್ತಿತ್ತು. ಇದು ಅಟ್ಲಾಂಟಿಕ್ ಸಾಗರದಾಟುವಷ್ಟೆ ಕಷ್ಟಕರವಾಗಬಹುದಾಗಿತ್ತು. ವಿವಿಧ ಮೂಲಗಳು ಮತ್ತು ವಿವಿಧ ವ್ಯವಸ್ಥೆಗಳ ದೆಸೆಯಿಂದ ಕಷ್ಟಸಾಧ್ಯವೆನಿಸುತ್ತಿದ್ದ ಒಗ್ಗಟ್ಟು ಈ ಕಾಲೋನಿಗಳಿಗೆ ಬ್ರಿಟಿಷ್ ಸರ್ಕಾರದ ಮೌಢ್ಯ ಮತ್ತು ಸ್ವಾರ್ಥ ಬುದ್ಧಿಯಿಂದ ಬಲವಂತವಾಗಿ ಬಂದಿತು. ತೆರಿಗೆಗಳಿಂದ ಬಂದ ಹಣದ ವಿಷಯದಲ್ಲಿ ಯಾವ ಹಕ್ಕನ್ನೂ ಕೊಡದೆ ಈ ವಸಾಹತುಗಳವರಮೇಲೆ ತೆರಿಗೆ ಹಾಕುತ್ತಿದ್ದರು. ಅವರ ವ್ಯಾಪಾರವನ್ನು ಬ್ರಿಟಿಷ್ ಹಿತಾಸಕ್ತಿಗಳಿಗಾಗಿ ಕಡೆಗಣಿಸುತ್ತಿದ್ದರು. ಗುಲಾಮರ ಬಳಕೆಗೆ ವಿರೋಧವಿಲ್ಲದಿದ್ದರೂ ಅನಾಗರಿಕರಾದ ಕಪ್ಪು ಜನರ ಸಂಖ್ಯೆ ಒಂದೇ ಸಮನೆ ಬೆಳೆಯುತ್ತಾ ಹೋಗಿ ತಮ್ಮನ್ನೂ ಮೀರಿಸಬಹುದೆಂಬ ಭಯದಿಂದ ವರ್ಜಿನಿಯನ್ನರು ಗುಲಾಮರ ಆಮದನ್ನು ವಿರೋಧಿಸುತ್ತಿದ್ದರು. ಆದರೂ ಬ್ರಿಟಿಷ್ ಸರ್ಕಾರವು ತನಗೆ ಅಧಿಕವಾದ ಲಾಭವನ್ನು ತರುತ್ತಿದ್ದ ಗುಲಾಮರ ವ್ಯಾಪಾರವನ್ನು ನಡೆಸುತ್ತಲೇ ಇದ್ದಿತು.

ಆಗ ಬ್ರಿಟನ್ ಉಗ್ರವಾದ ರಾಜಪ್ರಭುತ್ವದತ್ತ ಹಿಂತೆರಳುತ್ತಿತ್ತು. ಮೂರನೆಯ ಜಾರ್ಜನ (1760–1820) ಹಟಮಾರಿ ವ್ಯಕ್ತಿತ್ವ ತಾಯಿನಾಡು ಮತ್ತು ವಸಾಹತುಗಳ ಸರ್ಕಾರಗಳ ಮಧ್ಯೆ ಜಗ್ಗಾಟ ನಡೆಯಲು ಬಹುಮಟ್ಟಿಗೆ ಕಾರಣವಾಯಿತು.

ಅಮೆರಿಕದ ಹಡಗು ಸಾಗಣೆ ವ್ಯಾಪಾರಿಗಳಿಗೆ ತೊಂದರೆಮಾಡಿ ಲಂಡನ್ನಿನ ಈಸ್ಟ್ ಇಂಡಿಯಾ ಕಂಪೆನಿಗೆ ಅನುಕೂಲಮಾಡಿಕೊಡುವ ಕಾನೂನು ಈ ವಿವಾದವನ್ನು ತೀವ್ರಗೊಳಿಸಿ ಯುದ್ಧವನ್ನು ತಂದಿತು. ಈ ಹೊಸ ವ್ಯವಸ್ಥೆಗನುಸಾರವಾಗಿ ಆಮದಾದ ಟೀಸೊಪ್ಪಿನ ಮೂರು ಹೇರುಗಳನ್ನು ರೆಡ್ ಇಂಡಿಯನ್ನರ ವೇಷಧರಿಸಿದ ಜನರ ತಂಡವೊಂದು ಬಾಸ್ಟನ್ ಬಂದರಿನಲ್ಲಿ ಸಮುದ್ರಕ್ಕೆ ಬಿಸಾಡಿಬಿಟ್ಟಿತು. ಆದರೆ ಯುದ್ಧ ಪ್ರಾರಂಭವಾದುದು 1775ರಲ್ಲಷ್ಟೆ, ಬ್ರಿಟಿಷ್ ಸರಕಾರವು ಬೋಸ್ಟನ್ನಿನ ಬಳಿ ಇರುವ ಲೆಕ್ಸಿಂಗ್‌ಟನ್ನಿನಲ್ಲಿ ಇಬ್ಬರು ಅಮೆರಿಕನ್ ಮುಖಂಡರನ್ನು ಬಂಧಿಸಲು ಯತ್ನಿಸಿದಾಗ. ಈ ಯುದ್ಧದಲ್ಲಿ ಮೊದಲು ಗುಂಡುಹಾರಿಸಿದವರು ಬ್ರಿಟಿಷರೇ, ಲೆಕ್ಸಿಂಗ್‌ಟನ್ನಿನಲ್ಲಿ. ಕನ್‌ಕಾರ್ಡ್‌ನಲ್ಲಿ ಮೊದಲಕದನ ನಡೆಯಿತು.

ಹೀಗೆ ಅಮೇರಿಕದ ಸ್ವಾತಂತ್ರ್ಯಸಮರ ಪ್ರಾರಂಭವಾಯಿತು. ಆದರೂ ಒಂದು ವರ್ಷಕಾಲ ಈ ವಸಾಹತುಗಳ ಜನರಿಗೆ ತಾಯ್ನಾಡಿನ ಸಂಬಂಧವನ್ನೂ ಪೂರ್ಣವಾಗಿ ಕಡಿದುಕೊಳ್ಳುವ ಇಚ್ಛೆ ಅಷ್ಟಾಗಿ ಇರಲೇಇಲ್ಲ. ದಂಗೆಯೆದ್ದಿದ್ದ ಸಂಸ್ಥಾನಗಳ ಪರಿಷತ್ತು "ಸ್ವಾತಂತ್ರ್ಯಘೋಷಣೆ" ಯನ್ನು ಹೊರಡಿಸಿದ್ದು 1776ರ ಮಧ್ಯಭಾಗದಲ್ಲಿಯಷ್ಟೆ. ಜಾರ್ಜ್‌ವಾಷಿಂಗ್‌ಟನ್ನನನ್ನು ಅಲ್ಲಿಯ ಕಮ್ಯಾಂಡರ್–ಇನ್–ಚೀಫ್ ಆಗಿ ನೇಮಿಸಲಾಯಿತು. ಆ ವಸಾಹತುಗಳ ಅಂದಿನ ಇತರ ಅನೇಕ ಮುಂದಾಳುಗಳಂತೆ ಈತನಿಗೂ ಫ್ರೆಂಚ್‌ರೊಡನೆ ನಡೆದ ಯುದ್ಧಗಳಲ್ಲಿ ಸೈನಿಕ ತರಪೇತು ಸಿಕ್ಕಿತ್ತು. 1777ರಲ್ಲಿ ಕೆನಡಾದಿಂದ ನ್ಯೂಯಾರ್ಕನ್ನು ಮುಟ್ಟಲು ಯತ್ನಿಸುತ್ತಿದ್ದ ಬ್ರಿಟಿಷ್

ಜನರಲ್ ಬರ್ಗಾಯ್ನ್‌ನು ಫ್ರೀಮನ್ಸ್ ಫಾರ್ಮ್ ಎಂಬಲ್ಲಿ ಸೋತು ಸಾರಟೋಗದಲ್ಲಿ ಶರಣಾಗತನಾಗಬೇಕಾಯಿತು. ಅದೇ ವರ್ಷ ಫ್ರೆಂಚರು ಮತ್ತು ಸ್ಪೇನಿನವರು ಬ್ರಿಟನ್ನಿನ ಮೇಲೆ ಯುದ್ಧ ಘೋಷಿಸಿದರ. ಇದರಿಂದ ಬ್ರಿಟನ್ನಿನ ಸಮುದ್ರ ಸಾರಿಗೆಗೆ ತುಂಬಾ ಅಡಚಣೆಯಾಯಿತು. ಮತ್ತೊಂದು ಬ್ರಿಟಿಷ್ ಸೈನ್ಯ ಜನರಲ್ ಕಾರ್ನ್‌ವಾಲಿಸನ ಕೈಕೆಳಗೆ ಇದ್ದಿದ್ದು ವರ್ಜಿನಿಯದ ಯಾರ್ಕ್‌ಟೌನ್ ಪರ್ಯಾಯ ದ್ವೀಪದಲ್ಲಿ ಸಿಕ್ಕಿಹಾಕಿಕೊಂಡು 1781ರಲ್ಲಿ ಶರಣಾಗತವಾಗಬೇಕಾಯಿತು. 1783 ರಲ್ಲಿ ಪ್ಯಾರಿಸ್ಸಿನಲ್ಲಿ ಶಾಂತಿ ಒಪ್ಪಂದವಾಯಿತು. ಮೇನ್‌ನಿಂದ ಜಾರ್ಜಿಯವರೆಗೆ ಇದ್ದ ಹದಿಮೂರು ವಸಾಹತುಗಳು ಸ್ವತಂತ್ರವಾದ ಸ್ವಯಂ ಪ್ರಭುತ್ವವುಳ್ಳ ಸಂಸ್ಥಾನಗಳ ಒಕ್ಕೂಟವಾದುವು. ಹೀಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳು ಅಸ್ತಿತ್ವಕ್ಕೆ ಬಂದುವು. ಕೆನಡಾ ಬ್ರಿಟಿಷ್ ಧ್ವಜಕ್ಕೆ ವಿಧೇಯವಾಗಿ ಉಳಿಯಿತು.

ನಾಲ್ಕು ವರ್ಷಗಳಕಾಲ ಈ ಸಂಸ್ಥಾನಗಳಿಗೆ ಒಕ್ಕೂಟದ ಕೆಲವು ಕಾನೂನುಗಳ ಅನುಸಾರ ನಡೆಯುತ್ತಿದ್ದ ಬಹು ಕ್ಷೀಣವಾದ ಕೇಂದ್ರ ಸರಕಾರವಿತ್ತು. ಮತ್ತು ಇವು ಸ್ವತಂತ್ರ ಪ್ರತ್ಯೇಕ ಸಮಾಜಗಳಾಗಿ ಒಡೆದು ಹೋಗುವುದು ಖಂಡಿತ ಎನಿಸುತ್ತಿತ್ತು. ಬ್ರಿಟಿಷರ ದ್ವೇಷ ಮತ್ತು ಫ್ರೆಂಚ್‌ರ ಆಕ್ರಮಣ ಪ್ರವೃತ್ತಿಗಳಿಂದಾಗಿ ಹೀಗೆ ಹಂಚಿ ಹೋಗುವುದರಿಂದ ಬರಬಹುದಾದ ಅಪಾಯುಗಳ ಅರಿವಾಗಿ ಈ ಒಕ್ಕೂಟ ತಕ್ಷಣ ಒಡೆದು ಹೋಗುವುದು ತಪ್ಪಿತು. 1788ರಲ್ಲಿ ಒಂದು ರಾಜ್ಯಾಂಗವನ್ನು ಬರೆದು ಅಂಗೀಕರಿಸಲಾಯಿತು. ಸಾಕಷ್ಟು ಅಧಿಕಾರಗಳನ್ನು ಪಡೆದಿರುವ ಅಧ್ಯಕ್ಷನನ್ನುಳ್ಳ ಮೊದಲಿಗಿಂತ ಶಕ್ತವಾದ ರಾಷ್ಟ್ರ ಸರ್ಕಾರ ಸ್ಥಾಪಿತವಾಯಿತು. 1812ರಲ್ಲಿ ಬ್ರಿಟನ್ನಿನೊಡನೆ ಮತ್ತೊಂದು ಯುದ್ಧನಡೆದು ಅದುವರೆಗೆ ಕ್ಷೀಣವಾಗಿದ್ದ ರಾಷ್ಟ್ರೀಯ ಐಕ್ಯಮತ್ಯದ ಭಾವನೆ ಹೊಸ ಕಸುವನ್ನು ಪಡೆಯಿತು. ಆದರೂ ಈ ಸಂಸ್ಥಾನಗಳು ಬಹು ವಿಸ್ತಾರವಾದ ಪ್ರದೇಶದಲ್ಲಿ ಹರಡಿದ್ದುದರಿಂದಲೂ, ಅವುಗಳ ಆಸೆ ಆಕಾಂಕ್ಷೆಗಳು ಬಹು ಭಿನ್ನವಾಗಿದ್ದುದರಿಂದಲೂ–ಅಂದಿನ ಸಾರಿಗೆ ಸೌಲಭ್ಯಗಳನ್ನು ಗಮನದಲ್ಲಿಟ್ಟುಕೊಂಡರೆ– ಖಂಡಿತವಾಗಿಯೂ ಈಗಲೋ ಆಗಲೋ ಈ ಒಕ್ಕೂಟ ಒಡೆದು ಯುರೋಪಿನ ದೇಶಗಳ ಅಳತೆಯ ಪ್ರತ್ಯೇಕ ರಾಷ್ಟ್ರಗಳು ಅಸ್ತಿತ್ವಕ್ಕೆ ಬರಬೇಕಾಗಿತ್ತು. ವಾಷಿಂಗ್‌ಟನ್ನಿಗೆ ಸರ್ಕಾರಿ ಕೆಲಸಕ್ಕಾಗಿ ಹೋಗಿ ಇರುವುದೆಂದರೆ ದೂರದಲ್ಲಿದ್ದ ಸೆನೇಟರುಗಳು ಮತ್ತು ಕಾಂಗ್ರೆಸ್ ಸದಸ್ಯರುಗಳು ದೀರ್ಘವಾದ ಶ್ರಮದಾಯಕವಾದ ಅಪಾಯಕರ ಪ್ರಯಾಣ ಮಾಡಬೇಕಾಗಿತ್ತು ಮತ್ತು ಎಲ್ಲರಿಗೂ ಸಮಾನವಾದ ಶಿಕ್ಷಣ, ಸಾಹಿತ್ಯ ಮತ್ತು ಜ್ಞಾನಗಳನ್ನು ಹಗಡುವುದಕ್ಕೆ ಇದ್ದ ತಾಂತ್ರಿಕ ಅಡಚಣೆಗಳನ್ನು ಗೆಲ್ಲುವುದು ಅಸಾಧ್ಯವೇ ಆಗಿತ್ತೆನ್ನಬೇಕು ಆದರೆ ಸಮಾಜಗಳಲ್ಲಿರುವ ಈ ರೀತಿಯ ಭಿನ್ನತೆಗಳನ್ನು ಸಂಪೂರ್ಣವಾಗಿ ತಪ್ಪಿಸುವ ಹೊಸ ಶಕ್ತಿಗಳು ಪ್ರಪಂಚದಲ್ಲಿ ಮೇಲೆ ಬರುತ್ತಿದ್ದವು. ನದಿಗಳಲ್ಲಿ ಸಂಚರಿಸುವ ಹಡಗೋಣಿ, ಬಳಿಕ ರೈಲುಗಾಡಿ, ಅನಂತರ ಟೆಲಿಗ್ರಾಫ್ ಇವುಗಳು ಕ್ಷಿಪ್ರದಲ್ಲಿಯೇ ಉಪಯೋಗಕ್ಕೆ ಬಂದು ಈ ಸಂಯುಕ್ತ

ಸಂಸ್ಥಾನಗಳು ಚೂರಾಗುವುದನ್ನು ತಪ್ಪಿಸಿ ಅಲ್ಲಿ ಚದುರಿಹೋಗಿದ್ದ ಜನರನ್ನು ಹಿರಿಯ ಆಧುನಿಕ ರಾಷ್ಟ್ರಗಳಲ್ಲಿ ಮೊದಲನೆಯದನ್ನಾಗಿ ಹೆಣೆದುವು.

ಇನಾದ ಇಪ್ಪತ್ತೆರಡು ವರ್ಷಗಳಾದ ಮೇಲೆ ಅಮೇರಿಕದ ಸ್ಪಾನಿಷ್ ವಸಾಹತುಗಳು ಈ ಹದಿಮೂರು ಸಂಸ್ಥಾನಗಳನ್ನು ಹಿಂಬಾಲಿಸಿ ಯೂರೋಪಿನ ಮತ್ತು ತಮ್ಮ ಸಂಬಂಧವನ್ನು ಕಡಿದುಕೊಂಡವು. ಆದರೆ ಇವುಗಳು ದಕ್ಷಿಣ ಅಮೇರಿಕ ಭೂಖಂಡದಾದ್ಯಂತ ಚದುರಿಹೋಗಿದ್ದುವು. ಉನ್ನತವಾದ ಪರ್ವತಶ್ರೇಣಿಗಳು, ಅರಣ್ಯಗಳು ಮತ್ತು ಮರಳುಕಾಡುಗಳು ಮತ್ತು ಪೋರ್ಚುಗಲ್ಲಿಗೆ ಸೇರಿದ್ದ ಬ್ರೆಜಿಲ್ ಇವುಗಳನ್ನು ಬೇರೆಯಾಗಿಟ್ಟಿದ್ದುವು. ಹೀಗಾಗಿ ಅಲ್ಲಿ ಅವುಗಳಿಂದ ಒಕ್ಕೂಟ ಅಸ್ತಿತ್ವಕ್ಕೆ ಬರಲಿಲ್ಲ. ಅವು ಪದೇ ಪದೇ ಯುದ್ಧಕ್ಕಿಳಿಯುವ ಮತ್ತು ಕ್ರಾಂತಿಗಳಾಗುವ ಪ್ರವೃತ್ತಿಯಿದ್ದ ಪ್ರಜಾತಂತ್ರ ರಾಷ್ಟ್ರಗಳ ಗುಂಪಾಗಿ ಉಳಿದುವು.

ಬ್ರೆಜಿಲ್ ಸಹ ಎಂದಾದರೂ ಯೂರೋಪಿನ ಸಂಬಂಧವನ್ನು ಕಳಚಿಕೊಳ್ಳಬೇಕಾಗಿತ್ತು. ಅಲ್ಲಿ ಕ್ರಿಯೆ ಬೇರೆ ಹಾದಿಹಿಡಿಯಿತು. 1807ರಲ್ಲಿ ನೆಪೋಲಿಯನ್ನನ ಫ್ರೆಂಚ್ ಸೈನ್ಯಗಳು ತಾಯಿನಾಡಾದ ಪೋರ್ಚುಗಲ್ಲನ್ನು ಆಕ್ರಮಿಸಿದಾಗ ಅಲ್ಲಿಂದ ರಾಜಮನೆತನದವರು ಬ್ರೆಜಿಲ್ಲಿಗೆ ಓಡಿ ಬಂದರು. ಅಂದಿನಿಂದ ಹಿಡಿದು ಈ ಎರಡು ರಾಜ್ಯಗಳು ಬೇರೆಬೇರೆಯಾಗುವವರೆಗೆ ಬ್ರೆಜಿಲ್ ಪೋರ್ಚುಗಲ್ಲಿನ ಅಧೀನ ರಾಜ್ಯವಾಗಿರುವ ಬದಲು ಪೋರ್ಚುಗಲ್ಲೇ ಬ್ರೆಜಿಲ್ಲಿನ ಅಧೀನ ರಾಜ್ಯವಾಗಿತ್ತು. 1822ರಲ್ಲಿ ಪೋರ್ಚುಗೀಸ್ ರಾಜನೊಬ್ಬನ ಮಗನಾದ ಒಂದನೆಯ ಪೆಡ್ರೊ ಎಂಬುವನ ಕೈಕೆಳಗೆ ಬ್ರೆಜಿಲ್ ತಾನೇ ಪ್ರತ್ಯೇಕ ಸಾಮ್ರಾಜ್ಯವೆಂದು ಘೋಷಿಸಿಕೊಂಡಿತು. ಆದರೆ ಈ ನೂತನ ಭೂ ಖಂಡಗಳು ರಾಜಪ್ರಭುತ್ವಕ್ಕೆ ಯಾವಾಗಲೂ ಅನುಕೂಲವಾಗಿಲ್ಲ. 1889ರಲ್ಲಿ ಬ್ರೆಜಿಲ್ಲಿನ ಚಕ್ರವರ್ತಿಯನ್ನು ಯಾವ ಗಲಾಟೆಯೂ ಇಲ್ಲದೆ ಯೂರೋಪಿಗೆ ರವಾನಿಸಿಬಿಟ್ಟರು. ಬ್ರೆಜಿಲ್ಲಿನ ಸಂಯುಕ್ತ ಸಂಸ್ಥಾನಗಳು ಉಳಿದ ಪ್ರಜಾತಂತ್ರ ಅಮೆರಿಕದೊಡನೆ ಸೇರಿಕೊಂಡವು.

(ಸಶೇಷ)

ಪ್ರಾ. ಅಪ್ಪಾಸಾಹೇಬ ಪೂಜಾರಿ

ದಶಕಪೂರ್ತಿ "ಮರಾಠಿ ಅರ್ಥಶಾಸ್ತ್ರ ಪರಿಷತ್" ಒಂದು ಸಿಂಹಾವಲೋಕನ

1. ಪೀಠಿಕೆ

ಮರಾಠಿ ಅರ್ಥಶಾಸ್ತ್ರ ಪರಿಷತ್ತಿನ ಕಲ್ಪನೆಯು, ಅರ್ಥಶಾಸ್ತ್ರ ಕ್ಷೇತ್ರದಲ್ಲಿ ಕಾರ್ಯಶೀಲರಾಗಿರುವ ವಿಚಾರವಂತರ ವಿಚಾರದಲ್ಲಿಯ ಒಮ್ಮತದಿಂದ ಮತ್ತು ಚರ್ಚೆಯಲ್ಲಿಂದ ಹೊರಬಂದ ಒಂದು ಅಪರಿಹಾರ್ಯ ಮತ್ತು ಅತ್ಯಾವಶ್ಯಕ ಘಟನೆಯಾಗಿದೆ. ಈ ದಿಶೆಯಲ್ಲಿ ಪೂರ್ವಸಿದ್ಧತೆ ಮಾಡುವ ದೃಷ್ಟಿಯಿಂದ 7 ಮತ್ತು 8 ಮಾರ್ಚ್ 1976ರಂದು ಪುಣೆಯಲ್ಲಿ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಸಿ. ವಿ. ಸೋವನಿ, ಗೋವರ್ಧನ ಪಾರೀಖ, ರವೀಂದ್ರ ಸಬನಿಸ, ರಮೇಶ ಪಾನಸೆ, ಆನಂದ ನಾಡಕರಣಿ, ಕಮಲಾಕರ ಪರಚುರೆ, ಪ್ರಮೋದ ಥೊಂಬರೆ, ದಿನಕರ ಜೋರಿಕರ, ವಿ. ಸಿ. ಜೋಶಿ ಮತ್ತು ವಾಮನರಾವ ಜೋಶಫಡೆಯವರು ಭಾಗವಹಿಸಿದ್ದರು. ಈ ವಿಚಾರಗೋಷ್ಠಿಯಲ್ಲಿ ಮರಾಠಿಯಲ್ಲಿ ಪ್ರಕಟಿತವಾದ ಅರ್ಥಶಾಸ್ತ್ರೀಯ ಲೇಖನವನ್ನು ಕುರಿತು ಸಾಕಷ್ಟು ಚರ್ಚೆಯಾಯಿತು. ಅಂತಿಮವಾಗಿ ಈ ಚರ್ಚೆಯಲ್ಲಿ ಎರಡು ಸಂಕಲ್ಪಿತ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. 1. ಮರಾಠಿ ಮಾಧ್ಯಮದಲ್ಲಿ ಅರ್ಥಶಾಸ್ತ್ರೀಯ ತತ್ವಚರ್ಚೆಗೆ ಮೀಸಲಾದ ಒಂದು ನಿಯತಕಾಲಿಕವನ್ನು ಹೊರತರುವುದು. 2. ಮರಾಠಿ ಮಾಧ್ಯಮದಲ್ಲಿ ಅರ್ಥಶಾಸ್ತ್ರದ ಅಧ್ಯಯನ ಮಾಡತಕ್ಕ ಶಿಕ್ಷಕರು, ಲೇಖಕರು, ಸಂಶೋಧಕರು, ವ್ಯವಸಾಯಿಕ ಅರ್ಥತಜ್ಞರು ಮತ್ತು ಇತರ ವಿಚಾರವಂತರನ್ನು ಕಾಲಕಾಲಕ್ಕೆ ಒಟ್ಟುಗೂಡಿಸಿ ವಿಚಾರ ವಿನಿಮಯ ಮಾಡುವ ಸಲುವಾಗಿ ಒಂದು ವ್ಯಾಸಪೀಠದ ಅವಶ್ಯಕತೆಯಲ್ಲಿಂದ 'ಮರಾಠಿ ಅರ್ಥಶಾಸ್ತ್ರ ಪರಿಷತ್ತಿನ' ಸ್ಥಾಪನೆಯನ್ನು ಮಾಡುವುದು.

ಈ ನಿರ್ಣಯಗಳನ್ನು ಕಾರ್ಯಾನ್ವಿತಗೊಳಿಸುವ ದೃಷ್ಟಿಯಿಂದ ಮರಾಠಿ ಅರ್ಥಶಾಸ್ತ್ರೀಯ ಕ್ಷೇತ್ರದಲ್ಲಿ ಕಾರ್ಯನಿರತರಾಗಿರುವ ವ್ಯಕ್ತಿಗಳನ್ನು ಸಂಪರ್ಕಿಸಿ ಅಧಿಕ ವಿಚಾರವಿನಿಮಯ ಮಾಡುವ ಸಲುವಾಗಿ, ಅವರನ್ನು ಸಂಸ್ಥಾಪಕ ಸದಸ್ಯರನ್ನಾಗಿ ಮಾಡಿಕೊಳ್ಳುವ ಸಲುವಾಗಿ, ಪರಿಷತ್ತಿನ ಸಂವಿಧಾನವನ್ನು ತಯಾರಿಸುವ ಸಲುವಾಗಿ

ಮುಂತಾದ ಪ್ರಾರಂಭಿಕ ಕಾರ್ಯಗಳಿಗಾಗಿ ಸ್ವಲ್ಪ ಅವಧಿ ಬೇಕಾಯಿತು. ಅವಶ್ಯಕವಾದ ಎಲ್ಲ ಪೂರ್ವ ತಯಾರಿ ಆದ ನಂತರ ದಿನಾಂಕ : 1 ಜನವರಿ 1977ರಂದು ಗೋಖಲೆ ಅರ್ಥಶಾಸ್ತ್ರ ಸಂಶೋಧನ ಸಂಸ್ಥೆ, ಪುಣೆಯಲ್ಲಿ ಸಂಸ್ಥಾಪಕ ಸದಸ್ಯರ ಸರ್ವಸಾಧಾರಣ ಸಭೆಯು ನೆರವೇರಿತು ಮತ್ತು ಆ ಸಭೆಯಲ್ಲಿಯೇ ಮರಾಠಿ ಅರ್ಥಶಾಸ್ತ್ರ ಪರಿಷತ್ತಿನ ಸ್ಥಾಪನೆಯಾಯಿತು. ಪರಿಷತ್ತಿನ ಸಲುವಾಗಿ ತಯಾರಿಸಿದ ಸಂವಿಧಾನವನ್ನು ಮನ್ನಿಸಲಾಯಿತು ಮತ್ತು ಅದರ ಜೊತೆಗೆ ಪರಿಷತ್ತು 'ಅರ್ಥಸಂವಾದ' ಎಂಬ ಹೆಸರಿನ ಒಂದು ತ್ರೈಮಾಸಿಕವನ್ನು ಹೊರಡಿಸುವ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

2. ಪರಿಷತ್ತಿನ ಪ್ರಯೋಜನ

ಮರಾಠಿ ಅರ್ಥಶಾಸ್ತ್ರ ಪರಿಷತ್ತಿನ ಸ್ಥಾಪನೆಯು ಮಹಾರಾಷ್ಟ್ರದ ಶೈಕ್ಷಣಿಕ ಕ್ಷೇತ್ರದಲ್ಲಿಯ ಒಂದು ಮಹತ್ವಪೂರ್ಣ ಘಟನೆಯೇ ಸರಿ. 1960ರಲ್ಲಿ ಏಕಭಾಷೀಯ ಮಹಾರಾಷ್ಟ್ರದ ಸ್ಥಾಪನೆಯಾದ ನಂತರ ಮರಾಠಿ ಅರ್ಥಶಾಸ್ತ್ರ ಪರಿಷತ್ತಿನಂತಹ ಸಂಸ್ಥೆಯ ಸ್ಥಾಪನೆಯು ಒಂದು ದೃಷ್ಟಿಯಿಂದ ಅವಶ್ಯಕವೆನಿಸಿತ್ತು. ಮಹಾರಾಷ್ಟ್ರ ಶಾಸನದಲ್ಲಿ ಆದರಂತೆ ಎಲ್ಲ ಶೈಕ್ಷಣಿಕ ಸ್ತರಗಳಲ್ಲೂ ಮರಾಠಿ ಭಾಷೆಯು ಅಧಿಕಾಧಿಕ ಉಪಯೋಗ ಆಗಬೇಕೆಂದು ತಿಳಿಸಲಾಗಿತ್ತು. ಅದರಂತೆ ಪರಿಷತ್ತಿನ ಸ್ಥಾಪನೆಗೆ ಅನೇಕ ಕಾರಣಗಳಿವೆ.

ಮಹಾರಾಷ್ಟ್ರ ರಾಜ್ಯ ಸ್ಥಾಪನೆಯಾಗುವ ಮೊದಲೇ ಕೆಲ ಕಾಲೇಜುಗಳೂ ಮತ್ತು ವಿಶ್ವವಿದ್ಯಾಲಯಗಳಲ್ಲಿ ಮರಾಠಿಯನ್ನು ಶಿಕ್ಷಣದ ಮಾಧ್ಯಮವೆಂದು ಉಪಯೋಗಿಸಲಾಗಿತ್ತು. ಕಳೆದ ಅನೇಕ ವರ್ಷಗಳಿಂದ ಮಹಾರಾಷ್ಟ್ರದ ಕಾಲೇಜುಗಳಲ್ಲಿ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ಇತ್ಯಾದಿ ವಿಷಯಗಳನ್ನು ಮರಾಠಿ ಮಾಧ್ಯಮದಲ್ಲಿಂದ ಕಲಿಸಲಾಗುತ್ತದೆ. ಮರಾಠಿಯಲ್ಲಿ ಅರ್ಥಶಾಸ್ತ್ರದ ಅನೇಕ ಗ್ರಂಥಗಳು ಮತ್ತು ಪಠ್ಯಪುಸ್ತಕಗಳು ಕಳೆದ ಅನೇಕ ವರ್ಷಗಳಿಂದ ಪ್ರಕಾಶಿತಗೊಳ್ಳುತ್ತಲಿವೆ. ಮರಾಠಿ ಮಾಧ್ಯಮದಲ್ಲಿಯ ಅರ್ಥಶಾಸ್ತ್ರದ ಪುಸ್ತಕಗಳನ್ನೋದಿ ಪದವಿಯನ್ನು ಪಡೆದ ಅನೇಕ ವಿದ್ಯಾರ್ಥಿಗಳು ಇಂದು ಅನೇಕ ಕಡೆಗಳಲ್ಲಿ ಅರ್ಥಶಾಸ್ತ್ರದ ಬೋಧನೆ ಮಾಡುತ್ತಲಿದ್ದಾರೆ. ಪ್ರಾರಂಭಾವಸ್ಥೆಯಲ್ಲಿ ವಿದ್ಯಾರ್ಥಿ ಸಮೂಹದಲ್ಲಿ ಉಪಯೋಗಿಸಲ್ಪಡುವ ಪಠ್ಯಪುಸ್ತಕಗಳಲ್ಲಿ ಅನೇಕ ದೋಷಗಳು ಉಳಿದಿದ್ದವು. ವಿಷಯದ ನಿರೂಪಣೆ, ಉಪಯೋಗಿಸಲ್ಪಟ್ಟ ಪರಿಭಾಷೆ ವಿಶ್ಲೇಷಣೆಯ ಪಾತಳಿ ಇತ್ಯಾದಿ ವಿಷಯಗಳನ್ನು ಕುರಿತು ವಿಚಾರ ಮಾಡಲಾಗಿ ಆ ಕಾಲದ ಬಹುತೇಕ ಪಠ್ಯಪುಸ್ತಕಗಳು ನಿಕೃಷ್ಟ ದರ್ಜೆಯದಾಗಿದ್ದವು ಎಂದು ಹೇಳಬಹುದು. ಗ್ರಂಥ ನಿರ್ಮಿತಿಯ ಕ್ಷೇತ್ರದಲ್ಲಿ ಮತ್ತು ವಿಶೇಷತಃ ಪಠ್ಯಪುಸ್ತಕಗಳ ಸಂದರ್ಭದಲ್ಲಿ ಕಂಡು ಬರುವ ಅರಾಜಕತೆ ದೂರಮಾಡುವ ಸಲುವಾಗಿ ಮರಾಠಿ ಅರ್ಥಶಾಸ್ತ್ರ ಪರಿಷತ್ತಿನ ಸ್ಥಾಪನೆಯಾಗುವದು ಅವಶ್ಯಕವಿತ್ತು. ಆ ದೃಷ್ಟಿಯಿಂದ ನೋಡಲಾಗಿ ಪರಿಷತ್ತಿನ ಸ್ಥಾಪನೆಯು ಸ್ವಲ್ಪ

ತಡವಾಗಿಯೇ ಆಯಿತು. ವಿಜ್ಞಾನ ಶಾಖೆಯಲ್ಲಿಯ ವಿಷಯಗಳನ್ನು ಇಂದಿಗೂ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಸುತ್ತಲಿದ್ದರೂ ಕೂಡಾ 'ಮರಾಠಿ ವಿಜ್ಞಾನ ಪರಿಷತ್ತಿನ' ಸ್ಥಾಪನೆಯು ಈ ಮೊದಲೇ ಆದದ್ದು ಉಲ್ಲೇಖನೀಯ ಸಂಗತಿಯೇ ಸರಿ.

3. ಅರ್ಥಸಂವಾದದ ಉದ್ದೇಶಗಳು

ಅರ್ಥಶಾಸ್ತ್ರ ಪರಿಷತ್ತಿನ ಕಾರ್ಯಕ್ಷೇತ್ರವು ಪಠ್ಯಪುಸ್ತಕಕ್ಕೆ ಸೀಮಿತವಾಗಿಲ್ಲ. ಪರಿಷತ್ತಿನ ಕಾರ್ಯವನ್ನು ಅವಿರತವಾಗಿ ನಡೆಸುವ ಸಲುವಾಗಿ ಒಂದು ಮುಖಪತ್ರದ ಅವಶ್ಯಕತೆ ಇತ್ತು. ಇದುವೇ 'ಅರ್ಥಸಂವಾದ', ಮರಾಠಿಯಲ್ಲಿಯ ಅರ್ಥಶಾಸ್ತ್ರದ ಲೇಖನವು ಇನ್ನೂ ಪ್ರಥಮಾವಸ್ಥೆಯಲ್ಲಿದೆ. ಆದ್ದರಿಂದ ಅರ್ಥಶಾಸ್ತ್ರದ ಲೇಖನಕ್ಕೆ ಮತ್ತು ಚರ್ಚೆಗೆ ಸಾಕಷ್ಟು ಅವಕಾಶವಿದೆ. 'ಅರ್ಥಸಂವಾದ'ವನ್ನು ಸತತವಾಗಿ ನಡೆಸಿದ್ದಾದರೆ ಮತ್ತು ಆ ಸಂವಾದವು ಪರಿಣಾಮಿ ಫಲದಾಯಿಗೊಂಡದ್ದಾದರೆ, ಅರ್ಥಶಾಸ್ತ್ರೀಯ ಕಲ್ಪನೆಗಳು (concept) ಅಧಿಕ ಸುಸ್ಪಷ್ಟವಾಗಬಹುದು. ಅರ್ಥಶಾಸ್ತ್ರೀಯ ಪರಿಭಾಷೆಯು ಅಧಿಕ ಅಚ್ಚುಕಟ್ಟು, ಮತ್ತು ನಿಶ್ಚಿತವಾಗಲು ಸಹಾಯಕಾರಿಯಾಗಬಹುದು. ದೇಶದಲ್ಲಿಯ ಆರ್ಥಿಕ ಸಮಸ್ಯೆಗಳನ್ನು ಆಳವಾಗಿ ಅಭ್ಯಸಿಸಿ ಅದನ್ನು ಕುರಿತು ಲೇಖನಗಳನ್ನು ತಯಾರಿಸುವ ತರುಣ ಪ್ರಾಧ್ಯಾಪಕರನ್ನು ಪ್ರವೃತ್ತಗೊಳಿಸುವುದು, ಅಂತರರಾಷ್ಟ್ರೀಯ ಆರ್ಥಿಕ ಕ್ಷೇತ್ರಗಳಲ್ಲಿ ಜರುಗುವ ಮಹತ್ವದ ಬದಲಾವಣೆಗಳ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದು, ಆರ್ಥಿಕ ವಿಷಯವನ್ನು ಕುರಿತು ಪ್ರಕಟಗೊಂಡ ಮಹತ್ವದ ಇಂಗ್ಲೀಷ್ ಮತ್ತು ಮರಾಠಿ ಗ್ರಂಥಗಳ ಪರೀಕ್ಷಣೆ ಮಾಡುವುದಾಗಲೀ ಅಥವಾ ಅದರ ಪೂರ್ಣ ಪರಿಚಯವನ್ನಾದರೂ ಮಾಡಿಕೊಳ್ಳುವುದು ಇತ್ಯಾದಿ ಉದ್ದೇಶಗಳನ್ನು ಸಾಧ್ಯಪಡಿಸುವ ಸಲುವಾಗಿ 'ಅರ್ಥಸಂವಾದ' ತ್ರೈಮಾಸಿಕದ ಉಪಯೋಗವು ಸಾಕಷ್ಟು ಆಗಲಿದೆ. ಈ ಹೊತ್ತಿನವರೆಗೆ ಅರ್ಥಶಾಸ್ತ್ರೀಯ ಸಿದ್ಧಾಂತವನ್ನು ಕುರಿತು ಅಥವಾ ಪ್ರಚಲಿತ ಆರ್ಥಿಕ ಪ್ರಶ್ನೆಗಳನ್ನು ಕುರಿತು ಮರಾಠಿ ಮಾಧ್ಯಮದಲ್ಲಿ ಚರ್ಚೆ ಮಾಡುವ ಸಲುವಾಗಿ ಸುಯೋಗ್ಯವಾದ ಒಂದು ವ್ಯಾಸಪೀಠವಿರಲಿಲ್ಲ. ಮರಾಠಿ ಅರ್ಥಶಾಸ್ತ್ರ ಪರಿಷತ್ತು 'ಅರ್ಥಸಂವಾದದ' ಮೂಲಕ ಇಂತಹ ವ್ಯಾಸಪೀಠವನ್ನು ಉಪಲಬ್ಧ ಮಾಡಿಕೊಟ್ಟಿದೆ. ವಿವಿಧ ಪ್ರಶ್ನೆಗಳ ಅಭ್ಯಾಸಪೂರ್ಣ ಚರ್ಚೆ ಮಾಡುವ ಸಲುವಾಗಿ ಈ ವ್ಯಾಸಪೀಠವನ್ನು ಎಷ್ಟರಮಟ್ಟಿಗೆ ಉಪಯೋಗ ಮಾಡಿಕೊಳ್ಳಲಾಗುವುದೋ ಅಷ್ಟು ಪ್ರಮಾಣದಲ್ಲಿ ಮರಾಠಿಯಲ್ಲಿಯ ಅರ್ಥಶಾಸ್ತ್ರೀಯ ಲೇಖನದ ದರ್ಜೆ ಸುಧಾರಿಸುವುದು; ಪ್ರಶ್ನೆಗಳನ್ನು ಬಿಡಿಸುವುದು ಸುಲಭವಾಗಿ ಪರಿಣಾಮವಾಗಿ ಅಧ್ಯಾಪನದಲ್ಲಿ ಕೂಡ ಸುಧಾರಣೆಯಾಗಬಹುದು.

4. ಆರ್ಥಿಕ ವ್ಯವಸ್ಥಾಪನೆ

'ಅರ್ಥಸಂವಾದದ' ಪ್ರಕಟಣೆಯು ಸಲುವಾಗಿ ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಮಂಡಳ ಮತ್ತು ಭಾರತೀಯ ಸಾಮಾಜಿಕ ವಿಜ್ಞಾನ ಅನುಸಂಧಾನ ಪರಿಷತ್ತು, ಪಶ್ಚಿಮ ವಿಭಾಗೀಯ ಕೇಂದ್ರದಿಂದ ಅನುದಾನ ಸಿಗುತ್ತದೆ. ಮರಾಠಿ ಅರ್ಥಶಾಸ್ತ್ರ ಪರಿಷತ್ತು, 'ಅರ್ಥಸಂವಾದದ' ಸಲುವಾಗಿ ಪ್ರತಿವರ್ಷ ಅನುದಾನದ ಮೇಲೆ ಅವಲಂಬಿಸಿರುವುದಕ್ಕಿಂತ ಸ್ಥಾಯಿ ಸ್ವರೂಪದ ಒಂದು ನಿಧಿ ಸ್ಥಾಪಿಸುವುದಾಗಿ ಸಾಹಿತ್ಯ ಸಾಂಸ್ಕೃತಿಕ ಮಂಡಳವು ಪರಿಷತ್ತಿಗೆ ಸೂಚನೆಯನ್ನು ಮಾಡಿತು. ಈ ಸ್ಥಾಯಿನಿಧಿಗೆ ಮಂಡಳದ ಕಡೆಯಿಂದ ಪ್ರತಿವರ್ಷ ರೂ. 1000 ದಂತೆ ಐದು ವರ್ಷದ ವರೆಗೆ ಅನುದಾನ ಸಿಗಬಹುದು. ಆದರೆ ಪರಿಷತ್ತು ಆ ನಿಧಿಗೆ ಪ್ರತಿವರ್ಷ ರೂ. 3000 ಗಳನ್ನು ಐದು ವರ್ಷದ ತನಕ ಕೊಡಬೇಕು. ಅಂದರೆ ಪರಿಷತ್ತಿನ ಸಂಚಿತ ಠೇವಣಿಯಲ್ಲಿ ಒಟ್ಟು ರೂ. 65000 ತೊಡಗಿಸಲಾಗುವದು. ಪರಿಷತ್ತು ಐದು ವರ್ಷದ ತನಕ ಪ್ರತಿ ವರ್ಷ ರೂ. 3000 ಕೊಡುವ ಕರಾರು ಸಂಯುಕ್ತಿಕವೆನಿಸಿದರೂ ಅದರ ಸಧ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಕಠಿಣಸಾಧ್ಯ. ಪರಿಷತ್ತಿನ ಈ ಅಡಚಣೆಯನ್ನು ಗಮನಿಸಿ ಪರಿಷತ್ತಿನ ಆಜೀವ ಸದಸ್ಯರಾದ ಮತ್ತು ವಿಖ್ಯಾತ ಅರ್ಥಶಾಸ್ತ್ರಜ್ಞ ಪ್ರಾಧ್ಯಾಪಕ ವಿ. ವೈ. ಕೊಲ್ಹಟಕರವರು ಈ ಸಂಚಿತ ಠೇವಣಿಗೆ ಐದು ವರ್ಷಗಳವರೆಗೆ ಪ್ರತಿ ವರ್ಷ ರೂ. 2000 ಕೊಡುವುದಾಗಿ ಒಪ್ಪಿಕೊಂಡಿರುವರು. ಇದರಿಂದ ಪರಿಷತ್ತಿಗೆ ಪ್ರತಿ ವರ್ಷ ರೂ. 1000 ತುಂಬವುದಷ್ಟೇ ಉಳಿಯಿತು. 'ಅರ್ಥಸಂವಾದದ' ಪ್ರಕಟಣೆಯು ದಿನೇ ದಿನೇ ಹೆಚ್ಚಾಗುತ್ತಿರುವ ಖರ್ಚನ್ನು ಹೇಗೆ ತುಂಬಿಕೊಳ್ಳಬೇಕು ಎಂಬ ವಿವೇಚನೆಯುಲ್ಲಿಂದ ಪರಿಷತ್ತು ಈಗಂತೂ ಅಂಶತಃ ಮುಕ್ತಗೊಂಡಿದೆ.

5. ಲೇಖನ ಸಾಹಿತ್ಯದ ವರ್ಗೀಕರಣ

ಮೊದಲನೇ ತ್ರೈಮಾಸಿಕವು ಏಪ್ರಿಲ–ಜೂನ 1977ರಲ್ಲಿ ಪ್ರಕಟವಾಯಿತು. ಕಳೆದ ಒಂಬತ್ತು ವರ್ಷಗಳಲ್ಲಿ 'ಅರ್ಥಸಂವಾದ'ದಲ್ಲಿ ವಿವಿಧ ಪ್ರಕಾರದ ಲೇಖನಗಳು ಪ್ರಕಟವಾದವು. ಅದರ ಸ್ಥೂಲ ವರ್ಗೀಕರಣವನ್ನು ಈ ಮುಂದಿನಂತೆ ಮಾಡಲಾಗಿದೆ.

ಲೇಖನಗಳ ಪ್ರಕಾರಗಳು	ಲೇಖನಗಳ ಸಂಖ್ಯೆ
1	2
1. ಸ್ವತಂತ್ರ ಲೇಖನ	88
2. ಪುನರ್ ಮುದ್ರಿತ ಲೇಖನ	7
3. ಅನುವಾದಿತ ಲೇಖನ	15
4. ಟಿಪ್ಪಣಿ ಮತ್ತು ಚರ್ಚೆ	43

1	2
5. ಗ್ರಂಥ ಪರೀಕ್ಷಣೆ ಮತ್ತು ಗ್ರಂಥ ಪರಿಚಯ	33
6. ಪರಿಭಾಷೆ ಚರ್ಚೆ	25
7. ಅಹವಾಲ್	24
8. ಇತರ	6
ಒಟ್ಟು	241

ಈ ಎಲ್ಲ ಲೇಖನಗಳು ಒಂಬತ್ತು ಖಂಡಗಳಲ್ಲಿ ಮಂಡಿಸಿದ್ದು, ಅವುಗಳ ಪುಟ್ಟ ಸಂಖ್ಯೆಯು ಒಟ್ಟಾರೆ 1852ರಷ್ಟು ಇದೆ.

6. ಮರಾಠಿ ಅರ್ಥಶಾಸ್ತ್ರೀಯ ಲೇಖನದ ಪೂರ್ವೇತಿಹಾಸ :

ಮರಾಠಿ ಅರ್ಥಶಾಸ್ತ್ರೀಯ ಲೇಖನಕ್ಕೆ ಸ್ವಲ್ಪವಾದರೂ ಪೂರ್ವ ಇತಿಹಾಸವಿದೆ. ಕೆಲ ಪರಂಪರೆಗಳಿವೆ. ಮತ್ತು ಈ ಹೊತ್ತಿನ ಮರಾಠಿ ಅಭ್ಯಾಸಕನು ಈ ಇತಿಹಾಸದ ಮತ್ತು ಪರಂಪರೆಯ ಪರಿಚಯವನ್ನು ಮಾಡಿಕೊಳ್ಳುವುದು ಶ್ರೇಯಸ್ಕರವೆನಿಸುವುದು. ಈ ಸಂದರ್ಭದಲ್ಲಿ 'ಅರ್ಥಸಂವಾದ'ವು ಮಾಡಿದ ಕಾರ್ಯ ಲಕ್ಷಣೀಯವಾಗಿದೆ ಗತಶತಕದಲ್ಲಿ ಕೆಲ ಮಹಾರಾಷ್ಟ್ರೀಯ ವಿದ್ವಾಂಸರು ಅರ್ಥಶಾಸ್ತ್ರೀಯ ಅಭ್ಯಾಸದತ್ತ ಸಾಕಷ್ಟು ಲಕ್ಷ್ಯ ಹರಿಸಿರುವರು. ಇಷ್ಟೇ ಅಲ್ಲ, ಮರಾಠಿಯಲ್ಲಿ ಅರ್ಥಶಾಸ್ತ್ರೀಯ ಗ್ರಂಥ ರಚನೆ ಮಾಡುವ ಪ್ರಯತ್ನ ಮಾಡಿದರು. ಇಂತಹ ಮರಾಠಿ ಲೇಖನಗಳನ್ನು ಒತ್ತಟ್ಟೀಕರಿಸಿ ಗೋಖಲೆ ಅರ್ಥಶಾಸ್ತ್ರ ಸಂಶೋಧನ ಸಂಸ್ಥೆಯು ಅವುಗಳನ್ನು ಪ್ರಕಟಿಸಿತು. ಸಂಪಾದಕರು ದಿ.ಕೆ. ಬೇಡೆಕರ. ಗಣೇಶ ಜನಾರ್ದನ ಅಕಾಸೆಯವರು ಬರೆದ 'ಅರ್ಥಶಾಸ್ತ್ರದ ಮೂಲತತ್ವಗಳು' ಎಂಬ ಗ್ರಂಥದ ವಿಮರ್ಶೆಯನ್ನು ಜ್ಞಾನ ವಿಸ್ತಾರದ 2 ಮೇ 1892ರ ಸಂಚಿಕೆಯಲ್ಲಿ ಮಾಡಲಾಗಿದೆ. ವಿಮರ್ಶೆ ಮಾಡಿದವರು ವಿಷ್ಣು ಮೋರೇಶ್ವರ ಮಹಾಜನಿ. ಮರಾಠಿ ಅರ್ಥಶಾಸ್ತ್ರೀಯ ಇತಿಹಾಸದಲ್ಲಿ ಈ ಗ್ರಂಥ ಪರೀಕ್ಷಣೆಯು ಅತ್ಯಂತ ಮಹತ್ವದ ಘಟನೆಯೇ ಸರಿ. ಕಾರಣ ಆ ವಿಮರ್ಶೆಯಲ್ಲಿ ಮಾರ್ಶಲ್‌ರವರ ಗ್ರಂಥದ ಉಲ್ಲೇಖವಿದೆ. ಮಾರ್ಶಲ್‌ರವರ "ಅರ್ಥಶಾಸ್ತ್ರದ ಮೂಲ ತತ್ವಗಳು" ಎಂಬ ಗ್ರಂಥವು 1890ರಲ್ಲಿ ಪ್ರಕಟಗೊಂಡಿತ್ತು. ಮಹಾಜನಿಯವರ 1892ರಲ್ಲಿಯ ವಿಮರ್ಶೆಯಲ್ಲಿ ಈ ಗ್ರಂಥದ ಉಲ್ಲೇಖವಾಗುತ್ತಲಿದೆ. ಎಂದಬಳಿಕ ಆ ಕಾಲದಲ್ಲಿ ಕೂಡಾ ನಮ್ಮ ವಿದ್ವಾಂಸರ ಸೂಕ್ಷ್ಮ ಲಕ್ಷ್ಯವು ಹೊಸತಾಗಿ ಮೂಡಿಬರುವ ಗ್ರಂಥಗಳೆಡೆ ಇತ್ತು ಎಂಬುದು ಸ್ಪಷ್ಟವಾಗುವದು.

ಈ ಮುಂಚೆ ಕೆಲ ಮಹಾರಾಷ್ಟ್ರೀಯರು ಅರ್ಥಶಾಸ್ತ್ರೀಯ ಲೇಖನವನ್ನು ಇಂಗ್ಲಿಷಿನಲ್ಲಿ ಮಾಡಿದರು. ಮ. ಗೊ. ರಾನಡೆಯವರು ಭಾರತೀಯ ಅರ್ಥಶಾಸ್ತ್ರ

ಈ ವಿಷಯದ ಮೇಲಿನ ಲೇಖನವನ್ನು ಡೆಕ್ಕನ ಕಾಲೇಜದಲ್ಲಿ ಸಾದರಪಡಿಸಿದ್ದಕ್ಕೆ ಐತಿಹಾಸಿಕ ಮಹತ್ವವಿದೆ. ಇದೇ ವಿಷಯದ ಮೇಲೆ ಶ್ರೀ ವ್ಯ. ಕೇತಕರರವರು ಕಲಕತ್ತಾ ವಿಶ್ವವಿದ್ಯಾಲಯದಲ್ಲಿ ವ್ಯಾಖ್ಯಾನವನ್ನು ಕೊಟ್ಟಿದ್ದರು (1916). ಅವರ ಕೆಲ ಭಾಗದ ಭಾಷಾಂತರವು ಜ್ಞಾನಕೋಶದಲ್ಲಿ ಪ್ರಕಟವಾಗಿದೆ. ರಾನಡೆಯವರನ್ನು ನಾವು ಭಾರತೀಯ ಅರ್ಥಶಾಸ್ತ್ರದ ಜನಕರೆಂದು ಸಂಭೋಧಿಸುತ್ತೇವೆ. ಆದರೆ ಭಾರತೀಯ ಅರ್ಥಶಾಸ್ತ್ರವೆಂದರೇನು? ಭಾರತೀಯ ಅರ್ಥಶಾಸ್ತ್ರ ಈ ಕಲ್ಪನೆಗೆ ಮೂರ್ತಸ್ವರೂಪ ಪ್ರಾಪ್ತಿಸಿ ಕೊಡುವ ಪ್ರಥಮ ಪ್ರಯತ್ನವನ್ನು ಒಬ್ಬ ಮಹಾರಾಷ್ಟ್ರೀಯ ಪ್ರಾಧ್ಯಾಪಕ ಮಾಡಿರುವರು. ಅವರೇ ವಾಮನ ಗೋವಿಂದ ಕಾಳೆ. ಇದೇ ವಿಷಯದ ಸಾಕಷ್ಟು ವಿಸ್ತಾರಿತ ಮತ್ತು ಸುಧಾರಿತ ಸ್ವರೂಪವು ಜಠಾರ ಮತ್ತು ಬೇರಿ ಈ ಇಬ್ಬರು ಮಹಾರಾಷ್ಟ್ರೀಯ ಪ್ರಾಧ್ಯಾಪಕರ ಇಂಗ್ಲೀಷ್ ಗ್ರಂಥದಲ್ಲಿ ಸಿಗುವುದು.

7. ಲೇಖನದಲ್ಲಿಯ ವಿವಿಧತೆ:

ಈ ವರೆಗೆ "ಅರ್ಥಸಂವಾದ"ದಲ್ಲಿ 124 ಲೇಖನಗಳು ಪ್ರಕಟವಾಗಿದ್ದು ಅವುಗಳಲ್ಲಿ ಸ್ವತಂತ್ರ ಲೇಖನಗಳು, ಟಿಪ್ಪಣಿಗಳು ಇತ್ಯಾದಿಗಳ ಸಮಾವೇಶವಿದೆ. ಈ 124 ಲೇಖನಗಳ ಪೈಕಿ 64 ಲೇಖನಗಳು ಸೈದ್ಧಾಂತಿಕ ಸ್ವರೂಪದ್ದು. 60 ಲೇಖನಗಳು ಭಾರತೀಯ ಅರ್ಥವ್ಯವಸ್ಥೆಯ ಸಮಸ್ಯೆಯನ್ನು ಕುರಿತು ಇದ್ದಂತವು. ಕೇವಲ ಮಹಾರಾಷ್ಟ್ರೀಯ ಆರ್ಥಿಕ ಪ್ರಶ್ನೆಗಳ ಮೇಲೆ 24 ಲೇಖನಗಳು ಪ್ರಕಟಗೊಂಡಿವೆ. ಪರಿಷತ್ತಿನ ವಾರ್ಷಿಕ ಅಧಿವೇಶನದಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣವನ್ನು 'ಅರ್ಥಸಂವಾದ'ದಲ್ಲಿ ಮುದ್ರಿಸುವ ಪದ್ಧತಿ ಇದೆ. ಈ ಹೊತ್ತಿನವರೆಗೆ 9 ಭಾಷಣಗಳು ಪ್ರಕಟವಾಗಿದ್ದು, ಅವುಗಳಲ್ಲಿ 6 ಭಾಷಣಗಳ ವಿಷಯವು ಅಖಿಲಭಾರತೀಯ ಸ್ವರೂಪದಾಗಿದ್ದು, ಎರಡು ಭಾಷಣಗಳು ಮಹಾರಾಷ್ಟ್ರದ ಆರ್ಥಿಕ ಪ್ರಶ್ನೆಗಳನ್ನು ಕುರಿತು ಇದ್ದರೆ, ಒಂದು ಭಾಷಣವು ಕಾರ್ಲ ಮಾರ್ಕ್ಸರವರ ವಿಚಾರವನ್ನು ಕುರಿತಾಗಿತ್ತು. ಕೆಲ ಸ್ಥಾನಿಕ ಪ್ರಶ್ನೆಗಳ ತಪಶೀಲವಾರ ಅಭ್ಯಾಸಮಾಡಿ ಸಂಶೋಧನಾತ್ಮಕ ಲೇಖನ ಮತ್ತು ಟಿಪ್ಪಣಿಗಳು ಪ್ರಕಟಗೊಂಡಿವೆ.

1977 ರಿಂದ 'ಅರ್ಥಸಂವಾದ'ದಲ್ಲಿ ಸೈದ್ಧಾಂತಿಕ ವಿಷಯವನ್ನು ಕುರಿತು 64 ಲೇಖನಗಳು ಪ್ರಕಟಗೊಂಡವು. ಅವುಗಳಲ್ಲಿ ಹೆಚ್ಚು ಲೇಖನಗಳನ್ನು ಪ್ರಕಟಪಡಿಸಿದವರೆಂದರೆ ನಿ. ವಿ. ಸೊವನಿ ಮತ್ತು ಭ. ಗ. ಬಾಪಟ. 'ಅರ್ಥಸಂವಾದ' ಪ್ರಾರಂಭವಾದಂದಿನಿಂದ ಅವರಲ್ಲಿ ನಿ. ವಿ. ಸೊವನಿಯವರು 24 ಲೇಖನಗಳನ್ನು ಪ್ರಕಟಪಡಿಸಿದರು. ಅವುಗಳ ಪೈಕಿ 12 ಲೇಖನಗಳು ಸೈದ್ಧಾಂತಿಕ ಸ್ವರೂಪದ್ದಾಗಿದ್ದವು. ಭ. ಗ. ಬಾಪಟರವರು 14 ಲೇಖನಗಳನ್ನು ಪ್ರಕಟಿಸಿದ್ದು, ಅವುಗಳ ಪೈಕಿ 11 ಲೇಖನಗಳ ವಿಷಯವು ಸೈದ್ಧಾಂತಿಕವಾಗಿದೆ. ನಿ. ವಿ. ಸೊವನಿಯವರ ಲೇಖನದಲ್ಲಿ ಸಾಕಷ್ಟು ವಿವಿಧತೆ ಕಂಡು ಬರುತ್ತದೆ. ಆದರೆ

ಅವರ ಸೈದ್ಧಾಂತಿ ಲೇಖನದಲ್ಲಿಯ ಭಾಷೆಯು ಅಸ್ವಾಭಾವಿಕವಿದ್ದು, ಆಕಲನದ ಸಲುವಾಗಿ ಸ್ವಲ್ಪ ಗಡಚುವೆನಿಸುವುದು. ಅವರ ಸೈದ್ಧಾಂತಿಕ ಲೇಖನದ ವಿಷಯಗಳು ಈ ಮುಂದಿನಂತೆ ಇವೆ. 1. ಸಮತೋಲದ ಕಲ್ಪನೆ ಮತ್ತು ಅರ್ಥಚಿಕಿತ್ಸೆ. 2. 'ಮೌಲ್ಯಗಳ ಬೆಲೆಗಳಲ್ಲಿ' ರೂಪಾಂತರ: ಮಾರ್ಕ್ಸನ ವಿಚಾರ. 3. ಸಿಮಾಂತ, ವಿಕಲಜ ತ್ವರಕ ಮತ್ತು ತ್ವರಣ ಸಿದ್ಧಾಂತ. 4. ವ್ಯಷ್ಟಿ ಮತ್ತು ಸಮಷ್ಟಿ ಇವು ಅರ್ಥಶಾಸ್ತ್ರಗಳೇ ಅಥವಾ ಅರ್ಥಶಾಸ್ತ್ರ. 5. ಭಾಟಕ. 6. ಸ್ಪರ್ಧಾ ವಿಚಾರಸರಣಿ. 7. ಹೆಚ್ಚಿಕೆಯ ಮಾಪನ ಉತ್ಪಾದನೆ, ಮತ್ತು ಆರ್ಥಿಕ ಅನುಕೂಲತೆ ಈ ಸಂಬಂಧೀಯ ಅರ್ಥಶಾಸ್ತ್ರೀಯ ಸಿದ್ಧಾಂತ. 8. ಅರ್ಥಸಿದ್ಧಾಂತ–ತಪ್ಪು ಭ್ರಮೆಯದು ಈ ವಿಷಯವನ್ನು ಕುರಿತು ಅನೇಕ ಲೇಖನಗಳು. 9 ಅರ್ಥಶಾಸ್ತ್ರ ಇದು ವೈಜ್ಞಾನಿಕ ಶಾಸ್ತ್ರವೇ? ಇವುಗಳ ಹೊರತಾಗಿ ಸೊವನಿಯವರು 'ಕೀನ್ಸ–ಶಾಸ್ತ್ರಜ್ಞ ಅಥವಾ ರಾಜಕಾರಣಿ' ಈ ವಿಷಯವನ್ನು ಕುರಿತು ಒಂದು ಲೇಖನವನ್ನು ಭಾಷಾಂತರಿಸಿರುವರು.

ಭ. ಗ. ಬಾಪಟರವರ ಬಹುತೇಕ ಲೇಖನಗಳು ಅಂತರಾಷ್ಟ್ರೀಯ ಅರ್ಥವ್ಯವಹಾರ (Theory of International Trade) ಈ ವಿಷಯದ ಮೇಲೆ ಕೇಂದ್ರೀಕೃತವಾಗಿವೆ. 'ಉತ್ಪಾದನ ಶಕ್ಯತೆಯುವಕ್ರ' ಈ ವಿಷಯದ ಮೇಲೆ ಎರಡು ಮತ್ತು 'ಘಟಕ ವೃದ್ಧಿಯಿಂದಾಗುವ ವಿಕಾಸ ಸಂಬಂಧಿ ರಿಬರ್ಝಿಸ್ಕಿರವರ ಪ್ರಯೋಗ' ಈ ವಿಷಯದ ಮೇಲೆ ಒಂದು ಟಿಪ್ಪಣಿಯನ್ನು ಕೂಡಾ ಪ್ರಕಟಪಡಿಸಿದರು.

1983ರಲ್ಲಿ ಕಾರ್ಲಮಾರ್ಕ್ಸರವರ ನಿರ್ವಾಣ ಶತಾಬ್ದಿ ಮತ್ತು ಜಾನ್ ಮೆನಾರ್ಡ ಕೀನ್ಸರವರ ಜನ್ಮಶತಾಬ್ದಿಯನ್ನು ಜಗತ್ತಿನ ನಾದ್ಯಂತ ಆಚರಿಸಲಾಯಿತು. ಆಧುನಿಕಅರ್ಥಶಾಸ್ತ್ರ ಮತ್ತು ಅರ್ಥಶಾಸ್ತ್ರೀಯ ಲೇಖನ ಇವುಗಳ ಮೇಲೆ ಈ ಇಬ್ಬರು ಅರ್ಥಶಾಸ್ತ್ರಜ್ಞರ ವಿಚಾರಗಳ ಪ್ರಭಾವ ಸಾಕಷ್ಟಿದೆ. ಮೇಲೆ ಉಲ್ಲೇಖಿಸಿದ ಸೊವನಿಯವರು ಕೀನ್ಸರನ್ನು ಕುರಿತು ಬರೆದ ಲೇಖನದಿಂದಲೇ ಕೀನ್ಸರವರ ಜನ್ಮಶತಾಬ್ದಿಯ ಆಚರಣೆ ಪ್ರಾರಂಭವಾಯಿತೆನ್ನಬಹುದು. ಅದರಂತೆ ನಾಸಿಕದಲ್ಲಿ 'ಕೀನ್ಸರವರ ಅರ್ಥಶಾಸ್ತ್ರ' ಈ ವಿಷಯದ ಮೇಲೆ ಒಂದು ಪರಿಸಂವಾದವನ್ನು ಆಯೋಜಿಸಲಾಗಿದ್ದು ಅದರಸಮಗ್ರ ಅಹವಾಲನ್ನು ಯಶವಂತ ರಾರಾವೀರಕರವರು 'ಅರ್ಥಸಂವಾದ'ದಲ್ಲಿ ಪ್ರಕಟಪಡಿಸಿದ್ದಾರೆ.

ಮಾರ್ಕ್ಸರವರ 'ನಿರ್ವಾಣ ಶತಾಬ್ದೀಯ ಪಡಿನೆರಳು, ಅರ್ಥಸಂವಾದದಮೇಲೆ ಮೂಡಿ ಬರುವುದು ಅನಿವಾರ್ಯವಾಗಿತ್ತು. ವಿ.ಮ. ದಾಂಡೇಕರರವರು ಮಾರ್ಕ್ಸರವರ ಬಗ್ಗೆ ಒಂದು ದೀರ್ಘ ಲೇಖನವನ್ನು ಪ್ರಕಟಪಡಿಸಿದರು. 'ಕಾರ್ಲಮಾರ್ಕ್ಸರವರ ವಿಸ್ತಾರಿತ ಪುನರುತ್ಪಾದನ ಕೋಷ್ಟಕ: ಕೆಲ ಸಂಶಯಗಳು' ಈ ವಿಷಯದ ಮೇಲೆ ಒಂದು ಟಿಪ್ಪಣಿಯನ್ನು ಮುಕುಂದ ಕುಲಕರ್ಣಿಯವರು ಬರೆದಿರುವರು. ಪರಿಷತ್ತಿನ

ಏಳನೆಯ ಅಧಿವೇಶನದ ಅಧ್ಯಕ್ಷರಾದ ಸ.ಹ. ದೇಶಪಾಂಡೆಯವರು ತಮ್ಮ ಅಧ್ಯಕ್ಷ ಭಾಷಣವನ್ನು "ಮಾರ್ಕ್ಸವಾದ ಮತ್ತು ಸಾಮಾಜಿಕ ನ್ಯಾಯ" ಈ ವಿಷಯದ ಮೇಲೆಯೇ ಮಾಡಿರುವರು.

ಮೇನಾರ್ಡ ಕೀನ್ಸ್‌ರವರ ಪ್ರಭಾವಲಯದಲ್ಲಿಯ ಒಬ್ಬ ಪ್ರಮುಖ ವ್ಯಕ್ತಿ ಮತ್ತು ಜಾಗತಿಕ ಕೀರ್ತಿಯ ಅರ್ಥಶಾಸ್ತ್ರಜ್ಞರಾದ ಜಾನ್ ರಾಬಿನ್ಸನ್‌ರವರ ನಿಧನ 1983 ರಲ್ಲಿ ಆಯಿತು. ಅವರ ವಿಚಾರ ಘನತೆಯ ಪರಿಚಯ ಮತ್ತು ಮೌಲ್ಯ ಮಾಪನ ಮಾಡುವ ಮಾಧವ ದಾತಾರರವರ ಲೇಖನವು "ಅರ್ಥಸಂವಾದದಲ್ಲಿ ಪ್ರಕಟ ಗೊಂಡಿತು. ಜಾನ್ ರಾಬಿನ್ಸನ್‌ರವರ ಗ್ರಂಥ ಸಂಪದಯಾರ ಅವಲೋಕನದಲ್ಲಿ ಬಂದಿಲ್ಲವೋ ಅವರಿಗೆ ಈ ಲೇಖನವು ಉದ್ಬೋಧಕವೆನಿಸುವುದು.

8. "ಅರ್ಥಸಂವಾದ"ದಲ್ಲಿಯ ವಾದ ಮತ್ತು ಸಂವಾದ :

'ಅರ್ಥಸಂವಾದ' ಇತರರನ್ನು ಜ್ಞಾನಿಗಳನ್ನಾಗಿ ಮಾಡುವ ವ್ರತವನ್ನು ಹೊಂದವೆ ಎಲ್ಲರ ನಡುವೆ ಸತತವಾಗಿ ಸಂವಾದ ಮತ್ತು ಚರ್ಚೆಗಳನ್ನು ನಡೆಸಿ ಆ ಮೂಲಕ ಜ್ಞಾನವೃದ್ಧಿ ಮಾಡುವ ಉದ್ದೇಶವಿದೆ. ಇಂತಹ ಸಂವಾದದ ಭಟ್ಟಿಯಲ್ಲಿ ಕಾದು ಪರಿಶುದ್ಧಗೊಂಡ ವಿಚಾರಗಳನ್ನು ಪುಸ್ತಕ ಅಥವಾ ಪಠ್ಯಪುಸ್ತಕಗಳ ರೂಪದಲ್ಲಿ ಹೊರತರುವ ಉದ್ದೇಶ "ಅರ್ಥಸಂವಾದ"ದ್ದಾಗಿದೆ. ಆದರೆ ಈವರೆಗೆ ನಡೆದ ಸಂವಾದದ ಬಗ್ಗೆ ಸಂಪಾದಕರು ಅತೃಪ್ತರಾಗಿದ್ದುದು ಕಂಡು ಬರುತ್ತದೆ.

ಸಂವಾದ ಫಲದಾಯಿ ಆಯಿತು ಎಂದು ಯಾವಾಗ ಅನ್ನಬಹುದು? ಈ ಪ್ರಶ್ನೆಯ ಉತ್ತರವನ್ನು ಶೋಧಿಸುವ ಮೊದಲು ಯಾವ ವಿಷಯದ ಮೇಲೆ ಸಂವಾದ ವಾಯಿತು ಎಂಬುದನ್ನು ಪರಿಶೀಲಿಸಬೇಕು. ಮೊದಲನೇ ಸಂವಾದವು ಸಿ.ವಿ. ಸೋವನಿ ಯವರು ಬರೆದ 'ಒಕ್ಕಲುತನದ ಹುಟ್ಟುವಳಿಯ ಬೆಲೆಗಳು' ಎಂಬ ಲೇಖನದ ಮೇಲೆ ಆಯಿತು. ಈ ಸಂವಾದವು ಸಿ.ವಿ. ಸೋವನಿ ಮತ್ತು ಜಾ.ಅ. ಧಾಬೋಳಕರವರಲ್ಲಿ ಆಯಿತು.

ಸಂವಾದದ ಎರಡನೆಯ ವಿಷಯ 'ಹಿಂದುಳಿದ ಜನ ಮತ್ತು ಅವಿಕಸಿತ ಪ್ರದೇಶ' ಮೂಲ ಲೇಖಕರು ಕುಮುದಿನಿ ದೇಶಪಾಂಡೆ. ಅವಿನಾಶ ದೇಶಮುಖ ಮತ್ತು ದೇಶ ಪಾಂಡೆಯವರಲ್ಲಿ ಈ ಸಂವಾದವಾಯಿತು.

ಮಹಾರಾಷ್ಟ್ರದಲ್ಲಿಯ ಹತ್ತಿಯ ಖರೀದಿ ಏಕಸ್ವಾಮ್ಯದ ಯೋಜನೆಯ ಮೇಲೆ ಎಸ್.ಎನ್. ಮಾನೆ ಮತ್ತು ಭಾ.ರಾ. ಢೆಕಣೆಯವರಲ್ಲಿ ಸಂವಾದವಾಯಿತು.

"ಅರ್ಥಸಂವಾದ"ದಲ್ಲಿ ಪ್ರಸಿದ್ಧಗೊಂಡ ಸೈದ್ಧಾಂತಿಕ ಲೇಖನಗಳಲ್ಲಿ ಈ ಕೆಳಗಿನ ಲೇಖನಗಳು ಉಲ್ಲೇಖನೀಯವಾಗಿವೆ. 1) 'ವೇತನದ ಸೀಮಾಂತ ಉತ್ಪಾದಕತೆಯ ಸಿದ್ಧಾಂತ ; ಒಂದು ಅನುಭವನಿಷ್ಠ ವಿಶ್ಲೇಷಣೆ–ರವೀಂದ್ರ ದೋಶಿ. 2) ಉಭಯಪಕ್ಷಿ ಏಕಸ್ವಾಮ್ಯ ಪೇಟೆಯಲ್ಲಿಯ ವೇತನ ನಿರ್ಧಾರ ಜ.ಫಾ. ಪಾಟೀಲ. 3) ಶ್ರೇಷ್ಠ

ದರ್ಜೆಯ ವಸ್ತುಗಳ ಸಂದರ್ಭದಲ್ಲಿ ಋಣಉತ್ಪನ್ನ ಪರಿಣಾಮದ ಶಕ್ಯತೆ–ಅಮರಜಾ ನೇರೂರಕರ. ಈ ಲೇಖನದ ಮೇಲೆ ಸ್ವಲ್ಪ ಉಪಯುಕ್ತ ಸಂವಾದವಾಯಿತು. ನೀಲಕಂಠ ರಥರವರ ಮತ್ತು ಕುಮುದಿನಿ ದೇಶಪಾಂಡೆರವರ ಈ ವಿಷಯದ ಮೇಲಿನ ಟಿಪ್ಪಣಿಗಳನ್ನು ಉಲ್ಲೇಖಿಸಲೇಬೇಕು.

ಕೆಲ ಸೈದ್ಧಾಂತಿಕ ಲೇಖನಗಳ ಸಂದರ್ಭದಲ್ಲಿ ಅಲ್ಪಸ್ವಲ್ಪ ಚರ್ಚೆಯಾಯಿತು ಮತ್ತು ಸಂವಾದವು ಆಯಿತು. "ಆನಂದವನ" ಈ ತ್ರೈಮಾಸಿಕದಲ್ಲಿ ನಿ.ವಿ. ಸೊವನಿಯವರು ಪ್ರಕಟಿಸಿದ "ಸ್ಥಿತಿಸ್ಥಾಪಕತ್ವದ ಕಲ್ಪನೆ ಮತ್ತು ಅರ್ಥಶಾಸ್ತ್ರದಲ್ಲಿಯ ಅದರ ಉಪಯೋಗ" ಈ ಲೇಖನದ ಮೇಲೆ ಸೊವನಿ ಮತ್ತು ಗ.ಪ್ರ. ಪಿಂಪರಕರವರಲ್ಲಿ ಸಂವಾದವಾಯಿತು.

ಇದಾದ ನಂತರ ಅನೇಕ ಕಾಲ ನಡೆದ ಹೆಸರಾಂತ ಸಂವಾದವೆಂದರೆ ಸ.ಹ. ದೇಶಪಾಂಡೆಯವರು ಬರೆದ "ಮಹತ್ತಿವಿನಿಕರಣ ಮತ್ತು ಗಣನಸಾಮರ್ಥ್ಯ". ಈ ಲೇಖನವನ್ನು ಕುರಿತು ಈ ಸಂವಾದದಲ್ಲಿ ವಸಂತ ಪಳಸಿಕರ, ಆನಂದ ನಾಡಕರ್ಣಿ, ರಮೇಶ ಪಾನಸೆ, ಭ. ಗ.ಬಾಪಟ, ಚಿ.ತ್ರ್ಯ. ಯಮಲೇಕರ ಇವರು ಟಿಪ್ಪಣಿ ಮುಖಾಂತರ ಭಾಗವಹಿಸಿದ್ದರು.

ನಂತರ ನಿ. ವಿ ಸೊವನಿಯವರು "ಸ್ರಾಫಾರವರ ವಿಚಾರ ಸರಣಿ" ಎಂಬ ಅತಿ ಮಹತ್ವವಾದ ಲೇಖನವನ್ನು ಪ್ರಕಟಿಸಿದರು. ಸ್ರಾಫಾ ಇಂಗ್ಲೆಂಡದಲ್ಲಿಯ ಕೇಂಬ್ರಿಜ್ ವಿಶ್ವವಿದ್ಯಾಲಯದ ವಿಖ್ಯಾತ ಅರ್ಥಶಾಸ್ತ್ರಜ್ಞರು. ಅವರ Production of Commodities By means of Commodities ಪುಸ್ತಕ ಅತಿ ದುರ್ಮಿಳವಿದ್ದು ಆಕಲನಕ್ಕೆ ಕೂಡ ಕಠಿಣವಾದೆ. ಇಂಥ ಪರಿಸ್ಥಿತಿಯಲ್ಲಿ ಸೊವನಿಯವರು ಈ ಲೇಖನವನ್ನು ಪ್ರಕಟಿಸಿ ಅರ್ಥಶಾಸ್ತ್ರದ ಸಾಮಾನ್ಯ ಅಭ್ಯಾಸಕನಿಗೆ ಬಹಳಷ್ಟು ಸಹಾಯ ಮಾಡಿದಂತಾಗಿದೆ. ಮುಕುಂದ ಕುಲಕರ್ಣಿಯವರು ಒಂದು ಟಿಪ್ಪಣಿಯನ್ನು ಬರೆದು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದರು.

9. ಅರ್ಥಸಂವಾದದಲ್ಲಿಯ ಶಾಸ್ತ್ರೀಯ ಪರಿಭಾಷೆ :

ಮರಾಠಿಯಲ್ಲಿಯ ಅರ್ಥಶಾಸ್ತ್ರೀಯ ಲೇಖನವು ಇನ್ನೂ ಪ್ರಥಮಾವಸ್ಥೆಯಲ್ಲಿದೆ. ಈವರೆಗೆ ಪ್ರಕಟಗೊಂಡ ಸಾಕಷ್ಟು ಪಠ್ಯಪುಸ್ತಕಗಳು ನಿಕೃಷ್ಟದರ್ಜೆಯದಾಗಿವೆ. ಪರಿಭಾಷೆಯ ಸಂಬಂಧಿ ಏಕವಾಕ್ಯತೆ ಕಂಡು ಬರುವುದಿಲ್ಲ. ಯಾಸ್ತವ ಅರ್ಥಶಾಸ್ತ್ರದ ಅಧಿಕ ಪದ್ಧತಿ ಶೀರತನದಿಂದ ಅಭ್ಯಾಸ ಮಾಡಬೇಕಾಗಿದೆ. ಅರ್ಥಶಾಸ್ತ್ರ ಪರಿಭಾಷೆಯನ್ನು ಕುರಿತು ಸತತ ಮತ್ತು ಸಾಮುದಾಯಿಕ ಚಿಂತನವಾಗುವುದು ಅತ್ಯಾವಶ್ಯಕವಿದೆ. ಅದರಿಂದ ಅರ್ಥಶಾಸ್ತ್ರೀಯ ಕಲ್ಪನೆಗಳು ಅಧಿಕ ಸ್ಪಷ್ಟವಾಗಬಹುದು ಮತ್ತು ದರ್ಜೆದಾರ ಮರಾಠಿ ವಾಙ್ಮಯ ನಿರ್ಮಾಣಗೊಳ್ಳಬಹುದು 'ಅರ್ಥಶಬ್ದಗಳ ದಾರಿ ಕಾಯುತ್ತಲಿವೆ', 'ಪತ್ರವ್ಯವಹಾರ', 'ಪರಿಭಾಷೆ ಚರ್ಚೆ' ಮುಂತಾದ ಉಪ

ಕ್ರಮಗಳಲ್ಲಿ ಅನೇಕ ತಜ್ಞರು ಈ ಸಾಮುದಾಯಿಕ ಚಿಂತನದಲ್ಲಿ ಸಕ್ರಿಯ ಭಾಗ ವಹಿಸಿದ್ದರು ಮತ್ತು ಅನೇಕ ಉಪಯುಕ್ತ ಸೂಚನೆಗಳನ್ನು ಮಾಡಿದರು. ಮಹಾರಾಷ್ಟ್ರ ಶಾಸನವು ಅರ್ಥಶಾಸ್ತ್ರೀಯ ಪರಿಭಾಷೆಯನ್ನು ತಯಾರಿಸುವ ಸಲುವಾಗಿ ಒಂದು ಸಮಿತಿಯನ್ನು ನೇಮಿಸಿತ್ತು. ಆ ಸಮಿತಿಯಲ್ಲಿ ಮರಾಠಿ ಅರ್ಥಶಾಸ್ತ್ರ ಪರಿಷತ್ತಿನ ಕೆಲ ಸದಸ್ಯರು ಕೆಲಸ ಮಾಡುತ್ತಿದ್ದರು. ಈ ಸಮಿತಿಯು ತನ್ನ ಕೆಲಸವನ್ನು ಪೂರ್ಣಮಾಡಿದ್ದು ಅಧಿಕೃತವಾಗಿ ಪರಿಭಾಷಾ ಕೋಶ ಹೊರಬಂದಿದೆ.

ಒಂದು ಅರ್ಥದಿಂದ ಪರಿಭಾಷೆಯನ್ನು ತಯಾರಿಸುವ ಕಾರ್ಯ ಎಂದಿಗೂ ಪೂರ್ಣಗೊಳ್ಳುವುದಿಲ್ಲ. ನವೀನ ಕಲ್ಪನೆಗಳು ಬರುತ್ತಲಿರುತ್ತವೆ. ಅವುಗಳನ್ನು ವ್ಯಕ್ತಪಡಿಸುವ ಸಲುವಾಗಿ ಹೊಸ ಶಬ್ದಗಳನ್ನು ಶೋಧಿಸಬೇಕಾಗುತ್ತದೆ; ರೂಪಿಸಬೇಕಾಗುತ್ತದೆ. ಈ ಮುಂಚೆ ಉಪಯೋಗಿಸಿದ ಶಬ್ಧಗಳಿಗಿಂತ ಅಧಿಕ ಅರ್ಥವಾಹಿ ಶಬ್ದಗಳು ಸಿಗುತ್ತವೆ. ಆದ್ದರಿಂದ ಪರಿಭಾಷಾ ಸಮಿತಿಯ ಪ್ರಕ್ರಿಯೆಯು ಸತತ ಚಾಲೂ ಇರುವುದು, ಚಾಲೂ ಇಡಬೇಕಾಗುತ್ತದೆ. ಪರಿಭಾಷಾ ಚರ್ಚೆಯ ಉಪಕ್ರಮದಡಿಯಲ್ಲಿ ಈವರೆಗೆ 25 ಟಿಪ್ಪಣಿಗಳು 'ಅರ್ಥಸಂವಾದ'ದಲ್ಲಿ ಪ್ರಕಟಗೊಂಡಿವೆ.

ಅರ್ಥಶಾಸ್ತ್ರವು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಗತಿ ಪಡೆದ ಶಾಸ್ತ್ರವಾಗಿದೆ. ಅದರಲ್ಲಿನ ಎಲ್ಲ ಕಲ್ಪನೆಗಳನ್ನು ವ್ಯಕ್ತಪಡಿಸಲು ಮರಾಠಿ ಭಾಷೆಯಲ್ಲಿ ಯುಕ್ತವಾದಂತಹ ಪ್ರತಿಶಬ್ಧಗಳು ಯಾವಾಗಲೂ ಸಿಕ್ಕೇಸಿಗುತ್ತವೆ ಎಂದೇನಿಲ್ಲ. ಹೊಸ ಪ್ರತಿಶಬ್ದಗಳನ್ನು ರೂಪಿಸಬೇಕಾಗುತ್ತದೆ. ಮರಾಠಿಯಲ್ಲಿಯ ಪ್ರತಿಶಬ್ಧಗಳು ಹೇಗೆ ಇರಬೇಕು ಎಂಬುದರ ಬಗ್ಗೆ ಮತಭಿನ್ನತೆ ಕಂಡುಬರುವುದು ಸ್ವಾಭಾವಿಕ. ಆದರೆ ಕಂಡು ಹಿಡಿದ ಪ್ರತಿಶಬ್ಧಗಳು ನಿಶ್ಚಿತವಿರಬೇಕು, ಸ್ಫುಟವಿರಬೇಕು, ಅರ್ಥವಾಹಿ ಇರಬೇಕು, ಸುಭೋಧವಿದ್ದು, ಅದು ಮರಾಠಿಯದಾಗಿರಬೇಕು. ಯೋಗ್ಯ ಪ್ರತಿಶಬ್ಧಗಳು ಹಳೆ ಮರಾಠಿಯಲ್ಲಿ ಸಿಗುತ್ತವೆಯೋ ಹೇಗೆ ಎಂಬುದನ್ನು ನೋಡಬೇಕು. ಆದ್ದರಿಂದ ಹಳೆ ಮರಾಠಿ ಸಾಹಿತ್ಯದ ಪರಿಚಯ ಇರಬೇಕಾಗಿದೆ. 'ನಾಲ್ಕು ಹಳೆಯ ಮರಾಠಿ ಅರ್ಥಶಾಸ್ತ್ರೀಯ ಗ್ರಂಥ' ಎಂಬುದನ್ನು ದಿ. ಕೆ. ಬೇಡೇಕರರವರು ಸಂಪಾದಿಸಿರುವರು. ಕಳೆದ ಶತಕದಲ್ಲಿ ಅರ್ಥಶಾಸ್ತ್ರದ ಆಶಯವನ್ನು ಎಷ್ಟು ಸಹಜ ಮತ್ತು ಸಾಧಾ ಭಾಷೆಯಲ್ಲಿ ವಾಚಕರವರೆಗೆ ಮುಟ್ಟಿಸುವ ಯಶಸ್ವಿ ಪ್ರಯತ್ನವನ್ನು ಈ ಗ್ರಂಥಗಳು ಮಾಡಿದ್ದನ್ನು ನೋಡಿದರೆ ಮರಾಠಿ ಭಾಷೆಯ ಸಾಮರ್ಥ್ಯದ ಒಂದು ಛಟಾ ಕಂಡು ಬರುವದು. ಮರಾಠಿ ಭಾಷೆಯ ಈ ಸಾಮರ್ಥ್ಯವು ಈ ಶತಕದಲ್ಲಿ ಏಕೆ ಕಡಿಮೆಯಾಯಿತು ? ಇತ್ತಿತ್ತಲಾಗಿ ಮರಾಠಿ ಭಾಷೆ ಆದಷ್ಟು ಪ್ರೌಢ ಮತ್ತು ಸಂಸ್ಕೃತನಿಷ್ಠವಾಗತೊಡಗಿದೆ. ಮತ್ತು ಹಳೆಯ ಮರಾಠಿ ಲೇಖನದ ಮತ್ತು ಮರಾಠಿ ಆಡುಭಾಷೆಯ ಕೂಡ ಇರುವ ಸಂಬಂಧ ಕಡಿಮೆಯಾಗುತ್ತ ನಡೆದಿದೆ. ಎಷ್ಟೋ ಮರಾಠಿ ಶಬ್ಧಗಳನ್ನು ನಾವು ಮರೆತು ಹೋಗಿದ್ದೇವೆ. ಇದೇ ಕಾರಣದಿಂದಾಗಿ

ಹೊಸ ಪ್ರತಿಶಬ್ದವನ್ನು ರೂಪಿಸುವಾಗ ಸಂಸ್ಕೃತದ ಆಧಾರವನ್ನು ಪಡೆಯಬೇಕಾಗುವುದು. ಅರ್ಥದ ವಿವಿಧ ಛಟಗಳನ್ನು ಎತ್ತಿ ತೋರಿಸುವ ಸಾಮರ್ಥ್ಯ ಸಂಸ್ಕೃತಭಾಷೆಯಲ್ಲಿದೆ. ಆದ್ದರಿಂದ ಅರ್ಥಶಾಸ್ತ್ರದಲ್ಲಿ ಸಂಸ್ಕೃತ ಪ್ರಚುರ ಶಬ್ದಗಳು ಪ್ರತಿಶಬ್ದಗಳೆಂದು ಮನ್ನಣೆಪಡೆದು ಉಪಯೋಗದಲ್ಲಿ ಬರುತ್ತವೆ. ಅರ್ಥಶಾಸ್ತ್ರೀಯ ಸೈದ್ಧಾಂತಿಕ ಲೇಖನದಲ್ಲಿ ಇಂಥಹ ಶಬ್ದಗಳು ಮೇಲಿಂದ ಮೇಲೆ ಕಂಡು ಬರುತ್ತವೆ. ಮತ್ತು ಆ ಲೇಖನವನ್ನು ಓದಿ ಅರಗಿಸಿಕೊಳ್ಳುವುದು ಒಂದು ಕಷ್ಟಕರ ಅನುಭವನಿಸಿಸುವುದು. ಈ ಸಂಸ್ಕೃತನಿಷ್ಠ ಶಬ್ದಗಳನ್ನು ಮೇಲಿಂದ ಮೇಲೆ ಉಪಯೋಗಿಸಲಾಗಿ ಅವು ಸುಪರಿಚಿತವಾಗಿ ವಾಚಕರಿಗೆ ಅಷ್ಟೊಂದು ಅಡ್ಡಿಯನ್ನುಂಟುಮಾಡಲಾರವು ಎಂದೆನಿಸುವುದು. ಅದರಂತೆ ಯಾರ ಶಿಕ್ಷಣವು ಮರಾಠಿ ಮಾಧ್ಯಮದಲ್ಲಿಂದ ಪೂರ್ಣಗೊಂಡಿದೆಯೋ ಅವರಿಗೆ ಈ ಸಂಸ್ಕೃತ ಶಬ್ದಗಳು ಅಧಿಕ ಪರಿಚಯ ಇರಲು ಸಾಕು.

ಸಂಪಾದಕರು, ಅರ್ಥಸಂವಾದದ ವಾಚಕರ ಎರಡು ವರ್ಗಗಳನ್ನು ಕಲ್ಪಿಸಿರುವರು. ಬ್ಯಾಂಕು, ವಿಮಾ, ವ್ಯವಸಾಯ, ಸರಕಾರಿ ಉದ್ಯೋಗ ಮತ್ತು ಖಾಸಗಿ ಉದ್ಯೋಗ ಕ್ಷೇತ್ರದಲ್ಲಿಯ ಅರ್ಥಶಾಸ್ತ್ರೀಯ ವ್ಯವಸಾಯಿಕದ ಒಂದು ವರ್ಗ. ಎರಡನೆಯದು, ಕಾಲೇಜುಗಳ ಪ್ರಾಧ್ಯಾಪಕರ ಮತ್ತು ವಿದ್ಯಾರ್ಥಿಗಳ ವರ್ಗ. ಈ ಎರಡೂ ವರ್ಗಗಳ ವಿಷಯ, ವಿವೇಚನ ಪದ್ಧತಿ ಮತ್ತು ಆ ಸಂಬಂಧೀಯ ಬೇಡಿಕೆಗಳಲ್ಲಿ ಭಿನ್ನತೆ ಕಂಡು ಬರುವುದು. "ಸಿದ್ಧಾಂತಪರ" ಲೇಖನ ಇತರ ವ್ಯವಸಾಯದಲ್ಲಿಯ ಜನರಿಗೆ ಬೇಸರವನ್ನುಂಟು ಮಾಡುವ ಸಂಭವವಿದೆ ಎಂಬುದನ್ನು ಸಂಪಾದಕರು ಒಪ್ಪಿಕೊಳ್ಳುವರು. ಆದರೆ ವಿಶ್ವವಿದ್ಯಾಲಯ ಸ್ತರದಲ್ಲಿಯ ವ್ಯಕ್ತಿಗಳ ಬೇಡಿಕೆಗಳು ಕೆಲ ಅಂಶ ಸಂಘಟಿತವಾಗಿದ್ದು, ಅತ್ಯಾವಶ್ಯಕವಾದಂತಹ ಬೇಡಿಕೆಯಾಗಿದೆ. ಸಂಖ್ಯಾತ್ಮಕವಾಗಿ ಕೂಡ ಈ ವರ್ಗ ದೊಡ್ಡದಿದೆ. ಆದ್ದರಿಂದ ಅವರ ಬೇಡಿಕೆಯ ಕಡೆಗೆ ಗಮನ ಹರಿಸುವುದು ತಪ್ಪೇನಿಲ್ಲ. ಪರಿಣಾಮವಾಗಿ 'ಅರ್ಥಸಂವಾದ'ದ ಪ್ರತಿಮೆ ಒಂದು ವಿಶಿಷ್ಟ ಪ್ರಕಾರ ತಯಾರಾಗುತ್ತಾ ಹೋಗುವದು ಅಪರಿಹಾರ್ಯವಿತ್ತು.

ಮಹಾವಿದ್ಯಾಲಯ ಮತ್ತು ವಿಶ್ವವಿದ್ಯಾಲಯ ವರ್ಗದ ಬೇಡಿಕೆಗಳು ಭಿನ್ನವಾಗಿವೆ ಎಂದು ಗ್ರಹಿಸಿದರೂ ಕೂಡಾ ಈ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಕ್ಲಿಷ್ಟ ಮತ್ತು ಸಂಸ್ಕೃತನಿಷ್ಠ ಶಬ್ದಗಳದ್ದೇ ಯೋಜನೆ ಮಾಡಬೇಕೆ? 'ಸರ್ವಸಾಧಾರಣ ಸಮಾಜದಲ್ಲಿ ಅರ್ಥಶಾಸ್ತ್ರೀಯ ಸಾಕ್ಷರತೆ ನಿರ್ಮಾಣವಾಗುವುದು ಅವಶ್ಯಕವಿದೆ.' ಈ ಸಾಕ್ಷರತೆ ನಿರ್ಮಾಣಗೊಳ್ಳುವ ಕಾರ್ಯವು ಕೇವಲ ಮರಾಠಿ ಪ್ರತಿಶಬ್ದ ಉಪಯೋಗಿಸಿ ಸುಲಭಗೊಳ್ಳುವುದೇ? ಈ ಸಂದರ್ಭದಲ್ಲಿ ಮಹಾರಾಷ್ಟ್ರದ ಸಧ್ಯದ ಪರಿಸ್ಥಿತಿಯಲ್ಲಿ ಒಂದು ವಿಸಂಗತಿ ಕಂಡು ಬರುತ್ತವೆ ಮರಾಠಿ ಪ್ರತಿಶಬ್ದ ರೂಪಿಸುವಲ್ಲಿ ತಜ್ಞರು ಅಧಿಕಾಧಿಕ ಸಂಸ್ಕೃತ ಭಾಷೆಯ ಆಧಾರ ಪಡೆಯು

ತ್ತಿರುವಂತೆ, ವೈದ್ಯಕೀಯ ಮುಂತಾದ ಕ್ಷೇತ್ರಗಳಲ್ಲಿ ಕೂಡ ಕಂಡು ಬರುತ್ತದೆ. ಇದೇ ಕಾಲಕ್ಕೆ ಮಹಾರಾಷ್ಟ್ರದ ಶಿಕ್ಷಣಕ್ಷೇತ್ರದಿಂದ ಸಂಸ್ಕೃತದ ಉಚ್ಚಾಟನೆಯಾಗುತ್ತಲಿದೆ. ಸಂಸ್ಕೃತದ ವರ್ಗಗಳು ಹಾಳು ಬಿದ್ದು ಶಿಕ್ಷಕರು ನಿರುದ್ಯೋಗಿಗಳಾಗಿದ್ದಾರೆ. ಈ ವಿಷಯದ ಸವಿಸ್ತಾರ ಪರಾಮರ್ಶೆಯನ್ನು ಮಾಡುವ ಅವಶ್ಯಕತೆ ಇದೆ. ಎಂದರೆ ಮರಾಠಿ ಅರ್ಥಶಾಸ್ತ್ರೀಯ ಲೇಖನವು ಇನ್ನೂ ಪ್ರಥಮಾವಸ್ಥೆಯಲ್ಲಿದೆ. ಮತ್ತು ಅರ್ಥಸಂವಾದ ಇನ್ನೂ ಬಾಲ್ಯಾವಸ್ಥೆಯಲ್ಲಿದೆ. ಮರಾಠಿ ಅರ್ಥಶಾಸ್ತ್ರದ ಲೇಖನದ ಸ್ವರೂಪವು ಹೇಗೆ ಇರಬೇಕು ಎಂಬುದನ್ನು ಕುರಿತು ಅಧಿಕ ವಿಚಾರ ಮಾಡುವ ಅವಶ್ಯಕತೆ ಇದೆ. ಅರ್ಥಶಾಸ್ತ್ರೀಯ ಲೇಖನಕ್ಕೆ ಮರಾಠಿಯ ಅಧಿಷ್ಠಾನ ಇರದ ಹೊರತು ಅರ್ಥಶಾಸ್ತ್ರೀಯ ಸಾಕ್ಷರತೆಯು ಹೆಚ್ಚಾಗಲಾರದು.

10. ಗ್ರಂಥ ಪರಿಚಯ ಮತ್ತು ಗ್ರಂಥ ಪರೀಕ್ಷಣೆ

ಹೊಸತಾಗಿ ಪ್ರಕಟಗೊಂಡ ಒಳ್ಳೆಯ ಗ್ರಂಥಗಳ ಪರಿಚಯವನ್ನು ವಾಚಕರಿಗೆ ಮಾಡಿಕೊಡುವುದು ಅರ್ಥಸಂವಾದದ ಉದ್ದೇಶವಾಗಿದೆ. ಈ ವರೆಗೆ 34 ಗ್ರಂಥಗಳ ಪರಿಚಯಗಳನ್ನು ಅರ್ಥಸಂವಾದದಲ್ಲಿ ಮಾಡಿದ್ದು ಅವುಗಳ ಪೈಕಿ 24 ಗ್ರಂಥಗಳು ಭಾರತದಲ್ಲಿ ಪ್ರಕಟಗೊಂಡಿದ್ದು ಉಳಿದ 10 ಗ್ರಂಥಗಳು ಪರದೇಶದಲ್ಲಿ ಪ್ರಕಟಗೊಂಡವುಗಳಾಗಿವೆ. ಅದರಲ್ಲೂ 34 ಗ್ರಂಥಗಳ ಪೈಕಿ 20 ಗ್ರಂಥಗಳು ಇಂಗ್ಲೀಷ್‌ದಲ್ಲಿ ಮತ್ತು 14 ಗ್ರಂಥಗಳು ಮರಾಠಿಯಲ್ಲಿ ಪ್ರಕಟಗೊಂಡವುಗಳಾಗಿವೆ.

ರಮೇಶ ಪಾನಸೆಯವರು ಕಳೆದ ಶತಕದಲ್ಲಿ ಪ್ರಕಟಗೊಂಡ ಕೆಲ ಅರ್ಥಶಾಸ್ತ್ರೀಯ ಗ್ರಂಥಗಳ ಪರಿಚಯವನ್ನು ಅರ್ಥಸಂವಾದದ ವಾಚಕರಿಗೆ ಮಾಡಿಕೊಟ್ಟಿದ್ದರು. ಅವುಗಳು: 1. ಮರಾಠಿಯಲ್ಲಿಯ ಮೊದಲನೆಯ ಅರ್ಥಶಾಸ್ತ್ರೀಯ ಗ್ರಂಥ: ರಾಮಕೃಷ್ಣ ವಿಶ್ವನಾಥ 2. ಅರ್ಥಶಾಸ್ತ್ರದ ಮೂಲತತ್ವಗಳು: ಗಣೇಶ ಜನಾರ್ದನ ಲಿಗಾಸೆ. 3. ವಿಷ್ಣು ಮೋರೇಶ್ವರ ಮಹಾಜನಿಯವರು ಗತಶತಕದಲ್ಲಿ ಕೆಲ ಅರ್ಥಶಾಸ್ತ್ರೀಯ ಗ್ರಂಥಗಳ ಮೇಲೆ ವಿಮರ್ಶೆಯನ್ನು ಮಾಡಿದ್ದರು. ಅದರ ಪರಿಚಯವನ್ನು ಅರ್ಥಸಂವಾದದಲ್ಲಿ ಮಾಡಿಕೊಡಲಾಯಿತು. 4. ಲೋಕ ಹಿತವಾದಿಯವರ ಗ್ರಾಮರಚನೆ ಇಂಗ್ಲೀಷ್ ರಾಜ್ಯದ ಬಗೆಗಿನ ಭೂಮಿಕೆ, ಮತ್ತು ಗ್ರಾಮರಚನೆ ಅವುಗಳಲ್ಲಿಯ ವ್ಯವಸ್ಥೆ ಮತ್ತು ಅವುಗಳ ಈಗಿನ ಸ್ಥಿತಿ ಈ ವಿಷಯವನ್ನು ಕುರಿತು ಮಾಡಿದ ವಿವೇಚನೆ. ಈ ಎಲ್ಲ ಹಳೆಯ ಗ್ರಂಥಗಳಿಗೆ ಐತಿಹಾಸಿಕ ಮಹತ್ವವಿದೆ.

ಗ್ರಂಥ ವಿಮರ್ಶೆ ಮತ್ತು ಗ್ರಂಥ ಪರಿಚಯ ಇವುಗಳಲ್ಲಿ ವ್ಯತ್ಯಾಸವಿದೆ. ಗ್ರಂಥ ವಿಮರ್ಶೆಯನ್ನು ಮಾಡುವಾಗ ಅದರ ಗುಣದೋಷಗಳನ್ನು ಎತ್ತಿತೋರಿಸಿ ಆ ಗ್ರಂಥದ ಮೌಲ್ಯಮಾಪನ ಮಾಡಲಾಗುವುದು. ಗ್ರಂಥ ಪರಿಚಯದಲ್ಲಿ ಪರಿಚಯದ ಮೇಲೆ ಹೆಚ್ಚು ಗಮನಕೊಡಲಾಗುವುದು. ಮಹಾರಾಷ್ಟ್ರದಲ್ಲಿಯ ಸಧ್ಯದ ಪರಿಸ್ಥಿತಿಯಲ್ಲಿ ಇಂಗ್ಲೀಷ್ ಗ್ರಂಥಗಳ ಪರಿಚಯ ಮಾಡಿಕೊಡುವುದು ಅತ್ಯಾವಶ್ಯಕವಿದೆ. ಇದರ

ಮುಖ್ಯ ಕಾರಣವೆಂದರೆ, ಈ ಹೊತ್ತು ಅರ್ಥಶಾಸ್ತ್ರೀಯ ವಿಷಯವನ್ನು ಕುರಿತು ಪ್ರಕಟಗೊಳ್ಳುವ ಇಂಗ್ಲೀಷ್ ಮಾಧ್ಯಮದಲ್ಲಿಯ ಗ್ರಂಥಗಳ ಗಳಿತನ ಕಡಿಮೆಯಾಗುತ್ತಾ ನಡೆದದ್ದು. ಇಂಗ್ಲೀಷ್‌ನಲ್ಲಿ ಬರೆದ ಗ್ರಂಥಗಳನ್ನು ಓದುವ ಅವಶ್ಯಕತೆಯೇ ಕಡಿಮೆಯಾಗುತ್ತಾ ನಡೆದಿದೆ. ಇದರ ಕಾರಣವೆಂದರೆ ಪ್ರಾದೇಶಿಕ ಭಾಷೆಯ ಮಾಧ್ಯಮದಲ್ಲಿಂದ ವಿಶ್ವವಿದ್ಯಾಲಯದವರೆಗೆ ಶಿಕ್ಷಣವನ್ನು ಪಡೆಯುವ ಸೌಲತ್ತು ಸಿಕ್ಕಿದೆ. ಮರಾಠಿ ಮಾಧ್ಯಮದಲ್ಲಿಂದ ಅರ್ಥಶಾಸ್ತ್ರದ ಅಧ್ಯಯನ ಮಾಡಿದ ವಿದ್ಯಾರ್ಥಿಗಳೇ ಈ ಹೊತ್ತು ಮಹಾವಿದ್ಯಾಲಯಗಳಲ್ಲಿ ಅಧ್ಯಾಪನ ಮಾಡುತ್ತಲಿದ್ದಾರೆ. ಇಂಥ ಪ್ರಾಧ್ಯಾಪಕರದು ಮತ್ತು ಅವರ ವಿದ್ಯಾರ್ಥಿಗಳದ್ದು ಭೆಟ್ಟಿ ಈ ಇಂಗ್ಲೀಷ್ ಗ್ರಂಥಗಳ ಕೂಡ ಆಗುತ್ತಿರಬಹುದೇ? ಅದರ ನೈಜ ಅರ್ಥದಿಂದ ಜ್ಞಾನಾರ್ಜನೆಯ ಕನಿಷ್ಟಪಕ್ಷದ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ಸಾಕಷ್ಟು ಶ್ರೇಷ್ಠಮಟ್ಟದ ಶಾಸ್ತ್ರೀಯ ಸಾಹಿತ್ಯ ಮರಾಠಿಯಲ್ಲಿ ಇನ್ನೂ ಪ್ರಕಾಶಿತಗೊಂಡಿಲ್ಲ. ಮೂಲ, ಅಭಿಜಾತ ಇಂಗ್ಲೀಷ್ ಗ್ರಂಥಗಳನ್ನು ಓದುವ ರೂಢಿ ಕಡಿಮೆಯಾಗುತ್ತಾ ನಡೆದದ್ದು ನಿಜಕ್ಕೂ ದುರ್ದೈವದ ಸಂಗತಿ.

ಈ ಪರಿಸ್ಥಿತಿಯಲ್ಲಿ 'ಅರ್ಥಸಂವಾದ' ಏನಾದರೂ ಮಾಡಬಹುದೇ ? ಇದರ ಮೇಲೆ ಒಂದು ಉಪಾಯವೆಂದು ಅರ್ಥಶಾಸ್ತ್ರೀಯ ವಿಶಿಷ್ಟ ಜ್ಞಾನ ಶಾಖೆಯಲ್ಲಿಯ (ಅಭಿಜಾತ) ಗ್ರಂಥಗಳಲ್ಲಿಂದ ಮಾಡಿದ ಮಿಮಾಂಸೆಯನ್ನು ಲೇಖನಮಾಲೆಗಳ ಮೂಲಕ ವಾಚಕರವರೆಗೆ ಮುಟ್ಟಿಸುವುದು. ಇನ್ನೊಂದು ಮಹತ್ವದ ಸಂಗತಿ ಎಂದರೆ, ಮೂಲಭೂತ ಸ್ವರೂಪದ ಅಭಿಜಾತ ಗ್ರಂಥಗಳು ಇಂಗ್ಲೀಷಿನಲ್ಲಿ ಪ್ರಕಟಗೊಳ್ಳುತ್ತಲಿವೆ. ಇಂತಹ ಗ್ರಂಥಗಳಲ್ಲಿಂದ ಹೊಸ ಅರ್ಥಶಾಸ್ತ್ರೀಯ ಕಲ್ಪನೆಗಳ ಪರಿಚಯವಾಗುತ್ತಲಿದ್ದು ಅದನ್ನು ಕುರಿತು ಚರ್ಚೆಕೂಡ ಆಗುತ್ತಲಿದೆ. ಅರ್ಥಶಾಸ್ತ್ರೀಯ ಸಿದ್ಧಾಂತದ ವಿಶ್ವದಲ್ಲಿ ಏನು ನಡೆದಿದೆ ಎಂಬುದನ್ನು ಅರಿತುಕೊಳ್ಳುವದು ಕೂಡ ಅವಶ್ಯಕವಿದೆ. ಅದರಂತೆ ಪರದೇಶಗಳ ಆರ್ಥಿಕ ಧೋರಣೆಯಲ್ಲಿ ಗುಣಾತ್ಮಕ ಬದಲಾವಣೆಗಳಾಗುತ್ತಿರುವಾಗ ಅವುಗಳ ಸ್ವರೂಪ ಮತ್ತು ಪರಿಣಾಮಗಳಾವವು ಎಂಬುದನ್ನು ಅರಿತುಕೊಳ್ಳುವದು ಜ್ಞಾನ ಅರ್ಥಶಾಸ್ತ್ರದ ಅಭ್ಯಾಸಕನಿಗೆ ಅವಶ್ಯಕವಿದೆ. ಈ ಸಂದರ್ಭದಲ್ಲಿ ಮಹಾರಾಷ್ಟ್ರದಲ್ಲಿಯ ಅರ್ಥಶಾಸ್ತ್ರ ಸಂಶೋಧನ ಸಂಸ್ಥೆ ಮತ್ತು ವಿಶ್ವವಿದ್ಯಾಲಯದಲ್ಲಿಯ ಅರ್ಥಶಾಸ್ತ್ರ ವಿಭಾಗದಲ್ಲಿ ಕಾರ್ಯ ನಿರತರಾದ ಪ್ರಾಧ್ಯಾಪಕರ ಜವಾಬ್ದಾರಿ ಹೆಚ್ಚಾಗಿದೆ. ಈ ಪ್ರಾಧ್ಯಾಪಕರು ಇಂಗ್ಲೀಷ್‌ನಲ್ಲಿ ಪ್ರಕಟಗೊಂಡ ಮಹತ್ವದ ಗ್ರಂಥಗಳ ಕನಿಷ್ಠಪಕ್ಷ ಪರಿಚಯವನ್ನಾದರೂ ಮಾಡಿಕೊಟ್ಟರೆ ಅರ್ಥಶಾಸ್ತ್ರದ ಶಿಕ್ಷಕ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವುದು. 'ಅರ್ಥಸಂವಾದವು' ಈ ಕಾರ್ಯದ ಮೇಲೆ ಅಧಿಕ ಲಕ್ಷ್ಯವನ್ನು ಕೇಂದ್ರೀಕರಿಸಿದರೆ ಅದು ಫಲಪ್ರದವಾಗಬಹುದು. ಶಿಕ್ಷಣದ ಮಾಧ್ಯಮವೆಂದು ಮರಾಠಿಯನ್ನು ಉಪಯೋಗಿಸುವುದೆಂದರೆ ತಮ್ಮ ಮನೆಯ ಬಾಗಿಲ ಕಿಡಕಿಗಳನ್ನು ಮುಚ್ಚಿಕೊಂಡು ಕೂರುವುದೆಂದಲ್ಲ.

11. ಪರಿಷತ್ತಿನ ಕಾರ್ಯದ ವ್ಯಾಪ್ತಿ

ಪರಿಷತ್ತಿನ ಉದ್ದೇಶಗಳು ಈ ಮುಂದಿನಂತೆ ಇವೆ. (1) ವ್ಯಾಖ್ಯಾನ ಮತ್ತು ಚರ್ಚೆಗಳನ್ನು ನೆರವೇರಿಸುವುದು. (2) ನಿಯತಕಾಲಿಕ ಮತ್ತು ಗ್ರಂಥ ನಿರ್ಮಿತಿ. (3) ವಾಚನಾಲಯ, ಗ್ರಂಥ ಸಂಗ್ರಹ, ಪ್ರವಾಸ, ಭೆಟ್ಟಿ, ಶಿಬಿರ, ಚರ್ಚಾಸತ್ರ, ಪರಿಸಂವಾದ ಇಂಥ ಕಾರ್ಯಕ್ರಮಗಳನ್ನು ಆಯೋಜನ ಮಾಡುವುದು. (4) ಅಲ್ಲಲ್ಲಿ ಮರಾಠಿ ಅರ್ಥಶಾಸ್ತ್ರ ವಿಷಯಕ ಸಭೆ, ಸಮ್ಮೇಲನ ಮತ್ತು ಅಧಿವೇಶನಗಳನ್ನು ನಡೆಸುವುದು. (5) ಅನುದಾನ, ಶಿಷ್ಯವೃತ್ತಿ, ಪಾರಿತೋಷಕ ಮುಂತಾದವುಗಳ ಮುಖಾಂತರ ಅರ್ಥವಿಷಯಕ ಸಂಶೋಧನ, ಅಧ್ಯಯನ ಅಧ್ಯಾಪನ, ಗ್ರಂಥ ನಿರ್ಮಿತಿ ಇವುಗಳಿಗೆ ಪ್ರೋತ್ಸಾಹ ಕೊಡುವದು. (6) ಪರಿಷತ್ತಿನ ಉದ್ದೇಶಗಳ ಕೂಡ ಸುಸಂಗತ ಮತ್ತು ಪೋಷಕವಾದ ಇತರ ಕಾರ್ಯಗಳನ್ನು ಕೈಗೆತ್ತಿಕೊಳ್ಳುವದು.

‘ಅರ್ಥಸಂವಾದ’ವನ್ನು ಪ್ರಾರಂಭಿಸಿ ಪರಿಷತ್ತು ತನ್ನ ಒಂದು ಮಹತ್ವದ ಉದ್ದೇಶವನ್ನು ಪೂರ್ಣಗೊಳಿಸಿದೆ. ಇತರ ಉದ್ದೇಶಗಳನ್ನು ಸಾಧ್ಯಪಡಿಸುವ ಸಲುವಾಗಿ ಪರಿಷತ್ತು ಯಾವ ಕಾರ್ಯಗಳನ್ನು ಹಮ್ಮಿಕೊಂಡಿದೆ ಎಂಬುದರ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳೋಣ. ನಾಗಪುರದಲ್ಲಿ ನೆರವೇರಿದ ವಾರ್ಷಿಕ ಅಧಿವೇಶನದ ಕಾಲಕ್ಕೆ ಪರಿಷತ್ತು ‘ಪ್ರಕಾಶನ ನಿಧಿ’ ಎಂಬ ಒಂದು ಸ್ವತಂತ್ರ ನಿಧಿಯನ್ನು ನಿರ್ಮಾಣ ಮಾಡುವ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಪರಿಷತ್ತು ಪ್ರಕಾಶಿಸಿದ ಗ್ರಂಥಗಳ ಮಾರಾಟದಿಂದ ಅದರಂತೆ ಅನುದಾನ ದೇಣಿಗೆ ಇತ್ಯಾದಿ ಸ್ವರೂಪದಿಂದ ಸಿಗುವ ಉತ್ಪನ್ನದ ವಿನಿಯೋಗ ಈ ನಿಧಿ ಸಲುವಾಗಿ ಮಾಡಲು ಬರುವುದು. ಭ. ಗ. ಬಾಪಟರವರ ಪುಸ್ತಕ ಈ ನಿಧಿಯಲ್ಲಿಂದಲೇ ಮುದ್ರಿಸಲಾಯಿತು. ಪರಿಷತ್ತು ಈ ವರೆಗೆ ಮೂರು ಪುಸ್ತಕಗಳನ್ನು ಪ್ರಕಾಶಿಸಿದೆ. (1) ಅರ್ಥಸಿದ್ಧಾಂತ ಮತ್ತೊಂದು ಚಿಕಿತ್ಸಕ ನಿಬಂಧ—ನಿ. ವಿ. ಸೊವನಿ. (2) ಶಿಕ್ಷಣದ ಅರ್ಥಶಾಸ್ತ್ರ—ಮೊ. ವಿ. ಭಾಟವಡೇಕರ. (3) ಅಂತರರಾಷ್ಟ್ರೀಯ ವ್ಯಾಪಾರ—ಸಿದ್ಧಾಂತ ಮತ್ತು ಧೋರಣೆ—ಭ. ಗ. ಬಾಪಟ.

ಔರಂಗಾಬಾದ್‌ನಲ್ಲಿ ನೆರವೇರಿದ ಅಧಿವೇಶನಕ್ಕಾಗಿ ಸಂಗ್ರಹಿಸಿದ ನಿಧಿಯಿಂದ ಅಧಿವೇಶನದ ಖರ್ಚು ವಜಾ ಮಾಡಲಾಗಿ ಉಳಿದ ನಿಧಿಯ ಸಹಾಯದಿಂದ ಬರುವ ಬಡ್ಡಿಯಿಂದ ‘ಮರಾಠಾ ವಾಡಾ ವಿದ್ಯಾಪೀಠ ಪಾರಿತೋಷಕ’ವನ್ನು ಪ್ರಕಟಿಸಲಾಯಿತು. ಮರಾಠಿಯಲ್ಲಿ ಪ್ರಕಟಗೊಂಡ ಸರ್ವೋತ್ಕೃಷ್ಟ ಅರ್ಥಶಾಸ್ತ್ರೀಯ ಲೇಖಕನಿಗೆ 1001 ರೂಪಾಯಿಯ ಬಹುಮಾನ ಕೊಡಲಾಗುತ್ತದೆ. ಈ ವರೆಗಿನ ಪಾರಿತೋಷಕ ವಿಜೇತರು ಈ ಮುಂದಿನಂತೆ: (1) ನಿ. ವಿ. ಸೊವನಿ—‘ಸ್ರಾಫಾ ವಿಚಾರ ಸರಣಿ’ (2) ಭ. ಗ. ಬಾಪಟ—‘ಅಂತರ್‌ರಾಷ್ಟ್ರೀಯ ವ್ಯಾಪಾರ—ಸಿದ್ಧಾಂತ ಮತ್ತು ಧೋರಣೆ’. (3) ಸುಹಾಸ ಪರಾಂಜಪೆ—ದಾಸ್ ಕ್ಯಾಪಿಟಲ್ ಸುಬೋಧ ಪರಿಚಯ’.

'ಅರ್ಥಶಾಸ್ತ್ರ ಪರಿಭಾಷಾ ಕೋಶ' ಈ ವಿಷಯದ ಮೇಲಿನ ಒಂದು ಚರ್ಚಾ ಗೋಷ್ಠಿಯು ಲೋಣಾವಳದಲ್ಲಿ ದಿನಾಂಕ: 27-28-29 ಏಪ್ರೀಲ್ 1981ರಂದು ನಡೆಯಿತು.

ಧುಳೆ ಜಿಲ್ಲಾ ಅರ್ಥಶಾಸ್ತ್ರ ಪ್ರಾಧ್ಯಾಪಕ ಸಂಘದ ವಿದ್ಯಮಾನದಲ್ಲಿ ಮರಾಠಿ ಅರ್ಥಶಾಸ್ತ್ರ ಪರಿಷತ್ತಿನ ನಾಲ್ಕನೆಯ ವಾರ್ಷಿಕ ಅಧಿವೇಶನವು ಧುಳೆಯಲ್ಲಿ ನೆರವೇರಿತು. ಅಧಿವೇಶನದಲ್ಲಿ ಖರ್ಚು ಮಾಡಿ ಉಳಿದ ನಿಧಿಯನ್ನು ಒಂದು ಖಾಯಂ ಸ್ವರೂಪದ ನಿಧಿಯಲ್ಲಿ ರೂಪಾಂತರಿಸಲಾಯಿತು. ಈ ನಿಧಿಯ ಬಡ್ಡಿಯಿಂದ ಧುಳೆಯಲ್ಲಿ ಪ್ರತಿ ವರ್ಷ ವ್ಯಾಖ್ಯಾನ ಮಾಲೆಯನ್ನು ಆಯೋಜಿತ ಮಾಡಲಾಗಿದ್ದು, ಅದಕ್ಕೆ 'ಮರಾಠಿ ಅರ್ಥಶಾಸ್ತ್ರ ಪರಿಷತ್ತ ಚತುರ್ಥ ಅಧಿವೇಶನ ಸ್ಮಾರಕ ವ್ಯಾಖ್ಯಾನ' ಎಂದು ಸಂಬೋಧಿಸಲಾಗಿದೆ. ದಿನಾಂಕ : 29-30-ಅಕ್ಟೋಬರ್ 1984 ರಂದು ನಿ. ವಿ. ಸೊವನಿಯವರು "ಸ್ವಾತಂತ್ರ್ಯೋತ್ತರ ಕಾಲದಲ್ಲಿಯ ಭಾರತದಲ್ಲಿಯ ರಾಜಕಾರಣ ಮತ್ತು ಅರ್ಥಕಾರಣ" ಎಂಬ ವಿಷಯದ ಮೇಲೆ ಎರಡು ವ್ಯಾಖ್ಯಾನಗಳನ್ನು ಕೊಟ್ಟರು. ಅದರಂತೆ 8-9 ಫೆಬ್ರುವರಿ 1986 ರಂದು ಡಾ : ಮ. ಗೊ. ಜೆರರೆಯವರು 'ಆರ್ಥಿಕ ಸಿದ್ಧಾಂತ ಮತ್ತು ಒಕ್ಕಲುತನ ಹುಟ್ಟುವಳಿಯ ಬೆಲೆಗಳು' ಎಂಬ ವಿಷಯದ ಮೇಲೆ ವ್ಯಾಖ್ಯಾನ ಮಾಡಿರುವರು. ಪರಿಷತ್ತಿನ ವಾರ್ಷಿಕ ಅಧಿವೇಶನವನ್ನು ನೆರವೇರಿಸುವುದು ಅತಿ ಜವಾಬ್ದಾರಿಯ ಮತ್ತು ಖರ್ಚಿನ ಸಂಗತಿಯಾಗಿರುತ್ತದೆ. ಇಂತಹ ನಿಮಿತ್ತದಿಂದ ಕೂಡಿಸಿದ ಹಣವನ್ನು ಕಾಳಜಿಪೂರ್ವಕ ಉಪಯೋಗಿಸಿ ಹಣ ಉಳಿಸಿ ಆ ಹಣದಲ್ಲಿಂದ ಇಂತಹ ಖಾಯಂ ಸ್ವರೂಪದ ಶೈಕ್ಷಣಿಕ ಯೋಜನೆಗಳನ್ನು ಪ್ರಾರಂಭಿಸುವುದು ಭೂಷಣವೇ ಸರಿ. ಔರಂಗಬಾದ್ ಮತ್ತು ಧುಳೆಗಳು ಹಾಕಿಕೊಟ್ಟ ಉದಾಹರಣೆಗಳು ಅನುಕರಣೀಯವಾಗಿವೆ.

12 ಉಪಸಂಹಾರ :

'ಅರ್ಥಸಂವಾದ' ಪ್ರಾರಂಭವಾದಂದಿನಿಂದ ಅಂದರೆ ಕಳೆದ 9ವರ್ಷದಲ್ಲಿ ಒಟ್ಟು 88 ಲೇಖಕರು ವಿವಿಧ ವಿಷಯಗಳನ್ನು ಕುರಿತು ಲೇಖನಗಳನ್ನು ಪ್ರಕಟ ಮಾಡಿರುವರು. ಅವುಗಳಲ್ಲಿ 45 ಲೇಖಕರ ಈ ಕಾಲದಲ್ಲಿ ತಲಾ ಒಂದೇ ಲೇಖನವನ್ನು ಬರೆದಿರುವರು. 18 ಲೇಖಕರು ತಲಾ 2 ಲೇಖನಗಳನ್ನು ಬರೆದಿರುವರು. ಆದರೆ ಈ ಮುಂದಿನವರು ಎರಡಕ್ಕಿಂತಲೂ ಹೆಚ್ಚು ಲೇಖನಗಳನ್ನು ಬರೆದಿರುವರು. (1) ನಿ. ವಿ. ಸೊವನಿ—24. (2) ಭ. ಗ. ಬಾಪಟ—14 (3) ರಮೇಶ ಪಾನಸೆ —13 (4) ಅನಂದ ನಾಡಕರ್ಣಿ—12 (5) ವಸಂತ ಪಟವರ್ಧನ—9 (6) ಅವಿನಾಶ ಜೋಶಿ—9 (7) ವಿ. ಮ. ದಾಂಡೇಕರ—8 (8) ಸಿ. ಪ. ಖೇರ—7. ಮರಾಠಿ ಅರ್ಥಶಾಸ್ತ್ರ ಪರಿಷತ್ತನ್ನು ಸ್ಥಾಪಿಸುವಲ್ಲಿ ಮತ್ತು ಅರ್ಥಸಂವಾದವು ನಿಯಮಿತವಾಗಿ ಪ್ರಕಟಗೊಳಿಸುವಲ್ಲಿ ನಿ. ವಿ. ಸೊವನಿಯವರ ಕೊಡುಗೆ ಅಪಾರ

ವಾಗಿದೆ. ಅಷ್ಟೇ ಅಲ್ಲ, ಪರಿಷತ್ತು ಮತ್ತು ಅರ್ಥಸಂವಾದ ಈ ಎರಡೂ ಸಂಸ್ಥೆಗಳ ಕೇಂದ್ರಬಿಂದು ಸೋವನಿಯವರೇ ಆಗಿದ್ದು, ಇವರ ಸುತ್ತ ಈ ಎರಡು ಸಂಸ್ಥೆಗಳು ತಿರಗುತ್ತಲಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ಈ ಸಂಗತಿಯು ಈ ಸಂಸ್ಥೆಗಳ ಬಲವನ್ನು ಹೇಗೆ ತೋರಿಸುತ್ತದೆಯೋ ಹಾಗೆ ದುರ್ಬಲತೆಯನ್ನು ತೋರಿಸುತ್ತವೆ. ಮೇಲಿಂದ ಮೇಲೆ ಸಂಪಾದಕರು ಮಾಡುವ ಆಪಾದನೆಯೆಂದರೆ ಅರ್ಥ ಸಂವಾದದ ಸಲುವಾಗಿ ಒಳ್ಳೆಯ ಸಾಹಿತ್ಯ ಕ್ರೋಢೀಕರಿಸುವದು ತುಂಬಾ ಕಠಿಣವಿದೆ. ಸ್ವಾಭಾವಿಕವಾಗಿ ಸಂಚಿಕೆಯನ್ನು ಹೊರತರುವ ಸಲುವಾಗಿ ಕೆಲ ವಿಶಿಷ್ಠ ಲೇಖಕರ ಮೇಲೆಯೇ ಅವಲಂಬಿಸಿರಬೇಕಾಗುತ್ತದೆ. ಪರಿಷತ್ತಿನ ಸದಸ್ಯರು ಪ್ರತಿವರ್ಷ ಟಿಪ್ಪಣಿ ತರಹದ ಒಂದು ಚಿಕ್ಕ ಲೇಖನವನ್ನು ಬರೆದು ಕಳಿಸಿದರೂ ಸಹಿತ ಈ ಸಮಸ್ಯೆ ಬಗೆಹರಿಯುತ್ತದೆ. ಆದರೆ ಯಾವ ಪ್ರಮಾಣದಲ್ಲಿ ಉದಯೋನ್ಮುಖ ಲೇಖಕರು ಬೆಳಕಿಗೆ ಬರಬೇಕಾಗಿದೆಯೋ ಆ ಪ್ರಮಾಣದಲ್ಲಿ ಬರದೇ ಇರುವುದು ದುಃಖದ ಸಂಗತಿಯೇ ಹೌದು. ಪ್ರಾರಂಭದಲ್ಲಿ ಆನಂದ ನಾಡಕರ್ಣಿಯವರು ಅತ್ಯಂತ ಕುಶಲತೆಯಿಂದ ಮತ್ತು ಸಮರ್ಥತನದಿಂದ ಸಂಪಾದಕತ್ವದ ಜವಾಬ್ದಾರಿಯನ್ನು ನೆರವೇರಿಸಿದರು. ಅನೇಕ ಹೊಸ ಲೇಖಕರಿಗೆ ಉತ್ತೇಜನಕೊಟ್ಟು ಮಾರ್ಗದರ್ಶನ ಲೇಖನಗಳನ್ನು ಬರೆಸುವ ಪ್ರಯತ್ನ ಮಾಡಿರುವರು. ಅವರ ಸಂಪಾದಕತ್ವದ ಕಾಲದಲ್ಲಿಯೇ ' ಅರ್ಥಸಂವಾದ 'ದ ಒಂದು ಪ್ರತಿಭೆ ತಯಾರಾಯಿತು. ಈಗ ಸಧ್ಯ ಭ. ಗ. ಬಾಪಟರವರು ಈ ಸೂತ್ರವನ್ನು ತಮ್ಮ ಕೈಗೆ ತಗೆದುಕೊಂಡಿರುವರು.

ಈ ವರೆಗೆ ನೆರವೇರಿದ ವಾರ್ಷಿಕ ಅಧಿವೇಶನಗಳು, ಮತ್ತು ಸನ್ಮಾನನೀಯ ಅಧ್ಯಕ್ಷರು ಮತ್ತು ಅವರ ಅಭಿಭಾಷಣಗಳು ಈ ಮುಂದಿನಂತೆ : (1) ನಿ.ವಿ. ಸೋವನಿ :ಮರಾಠಿಯಲ್ಲಿಯ ಅರ್ಥಶಾಸ್ತ್ರೀಯ ವಾಙ್ಮಯ, ಇತಿಹಾಸ, ಪರಂಪರೆ ಸಮಸ್ಯೆ ಮತ್ತು ಭಾವಿ ಮಾರ್ಗಕ್ರಮಣ. (2) ವಿ. ಮ. ದಾಂಡೇಕರ : ಭಾರತೀಯ ಅರ್ಥವ್ಯವಸ್ಥೆಯಲ್ಲಿಯ ಅಂತರ್ಗತ ವಸಾಹತವಾದ. (3) ಶ್ರೀ. ಅ. ದೇಶಪಾಂಡೆ. ಗ್ರಾಮೀಣ ವಿಕಾಸದ ಸಮಸ್ಯೆಗಳು. (4) ವಿ. ವಿ. ಬೋರ್ಕರ : ಮಹಾರಾಷ್ಟ್ರದಲ್ಲಿಯ ಆರ್ಥಿಕ ವಿಕಾಸ ಮತ್ತು ಸಾಮಾಜಿಕ ನ್ಯಾಯ. (5) ಯು. ಸಿ. ಮಹಾಜನ : ಭಾರತದಲ್ಲಿಯ ಸಹಕಾರಿಯ ಕ್ಷೇತ್ರ, ಕೆಲ ಸಮಸ್ಯೆಗಳು. (6) ಆನಂದ ನಾಡಕರ್ಣಿ: ಭಾರತೀಯ ಕರ ವ್ಯವಸ್ಥೆ (7) ಸ. ಹ. ದೇಶಪಾಂಡೆ : ಮಾರ್ಕ್ಸವಾದ ಮತ್ತು ಸಾಮಾಜಿಕ ನ್ಯಾಯ (8) ವಿ. ಬಾ. ಘೂಗೆ: ಭಾರತದಲ್ಲಿಯ ಬೆಲೆ ಏರಿಕೆ. (9) ಹ. ಕೈ. ದೇಶಪಾಂಡೆ : ಭಾರತೀಯ ಯೋಜನೆಯಲ್ಲಿಯ ದೆಸೆ ಬದಲು ಇಷ್ಟ ವಿದೆಯೇ?. (10) ರವೀಂದ್ರ ಸಬನಿಸ: ಭಾರತದಲ್ಲಿಯ ಚಲನ ವಿಷಯಕ ಧೋರಣೆ.

(ಆಧಾರ : ಅರ್ಥಸಂವಾದದಲ್ಲಿಯ ಭಾ. ರಾ. ಢೇಕಣೆಯವರ ಲೇಖನ).

ಕರ್ನಾಟಕ ಇತಿಹಾಸ ಕಾಂಗ್ರೆಸ್—ಏಳನೇ ಅಧಿವೇಶನ

ರಾಜ್ಯಮಟ್ಟದ ಪರಿಮಿತಿಯಲ್ಲಿ ನಡೆಯುವಂತಹ ಸಮ್ಮೇಳನಗಳಲ್ಲಿ ಮಹತ್ವವಾದ ಸ್ಥಾನವನ್ನು ಪಡೆದಿರುವ ಕರ್ನಾಟಕ ಇತಿಹಾಸ ಕಾಂಗ್ರೆಸ್ ತನ್ನ ಏಳನೇ ಅಧಿವೇಶನವನ್ನು ಈ ಬಾರಿ ಐತಿಹಾಸಿಕ ಸ್ಥಳವಾದ ಚಿತ್ರದುರ್ಗ ಜಿಲ್ಲೆಯ ದಾವಣಗೆರೆಯಲ್ಲಿ ಜನವರಿ 29, 30, ಮತ್ತು 31ರಂದು ಏರ್ಪಡಿಸಿತ್ತು. ಇದರಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳ ಬಗ್ಗೆ ವಿವಿಧ ಗೋಷ್ಠಿಗಳಲ್ಲಿ ರಾಜ್ಯದ ಹಾಗೂ ಹೊರಗಿನ ಹಲವಾರು ವಿದ್ವಾಂಸರುಗಳು, ರಾಜ್ಯದ ಗಣ್ಯ ಅಧಿಕಾರಿಗಳೂ ಭಾಗವಹಿಸಿ ಚರ್ಚೆ ನಡೆಸಿದರು.

ಸಂಕಿರಣದಲ್ಲಿ ಸುಮಾರು 50ಕ್ಕೂ ಹೆಚ್ಚಿನ ಪ್ರಬಂಧಗಳು ಮಂಡಿಸಲ್ಪಟ್ಟು ಕರ್ನಾಟಕದ ಜನಾಂಗ, ಇತಿಹಾಸ, ಸಂಸ್ಕೃತಿ, ಕಲೆ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ, ರಾಜಕೀಯ ಹಾಗೂ ಆಡಳಿತ ವಿಷಯಗಳ ಬಗ್ಗೆ ದೀರ್ಘವಾಗಿ ಚರ್ಚಿಸುವ ಅವಕಾಶವನ್ನು ಕಲ್ಪಿಸಿಕೊಡಲಾಗಿತ್ತು. ಸುಮಾರು 100ಜನ ವಿದ್ವಾಂಸರುಗಳು ಈ ಗೋಷ್ಠಿಗಳಲ್ಲಿ ಭಾಗವಹಿಸಿ ವಿವಿಧ ಸಲಹೆಗಳನ್ನು, ಅಭಿಪ್ರಾಯಗಳನ್ನು ಮಂಡಿಸಿದರು.

ಬಾಪೂಜಿ ವಿದ್ಯಾ ಸಂಸ್ಥೆಯ ಆಶ್ರಯದಲ್ಲಿ ಏರ್ಪಾಡಾಗಿದ್ದ ಈ ಸಮ್ಮೇಳನದ ಉದ್ಘಾಟನೆಯು ಬಹಳ ವಿಜೃಂಭಣೆಯಿಂದ ಜರುಗಿತು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಬಾಪೂಜಿ ವಿದ್ಯಾ ಸಂಸ್ಥೆಯ ಗೌ|| ಕಾರ್ಯದರ್ಶಿಗಳಾದ ಶ್ರೀಶಾಮನೂರು ಶಿವಶಂಕರಪ್ಪನವರು ಪ್ರತಿನಿಧಿಗಳಿಗೆ ಹಾಗೂ ಸಮಾರಂಭಕ್ಕೆ ಆಗಮಿಸಿದ ಗಣ್ಯರಿಗೆ ಆದರದ ಸ್ವಾಗತ ನೀಡಿದರು. ಸ್ಥಳೀಯ ಸಮಿತಿಯ ಅಧ್ಯಕ್ಷರಾಗಿದ್ದ ಪೂಜ್ಯ ಶ್ರೀ|| ಡಾ|| ಸದ್ಯೋಜಾತ ಸ್ವಾಮಿಜಿಯವರು ಕರ್ನಾಟಕ ಪರಂಪರೆಯನ್ನೊಳಗೊಂಡಂತೆ ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಮಾನ್ಯ ಶಿಕ್ಷಣ ಸಚಿವರಾದ ಡಾ|| ಜೀವರಾಜ ಆಳ್ವರವರು ಮುಖ್ಯ ಅತಿಥಿಗಳಾಗಿದ್ದರು. ಕುವೆಂಪು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಡಾ|| ಶಾಂತಿನಾಥ ದೇಸಾಯಿಯವರು ಸಮ್ಮೇಳನವನ್ನು ಸಾಂಪ್ರದಾಯಿಕವಾಗಿ ಉದ್ಘಾಟಿಸಿ ಕರ್ನಾಟಕದ ಇತಿಹಾಸವನ್ನು ವೈಭವೀಕರಿಸದೆ ವಾಸ್ತವ ಸಂಗತಿಗಳನ್ನು ಬೆಳಕಿಗೆ ತರಬೇಕೆಂದು ವಿದ್ವಾಂಸರಿಗೆ ಕರೆ ಇತ್ತರು. ಏಳನೇ ಸಮ್ಮೇಳನದ ಅಧ್ಯಕ್ಷರಾಗಿದ್ದ ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರೊಫೆಸರ್ ಡಾ|| ಎ. ವಿ. ವೆಂಕಟರತ್ನಂ ಅವರು ತಮ್ಮ

ಅಧ್ಯಕ್ಷ ಭಾಷಣದಲ್ಲಿ ಕರ್ನಾಟಕದ ಆಧುನಿಕ ಪೂರ್ವ ಇತಿಹಾಸದಲ್ಲಿ ಇನ್ನೂ ಆಗಬೇಕಾಗಿರುವ ಹಲವಾರು ಸಂಶೋಧನೆಗಳ ವಿಚಾರಗಳ ಬಗ್ಗೆ ವಿದ್ವಾಂಸರ ಗಮನ ಸೆಳೆದು. ಕಾಂಗ್ರೆಸ್ ತನ್ನದೇ ಆದ ನಿಯತಕಾಲಿಕೆಯೊಂದನ್ನು ಹೊರತರುವಂತೆ ಸಲಹೆ ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲೆಯ ಹಿರಿಯರಾದ ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿ ಶ್ರೀ. ಎಸ್. ನಿಜಲಿಂಗಪ್ಪನವರು ವಹಿಸಿದ್ದರು. ಚಿತ್ರದುರ್ಗ ಜಿಲ್ಲೆಗೆ ಸಂಬಂಧಪಟ್ಟಂತೆ ಹಲವಾರು ದಾಖಲೆಗಳ ಪ್ರದರ್ಶನವನ್ನು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಏರ್ಪಡಿಸಿತ್ತು. ಇದಲ್ಲದೆ ವಿಜಯನಗರ ಕಾಲದ ಮಹಿಳೆಯರು. ಮತ್ತು ಜಿಲ್ಲೆಗೆ ಸಂಬಂಧಪಟ್ಟ ಕೆಲವು ದಾಖಲೆಗಳೂ, ತಾಮ್ರಪಟ, ಇವುಗಳು ಪ್ರದರ್ಶಿತವಾಗಿದ್ದು ಇವುಗಳ ಉದ್ಘಾಟನೆಯನ್ನು ಬಾಪೂಜಿ ವಿದ್ಯಾ ಸಂಸ್ಥೆಯ ಉಪಾಧ್ಯಕ್ಷರಾದ ಡಾ|| ಕೃಷ್ಣಸ್ವಾಮಿಯವರು ನೆರವೇರಿಸಿದರು.

ಗೋಷ್ಠಿಗಳ ಅಧ್ಯಕ್ಷತೆಯನ್ನು ಡಾ|| ಶೆಟ್ಟರ್, ಡಾ|| ಚಿಟ್ನಿಸ್, ಡಾ|| ಕೆ.ಆರ್. ಬಸವರಾಜ್, ಡಾ|| ಚಿದಾನಂದಮೂರ್ತಿ, ಡಾ|| ಮುದ್ದಾಚಾರಿ ಡಾ|| ಎ. ಕೆ. ಶಾಸ್ತ್ರಿ ಮುಂತಾದವರು ವಹಿಸಿ ಅನೇಕ ಉಪಯುಕ್ತ ಸಲಹೆಗಳನ್ನು ನೀಡಿದರು. ಈ ಗೋಷ್ಠಿಗಳಲ್ಲಿ ವ್ಯಕ್ತಪಟ್ಟಂತಹ ವಿಚಾರಗಳು ವಿದ್ವಾಂಸರ ಗಮನ ಸೆಳೆಯುವಂತಹದ್ದಾಗಿದ್ದವು. ಇವುಗಳಲ್ಲಿ ಸ್ಥಳೀಯ ಇತಿಹಾಸದ ಕುತೂಹಲಕಾರಿಯಾದ ವಿಷಯಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನವನ್ನು ಮಾಡಿದವು ಡಾ|| ಚಿದಾನಂದಮೂರ್ತಿಯವರ ದಾವಣಗೆರೆ ಸಮೀಪದ "ಆವರಗೊಳ್ಳದ ಶಿರಸ್ಪವಾಡ ಶಿಲ್ಪಗಳು", ಶ್ರೀ ಬಿ. ರಾಜಶೇಖರಪ್ಪನವರ "ಚಿತ್ರದುರ್ಗ ಪಾಳೆಯಗಾರರ ಕಾಲದ ಎರಡು ಹೊಸ ಶಾಸನಗಳು" ಮತ್ತು ಶ್ರೀ ಲಕ್ಷ್ಮಣ ತೆಲಗಾವಿಯವರ "ನೀರ್ಥಡಿ ಶಾಸನ" ಇವುಗಳು ಜಿಲ್ಲೆಯ ಇತಿಹಾಸಕ್ಕೆ ಸಂಬಂಧಪಟ್ಟಂತೆ ನೇರವಾಗಿ ವಿದ್ವಾಂಸರ ಗಮನ ಸೆಳೆದವು. ಡಾ|| ಎಂ. ವಿ. ಶ್ರೀನಿವಾಸ್ ಅವರ "ಕೊಡಗು ಸಮಾಜದಲ್ಲಿ ತಕ್ಕರ ಪಾತ್ರ", ಡಾ|| ಬಿ. ಲೀಲಾ ಅವರ "ಮೈಸೂರಿನಲ್ಲಿ ಸಮುದ್ರಯಾನದ ವಿವಾದ", ಶ್ರೀಮತಿ ವನಜಾಕ್ಷಿಯವರ ಜೈನಕೃತಿಯೊಂದರಲ್ಲಿ 'ಸ್ತ್ರೀ' 'ಚಿತ್ರಣ', ಸಿ. ನಾಗಭೂಷಣ ಅವರ "ಸ್ತ್ರೀ ಶಿಕ್ಷಣ", ಎನ್. ಆರ್. ಲಲಿತಾಂಬಾ ಅವರ "ವಲಿತ ವಚನಕಾರ್ತಿ ಕಾಳವ್ವೆ ಶಿಕ್ಷಣದ ಹಿನ್ನೆಲೆ" ಮತ್ತು ಶ್ರೀಮತಿ ಸರಸ್ವತಿಯವರ "ವಿಜಯನಗರ ಕಾಲದಲ್ಲಿ ರಾಜಕೀಯ ಹಾಗೂ ಆಡಳಿತ ಜೀವನದಲ್ಲಿ ಸ್ತ್ರೀಯರ ಪಾತ್ರ" ಇನ್ನೂ ಹಲವಾರು ಲೇಖನಗಳು ಕರ್ನಾಟಕದ ಸಾಮಾಜಿಕ ಇತಿಹಾಸಕ್ಕೆ ಸಂಬಂಧಪಟ್ಟವಾಗಿದ್ದವು. ಡಾ|| ಬಿ ಎಸ್. ನಾಗರಾಜ ಅವರ "ನಗರ ಕೇಂದ್ರಗಳ ವರ್ಗೀಕರಣ, ಡಾ|| ಬಿ. ವಿ. ರಾವ್ ಅವರ ಬೆಳಗಾಂ ಜಿಲ್ಲೆಯ 17, 18, 19ನೇ ಶತಮಾನದ ವ್ಯಾಪಾರ ಮತ್ತು ಕೈಗಾರಿಕಾ ಉತ್ಪಾದನೆಗಳು, ಡಾ|| ಎಂ. ಎಲ್. ಸರಸ್ವತಿಯವರ "ಸಾಹಿತ್ಯಾಧಾರಗಳನ್ನೊಳಗೊಂಡಂತೆ ಮಧ್ಯಕಾಲೀನ ಕರ್ನಾಟಕದಲ್ಲಿ ನೀರಾವರಿಯ ಪ್ರಾಮುಖ್ಯತೆ. ಡಾ|| ಕೆ. ಎಸ್ ನಂಜುಂಡಪ್ಪನವರ "ಮಧ್ಯ

ಕಾಲೀನ ಕರ್ನಾಟಕದಲ್ಲಿ ಬಟ್ಟೆ ಗಿರಣಿಗಳ ಉದ್ಯಮದಲ್ಲಿ ದೇವಾಂಗದವರ ಪಾತ್ರ" ಡಾ|| ಮೀರಾ ಸೆಬಾಸ್ಟಿಯನ್ ಅವರ ಪ್ರಬಂಧ ಹಾಗೂ ಇನ್ನೂ ಹಲವಾರು ಲೇಖನಗಳು ಕರ್ನಾಟಕದ ಆರ್ಥಿಕ ಸಮಸ್ಯೆಗಳ ಕಡೆಗೆ ಗಮನ ಸೆಳೆದವು. ಡಾ|| ಕೆ. ಆರ್. ಬಸವರಾಜು, ಡಾ|| ಚಂದ್ರಶೇಖರ, ಶ್ರೀ ಷಡಾಕ್ಷರಯ್ಯ, ಡಾ|| ಸಾವಂತ್, ಪ್ರೊ|| ನೊಮಿನ್, ಡಾ|| ಎಂ. ಎಂ. ಕಲ್ಬುರ್ಗಿ, ಡಾ|| ತಿಮ್ಮಯ್ಯನಾಯ್ಡು, ಡಾ|| ಸಂಗೀತಾ ಸುವರ್ಣ ಡಾ|| ರಾಜಾಮಣಿ, ಡಾ|| ಗಾಯಿತ್ರಿ, ಶ್ರೀಮತಿ ಜೆ. ವಿ. ಗಾಯಿತ್ರಿ, ಶ್ರೀಮತಿ ಗಿರಿಜಮ್ಮ, ಶ್ರೀಮತಿ ಗಂಗಮ್ಮ, ಶ್ರೀಮತಿ ಜಯಶ್ರೀ ಸಿದ್ನಾಳ್ ಇನ್ನೂ ಹಲವಾರು ವಿದ್ವಾಂಸರು ಕರ್ನಾಟಕದ ಇತಿಹಾಸಕ್ಕೆ ಸಂಬಂಧಪಟ್ಟಂತೆ ಲೇಖನಗಳನ್ನು ಮಂಡಿಸಿದರು. ಡಾ|| ರಘುನಾಥ ಭಟ್ ಅವರು ಬನವಾಸಿಯ ಮೂರು ಹೊಸ ಶಾಸನಗಳ ಬಗ್ಗೆ ಮಾಹಿತಿ ನೀಡಿದರು. ಭದ್ರಾವತಿಯ ಇಂಜಿನಿಯರ್ ಶ್ರೀ ಮಾಧವರಾವ್ ಅವರು ದಾವಣಗೆರೆಗೆ ಸಂಬಂಧಿಸಿದಂತೆ ಒಂದು ಅಪ್ರಕಟಿತ ತಾಮ್ರಪಟದ ದಾಖಲೆಯ ಬಗ್ಗೆ ವಿವರಿಸಿದರು. ಮುಂಬಯಿ ವಿಶ್ವವಿದ್ಯಾಲಯದ ಡಾ|| ಶ್ರೀನಿವಾಸ ಹಾವನೂರ ಅವರು ತಮ್ಮ ವಿಶೇಷ ಪ್ರಬಂಧ "ನಮ್ಮ ಅಜ್ಜ-ಪಿಜ್ಜರಿಗೆ ಒಂದು ಕಂಪ್ಯೂಟರ್‌ನ ಕಾಯಕಲ್ಪ" ಎಂಬುದರಲ್ಲಿ ಇತಿಹಾಸದಲ್ಲಿ ಆಧುನಿಕ ವಿಧಾನಗಳನ್ನು ಅಳವಡಿಸಿಕೊಳ್ಳುವ ಮಾರ್ಗವನ್ನು ಬಹಳ ಸ್ವಾರಸ್ಯಕರವಾಗಿ ವಿವರಿಸಿದರು.

ಈ ಗೋಷ್ಠಿಗಳೇ ಅಲ್ಲದೆ "ಮಧ್ಯಕಾಲೀನ ಕರ್ನಾಟಕದ ವಾಣಿಜ್ಯ ಸಂಘಗಳು ಮತ್ತು ಶ್ರೇಣಿಗಳು" ಎಂಬ ವಿಷಯದ ಬಗ್ಗೆ ವಿಶೇಷ ವಿಚಾರ ಸಂಕಿರಣವೊಂದು ಏರ್ಪಟ್ಟಿತ್ತು. ಇದರಲ್ಲಿ ಡಾ|| ಶೆಟ್ಟರ್, ಡಾ|| ಮುದ್ದಾಚಾರಿ, ಡಾ|| ಸೆಬಾಸ್ಟಿಯನ್ ಜೋಸೆಫ್ ಅವರುಗಳು ವಿಶೇಷ ಪ್ರಬಂಧಗಳನ್ನು ಮಂಡಿಸಿದರು.

ಜನವರಿ 31ರಂದು ಬೆಳಿಗ್ಗೆ ಜಿಲ್ಲೆಯ ಐತಿಹಾಸಿಕ ಸ್ಥಳಗಳಾದ ಚಂದ್ರವಳ್ಳಿ, ಚಿತ್ರದುರ್ಗದಕೋಟೆ, ಮುರುಘಾಮಠ, ಚಿತ್ರದುರ್ಗದ ವಸ್ತುಸಂಗ್ರಹಾಲಯಗಳಿಗೆ ನಮ್ಮ ಪ್ರತಿನಿಧಿಗಳು ಭೇಟಿ ನೀಡಿದರು. ಶ್ರೀ ಬಿ. ರಾಜಶೇಖರಪ್ಪನವರು ಈ ಸ್ಥಳಗಳ ಐತಿಹಾಸಿಕ ಮಹತ್ವವನ್ನು ಸವಿವರವಾಗಿ ನಿರೂಪಿಸಿದರು.

ಮನರಂಜನಾ ಕಾರ್ಯಕ್ರಮದ ಅಂಗವಾಗಿ ಕರ್ನಾಟಕ ಇತಿಹಾಸದ ಸ್ವಾತಂತ್ರ ಸಂಗ್ರಾಮದ ವಿವಿಧ ಹಂತಗಳನ್ನು ನೃತ್ಯರೂಪಕವಾಗಿ ದಾವಣಗೆರೆಯ ಸಂತ ಪಾಲ್ಸ ಕಾನ್ವೆಂಟ್‌ನ ಮಕ್ಕಳು ನೀಡಿದರು. ತರಳಬಾಳು ಸಂಸ್ಥೆಯ ಮಕ್ಕಳು ವಸ್ತುಪ್ರದರ್ಶನದಲ್ಲಿ ಹಾಗೂ ಮನರಂಜನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರತಿನಿಧಿಗಳನ್ನು ರಂಜಿಸಿದರು.

ದಿ|| 31ರಂದು ಸಂಜೆ ಮುಕ್ತಾಯ ಸಮಾರಂಭದ ಮುಖ್ಯ ಅತಿಥಿಗಳಾಗಿ ಕನ್ನಡ ಕಾವಲು ಸಮಿತಿ ಹಾಗೂ ಗಡಿ ಸಮಿತಿಯ ಅಧ್ಯಕ್ಷರಾದ ಪಾಟೀಲ್ ಪುಟ್ಟಪ್ಪ ಅವರು ಮುಕ್ತಾಯ ಭಾಷಣವನ್ನು ಮಾಡಿದರು. ಇದೇ ಸಮಾರಂಭದಲ್ಲಿ ಸಭೆಯ

ಅಧ್ಯಕ್ಷತೆ ವಹಿಸಿದ್ದ ಬಾ. ವಿ. ಸಂಸ್ಥೆಯ ಗೌ|| ಕಾರ್ಯದರ್ಶಿಗಳಾದ ಶ್ರೀ ಶಾಮನೂರು ಶಿವಶಂಕರಪ್ಪನವರು ಜಿಲ್ಲೆಯ ಹೆಸರಾಂತ ಕಾದಂಬರಿಕಾರ್ತಿಯಾದ ಶ್ರೀಮತಿ ಟಿ. ಗಿರಿಜ ಅವರ "ದುರ್ಗದ ದಿಗ್ವಿಜಯ" ಎಂಬ ಐತಿಹಾಸಿಕ ಕಾದಂಬರಿಯನ್ನು ಬಿಡುಗಡೆ ಮಾಡಿದರು. ಕರ್ನಾಟಕ ಇತಿಹಾಸ ಕಾಂಗ್ರೆಸ್ಸಿನ ಕಾರ್ಯದರ್ಶಿಯವರಾದ ಪ್ರೊ|| ಡಾ|| ಕೆ. ವೀರತಪ್ಪನವರು ಕಾಂಗ್ರೆಸ್ಸಿನ ಪರವಾಗಿ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು.

ಪಿ. ಎಸ್. ಶಾಮಲಾಂಬಿಕ

ಕೆ. ಸಂ. ೨೯೪೫೭—ಎಂಯುಪಿಎಂ—ಪ್ರತಿಗಳು ೩೦೫—೯-೮-೨೮

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬